## ಅಧ್ಯಾಯ 5

# ಕ್ರೈಸ್ತೀಯ ನಡೆ (ಭಾಗ 1)

5ನೇ ಅಧ್ಯಾಯವು 1ನೇ ವಚನದಲ್ಲಿ ಹಾಗರಳು ಹಾಗೂ ಸಾರಳ ಸಾಂಕೇತಿಕ ನಿರೂಪಣೆಯನ್ನು ಕ್ಲುಪ್ತವಾಗಿ ಅನ್ವಯಿಕೆ ಮಾಡುವದರೊಂದಿಗೆ ಆರಂಭಗೊಳ್ಳುತ್ತದೆ. ಈ ಅನ್ವಯಿಕೆಯ ನಂತರದಲ್ಲಿ, ಒಂದು ಹೊಸ ವಿಭಾಗವು, 5:2-6:10, ಕ್ರೈಸ್ತೀಯ ನಡೆಯ ಕುರಿತು ಬಣ್ಣಿಸುತ್ತದೆ. ಅದು ಕ್ರಿಸ್ತನಲ್ಲಿ ಸಿಕ್ಕುವ ಸ್ವಾತಂತ್ರ್ಯದ (5:2-15) ಮತ್ತು ಪವಿತ್ರಾತ್ಮಾನುಸಾರ ನಡೆಯುವದರ (5:16-26) ಅರ್ಥವನ್ನು ಚಿತ್ರಿಸುವದಾಗಿದೆ. 5:19-26ರಲ್ಲಿ "ಶರೀರಭಾವದ ಕರ್ಮಗಳನ್ನು" "ಆತ್ಮನ ಫಲಗಳ" ವಿರುದ್ಧವಾಗಿ ಹೋಲಿಕೆ ಮಾಡಲಾಗಿರುತ್ತದೆ.

## ಹಾಗರಳು ಮತ್ತು ಸಾರಳ ಸಾಂಕೇತಿಕ ನಿರೂಪಣೆಯನ್ನು ಅನ್ವಯಿಸುವದು (5:1)

**[1]ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ.**

**ವಚನ 1.** ಬಹಳ ಸಂಭಾವ್ಯವಾಗಿ, ಈ ವಚನವು 4ನೇ ಅಧ್ಯಾಯದ ಅಂತ್ಯಭಾಗಕ್ಕೆ ಸೇರಿರಬಹುದಾಗಿದೆ. ಕೆಲವು ಆಂಗ್ಲ ತರ್ಜುಮೆಗಳು (NEB; REB; NRSV) ಮತ್ತು ಪ್ರಮಾಣಕ ಗ್ರೀಕ್ ಹೊಸ ಒಡಂಬಡಿಕೆಯ ಆವೃತ್ತಿಗಳು ವಚನವನ್ನು 4:31ರ ನಂತರದ ಪರಿಚ್ಛೇದಗಳಲ್ಲಿ ಸೇರ್ಪಡೆಗೊಳಿಸುವ ಮೂಲಕ ಮತ್ತು 5:2ರೊಂದಿಗೆ ಹೊಸ ಪರಿಚ್ಛೇದವನ್ನು ಆರಂಭಿಸುವ ಮೂಲಕ ಈ ವಿಚಾರಕ್ಕೆ ಬೆಂಬಲವನ್ನು ನೀಡುತ್ತವೆ.

ಆರಂಭಿಕ ಗ್ರೀಕ್ ಹಸ್ತಪ್ರತಿಗಳಲ್ಲಿ ಪರಿಚ್ಛೇದಗಳನ್ನು, ವಾಕ್ಯವೃಂದಗಳನ್ನು, ಮತ್ತು ವಿರಾಮ ಚಿಹ್ನೆಗಳನ್ನು ಅನೇಕ ಸಾರಿ ಬಳಸುತ್ತಿರಲಿಲ್ಲ. ಬದಲಾಗಿ, ವಾಕ್ಯವು ದೊಡ್ಡ ಅಕ್ಷರಗಳಲ್ಲಿ ಒಂದು ಸಾಲಿನಿಂದ ಮತ್ತೊಂದು ಸಾಲಿಗೆ ತಡೆಗಳಿಲ್ಲದೆ ಮುಂದುವರೆಸಲ್ಪಡುತ್ತಿತ್ತು. ಒಂದು ವ್ಯಕ್ತಿಗತ ಪದವನ್ನು ಅನೇಕ ಸಾರಿ ಒಂದು ಸಾಲಿನ ಅಂತ್ಯದ ವೇಳೆ ಮಧ್ಯಭಾಗದಲ್ಲಿ ಮುರಿಯಲಾಗುತ್ತಿತ್ತು, ಕೂಡುಗೆರೆಯಿಲ್ಲದೆಯೇ, ಅದು ಮುಂದಿನ ಸಾಲಿನಲ್ಲಿ ಮುಂದುವರೆಯುತ್ತಿತ್ತು. ಪರಿಚ್ಛೇದಗಳ ವಿಭಜನೆಗಳು ಮತ್ತು ವಾಕ್ಯಸಾಲಿನ ಮುಕ್ತಾಯಗಳನ್ನು ಆಧುನಿಕ ಸಂಪಾದಕರ ಮತ್ತು ಅನುವಾದಕರ ವಿವೇಚನೆಗೆ ಬಿಡಲಾಗಿರುತ್ತವೆ.

1ನೇ ವಚನವು 4ನೇ ಅಧ್ಯಾಯದಲ್ಲಿರುವ ಹಿಂದಿನ ವಚನಗಳಿಗೆ ತಾರ್ಕಿಕ ಮುಕ್ತಾಯದಂತೆ ಕಾಣಿಸುವದು ಮಾತ್ರವೇ ಅಲ್ಲ, ಆದರೆ ಇದು ಪೌಲನ ಸಾಂಕೇತಿಕ ನಿರೂಪಣೆಗೆ ಒಂದು ಸಾರಾಂಶ ಸಹ ಆಗಿರುತ್ತದೆಂಬುದನ್ನು ವ್ಯಾಕರಣವು ಸೂಚಿಸುತ್ತದೆ. 4:31ರಲ್ಲಿ ಗ್ರೀಕ್ ಪದವಾದ διό (*ಡಿಯೋ*) ಎಂಬುದು "ಹಾಗಾದರೆ" ಅಥವಾ "ಆದದರಿಂದ (NIV) ಎಂದು ಅನುವಾದಿಸಲ್ಪಟ್ಟಿದೆ. ಅಪೊಸ್ತಲನು ಮುಂದುವರೆದು ಹೀಗೆ ಹೇಳುತ್ತಾನೆ, **ಕ್ರಿಸ್ತನು ನಮ್ಮನ್ನು**

**ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು.** ಗ್ರೀಕ್ ವಾಕ್ಯದಲ್ಲಿರುವ ಪದಗಳ ಕ್ರಮವು "ಸ್ವತಂತ್ರ" (ἐλευθερία, *eleutheria*) ಎಂಬ ಪದದ ಮೇಲೆ ಒತ್ತು ನೀಡುತ್ತದೆ. ಮೂಲ ವಾಕ್ಯದಲ್ಲಿ, *ಎಲೆಯುಥೆರಿಯ* ಎಂಬುದು ಚತುರ್ಥೀ ವಿಭಕ್ತಿಯದಲ್ಲಿರುತ್ತದೆ, ಅದನ್ನು ನಾವು ಒಂದು ಲಾಭದ ಮಾತೆಂದು ಅರ್ಥೈಸಿಕೊಳ್ಳುತ್ತೇವೆ. "ಕ್ರಿಸ್ತನು ನಮ್ಮನ್ನು *ಸ್ವತಂತ್ರ*ದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು."

ಪ್ರಾಚೀನ ಜಗತ್ತಿನಲ್ಲಿ, ಸ್ವಾತಂತ್ರ್ಯವು ಗ್ರೀಕರನ್ನು ಧಹಿಸುವಂತೆ ಮತ್ತು ಧೈರ್ಯಗೊಂಡವರಾಗುವಂತೆ ಮಾಡುತ್ತಿದ್ದ ಭಾವನೆ ಆಗಿತ್ತು. ಅವರು ತಮ್ಮ ಸ್ವಾತಂತ್ರ್ಯದ ಪರವಾಗಿ ಯುದ್ಧ ಮಾಡುವದಕ್ಕೆ ತಕ್ಷಣವೇ ಸಿದ್ಧಗೊಳ್ಳುತ್ತಿದ್ದರು; ಅವರು ದಾಸತ್ವದಲ್ಲಿ ಮುಂದುವರೆಯುವದಕ್ಕಿಂತ ಮರಣಿಸುವದಕ್ಕೆ ಸದಾ ಸಿದ್ಧರಾಗಿರುತ್ತಿದ್ದರು. ದಕ್ಷಿಣ ಗಲಾತ್ಯದ ಪಟ್ಟಣಗಳು ಸಂಪೂರ್ಣ ಗ್ರೀಕೀಕರಣಗೊಳಿಸಲ್ಪಟ್ಟಿದ್ದವು; ಅವರಿಗೆ ಪ್ರಸ್ತುತ ಕಾಲದ ಗ್ರೀಕ್ ಭಾಷೆ ಮತ್ತು ಸಂಸ್ಕೃತಿಯು ರೂಢಿಯಾಗಿ ಹೋಗಿತ್ತು. ಗಲಾತ್ಯದವರು ಗ್ರೀಕೀಕರಣಗೊಳಿಸಲ್ಪಟ್ಟಿದ್ದು ಮಾತ್ರವೇ ಆಗಿರಲಿಲ್ಲ, ಆದರೆ ಸ್ವತಃ ಪೌಲನು ಕಿಲಿಕ್ಯದ ನೆರೆಯಲ್ಲಿದ್ದ ವಿಶ್ವವಿದ್ಯಾಲಯ ಪಟ್ಟಣವಾದ ತಾರ್ಸ ನಗರದಲ್ಲಿ ಬೆಳೆದಿದ್ದನು. ಆತನು ಸಾಹಿತ್ಯದ ಮತ್ತು ಅಲೆಗ್ಸಾಂಡರ ಕಾಲದಿಂದಲೂ ಶಕ್ತಿಯುತ, ಹುರುಪುಳ್ಳ ಗ್ರೀಕ್ ಸಂಸ್ಕೃತಿಯವರ ಪ್ರಭಾವಕ್ಕೊಳಗಾಗಿದ್ದವರ ವಿಚಾರಧಾರೆಯ ಪರಿಚಯವನ್ನು ಹೊಂದಿದ್ದನು.

ಹೇಗೂ, ಪೌಲನು ಗ್ರೀಕೀಕರಣಕ್ಕಿಂತಲೂ ಅಧಿಕವಾಗಿ ಲೋಕವನ್ನು-ಬದಲಾಯಿಸುವ ಅತಿ ದೊಡ್ಡ ಶಕ್ತಿಯೊಂದರ ಕುರಿತಾಗಿ ಮಾತಾಡುತ್ತಿದ್ದನು. ಆತನು ಪಾಪದ ಅಪರಾಧ ಮತ್ತು ಶಕ್ತಿಯ ಹಿಡಿತದಿಂದ ಮನಸ್ಸಿಗೆ ಮತ್ತು ಹೃದಯಕ್ಕೆ ಸಿಕ್ಕುವ ಸ್ವಾತಂತ್ರ್ಯವನ್ನು ಕುರಿತು ಮಾತಾಡುತ್ತಿದ್ದಾನೆ. ಅಪೊಸ್ತಲನು ತಮ್ಮಲ್ಲಿ ವಾಸಿಸುವ ಪವಿತ್ರಾತ್ಮನ ಶಕ್ತಿಯನ್ನು ಅನುಭವಿಸಿದವರಿಗೆ ಮಾತ್ರವೇ ಗೊತ್ತಿದ್ದಂಥ ಸ್ವಾತಂತ್ರ್ಯದ ಕುರಿತಾಗಿ ಕಲಿಸಿದನು. ಈ ಸ್ವಾತಂತ್ರ್ಯವು ಲೋಕಗಳನ್ನು ಜಯಿಸುವ (ಅಲೆಗ್ಸಾಂಡರನು ಮಾಡಿದ ರೀತಿಯಲ್ಲಿ) ದರ್ಶನವೊಂದನ್ನು ನೀಡಲಿಲ್ಲ, ಆದರೆ ಒಬ್ಬನು ತನ್ನನ್ನೇ ಹೇಗೆ ಜಯಿಸಿಕೊಳ್ಳಬಹುದೆಂಬ ಕುರಿತಾದ ದರ್ಶನವನ್ನು ಒದಗಿಸಿತ್ತು. ಪೌಲನು ದೃಢವಿಶ್ವಾಸದ ನಂಬಿಕೆ, ಈ ಲೋಕವನ್ನು ಮೀರಿದ ನಂಬಿಕೆ ಮತ್ತು ನಿರೀಕ್ಷೆಯುಳ್ಳಂಥ ಜೀವಿತಕ್ಕಾಗಿ ಹೊಸದಾಗಿ ಹುಟ್ಟುವದರ ಸ್ವಾತಂತ್ರ್ಯವನ್ನು ಕುರಿತು ಮಾತಾಡಿದನು. ಈ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವವನು ನಂಬಿಕೆಯ ಮೂಲಕವಾಗಿ ಮಹಿಮೆಕರವಾದ ಮತ್ತು ಆದರೂ ಅದೃಶ್ಯವಾದ ಪರಲೋಕದ ಮಂಡಲಗಳಲ್ಲಿ ಪ್ರವೇಶಿಸುವವನಾಗುತ್ತಾನೆ.

"ಸ್ವತಂತ್ರದಲ್ಲಿರಿಸಬೇಕೆಂದು!" ಇದಕ್ಕಿಂತ ದೊಡ್ಡ ಲಾಭ ಮತ್ತು ಪ್ರಯೋಜನವು ಬೇರೆ ಇನ್ನಾವದು ಇರುವದಕ್ಕೆ ಸಾಧ್ಯ? ಕ್ರಿಸ್ತನು ನಮಗೆ ದೇವರ ಮಕ್ಕಳಾಗಿರುವ ಪ್ರಯೋಜನವನ್ನು ಅನುಗ್ರಹಿಸಿದ್ದಾನೆ. ಸ್ವಸ್ಥ ಬುದ್ಧಿಯುಳ್ಳ ಯಾವನೇ ಆಗಲಿ, ಆಯ್ಕೆಗಳನ್ನು ಮುಂದಿಡುವಾಗ. ದೇವರ ಮಕ್ಕಳಿಗಿರುವ ಮಹಿಮೆಕರವಾದ ಸ್ವಾತಂತ್ರ್ಯದ ಬದಲಾಗಿ ನಿರರ್ಥಕವಾದ ದಾಸತ್ವವನ್ನು ಆರಿಸಿಕೊಳ್ಳಲು ಸಾಧ್ಯ?

ಪೌಲನು ಹೀಗೆ ಹೇಳುವ ಮೂಲಕವಾಗಿ ಅನ್ವಯಿಸುವಿಕೆಯನ್ನು ಸಮಾಪ್ತಿಗೊಳಿಸುತ್ತಾನೆ, **ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ.** "ದಾಸತ್ವದ ನೊಗ"ವು ಧರ್ಮಶಾಸ್ತ್ರವೇ ಆಗಿತ್ತು. ಸಾಂಕೇತಿಕ ನಿರೂಪಣೆಯಲ್ಲಿ ಮಾತಾಡುವದಾದರೆ, ಹಾಗರಳು ತನ್ನ ಮಕ್ಕಳ ಸಮೇತವಾಗಿ, "ಈಗಿನ ಯೆರೂಸಲೇಮ್" ಸಮೇತವಾಗಿ ದಾಸತ್ವದಲ್ಲಿದ್ದಳು. ಅಪೊಸ್ತಲನು ಅಬ್ರಹಾಮನ ಸ್ವಾಭಾವಿಕ ಮಕ್ಕಳನ್ನು, ಅಂದರೆ

ಇಸ್ರಾಯೇಲ್ಯರನ್ನು ಪ್ರತಿನಿಧಿಸುವದಕ್ಕಾಗಿ, "ಮೇಲಣ ಯೆರೂಸಲೇಮ್"ಗೆ ತದ್ವಿರುದ್ಧವಾಗಿ (4:24-26), ಶಾರೀರಿಕ ಯೆರೂಸಲೇಮನನ್ನು ಬಳಸುತ್ತಿದ್ದಾನೆ. ಆತನ ಶಕ್ತಿಭರಿತ ಸಂದೇಶವು "ಸ್ವತಂತ್ರರಾಗಿರಿ!" ಅಂದರೆ "ಮುಕ್ತವಾಗಿರಿ!"

ಇಸ್ರಾಯೇಲ್ಯರ ಮೇಲೆ ಸೀನಾಯಿ ಪರ್ವತದಲ್ಲಿ ಮೋಶೆಯಿಂದ ಧರ್ಮಶಾಸ್ತ್ರದ ನೊಗವು ಹೇರಲ್ಪಟ್ಟಿತ್ತು. ಕ್ರಿಸ್ತನಲ್ಲಿ ನಂಬಿಕೆಯಿಡುತ್ತಿದ್ದ ಅನ್ಯಜನರ ವಿಷಯದಲ್ಲಿ ನೋಡುವದಾದರೆ, ಧರ್ಮಶಾಸ್ತ್ರವು ವ್ಯಾಜ್ಯದ ಮೂಲವಾಗಿತ್ತು. ಅನ್ಯಜನರು ಧರ್ಮಶಾಸ್ತ್ರ ಕೈಗೊಂಡು ನಡೆಯಬೇಕೋ ಬೇಡವೋ ಎಂಬುದರ ಕುರಿತಾದ ವಾಗ್ವಾದವು ಯೆರೂಸಲೇಮಿನಲ್ಲಿ ಅಪೊಸ್ತಲರ ಮತ್ತು ಹಿರಿಯರ ಸಮಾಲೋಚನಾ ಸಭೆಯು ನಡೆಯುವಂತೆ ಮಾಡಿತ್ತು. ಪೇತ್ರನ ಮಾತುಗಳಲ್ಲಿ ಹೇಳುವದಾದರೆ, ಅದು "ನಮ್ಮ ಪಿತೃಗಳಾಗಲಿ ನಾವಾಗಲಿ ಹೊರಲಾರದ" (ಅಪೊಸ್ತಲರ ಕೃತ್ಯಗಳು 15:10) "ನೊಗ" ಆಗಿತ್ತು. "ನೊಗ" ಎಂಬ ಪದವು 1ನೇ ವಚನ ಹಾಗೂ ಅಪೊಸ್ತಲರ ಕೃತ್ಯಗಳು 15:10ರಲ್ಲಿ ಒಂದು ರೂಪಕೋಕ್ತಿಯಾಗಿ ಬಳಸಲ್ಪಟ್ಟಿದೆ. ಈ ಬಳಕೆಯು ಹಳೆಯ ಒಡಂಬಡಿಕೆ ಮತ್ತು ಅನಂತರದಲ್ಲಿನ ಯೆಹೂದಿಮತದಲ್ಲಿ ಸಹ ಕಂಡು ಬರುತ್ತದೆ.

"ನೊಗ" ಎಂಬುದಕ್ಕೆ ಗ್ರೀಕ್ ಪದವು *ζυγός* (*zugos*) ಎಂದಾಗಿದ್ದು, ಅದು ಅಕ್ಷರಶಃ ಮರದ ಫಲಕ ಅಥವಾ ಸರಳು ಎಂಬ ಭಾವನೆಯಾಗಿರುತ್ತದೆ. LXXನಲ್ಲಿ, ಇದು ಅನೇಕ ಸಾರಿ ಮೃಗಗಳಿಗೆ ಭಾರವಾಗಿ ಹೊರಿಸುವ ನೊಗವನ್ನು ("ಎತ್ತುಗಳ ನೊಗ") ಸೂಚಿಸುತ್ತದೆ. ಅದು ನ್ಯಾಯವಾದ ಬೆಲೆಯನ್ನು ನಿರ್ಧರಿಸುವದಕ್ಕಾಗಿ ಸರಕುಗಳನ್ನು ತೂಕ ಮಾಡುತ್ತಿದ್ದ ತಕ್ಕಡಿಗಳನ್ನು ಅಥವಾ ತೂಕಗಳನ್ನು ಸಹ ಸೂಚಿಸುತ್ತದೆ (ಯಾಜಕಕಾಂಡ 19:36; ದಾನಿಯೇಲ 5:27).

ಅದರ ರೂಪಕವಾದ ಅರ್ಥದಲ್ಲಿ, *ಝುಗೊಸ* ಎಂಬ ಪದವು ಸತತವಾಗಿ ದಾಸತ್ವ ಅಥವಾ ಅಧಿಕಾರಕ್ಕೆ (ಉದಾಹರಣೆಗೆ ಐಗುಪ್ತದಂತಹ ಪರದೇಶದ ಅಧಿಕಾರ; ಯಾಜಕಕಾಂಡ 26:13) ಒತ್ತಾಯಪೂರ್ವಕವಾಗಿ ಅಧೀನಗೊಳಿಸಲ್ಪಡುವದು. ಸೊಲೊಮೋನನು ಮರಣಿಸಿ ಆತನಿಗೆ ಉತ್ತರಾಧಿಕಾರಿಯಾಗಿ ಆತನ ಮಗನಾದ ರೆಹೊಬ್ಬಾಮನು ಅಧಿಕಾರಕ್ಕೆ ಬಂದನು, ಉತ್ತರದಲ್ಲಿದ್ದ ಇಸ್ರಾಯೇಲಿನ ಹತ್ತು ಗೋತ್ರಗಳು ಹೊಸ ಅರಸನಿಗೆ ಹೀಗೆ ಮನವಿ ಮಾಡಿಕೊಂಡರು, "ನಿನ್ನ ತಂದೆಯು ನಮ್ಮ ಮೇಲೆ ಭಾರವಾದ ನೊಗವನ್ನು ಹೇರಿದನು; ನಿನ್ನ ತಂದೆಯು ನೇಮಿಸಿದ ಬಿಟ್ಟೀಕೆಲಸವನ್ನು ನೀನು ಕಡಿಮೆಮಾಡಿ ನಮ್ಮ ಮೇಲಿರುವ ಭಾರವಾದ ನೊಗವನ್ನು ಹಗುರ ಮಾಡುವದಾದರೆ ನಾವು ನಿನ್ನನ್ನು ಸೇವಿಸುವೆವು" (1 ಅರಸು 12:4). ಈ ಮನವಿಯ ಹಿನ್ನಲೆಯು ಸೊಲೊಮೋನನ ಕಟ್ಟಡ ನಿರ್ಮಾಣಗಳಿಗೋಸ್ಕರ ಹೇರಲಾಗಿದ್ದ ವಿಪರೀತವಾದ ತೆರಿಗೆ ಮತ್ತು ಕಠಿಣ ಪರಿಶ್ರಮಕ್ಕೆ ಸಂಬಂಧಿಸಿದ್ದಾಗಿತ್ತು (ನೋಡಿರಿ 1 ಸಮುವೇಲ 8:10-18).

ಯಾವದೇ ವಿಧವಾದ ಒಂದು ನೊಗದ ಅಡಿಯಲ್ಲಿರುವ ವಿಚಾರವು ಒಂದು ನಕಾರಾತ್ಮಕವಾದ ಸೂಚ್ಯಾರ್ಥವನ್ನು ಹೊಂದಿರುವದೆಂದು ವೈಶಿಷ್ಟ್ಯವಾಗಿ ಭಾವಿಸಿಕೊಳ್ಳಲಾಗುತ್ತದೆ. 1ನೇ ವಚನದಲ್ಲಿ, ಅದರ ಉದ್ದೇಶವು ತನ್ನ ಸಹೋದರರಿಗೆ ಪೌಲನು ಮನವಿ ಮಾಡಿಕೊಳ್ಳುತ್ತಿದ್ದಂಥ ಸ್ವಾತಂತ್ರ್ಯಕ್ಕೆ ವಿರುದ್ಧ ಹೋಲಿಕೆಯಲ್ಲಿ ನಿಲ್ಲಬೇಕೆಂಬುದೇ ಆಗಿತ್ತು, ಆ ಗಲಾತ್ಯದ ಸಹೋದರರ ನಂಬಿಕೆಯು ಯೆಹೂದಿಕರಣಗೊಳಿಸುವವರಿಂದ ಬುಡಮೇಲುಗೊಳಿಸುವ ಹಂತದಲ್ಲಿತ್ತು. ನೊಗದ ಭಾವನೆಯು ಸಾಮಾನ್ಯವಾಗಿ ಚಾಕರಿತನದ ಇಷ್ಟಪಡದಂತಹ ಸ್ಥಿತಿಗೆ ಸಂಬಂಧಿಸಿರುತ್ತದಾದರೂ, ಶಾಸ್ತ್ರಗಳಲ್ಲಿ ಇದು ಯಾವಾಗಲೂ ಹೀಗೆಯೇ ಇರುವದಿಲ್ಲ. ಉದಾಹರಣೆಗೆ, ಕರ್ತನನ್ನು ಹುಡುಕುವ ಮತ್ತು ಆತನ ರಕ್ಷಣೆಯಲ್ಲಿ

ಕಾದುಕೊಳ್ಳುವ ಸನ್ನಿವೇಶದಲ್ಲಿ, ಯೆರೆಮೀಯನು ಹೀಗೆ ಬರೆದನು,

> ಯೌವನದಲ್ಲಿ ನೊಗಹೊರುವದು ಮನುಷ್ಯನಿಗೆ ಲೇಸು.
> ನನ್ನ ಮೇಲೆ ಇದನ್ನು ಹೇರಿದವನು ಯೆಹೋವನೇ ಎಂದು ಅವನು
> ಏಕಾಕಿಯಾಗಿ ಕೂತುಬಾಯಿ ಬಿಡದಿರಲಿ (ಪ್ರಲಾಪ 3:27, 28).

ತಕ್ಷಣದ ಅನುಭವವು ಶ್ರಮೆಯದ್ದಾಗಿತ್ತಾದರೂ, ಸನ್ನಿವೇಶವು ಶ್ರಮೆಯು ಸಹ ಆಶೀರ್ವಾದವಾಗಿರಬಲ್ಲದು.[1] ಕ್ರೈಸ್ತೀಯ ಶಿಷ್ಯತ್ವಕ್ಕಾಗಿ ಕರ್ತನು ಮತ್ತಾಯ 11:28-30ರಲ್ಲಿ ಆಮಂತ್ರಣವನ್ನು ನೀಡುವದರಲ್ಲಿ, ನಕಾರಾತ್ಮಕತೆಯು ತಕ್ಷಣವೇ ಕಾಣಿಸುವದಿಲ್ಲ, ಆತನು ಹೇಳಿದ್ದೇನೆಂದರೆ,

> ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು ಅಂದನು.

ಯಾವ ನೊಗವನ್ನು ತೆಗೆದುಕೊಳ್ಳುವಂತೆ ಯೇಸುವು ಜನರನ್ನು ಆಮಂತ್ರಿಸುತ್ತಾನೋ ಆ ನೊಗವು ಅದನ್ನು ತೆಗೆದುಕೊಳ್ಳುವವರಿಗೆ ವಿಶ್ರಾಂತಿಯನ್ನು ಮತ್ತು ಸಮಾಧಾನವನ್ನು ಒದಗಿಸುತ್ತದೆ. ಬೇರೆ ಕಡೆಯಲ್ಲಿ, ಯೇಸುವು ತನ್ನನ್ನು ಹಿಂಬಾಲಿಸುವದರಿಂದ ಶ್ರಮೆ ಮತ್ತು ಹಿಂಸೆಗಳು ಉಂಟಾಗುತ್ತವೆಂಬುದನ್ನು ಮುಚ್ಚುಮರೆಯಿಲ್ಲದೆ ಹೇಳಿದನು.

ನೊಗದ ಚಿತ್ರಣವು ಅನೇಕ ಸಾರಿ ಯೆಹೂದಿ ವಲಯಗಳಲ್ಲಿ ಒಬ್ಬನು ತನ್ನನ್ನು ರಬ್ಬಿಯೊಬ್ಬನ ಉಪದೇಶಕ್ಕೆ ಅಧೀನಪಡಿಸಿಕೊಳ್ಳುವದನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು. ಯೇಸುವಿನ ಭಾಷೆಯನ್ನು ಆತನ ಬೋಧನೆ ಮತ್ತು ಆತನ ಮಾರ್ಗವನ್ನು ರಬ್ಬಿಗಳ ಮಾರ್ಗಕ್ಕೆ ವಿರುದ್ಧ ಹೋಲಿಕೆ ಮಾಡುವದಾಗಿ ಆಲಿಸಲ್ಪಟ್ಟಿರಬಹುದಾಗಿದೆ. ಅವರ ಮಾರ್ಗವು ಕಠಿಣ ಮತ್ತು ಭಾರವಾದದ್ದಾಗಿತ್ತು. ಆತನ ಮಾರ್ಗವು ಮೃದು ಮತ್ತು ಹಗುರವಾಗಿತ್ತು. ಪೌಲನು 5:1ರಲ್ಲಿ ಅದೇ ಹೇಳಿಕೆಯನ್ನು ನೀಡುತ್ತಿದ್ದಾನೆ. *ಸ್ವಾತಂತ್ರ್ಯವು ಸುವಾರ್ತೆಯಲ್ಲಿ ಸಿಕ್ಕುತ್ತದೆ, ಆದರೆ ದಾಸತ್ವದ ನೊಗವು ಧರ್ಮಶಾಸ್ತ್ರದಿಂದ ಬಂದಿತು.* ಒಬ್ಬನು ತನ್ನನ್ನು ದೇವರ ಚಿತ್ತಕ್ಕೆ ಮತ್ತು ಯೇಸುವಿನ ಯಜಮಾನಿಕೆಗೆ ತನ್ನ ಅಧೀನಪಡಿಸಿಕೊಳ್ಳುವದು ಮಾತ್ರವೇ ಸಂಪೂರ್ಣ ಸ್ವಾತಂತ್ರ್ಯವನ್ನು ಕಂಡುಕೊಳ್ಳಲು ಇರುವ ಏಕೈಕ ದಾರಿಯಾಗಿರುತ್ತದೆಂಬುದು ಸುವಾರ್ತೆಯ ವಿರೋಧಭಾಸವಾಗಿರುತ್ತದೆ. ಇದು ಮತ್ತಾಯ 11:28-30ರಲ್ಲಿ ಯೇಸುವು ಕಲಿಸಿದ ತದ್ರೂಪದ ಸತ್ಯವಾಗಿದೆ.

ಪ್ರೇರಿತವಲ್ಲದ ಪುಸ್ತಕವಾದ ಸಿರಾಕ್ (ಪ್ರಸಂಗಿ) ಪುಸ್ತಕದಲ್ಲಿ ಮತ್ತಾಯ 11:28-30ರಲ್ಲಿರುವ ಯೇಸುವಿನ ಮಾತುಗಳಿಗೆ ನಿಕಟವಾದಂಥ ಒಂದು ಕಲ್ಪನಾತ್ಮಕ ಸಮಾನಾರ್ಥವು ಸಿಕ್ಕುವದಾಗಿದ್ದು ಅದರಲ್ಲಿ ಜ್ಞಾನವು (ಒಬ್ಬ ಸ್ತ್ರೀಯಾಗಿ ಮೂರ್ತೀಕರಣಗೊಳಿಸಲ್ಪಟ್ಟಿದ್ದು) ಬಂದು ಆಕೆಯ ನೊಗವನ್ನು ತೆಗೆದುಕೊಳ್ಳುವಂತೆ, ಮತ್ತು ಆಕೆಯಿಂದ ಕಲಿತುಕೊಳ್ಳುವಂತೆ ಅದೇ ವಿಧವಾದ ಒಂದು ಆಮಂತ್ರಣವನ್ನು ಕೊಡುತ್ತದೆ:

> ಉಪದೇಶವಿಲ್ಲದವರೇ, ನನ್ನ ಪಕ್ಕದಲ್ಲಿ ಬನ್ನಿರಿ,
> ಮತ್ತು ಉಪದೇಶದ ಮನೆಯಲ್ಲಿ ವಸತಿ ತೆಗೆದುಕೊಳ್ಳಿರಿ;
> ಆಹಾರವಾದ ಜ್ಞಾನವಿಲ್ಲದೆ ಎಷ್ಟು ಕಾಲ ಹಸಿವೆಯಿಂದ ಬಳಲುವಿರಿ,

ಅಂಥ ಕಟು ದಾಹವನ್ನು ಇನ್ನಷ್ಟು ಕಾಲ ಸಹಿಸಿಕೊಳ್ಳುವಿರಿ?
ನಾನು ನನ್ನ ಬಾಯಿ ತೆರೆದು ಆಕೆಯ ಬಗ್ಗೆ ಮಾತಾಡುವೆನು:
ಯಾವ ಕ್ರಯವನ್ನು ಕೊಡದೆ, ನಿಮಗಾಗಿ ಸಂಪಾದಿಸಿಕೊಳ್ಳಿರಿ.
ನಿಮ್ಮ ಕೊರಳನ್ನು ಆಕೆಯ ನೊಗಕ್ಕೆ ಒಪ್ಪಿಸಿರಿ,
ಹೀಗೆ ನಿಮ್ಮ ಬುದ್ಧಿಯು ಆಕೆಯ ಬೋಧನೆಯನ್ನು ಸ್ವೀಕರಿಸಿಕೊಳ್ಳುವದು
ಯಾಕೆಂದರೆ ಆಕೆಯು ತನ್ನನ್ನು ಹುಡುಕುವವರಿಗೆ ಸಮೀಪವಾಗಿರುತ್ತಾಳೆ,
ಮತ್ತು ಆಸಕ್ತಿಯಿಂದಿರುವವನು ಆಕೆಯನ್ನು ಕಂಡುಕೊಳ್ಳುವನು.[2]

ಮತ್ತಾಯ 11:28-30ರಲ್ಲಿ ಯೇಸುವು ನೀಡುವ ಆಮಂತ್ರಣವು ರಬ್ಬಿಯು ಒಬ್ಬನನ್ನು ಆತನ ಮನೆಗೆ ಬಂದು ಆತನನ್ನು ಉಪದೇಶಕನ್ನಾಗಿ ಸ್ವೀಕರಿಸಿಕೊಳ್ಳುವಂತೆ ನೀಡುತ್ತಿದ್ದ ಆಮಂತ್ರಣದ ಆಕಾರದಲ್ಲಿರುತ್ತದೆಂದು ಅನೇಕ ಸಾರಿ ಹೇಳಲಾಗುತ್ತದೆ. ಯೇಸುವು ತನ್ನ ಶಿಷ್ಯರಿಗೆ ಶಾಸ್ತ್ರಿಗಳು ಮತ್ತು ಫರಿಸಾಯರಲ್ಲಿನ ವ್ಯರ್ಥವಾದ ಆಕಾಂಕ್ಷೆಯನ್ನು ಅನುಕರಿಸುವವರಾಗಿ, ಅಂತಹ ಸನ್ಮಾನದ ಬಿರುದುಗಳನ್ನು ಅಂಗೀಕರಿಸಿಕೊಳ್ಳಬಾರದೆಂದು ಅಪ್ಪಣೆ ಕೊಟ್ಟನಾದರೂ (ಮತ್ತಾಯ 23:1-8), ಸ್ವತಃ ಯೇಸುವು ಅನೇಕ ಸಾರಿ "ರಬ್ಬಿ" ಎಂದು ಕರೆಯಲ್ಪಟ್ಟನು. ಪೇತ್ರನು ಆತನನ್ನು "ಗುರುವೇ" ಅಥವಾ "ರಬ್ಬಿ" ಎಂದು ಕರೆದನು (ಮಾರ್ಕ 9:5; 11:21), ಅಂದ್ರೇಯ ಮತ್ತು ಸ್ನಾನಿಕನಾದ ಯೋಹಾನನ ಮತ್ತೊಬ್ಬ ಶಿಷ್ಯನು (ಯೋಹಾನ 1:38, 40), ನತಾನಿಯೇಲನು (ಯೋಹಾನ 1:49), ನಿಕೊದೇಮನು (ಯೋಹಾನ 3:1, 2), ಮತ್ತು ಒಟ್ಟಾರೆಯಾಗಿ ಆತನ ಶಿಷ್ಯರು (ಯೋಹಾನ 4:31; 9:2; 11:8) ಆತನನ್ನು ಆ ಬಿರುದಿನಿಂದ ಕರೆದರು. ಆತನು ಅತಿ ನಿಕಟರಾದ ಶಿಷ್ಯರಲ್ಲಿ ಸೇರಿರದಂಥ ಯೆಹೂದ್ಯರು ಗುಂಪಿನಿಂದ ಅದೇ ವಿಧದಲ್ಲಿ ಕರೆಯಲ್ಪಟ್ಟನು (ಯೋಹಾನ 6:24, 25). ಸ್ನಾನಿಕನಾದ ಯೋಹಾನನು ಸಹ ತನ್ನ ಶಿಷ್ಯರಿಂದ "ರಬ್ಬಿ" ಎಂದು ಕರೆಯಲ್ಪಟ್ಟನು (ಯೋಹಾನ 3:25, 26). ಯೇಸುವು ಈ ರೀತಿಯ ಕರೆಯಲ್ಪಡುವಿಕೆಯನ್ನು ಅಂಗೀಕರಿಸಿಕೊಂಡದ್ದರಲ್ಲಿ ಯಾವದೇ ಅಸಾಮಂಜಸ್ಯತೆಯು ಇರುವದಿಲ್ಲ, ಯಾಕೆಂದರೆ ಆತನು ದೇವರಿಂದ ಆತನ ಧ್ಯೇಯವನ್ನು ನೆರವೇರಿಸಲು ಕರೆಯಲ್ಪಟ್ಟಿದ್ದನು (ಯೋಹಾನ 3:17). ಆತನು ನಿಜವಾಗಿಯೂ "ಗುರುವು" ಆಗಿದ್ದನು.

"ರಬ್ಬಿ" ಎಂಬ ಪದವು, ಒಂದು ಇಬ್ರಿಯ ಶಬ್ದದಿಂದ ಬರುವದಾಗಿದ್ದು,[3] ಅದರ ಸರಿಯಾದ ಅನುವಾದವು "ನನ್ನ ಕರ್ತನೇ" ಎಂದಾಗಿರುತ್ತದೆ. ಯೇಸುವು ಏಕೆ ತನ್ನ ಶಿಷ್ಯರು - ಅವರಿಗೆ ರಾಜ್ಯದ ವಿಷಯವಾಗಿ ಸ್ವಂತವಾದ ಹೆಬ್ಬಯಕೆಯ ಯೋಜನೆಗಳಿದ್ದವು - ಕೇವಲ ಸಹೋದರರರಂತೆ ಕಾರ್ಯ ಮಾಡಬೇಕೆಂದು ಬಯಸಿದನು ಎಂಬುದನ್ನು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು (ಮತ್ತಾಯ 20:20-28; ಯೋಹಾನ 13:12-17). ಯೇಸುವನ್ನು "ರಬ್ಬೂನಿ" ಎಂದು ಸಹ ಕರೆಯಲಾಗಿತ್ತು, ಅದು "ರಬ್ಬಿ" ಎಂಬುದರ ತೀಕ್ಷ್ಣಗೊಳಿಸಲ್ಪಟ್ಟ ರೂಪವಾಗಿತ್ತು, ಅದರ ಅಕ್ಷರಶಃ ಅರ್ಥವು "ನನ್ನ ಕರ್ತನೇ" ಅಥವಾ "ನನ್ನ ಒಡೆಯನೇ" ಎಂದಾಗಿತ್ತು (ಮಾರ್ಕ 10:51; ಯೋಹಾನ 20:16). ಯೋಹಾನ 20:16ನೇ ವಚನವು "ರಬ್ಬೂನಿ" ಎಂಬುದನ್ನು "ಗುರುವೇ" ಎಂದು ಅರ್ಥನಿರೂಪಣೆ ಮಾಡುತ್ತದೆ. "ರಬ್ಬಿ" ಎಂಬುದು ಸಾಮಾನ್ಯ ಬಳಕೆಯಲ್ಲಿದ್ದ ಪದವಾಗಿತ್ತು, ಆದರೆ ಅದು ಮನುಷ್ಯರು ತಮ್ಮನ್ನು ಭಿನ್ನರೆಂದು, ಬೇರೆಯವರಿಗಿಂತ ಮೇಲಾಗಿ ತಮ್ಮನ್ನು ಹೆಚ್ಚಿಸಿಕೊಳ್ಳುವಂತೆ ಪ್ರಲೋಭಿಸಲ್ಪಡುವಂತೆ ಮಾಡುವಂತಹ ರೂಪದ ಬಿರುದು ಆಗಿತ್ತು.

ಮತ್ತಾಯ 11:28-30ರಲ್ಲಿ ಯೇಸುವು ನೀಡುವ "ರಬ್ಬಿಯ" ಆಮಂತ್ರಣದ ವಿಷಯದಲ್ಲಿ,

ಶ್ರೇಷ್ಠ ರಬ್ಬಿಗಳು ತಮ್ಮ ವಿದ್ಯಾರ್ಥಿಗಳಿಗೆ ಕೇವಲ ಸಿದ್ಧಾಂತವನ್ನು ಕಲಿಸಿ ಕೊಡುವದಕ್ಕಿಂತಲೂ (ಸಿದ್ಧಾಂತವು ಪ್ರಾಮುಖ್ಯವಾಗಿತ್ತು ಮತ್ತು ಅತಿ ಕಟ್ಟುನಿಟ್ಟಿನದ್ದಾಗಿತ್ತಾದರೂ) ಹೆಚ್ಚಿನದ್ದನ್ನು ಮಾಡುತ್ತಿದ್ದರೆಂಬುದನ್ನು ಗಮನಿಸತಕ್ಕದ್ದು. ಯೇಸುವಿನ ದಿನದ ರಬ್ಬಿಗಳು ಸಭಾಮಂದಿರಗಳಲ್ಲಿ ಮತ್ತು ಬೇರೆ ಸ್ಥಳಗಳಲ್ಲಿ ಪಾಠಶಾಲೆಯನ್ನು ನಡಿಸುತ್ತಿದ್ದರಾದರೂ, ಶ್ರೇಷ್ಠ ರಬ್ಬಿಗಳು ವಿದ್ಯಾರ್ಥಿಗಳನ್ನು ತಮ್ಮ ಮನೆಗಳೊಳಗೆ ಸಹ ಆಮಂತ್ರಿಸುತ್ತಿದ್ದರು. ಈ ವಿಧದಲ್ಲಿ, ವಿದ್ಯಾರ್ಥಿಗಳು ರಬ್ಬಿಯ ಉಪದೇಶವನ್ನು ಕೇಳಿಸಿಕೊಳ್ಳುವದರ ಜೊತೆಯಲ್ಲಿ, ಮನೆಯ ಯಜಮಾನನಾಗಿ ಕೆಲಸ ಮಾಡುತ್ತಿದ್ದವನ ಜೀವನದ ವಿಧಾನವನ್ನು ಸಹ ಗಮನಿಸುವಂತೆ ಅನುಮತಿಸಲ್ಪಡುತ್ತಿದ್ದರು. ಶಿಷ್ಯತ್ವದ ಪ್ರಕ್ರಿಯೆಯಲ್ಲಿ ಮಾದರಿ ವ್ಯಕ್ತಿಯಾಗಿರುವದರ ಶಕ್ತಿಯನ್ನು ರಬ್ಬಿಗಳು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ತಾರ್ಸ ಪಟ್ಟಣದ ಯುವಕನಾಗಿದ್ದ ಸೌಲನು ಹಿರಿಯನಾದ ಗಮಲಿಯೇಲನ ಪಾದಗಳ ಬಳಿಯಲ್ಲಿ ಅಂತಹ ಉಪದೇಶದೊಳಗೆ ಪಾಲುಗಾರನಾಗಿರುವ ಸಾಧ್ಯತೆಯು ಇರುತ್ತದೆ (ಅಪೊಸ್ತಲರ ಕೃತ್ಯಗಳು 22:3). ("ರಬ್ಬೂನಿ" ಎಂಬುದು "ನಮ್ಮ ಗುರುವೇ" ಎಂಬುದಕ್ಕೆ ಬಳಸುವ ಅರಾಮಿಕ್ ಭಾಷೆಯ ಪದವಾಗಿತ್ತು, ಅದು "ರಬ್ಬಿ" ಎಂಬುದಕ್ಕಿಂತ ಅಧಿಕ ಘನತೆಯುಳ್ಳ ಪದವಾಗಿತ್ತು.) ಯೇಸುವು ತನ್ನ ಶಿಷ್ಯರ ಸಂಗಡ ಒಟ್ಟಿಗೆ ಇರುವ ವೇಳೆ, ಉದಾಹರಣೆಗೆ ಆತನು ಕರ್ತನ ಭೋಜನವನ್ನು ಪ್ರತಿಷ್ಠಾಪಿಸಿದ ವೇಳೆಯಲ್ಲಿ ಇದೇ ಆಪ್ತವಾದ ರೀತಿಯಲ್ಲಿ ನಡೆದುಕೊಂಡನು. ಆತನು ಸ್ವತಃ ಅಂತಹ ಔಪಚಾರಿಕವಾದ ರಬ್ಬಿಗಳ ಉಪದೇಶವನ್ನು ಹೊಂದಿದ್ದಿಲ್ಲವಾದರೂ (ಯೋಹಾನ 7:14, 15), ಆತನು ತನ್ನ ದಿನದಲ್ಲಿ ಸಾಮಾನ್ಯವಾಗಿದ್ದ ಉಪದೇಶದ ವಿಧಾನಕ್ಕೆ ತನ್ನನ್ನು ಹೊಂದಿಸಿಕೊಳ್ಳುವದು ಸಹಜವಾಗಿತ್ತು.

ಈ ಯೋಚನೆಗಳ ಜೊತೆಯಲ್ಲಿ, ನೊಗದ ರೂಪಕೋಕ್ತಿಯ ಉದ್ದೇಶ ಮತ್ತು ಇಂಗಿತಗಳ ಕುರಿತಾಗಿ ಸಹ ಮಾತಾಡುವದು ಅವಶ್ಯ. ಅದರ ಅಕ್ಷರಶಃ ಅರ್ಥದಲ್ಲಿ, ಭಾರ ಹೊರುವ ಮೃಗದ ಕೊರಳಿನ ಮೇಲೆ ಇಡಲ್ಪಡುವಾಗ, ನೊಗವು ಆ ಮೃಗವನ್ನು ಅದರ ಕೆಲಸವನ್ನು ನೆರವೇರಿಸುವಂತೆ ಸನ್ನದ್ಧಗೊಳಿಸುವಿಕೆ ಆಗಿತ್ತು. ಒಂದು ನೊಗವು ಇಲ್ಲದಿದ್ದರೆ, ಪ್ರಾಣಿಯು ನೇಗಿಲನ್ನಾಗಲಿ, ಕುಂಟೆ, ಚಕ್ಕಡಿ, ಅಥವಾ ಬೇರೆ ಯಾವದನ್ನೇ ಆಗಲಿ ಎಳೆಯಲು ಸಾಧ್ಯವಾಗುತ್ತಿರಲಿಲ್ಲ. ಮತ್ತಾಯ 11:28-30ರಲ್ಲಿ ಮುಖ್ಯವಾದ ಒತ್ತು ಶಾಸ್ತ್ರಿಗಳ ಮತ್ತು ಫರಿಸಾಯರ "ಭಾರವಾದ ಹೊರೆಗಳಿಗೆ" (ಮತ್ತಾಯ 23:1-4) ಹೋಲಿಕೆ ಮಾಡಿದರೆ ಯೇಸುವಿನ "ಮೃದು" ನೊಗ ಮತ್ತು "ಹಗುರವಾದ" ಭಾರವಿರುವಂತದ್ದಾಗಿತ್ತದೆಂಬುದರ ಮೇಲೆ ಇರುತ್ತದೆಂದು ಕಾಣಿಸುತ್ತದೆ. ಧರ್ಮಶಾಸ್ತ್ರದ ದಬ್ಬಾಳಿಕೆ ಮಾಡುವ ನೊಗಕ್ಕೆ ತದ್ವಿರುದ್ಧವಾಗಿ ಹೋಲಿಸುವದಾದರೆ ಮೃದುವಾದ ನೊಗವು, ವಿಶೇಷವಾಗಿ ಆ ಕಾಲದ ಪಂಡಿತರಿಂದ ವ್ಯಾಖ್ಯಾನಿಸಲ್ಪಟ್ಟ ಪ್ರಕಾರವಾಗಿ ಒಂದು ಸುಖಕರವಾದ ನೊಗವಾಗಿರುತ್ತದೆ. ಒಂದು ಅಕ್ಷರಶಃ ನೊಗವು ಕತ್ತರಿಸಲ್ಪಟ್ಟ ಒರಟು ಕಟ್ಟಿಗೆಯಿಂದ ಮಾಡಲ್ಪಟ್ಟದ್ದಾಗಿದ್ದು ಅದು ಎತ್ತಿನ ಕೊರಳನ್ನು ತಿಕ್ಕುತ್ತಾ ಇರುವದಾಗಿತ್ತು, ಅಥವಾ ಅದರ ತಿಕ್ಕಾಟವನ್ನು ಕಡಿಮೆಗೊಳಿಸುವದಕ್ಕಾಗಿ ಚರ್ಮದಿಂದ ಕೊರಳ ಪಟ್ಟಿಯನ್ನು ಅದಕ್ಕೆ ಜೋಡಿಸಬಹುದಿತ್ತು.

ಧರ್ಮಶಾಸ್ತ್ರದ ನೊಗದ ವಿಷಯದಲ್ಲಿ, Karl Heinrich Rengstorfನು ಗಮನಕ್ಕೆ ತರುವದೇನೆಂದರೆ "ಕಟ್ಟಳೆಗಳ ನೊಗವು" ಎಂಬ ಮತ್ತು "ಪರಿಶುದ್ಧನ ನೊಗ" ಎಂಬ ಮಾತುಗಳೆಲ್ಲಾ "ದೇವರ ಚಿತ್ತಕ್ಕೆ ಅಧೀನಪಡಿಸಿಕೊಳ್ಳುವ ವಿಚಾರವನ್ನು ವ್ಯಕ್ತಪಡಿಸುತ್ತವೆ." ಈ ನೊಗವು "ಒಂದು ಭಾರವೆಂದು ಅನ್ನಿಸಲಿಲ್ಲ," ಆದರೆ "ಒಂದು ಭಾಗ್ಯ" ಎಂದು ಎಣಿಸಲ್ಪಟ್ಟಿತು ಎಂದು ಆತನು ಹೇಳುತ್ತಾನೆ.[4] ಹೇಗೂ, ಈ ಬಣ್ಣನೆಯು ಪ್ರಾಥಮಿಕವಾಗಿ ರಬ್ಬಿಗಳ ಉಕ್ತಿಗಳಿಗೆ

ಸಂಬಂಧಿಸಿದ್ದಾಗಿದೆ. ಇದು ಸಾಮಾನ್ಯ ಜನರು ಹೇಗೆ ಭಾವಿಸಿಕೊಂಡರೆಂಬುದನ್ನು ಪ್ರತಿಫಲಿಸುವಂತೆ ಕಾಣಿಸಲಿಲ್ಲ, ಅಥವಾ ಇದು ಯೇಸುವು ಮಾತಾಡುತ್ತಿದ್ದ ಅಭಿಪ್ರಾಯವೂ ಆಗಿರಲಿಲ್ಲ. ನಿರ್ಧರಿಸಲ್ಪಟ್ಟಿರುವಂತೆ ಇದು ಗಲಾತ್ಯದವರಿಗೆ ಪೌಲನು ಮುಂದಿಟ್ಟ ಧರ್ಮಶಾಸ್ತ್ರದ ಕಡೆಗಿನ ಮನೋಭಾವವಾಗಲಿ, ಪೇತ್ರನು ಅಪೊಸ್ತಲರ ಕೃತ್ಯಗಳು 15:10ರಲ್ಲಿ ವ್ಯಕ್ತಪಡಿಸುವ ಅಭಿಪ್ರಾಯವಾಗಲಿ ಆಗಿರುವದಿಲ್ಲ.

ಖಂಡಿತವಾಗಿಯೂ, ಯೇಸುವು ನೊಗದ ರೂಪಕೋಕ್ತಿಯನ್ನು ಬಳಸಿದ ಪ್ರಕಾರವೇ, ಸೇವೆ, ಜವಾಬ್ದಾರಿ, ಆತನ ಕಟ್ಟಳೆಗಳನ್ನು ಕೈಕೊಂಡು ನಡೆಯುವದಕ್ಕೆ ಇರುವ ಹೊಣೆಗಳು, ಮತ್ತು ಆತನ ಚಿತ್ತಕ್ಕೆ ಅಧೀನಪಡಿಸಿಕೊಳ್ಳುವಿಕೆಗಳಂತಹ ಭಾವನೆಗಳನ್ನು ನಿರ್ಮೂಲಗೊಳಿಸುವದಕ್ಕೆ ಸಾಧ್ಯವಿಲ್ಲ. ಅಂತೂ, ಅವುಗಳು ಒಂದು ನೊಗದ ಭಾವನೆಗೊಳಗೆ ಅಂತರ್ಗತವಾಗಿರುತ್ತವಷ್ಟೆ. ತಾನು ಯಾವ ನೊಗವನ್ನು ಹೊರುವದಕ್ಕಾಗಿ ಕರೆಯಲ್ಪಟ್ಟಿದ್ದಾನೋ ಆ ನೊಗದ ಅನುಭವವನ್ನೇ ಹೊಂದಿರದ ವ್ಯಕ್ತಿಗಾದರೋ, ವಿರೋಧಭಾಸವು ಹಾಗೆಯೇ ಉಳಿದುಕೊಳ್ಳುತ್ತದೆ. ಯೇಸುವಿನ ನೊಗವನ್ನು ಹೊತ್ತುಕೊಳ್ಳುವದಕ್ಕೆ ನಂಬಿಕೆಯ ಹೆಜ್ಜೆಯೊಂದನ್ನು ಇಡಬೇಕಾಗುತ್ತದೆ. ಹೇಗೂ, ಆತನು ತನ್ನ ಆರಂಭಿಕ ಸಂಕೋಚವನ್ನು ಜಯಿಸುವದಾದರೆ ಮತ್ತು ಈ ಹೆಜ್ಜೆಯನ್ನಿಡುವದಾದರೆ, "ನನ್ನಿಂದ ಕಲಿತುಕೊಳ್ಳಿರಿ" (ಮತ್ತಾಯ 11:29) ಎಂದು ಕರ್ತನು ನೀಡಿರುವ ಕರೆಯನ್ನು ಆತನು ಸ್ವೀಕರಿಸಿಕೊಳ್ಳುವಾಗ ಯೇಸುವು ಸತ್ಯವನ್ನೇ ಹೇಳಿದ್ದಾನೆಂಬುದನ್ನು ಕಂಡುಕೊಳ್ಳುವನು. ಆತನ ನಂಬಿಕೆಯು ಅಧಿಕಗೊಂಡ ಹಾಗೆ, ಆತನು ನಿಶ್ಚಯವಾಗಿಯೂ ತನ್ನ ಆತ್ಮಕ್ಕೆ ವಿಶ್ರಾಂತಿಯನ್ನು ಕಂಡುಕೊಳ್ಳುವನು. ಯಾಕೆಂದರೆ ಸೃಷ್ಟಿಯ ಸರ್ವಶಕ್ತ ಕರ್ತನೆಂದು ಯೇಸುವಿನಲ್ಲಿ ವಿಶ್ವಾಸವಿಟ್ಟ ಜೀವನವು ವಿಶ್ವಾಸಿಯ ಜೀವಕ್ಕೆ ಸಹ (ಆತನ ಮರಣ ಹಾಗೂ ಪುನರುತ್ಥಾನಗಳ ಮುಖಾಂತರವಾಗಿ) ಖಾತ್ರಿಯನ್ನು ಒದಗಿಸಿರುತ್ತದೆ. ಈ ವಾಸ್ತವಾಂಶದಲ್ಲಿ ಭರವಸವನ್ನಿಡುವದು, ಆತನ ಭವಿಷ್ಯಕ್ಕೆ ಗಂಡಾಂತರವನ್ನೊಡ್ಡುವಂತೆ ತೋರುವ ಮರಣ ಹಾಗೂ ನಾಶನದ ಭೀತಿಗಳೆಲ್ಲಾ ತೂಗಾಡುತ್ತಿದ್ದರೂ ಅದು ಆತನ ಮನಸ್ಸನ್ನು ವಿಶ್ರಾಂತಿಯಲ್ಲಿಡುವದು.

ಕರ್ತನ ನೊಗವನ್ನು "ಮೃದು"ಗೊಳಿಸುವಂಥದ್ದು ಯಾವದೆಂದರೆ ವಿಶ್ವಾಸಿಯು ಮನಃಪೂರ್ವಕವಾಗಿ ತನ್ನನ್ನು ಒಪ್ಪಿಸಿಕೊಳ್ಳುವಂತದ್ದು (ರೋಮಾ 6:17) ಮತ್ತು ಆತ್ಮಿಕ ಮಟ್ಟದಲ್ಲಿ ಜೀವಿಸುವಂತೆ ಆತನಿಗೆ ಬಲ ನೀಡುವಂತಹ ಪವಿತ್ರಾತ್ಮನ ವರವೇ ಆಗಿರುತ್ತದೆ (ಗಲಾತ್ಯ 5:16–18)

## ಕ್ರಿಸ್ತನಲ್ಲಿರುವ ಸ್ವಾತಂತ್ರ್ಯ (5:2-15)

### ಧರ್ಮಶಾಸ್ತ್ರ Vs ಕ್ರಿಸ್ತನು (5:2-6)

**2ನೋಡಿರಿ, ಪೌಲನೆಂಬ ನಾನು ನಿಮಗೆ ಒಂದನ್ನು ಹೇಳುತ್ತೇನೆ - ನೀವು
ಸುನ್ನತಿಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ.
3ಸುನ್ನತಿಮಾಡಿಸಿಕೊಳ್ಳುವ ಪ್ರತಿಯೊಬ್ಬನಿಗೆ - ನೀನು ಧರ್ಮಶಾಸ್ತ್ರದಲ್ಲಿ ಹೇಳಿರುವದನ್ನೆಲ್ಲಾ
ಮಾಡುವ ಹಂಗಿನಲ್ಲಿದ್ದೀ ಎಂದು ತಿರಿಗಿ ಪ್ರಮಾಣವಾಗಿ ಹೇಳುತ್ತೇನೆ. 4ನಿಮ್ಮಲ್ಲಿ ಯಾರಾರು
ಕರ್ಮಗಳಿಂದ ನೀತಿವಂತರಾಗಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು.
ಕೃಪಾಶ್ರಯದೊಳಗಿಂದ ಬಿದ್ದುಹೋದರು. 5ನಾವೋ ದೇವರಾತ್ಮನ ಮೂಲಕ ನಂಬಿಕೆಯಿಂದ
ನೀತಿವಂತರಾಗುತ್ತೇವೆಂಬುವ ನಿರೀಕ್ಷೆ ಸಫಲವಾಗುವದೆಂದು ಎದುರುನೋಡುತ್ತೇವೆ. 6ಕ್ರಿಸ್ತ
ಯೇಸುವಿನಲ್ಲಿರುವವರಿಗೆ ಸುನ್ನತಿಯಾದರೂ ಪ್ರಯೋಜನವಿಲ್ಲ, ಆಗದಿದ್ದರೂ ಪ್ರಯೋಜನವಿಲ್ಲ.**

**ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗಿದೆ.**

ಸುನ್ನತಿಯ ವಿಷಯವು ಅತ್ಯಂಥ ಪ್ರಾಮುಖ್ಯವಾಗಿತ್ತು. ಅದು ಹಳೆಯ ಮತ್ತು ಹೊಸ ಒಡಂಬಡಿಕೆಗಳೊಂದಿಗೆ ಕ್ರೈಸ್ತನಿಗಿದ್ದ ಸಂಬಂಧದ ಮೇಲೆ ನೇರವಾದ ಪರಿಣಾಮವನ್ನು ಹೊಂದಿತ್ತು. ಈ ಕಾರಣಕ್ಕಾಗಿಯೇ, ಪೌಲನು ಅನ್ಯಜನಾಂಗದ ಕ್ರೈಸ್ತರಲ್ಲಿದ್ದ ಅಭ್ಯಾಸಗಳ ವಿರುದ್ಧವಾಗಿ ಕಠೋರವಾಗಿ ಮಾತಾಡಿದನು.

**ವಚನ 2.** ಅಪೊಸ್ತಲನು ಬಲವಾದ ರೀತಿಯಲ್ಲಿ ಒತ್ತಿ ಹೇಳಿದ್ದೇನೆಂದರೆ, **ನೋಡಿರಿ, ಪೌಲನೆಂಬ ನಾನು ನಿಮಗೆ ಒಂದನ್ನು ಹೇಳುತ್ತೇನೆ - ನೀವು ಸುನ್ನತಿಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ.** ಈ ಪತ್ರಿಕೆಯಲ್ಲಿ "ಸುನ್ನತಿ"[5] (περιτομή, *peritomē*) ಎಂಬುದಾಗಿ ಪ್ರಸ್ತಾಪಿಸಿದ್ದು ಇದೇ ಮೊದನೆಯದ್ದಲ್ಲ; ಪೌಲನು ಈ ವಿಷಯವನ್ನು 2:3ರಲ್ಲಿ ಆತನ ಅನ್ಯಜನಾಂಗದ ಜೊತೆಗೆಲಸದವನಾದ, ತೀತನ ವಿಷಯವಾಗಿ ಪರಿಚಯಿಸಿದ್ದನು.

ಪೌಲನು ಅನ್ಯಜನಾಂಗದ ಗಲಾತ್ಯದವರ ಮೇಲೆ ಸುನ್ನತಿಯ ಹೇರುವಿಕೆಯನ್ನು ಸುಮ್ಮನೆ ನಿರ್ಲಕ್ಷ್ಯಿಸಿ ಬಿಡಲು ಸಾಧ್ಯವಾಗದಿರುವದಕ್ಕೆ ಕಾರಣವೆಂದರೆ ಅದು ಮೊದಲು ದೇವರ ಹಾಗೂ ಅಬ್ರಹಾಮ ಮತ್ತು ಆತನ ಸಂತತಿಯವರ ನಡುವೆ ಮಾಡಿಕೊಂಡ "ಒಡಂಬಡಿಕೆಯ ಗುರುತು" (ಆದಿಕಾಂಡ 17:10-13) ಆಗಿತ್ತು ಮತ್ತು ಬಳಿಕ ಸೀನಾಯಿ ಪರ್ವತದಲ್ಲಿ ಹಳೆಯ ಒಡಂಬಡಿಕೆಯೊಳಗೆ ಸೇರ್ಪಡೆಗೊಳಿಸಲ್ಪಟ್ಟಿತ್ತು.[6] ಯೆಹೂದ್ಯರಿಗೆ ಅದು ಎಷ್ಟೊಂದು ಸಾರಭೂತವಾಗಿತ್ತೆಂದರೆ ಅವರನ್ನು ಹೊಸ ಒಡಂಬಡಿಕೆಯಲ್ಲಿ ಸತತವಾಗಿ "ಸುನ್ನತಿಯವರು"[7] ಎಂದು ಸಂಬೋಧಿಸಲಾಗಿದೆ, ಅದು ಅವರನ್ನು "ಸುನ್ನತಿಯಿಲ್ಲದವರು"[8] (ಗಲಾತ್ಯ 2:7-9) ಎಂದು ಕರೆಯಲ್ಪಡುವ ಅನ್ಯಜನರಿಂದ ಪ್ರತ್ಯೇಕಗೊಳಿಸುವ ಬಿರುದು ಆಗಿತ್ತು.

ಪೌಲನು ಗಲಾತ್ಯದವರಿಗೆ ಹೇಳಿದ್ದೇನೆಂದರೆ ಅವರು ಸುನ್ನತಿಗೆ ಒಪ್ಪಿಸಿಕೊಳ್ಳುವದಾದರೆ, "ಕ್ರಿಸ್ತನಿಂದ [ಅವರಿಗೆ] ಏನೂ ಪ್ರಯೋಜನ[ವಿರುವದಿಲ್ಲ]." ಯಾವನಾದರೂ ಒಬ್ಬ ಕ್ರೈಸ್ತನಾಗುವದಕ್ಕೆ ಸುನ್ನತಿಯನ್ನು ಒಂದು ಅವಶ್ಯಕತೆಯಾಗಿ ಮಾಡಿಸಿಕೊಳ್ಳುವದಾದರೆ ಆತನು ಕ್ರಿಸ್ತನೊಂದಿಗಿನ ತನ್ನ ಸಂಬಂಧವನ್ನು ಮತ್ತು ಕ್ರಿಸ್ತನಲ್ಲಿರುವದರಿಂದ ಸಿಕ್ಕುವ ಪ್ರಯೋಜನಗಳನ್ನು ನಷ್ಟಪಡಿಸಿಕೊಳ್ಳುವವನಾಗಿದ್ದನು. ಸುನ್ನತಿ ಮತ್ತು ಹಳೆಯ ಒಡಂಬಡಿಕೆಯ ನಡುವಿನ ಸಂಬಂಧವು ಎಷ್ಟೊಂದು ಬಲಿಷ್ಟವಾಗಿತ್ತೆಂದರೆ ಅದನ್ನು ಸ್ವೀಕರಿಸಿಕೊಳ್ಳುವ ಯಾವನೇ ಆಗಲಿ ಸ್ವತಃ ಕ್ರಿಸ್ತನೊಂದಿಗಿದ್ದ ತನ್ನ ಸಂಬಂಧವನ್ನೇ ಅಂತ್ಯಗೊಳಿಸುವವನಾಗಿದ್ದನು. ಎರಡು ಒಡಂಬಡಿಕೆಗಳು ಮಿಶ್ರಣಗೊಳ್ಳಲು ಅಥವಾ ಒಂದಕ್ಕೊಂದು ಬೆಸೆದುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಈ ಉಪದೇಶವು ಒತ್ತಿ ಹೇಳುತ್ತದೆ. ಒಬ್ಬನು ಧರ್ಮಶಾಸ್ತ್ರ (ಅಥವಾ ಒಬ್ಬನು ತನ್ನ ನೀತಿಯನ್ನು ಸಂಪಾದಿಸಿಕೊಳ್ಳಬೇಕೆಂಬ ತತ್ವ) ಮತ್ತು ಯೇಸು ಕ್ರಿಸ್ತನಲ್ಲಿರುವ ಕೃಪೆಯ ಸುವಾರ್ತೆಯ ನಡುವೆ ಆಯ್ಕೆಯನ್ನು ಮಾಡಿಕೊಳ್ಳತಕ್ಕದ್ದು.

**ವಚನ 3.** ಪೌಲನು ಅಪಾರ್ಥಮಾಡಿಕೊಳ್ಳಬಹುದಾದ ಯಾವದೇ ಸಾಧ್ಯತೆಯಿಂದ ದೂರವಿರುವದಕ್ಕೆ ಬಯಸಿದ್ದನು, ಹೀಗಿರುವದರಿಂದ ಆತನು ಖಡಾಂಖಂಡಿತವಾಗಿ ತನ್ನ ಮಾತನ್ನು ಪುನರಾವರ್ತಿಸುತ್ತಾನೆ: **ಸುನ್ನತಿಮಾಡಿಸಿಕೊಳ್ಳುವ ಪ್ರತಿಯೊಬ್ಬನಿಗೆ - ನೀನು ಧರ್ಮಶಾಸ್ತ್ರದಲ್ಲಿ ಹೇಳಿರುವದನ್ನೆಲ್ಲಾ ಮಾಡುವ ಹಂಗಿನಲ್ಲಿದ್ದೀ ಎಂದು ತಿರಿಗಿ ಪ್ರಮಾಣವಾಗಿ ಹೇಳುತ್ತೇನೆ.** ಇದೇ ವಿಧವಾದ ಪುನರಾವರ್ತನೆಯು 1:9ರಲ್ಲಿ ಕಾಣಿಸಿಕೊಳ್ಳುತ್ತದೆ. ಎರಡೂ ಪ್ರಕರಣಗಳಲ್ಲಿ, ಪುನರಾವರ್ತನೆಯು ಸೂಚಿಸುವದೇನೆಂದರೆ ಪೌಲನ ಘೋಷಣೆಯು ಚಿಕ್ಕ ವಿಷಯವನ್ನೇನೂ ಒಳಗೊಂಡಿರುವದಿಲ್ಲ ಎಂಬುದೆ.

ಯೇಸುವು ಹೀಗೆ ಹೇಳಿದನು, "ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ

ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದುಹೋಗಲಾರದು" (ಮತ್ತಾಯ 5:18). ಹಳೆಯ ಒಡಂಬಡಿಕೆಯ ಶಾಸ್ತ್ರಗಳು ಕ್ರಿಸ್ತನ ಕುರಿತಾಗಿ ಸಾಕ್ಷಿ ನೀಡಿದವು (ಯೋಹಾನ 5:39). ಯೇಸುವು ಆತನ ಬಳಿಗೆ ಬರುವದಕ್ಕೆ ಮನಸ್ಸಿಲ್ಲದವರಾಗಿದ್ದು ಮೋಶೆಯನ್ನೇ ಅನುಸರಿಸುವದರಲ್ಲಿ ಮುಂದುವರೆದವರಿಗೆ ಎಚ್ಚರಿಸಿ ಹೇಳಿದ್ದೇನೆಂದರೆ, "ನಾನು ತಂದೆಯ ಮುಂದೆ ನಿಮ್ಮ ಮೇಲೆ ತಪ್ಪುಹೊರಿಸುವೆನೆಂದು ನೆನಸಬೇಡಿರಿ; ನೀವು ಆಶ್ರಯಿಸಿಕೊಂಡಿರುವ ಮೋಶೆಯೇ ನಿಮ್ಮ ಮೇಲೆ ತಪ್ಪುಹೊರಿಸುವವನು. ಅವನು ನನ್ನ ವಿಷಯವಾಗಿ ಬರೆದನು; ಆದದರಿಂದ ನೀವು ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ" (ಯೋಹಾನ 5:45, 46).

ಧರ್ಮಶಾಸ್ತ್ರವು - ಅದರ ಎಲ್ಲಾ ರೀತಿಯ ಸಾಕ್ಷಿ ಹೇಳುವಿಕೆ, ಉಪದೇಶಿಸುವಿಕೆ, ಮುಂತಿಳಿಸುವಿಕೆ, ಸಂತೈಸುವಿಕೆ, ಎಚ್ಚರಿಸುವಿಕೆ, ಹೊಣೆಗಾರರನ್ನಾಗಿಸುವಿಕೆ, ಮತ್ತು ತೀರ್ಪು ನೀಡುವ ಶಕ್ತಿಯೊಂದಿಗೆ - ಈಗಲೂ ಹಳೆಯ ಒಡಂಬಡಿಕೆಗೆ ಒಂದು ಉಲ್ಲೇಖ ಮತ್ತು ವಿವರಣೆಯಾಗಿ ನಮ್ಮ ಮಧ್ಯದಲ್ಲಿ ಇರುತ್ತದೆ. ಹೇಗೂ, ದೇವರಿಗೆ ಸ್ತೋತ್ರವಾಗಲಿ, ಆತ್ಮನಲ್ಲಿ ಜೀವಿಸುವ ಕ್ರೈಸ್ತರು ಇನ್ನು ಮೇಲೆ ಧರ್ಮಶಾಸ್ತ್ರಾಧೀನರಾಗಿರುವದಿಲ್ಲ (ರೋಮಾ 8:1-4). ಹಳೆಯ "ಕಾಯುವವನ" (παιδαγωγός, *paidagōgos*) ನಮಗೆ ಕಲಿಸಲ್ಪಟ್ಟ ಪಾಠಗಳನ್ನು ಈಗಲೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿರುತ್ತದೆ; "ಆದರೆ ಕ್ರಿಸ್ತ ನಂಬಿಕೆಯು ಬಂದಿರಲಾಗಿ ನಾವಿನ್ನು ಕಾಯುವವನ ಕೈಕೆಳಗಿರುವವರಲ್ಲ" (ಗಲಾತ್ಯ 3:25). ಧರ್ಮಶಾಸ್ತ್ರವು ಹೇಳುವದನ್ನು ಕೇಳಿಸಿಕೊಳ್ಳುವದಕ್ಕಾಗಿ ಧರ್ಮಶಾಸ್ತ್ರಾಧೀನರಾಗುವದಕ್ಕೆ ಬಯಸುವವರನ್ನು ಸಂಬೋಧಿಸಿ ಮಾತಾಡಿದ್ದನು (4:21). ಆತನು ಸಾಂಕೇತಿಕ ನಿರೂಪಣೆಯೊಂದಿಗೆ ಧರ್ಮಶಾಸ್ತ್ರದ ಪಾತ್ರವನ್ನು ಸಾರಾಂಶಗೊಳಿಸುತ್ತಾನೆ (4:22-30), ಕ್ರೈಸ್ತನು ಧರ್ಮಶಾಸ್ತ್ರ ಮಗುವಲ್ಲ ಎಂಬ ಮುಕ್ತಾಯಕ್ಕೆ ಬರುತ್ತಾನೆ (4:31). ಇಲ್ಲಿ ಅಪೊಸ್ತಲನಾದ ಪೌಲನು ಈ ತತ್ವವನ್ನು ಅನ್ವಯಿಸಿದನು: *ಒಬ್ಬ ವಿಶ್ವಾಸಿಯು ಧರ್ಮಶಾಸ್ತ್ರದ ಮಗುವಾಗಿ ನಡೆದುಕೊಳ್ಳಬೇಕೆಂದು ಹಠ ಹಿಡಿಯುವದಾದರೆ, ಸುನ್ನತಿಯನ್ನು ರಕ್ಷಣೆಗೆ ಒಂದು ಅಗತ್ಯತೆಯೆಂದು ಸ್ವೀಕರಿಸಿಕೊಂಡರೆ, ಕ್ರಿಸ್ತನು ತನ್ನನ್ನು ನಂಬಿಕೆಯ ಮೂಲಕ ಕೃಪೆಯಿಂದ ಎಲ್ಲರಿಗೂ ಲಭ್ಯಗೊಳಿಸಿರುವ ರಕ್ಷಣೆಯನ್ನೇ ಆತನು ಕಳೆದುಕೊಳ್ಳುವವನಾಗಿದ್ದಾನೆ.*

ಸ್ವತಃ ಹಳೆಯ ಒಡಂಬಡಿಕೆಯು ಒಂದು ಹೊಸ ಒಡಂಬಡಿಕೆಯು ಬರುವ ವಿಷಯದಲ್ಲಿ ಸಾಕ್ಷಿ ಹೇಳಿತ್ತು. ಬಹುಶಃ ಅತ್ಯಂಥ ಪ್ರಧಾನವಾದ ವಾಕ್ಯಭಾಗವೆಂದರೆ ಯೆರೆಮೀಯ 31:31-34, ಅಲ್ಲಿ ದೇವರು "ಹೊಸ ಒಡಂಬಡಿಕೆ"ಯು "ನಾನು ಇವರ ಪಿತೃಗಳ . . . ಮಾಡಿಕೊಂಡ ಒಡಂಬಡಿಕೆಯಂಥದಲ್ಲ . . . ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ" ಎಂದು ವಾಗ್ದಾನ ಮಾಡಿದನು. ಪೌಲನು ತನ್ನನ್ನು ಮತ್ತು ಇತರ ಅಪೊಸ್ತಲರನ್ನು ದೇವರು "ಹೊಸ ಒಡಂಬಡಿಕೆಗೆ ಸೇವಕರಾಗಿರುವ ಸಾಮರ್ಥ್ಯವನ್ನು ನಮಗೆ ಅನುಗ್ರಹಿಸಿದ್ದಾನೆ. ಈ ಒಡಂಬಡಿಕೆಯು ಲಿಖಿತ ರೂಪವಾದದ್ದಾಗಿರದೆ ದೇವರಾತ್ಮ ಸಂಬಂಧವಾದದ್ದು ಆಗಿದೆ. ಲಿಖಿತರೂಪವಾದ ಒಡಂಬಡಿಕೆಯು ಮರಣವನ್ನುಂಟುಮಾಡುತ್ತದೆ; ದೇವರಾತ್ಮ ಸಂಬಂಧವಾದದ್ದು ಜೀವವನ್ನುಂಟುಮಾಡುತ್ತದೆ" ನಿರ್ದಿಷ್ಟವಾಗಿ ಹೇಳಿಕೊಳ್ಳುತ್ತಾನೆ (2 ಕೊರಿಂಥ 3:6). ಮೋಶೆಯ ಹಳೆಯ ಒಡಂಬಡಿಕೆಯ ಸೇವಕ ಅಥವಾ ಮಧ್ಯಸ್ಥನಾಗಿ ಪರಿಗಣಿಸಲ್ಪಟ್ಟಿರುತ್ತಾನೆ, ಅದು ಕ್ಷಮಾಪಣೆಯನ್ನಾಗಲಿ ಅಥವಾ ಪವಿತ್ರಾತ್ಮನನ್ನಾಗಿ ಅನುಗ್ರಹಿಸುವದಕ್ಕೆ ಶಕ್ತವಾಗಲಿಲ್ಲ. ಬದಲಾಗಿ ಅದು "ಮರಣವಿಧಿಸುವ ನಿಯಮದ ಸೇವೆ" ಮತ್ತು "ಅಪರಾಧನಿರ್ಣಯಕ್ಕೆ ಸಾಧನವಾಗಿರುವ" ಸೇವೆಯಾಗಿತ್ತು (2 ಕೊರಿಂಥ 3:7-9). ಇಬ್ರಿಯರಿಗೆ

ಪತ್ರಿಕೆಯ ಲೇಖಕನ ಹೀಗೆ ಗಮನಕ್ಕೆ ತರುತ್ತಾನೆ, "ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ" (ಇಬ್ರಿಯ 10:4).

ಬರಲಿರುವ ಹೊಸ ಒಡಂಬಡಿಕೆಯ ಕುರಿತು ಯೆರೆಮೀಯನು ನುಡಿದ ಪ್ರವಾದನೆಯನ್ನು ಉಲ್ಲೇಖಿಸಿದ ನಂತರ, ಇಬ್ರಿಯರಿಗೆ ಪತ್ರಿಕೆಯ ಹೇಳುವದೇನೆಂದರೆ ದೇವರು "ಮೊದಲಿದ್ದದ್ದನ್ನು ಹಳೇದಾಗಿ ಮಾಡಿದ್ದಾನೆ" ಮತ್ತು "ಆದರೆ ಹಳೇದಾಗುತ್ತಾ ಮುದಿಯಾಗುವಂಥದಕ್ಕೆ ಅಂತ್ಯವು ಸಮೀಪವಾಗಿದೆ" (ಇಬ್ರಿಯ 8:13). ತಾನು ಹಳೇದಾಗುವ ಕುರಿತಾಗಿ, ದೇವರ ಜನರಿಗಾಗಿ, ಆತ್ಮೀಕ ಇಸ್ರಾಯೇಲ್ಯರಿಗಾಗಿ ಆತನು ಹೊಂದಿರುವ ಚಿತ್ತಕ್ಕೆ ಪೂರಕವಾಗುವ ಕುರಿತಾಗಿ ಸ್ವತಃ ಹಳೆಯ ಒಡಂಬಡಿಕೆಯು ಸಾಕ್ಷಿ ಹೇಳಿರುತ್ತದೆ. ಈ ಜನರು ಬೇರೆ ಯಾರೂ ಅಲ್ಲ ಆದರೆ ಯೇಸುವಿನ ರಕ್ತದ ಮೂಲಕವಾಗಿರುವ ಈ ಕೃಪೆ ಹಾಗೂ ಕ್ಷಮಾಪಣೆಯಿಂದ ಕೂಡಿರುವ ಹೊಸ ಒಡಂಬಡಿಕೆಯ ಮಕ್ಕಳೇ (ಇಬ್ರಿಯ 10:9, 10). ಕ್ರೈಸ್ತರಿಗೆ ಮುಖ್ಯವಾದದ್ದು ಆತ್ಮೀಕ ಸುನ್ನತಿಯೇ, ಅದು ಹೃದಯದಲ್ಲಾಗುವ ಸುನ್ನತಿ (ರೋಮಾ 2:28, 29), ಅದು ಒಬ್ಬನು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವೇಳೆ ಸಂಭವಿಸುವದಾಗಿದೆ (ಕೊಲೊಸ್ಸೆ 2:9-13). ನಂಬಿಕೆಯಿಂದ ಅಧೀನಪಡಿಸಿಕೊಳ್ಳುವ ಈ ಕ್ರಿಯೆಯಲ್ಲಿ, ಪರಿವರ್ತನೆಗೊಂಡವನು ಆತನ ಪಾಪಗಳನ್ನು ಕ್ಷಮಿಸುವ ಮತ್ತು ನಮ್ಮೊಳಗೆ ವಾಸಿಸುವ ಆತ್ಮನ ಮೂಲಕವಾಗಿ ದೇವರು ಅನುಗ್ರಹಿಸುವ ಕೃಪೆಯನ್ನು ಸ್ವೀಕರಿಸಿಕೊಳ್ಳುವನು (ಅಪೊಸ್ತಲರ ಕೃತ್ಯಗಳು 2:38; 22:16).

**ವಚನ 4.** ಅಪೊಸ್ತಲನು **ನಿಮ್ಮಲ್ಲಿ ಯಾರಾರು ಕರ್ಮಗಳಿಂದ ನೀತಿವಂತರಾಗಬೇಕೆಂದಿರುತ್ತಾರೋ** ಅವರು ದುಷ್ಪರಿಣಾಮಗಳನ್ನು ಎದುರಿಸುವರೆಂದು ಗಲಾತ್ಯದವರಿಗೆ ಎಚ್ಚರಿಕೆ ಕೊಡುತ್ತಾನೆ. ಮೊದಲನೆಯದಾಗಿ, ಆತನು ಹೀಗೆ ಹೇಳಿನು, **ಅವರು ಕ್ರಿಸ್ತನಿಂದ ಅಗಲಿ ಹೋದರು.** ಅನುವಾದಕರು καταργέω (*katargeō*) ಎಂಬ ಪದವನ್ನು ಯಾವ ರೀತಿಯಲ್ಲಿ ಅನುವಾದಿಸಿದರೆ ಉತ್ತಮವೆಂದು ತಿಳಿಯಲು ಕಷ್ಟಪಟ್ಟಿರುತ್ತಾರೆ. NASBಯು "ಅಗಲಿ ಹೋದರು" ಎಂದು ಬಳಸಿದರೆ, ಇನ್ನಿತರ ಅನುವಾದಗಳಲ್ಲಿ "ನಿಮ್ಮನ್ನು ಬೇರ್ಪಡಿಸಿಕೊಳ್ಳುವಿರಿ" (NRSV), "ದೂರವಾದಿರಿ" (NIV), ಮತ್ತು "ದೂರವಾಗಿಸಲ್ಪಡುವಿರಿ" (NKJV) ಎಂಬುವುಗಳು ಸೇರಿರುತ್ತವೆ. ಅನುವಾದಕರು ಪದಕ್ಕೆ ಮೂಲಭೂತ ಅರ್ಥವನ್ನು ಒದಗಿಸುತ್ತಾರೆ, ಆದರೆ ಅದರ ನಿಘಂಟಿನ ಅರ್ಥಗಳನ್ನು ಮತ್ತು ಅದು ಏಕೆ ವಿವಿಧ ಸನ್ನಿವೇಶಗಳಲ್ಲಿ ಬಳಸಲ್ಪಟ್ಟಿದೆ ಎಂಬುದನ್ನು ಆಲೋಚಿಸಿದರೆ ಸಹಾಯಕವಾಗುತ್ತದೆ. Walter Bauerನ ಶಬ್ದಕೋಶವು ಈ ಅರ್ಥನಿರೂಪಣೆಗಳನ್ನು ಹೊಂದಿರುತ್ತದೆ:

1. ಒಂದನ್ನು ಫಲಕೊಡದಂತೆ, ಉಪಯೋಗವಿಲ್ಲದಂತೆ, ತೀರಿ ಹೋಗುವಂತೆ ಮಾಡುವದು, ಒಂದು ಮರವು ನೆಲದ ಸಂಪನ್ಮೂಲಗಳನ್ನು "ಬಳಸಿಕೊಂಡು ತೀರಿಸುವ" ರೀತಿಯಾಗಿದೆ (ಲೂಕ 13:7);
2. ಒಂದನ್ನು ಅದರ ಶಕ್ತಿ ಅಥವಾ ಪರಿಣಾಮಕಾರಿತ್ವವನ್ನು ಕಳೆದುಕೊಳ್ಳುವಂತೆ, ಅಸಿಂಧುಗೊಳಿಸುವದು, ಹೇಗಂದರೆ ಧರ್ಮಶಾಸ್ತ್ರವು ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನವನ್ನು "ರದ್ದುಮಾಡಿ ವ್ಯರ್ಥಗೊಳಿಸಲು" ಅಶಕ್ತವಾದ ರೀತಿಯಾಗಿದೆ (ಗಲಾತ್ಯ 3:17);
3. ಒಂದನ್ನು ಅಸ್ತಿತ್ವದಲ್ಲಿರದಂತೆ ಮಾಡುವದು, ಅಳಿಸಿ ಹಾಕುವದು, ನಿರ್ಮೂಲಗೊಳಿಸುವದು, ವಜಾಗೊಳಿಸುವದು ಆಗಿರುತ್ತದೆ, ಉದಾಹರಣೆಗೆ ಪೌಲನು ಪ್ರಬುದ್ಧತೆಗೆ ಬಂದಾಗ "ಬಾಲ್ಯದವುಗಳನ್ನು" ಬಿಟ್ಟು ಬಿಟ್ಟನು (1 ಕೊರಿಂಥ 13:11);
4. ಒಬ್ಬನನ್ನು ಹೊಣೆಗಾರಿಕೆಯೊಂದರಿಂದ ಬಿಡುಗಡೆಗೊಳಿಸುವದು (ಒಬ್ಬನು ಅದಕ್ಕೆ ಯಾವ ಜವಾಬ್ದಾರಿಯನ್ನೂ ಹೊಂದಿಲ್ಲ) ಅಥವಾ (ಕರ್ಮಣಿ ಪ್ರಯೋಗದಲ್ಲಿ) ಬಿಡುಗಡೆಗೊಳ್ಳುವಂತೆ

ಮಾಡುವದು. ಒಬ್ಬ ಸ್ತ್ರೀಯು ಗಂಡನು ಮರಣಿಸುವಾಗ ಆಕೆಗೆ ಗಂಡನ "ಹಂಗು ತಪ್ಪುತ್ತದೆ." ಕ್ರೈಸ್ತರು ಧರ್ಮಶಾಸ್ತ್ರದ "ವಿಮುಕ್ತರಾಗಿದ್ದಾರೆ" (ರೋಮಾ 7:2, 6).[9]

ಮತ್ತೊಬ್ಬನ ಸಹವಾಸದಿಂದ "ವಿಮುಕ್ತಗೊಳಿಸಲ್ಪಡುವ" ವಿಚಾರಕ್ಕೆ ಸಂಬಂಧಿಸಿದಂತೆ, ಪೌಲನು ಹೀಗೆ ಹೇಳಿದನು, "ನಾನಂತೂ ದೇವರಿಗಾಗಿ ಜೀವಿಸುವದಕ್ಕೋಸ್ಕರ ಧರ್ಮಪ್ರಮಾಣದ ಮೂಲಕವಾಗಿ ಧರ್ಮಪ್ರಮಾಣದ ಪಾಲಿಗೆ ಸತ್ತೆನು" (2:19). ಪೌಲನು ಕ್ರಿಸ್ತನ ಕಡೆಗೆ ತಿರುಗಿಕೊಂಡ ವೇಳೆ ಅಸ್ತಿತ್ವದಲ್ಲಿಲ್ಲದಂತೆ ಆದನು ಎಂಬುದು ಇದರರ್ಥವಲ್ಲ; ಬದಲಾಗಿ, ಆತನು ತನ್ನ ಮನೋಭಾವಗಳನ್ನು ಮತ್ತು ಆತನ ಕೃತ್ಯಗಳನ್ನು ನಿಯಂತ್ರಿಸುತ್ತಿದ್ದ ಧರ್ಮಶಾಸ್ತ್ರದ ಅಧೀನತೆ, ದಾಸತ್ವದೊಳಗಿಂದ ವಿಮುಕ್ತಗೊಳಿಸಲ್ಪಟ್ಟಿದ್ದನು. ಬೈಬಲಿನಲ್ಲಿ, "ಮರಣ" ಎಂಬುದು ಎಂದಿಗೂ ಅಸ್ತಿತ್ವದಲ್ಲಿರುವದನ್ನು ನಿಲ್ಲಿಸುವದೆಂದಾಗಿರುವದಿಲ್ಲ; ಅದು ಕೇವಲ ಒಂದು ಸಂಬಂಧವನ್ನು ರದ್ದುಗೊಳಿಸುವದಕ್ಕೆ ಗುರುತಾಗಿರುತ್ತದಷ್ಟೆ.

ಗ್ರೀಕ್ ವಾಕ್ಯದಲ್ಲಿ "ಅಗಲಿ ಹೋದರು" ಎಂಬ ಕ್ರಿಯಾಪದದ ಸಂಪೂರ್ಣವಾಚಿ ಕಾಲರೂಪವು ಒಂದು ಅರ್ಥದಲ್ಲಿ ಬೇರ್ಪಟ್ಟಿರುವ ಸ್ಥಿತಿಯನ್ನು, ಒಬ್ಬನು ಸಂಪೂರ್ಣವಾಗಿ ನಾಶನಕ್ಕೆ ಹೋಗಿರುವ ಸ್ಥಿತಿಯನ್ನು ಸೂಚಿಸುತ್ತದೆ. NCV ತರ್ಜುಮೆಯು ವಾಕ್ಯಕ್ಕೆ ಅಕ್ಷರಶಃ ಅನುವಾದವನ್ನು ಒದಗಿಸುವದಿಲ್ಲವಾದರೂ, ಅದು ಪೌಲನ ಸಂದೇಶದ ತಿರುಳನ್ನು ಈ ಮಾತುಗಳಲ್ಲಿ ಸೆರೆ ಹಿಡಿಯುತ್ತದೆ: "ನೀವು ಧರ್ಮಶಾಸ್ತ್ರದ ಮೂಲಕವಾಗಿ ದೇವರೊಂದಿಗೆ ಸಂಬಂಧವನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿದರೆ, ಕ್ರಿಸ್ತನೊಂದಿಗಿನ ನಿನ್ನ ಜೀವನವು ಮುಗಿದಂತೆಯೇ."

ಎರಡನೆಯ ಪರಿಣಾಮದ ವಿಷಯವಾಗಿ, ಪೌಲನು ಹೀಗೆ ಘೋಷಿಸಿದನು, **ಕೃಪಾಶ್ರಯದೊಳಗಿಂದ ಬಿದ್ದುಹೋದರು.** "ಬಿದ್ದುಹೋದರು" ಎಂಬುದು ἐκπίπτω (*ekpiptō*) ಎಂಬ ಗ್ರೀಕ್ ಕ್ರಿಯಾಪದದಿಂದ ಬರುತ್ತದೆ, ಅದರ ಅಕ್ಷರಶಃ ಅರ್ಥವು ಒಂದು ಸ್ಥಳದಿಂದ "ಬೀಳು" ಎಂದಾಗಿರುತ್ತದೆ.[10] ಅದು ಒಂದು ಅನುಕೂಲಕರ ಪರಿಸ್ಥಿತಿಯಿಂದ ಘೋರವಾದ ಸ್ಥಿತಿಯೊಂದರಲ್ಲಿ, ಅಂದರೆ "ನಾಶನದಲ್ಲಿ"[11] ಬೀಳುವದನ್ನು ಸೂಚಿಸಲು ಸಾಂಕೇತಿಕವಾಗಿ ಬಳಸಲಾಗಿರುತ್ತದೆ. ಯಾವನಾದರೂ ತನ್ನನ್ನು ಧರ್ಮಶಾಸ್ತ್ರದ ಮೂಲಕವಾಗಿ ನೀತಿವಂತನೆಂದು ನಿರ್ಣಯಿಸಿಕೊಳ್ಳಲು ಪ್ರಯತ್ನಿಸಿದರೆ ಆತನು ಒಂದು ನಾಶನದ ಸ್ಥಿತಿಯಲ್ಲಿದ್ದಾನೆ, "ಕೃಪೆಯಿಂದ ಬಿದ್ದು ಹೋದವನು" ಆಗಿರುವನು. ಅಂತೂ, ರಕ್ಷಣೆಯು ಕೃಪೆಯಿಂದ ಮಾತ್ರವೇ ಸಾಧ್ಯವಾಗುತ್ತದಷ್ಟೆ.[12]

"ಒಂದು ರಕ್ಷಣೆ ಹೊಂದಿದರೆ, ಶಾಶ್ವತ ರಕ್ಷಣೆ ಹೊಂದಿದಂತೆ" (ಅಥವಾ ನಂಬಿಕೆಭ್ರಷ್ಟಗೊಳ್ಳುವದು ಅಸಾಧ್ಯ) ಎಂಬ ಸುಳ್ಳು ಸಿದ್ಧಾಂತವನ್ನು ಸಮರ್ಥಿಸುವವನು ಅಂಥ ವ್ಯಕ್ತಿಗಳು ನಿಜಕ್ಕೂ ರಕ್ಷಣೆಯನ್ನೇ ಹೊಂದಿರಲಿಲ್ಲ ಎಂದು ವಾದಿಸಬಹುದು. ಹೇಗೂ, ಒಬ್ಬ ವ್ಯಕ್ತಿಯು ಕೃಪೆಯಲ್ಲಿ ಇದ್ದಿರಲೇ ಇಲ್ಲವಾದಲ್ಲಿ ಆತನು ಕೃಪಾಶ್ರಯದೊಳಗಿಂದ ಬಿದ್ದು ಹೋಗಲು ಸಾಧ್ಯವೇ ಇಲ್ಲ. ಇಲ್ಲಿ ಬಳಸಲಾಗಿರುವ ಭಾಷೆಯು ಒಬ್ಬನು ರಕ್ಷಣೆ ಹೊಂದಿದರೂ ಅನಂತರದಲ್ಲಿ ತನ್ನ ರಕ್ಷಣೆಯನ್ನು ಕಳೆದುಕೊಳ್ಳಲು ಸಾಧ್ಯವಿದೆ ಎಂಬುದನ್ನು ಸೂಚಿಸುತ್ತದೆ.

ವಾಸ್ತವಿಕದಲ್ಲಿ, ನಂಬಿಕೆಭ್ರಷ್ಟತೆಯ ಕುರಿತಾದ ಅನೇಕ ಎಚ್ಚರಿಕೆಗಳು ಹೊಸ ಒಡಂಬಡಿಕೆಯ ಕ್ರೈಸ್ತರಿಗೆ ಕೊಡಲ್ಪಟ್ಟಿರುತ್ತವೆ. ಪೇತ್ರನು ತನ್ನ ವಾಚಕರಿಗೆ ಹೀಗೆ ಬುದ್ಧಿವಾದ ಹೇಳಿದನು, "ನೀವು ಈ ಸಂಗತಿಗಳನ್ನು ಮುಂದಾಗಿ ತಿಳಿದುಕೊಂಡಿರುವದರಿಂದ ಅಧರ್ಮಿಗಳ ಭ್ರಾಂತಿಯ ಸೆಳವಿಗೆ ಸಿಕ್ಕಿಕೊಂಡು ನಿಮ್ಮ ಸ್ಥಿರಮನಸ್ಸನ್ನು ಬಿಟ್ಟು ಭ್ರಷ್ಟರಾಗದಂತೆ [ಎಕ್ಪಿಪ್ಟೋ]

ಎಚ್ಚರಿಕೆಯಾಗಿರಿ" (2 ಪೇತ್ರ 3:17). ಯೂದನು "ದೇವರ ಕೃಪೆಯನ್ನು ನೆವಮಾಡಿಕೊಂಡು ನಾಚಿಕೆಗೆಟ್ಟ ಕೃತ್ಯಗಳನ್ನು ನಡಿಸುವವರೂ" ಆಗಿರುವ ಜನರ ಬಗ್ಗೆ ಮಾತಾಡಿದನು, ಮತ್ತು ತನ್ನ ವಾಚಕರಿಗೆ "ಕರ್ತನು ತನ್ನ ಪ್ರಜೆಯನ್ನು ಐಗುಪ್ತ ದೇಶದೊಳಗಿಂದ ಬಿಡಿಸಿದ ತರುವಾಯ ಅವರೊಳಗೆ ನಂಬದೆಹೋದವರನ್ನು ನಾಶಮಾಡಿದನು" ಎಂಬುದನ್ನು ಜ್ಞಾಪಿಸುತ್ತಾನೆ (ಯೂದನು 4, 5). ಒಬ್ಬ ವ್ಯಕ್ತಿಯು ರಕ್ಷಣೆ ಹೊಂದಿದವನು ಮತ್ತು ಬಳಿಕ, ಪವಿತ್ರಾತ್ಮನಲ್ಲಿ ಪಾಲುಗಾರನಾದ ಮೇಲೆಯೂ, ದೇವರ ಕೃಪೆಯನ್ನು ನಷ್ಟಪಡಿಸಿಕೊಳ್ಳುವು ಸಾಧ್ಯವಿರುತ್ತದಾದ್ದರಿಂದ "[ಅವನಲ್ಲಿ] ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ" (ಇಬ್ರಿಯ 6:4-6).

**ವಚನ 5.** ಧರ್ಮಶಾಸ್ತ್ರ, ಸುನ್ನತಿ, ಸ್ವಾತಂತ್ರ್ಯ, ಮತ್ತು ದಾಸತ್ವದ ಕುರಿತು ಚರ್ಚಿಸುವದರಲ್ಲಿ, ಪೌಲನು ಪವಿತ್ರಾತ್ಮನ ವಿಷಯವನ್ನು ಮಧ್ಯದಲ್ಲಿ ತರುತ್ತಾನೆ. ಮುಂಚಿನ ಎರಡು ಅಧ್ಯಾಯಗಳಲ್ಲಿ[13] ನಾವು ಪವಿತ್ರಾತ್ಮನ ಕುರಿತಾದ ಹಲವಾರು ಉಲ್ಲೇಖಗಳನ್ನು ಕಾಣುತ್ತೇವೆ. ಆತನು ಹೇಳಿದ್ದೇನೆಂದರೆ, **ನಾವೋ ದೇವರಾತ್ಮನ ಮೂಲಕ ನಂಬಿಕೆಯಿಂದ ನೀತಿವಂತರಾಗುತ್ತೇವೆಂಬುವ ನಿರೀಕ್ಷೆ ಸಫಲವಾಗುವದೆಂದು ಎದುರುನೋಡುತ್ತೇವೆ.** ಗ್ರೀಕ್ ವಾಕ್ಯದಲ್ಲಿ, "ನಾವು" (ἡμεῖς, *hēmeis*) ಎಂಬ ಸರ್ವನಾಮವು ಒತ್ತು ಕೊಡಲ್ಪಟ್ಟಿದೆ. ಪೌಲನು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಮೂಲಕ ನೀತಿವಂತಿಕೆಯನ್ನು ಸಂಪಾದಿಸಿಕೊಳ್ಳಲು ಅಪೇಕ್ಷಿಸಿದವರಿಗೆ ವಿರುದ್ಧವಾಗಿ ತನ್ನನ್ನು ಮತ್ತು ಇತರ ನಂಬಿಗಸ್ತ ಕ್ರೈಸ್ತರನ್ನು ಹೋಲಿಕೆ ಮಾಡುತ್ತಿದ್ದಾನೆ. ಆತನು ಈ ವಿಧವಾದ ಮಾತೊಂದನ್ನು ಹೇಳುತ್ತಿದ್ದಾನೆ: "ಯಾಕೆಂದರೆ *ನಾವಾದರೋ*, ನಂಬಿಗಸ್ತ ಶಿಷ್ಯರಾಗಿ ಪವಿತ್ರಾತ್ಮನ ಮೂಲಕ ಧರ್ಮಶಾಸ್ತ್ರಾಧಾರದಿಂದಲ್ಲ ಆದರೆ ನಂಬಿಕೆಯ ಆಧಾರದಲ್ಲಿ ಸ್ವೀಕರಿಸುವವೆಂದು ನಿರೀಕ್ಷಿಸುವ ನೀತಿಯನ್ನು ಪಡೆಯಲು ಹಂಬಲದಿಂದ ಎದುರುನೋಡುತ್ತಿದ್ದೇವೆ."

"ದೇವರಾತ್ಮನ ಮೂಲಕವಾಗಿ" ಮತ್ತು "ನಂಬಿಕೆಯಿಂದ" ಎಂಬ ಪದಗುಚ್ಛಗಳು ಒತ್ತುಕೊಡಲ್ಪಡುವದಕ್ಕೋಸ್ಕರ ಈ ಮುಂಚಿನ ವಾಕ್ಯಸಾಲಿನಲ್ಲಿ ಕಾಣಿಸಿಕೊಳ್ಳುತ್ತವೆ. ಈ ಎರಡೂ ಮಾತುಗಳು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಅವುಗಳ ವಿರುದ್ಧವಾದವುಗಳಿಗೆ ತೀಕ್ಷ್ಣವಾಗಿ ತದ್ವಿರುದ್ಧತೆಯಿಂದ ನಿಲ್ಲುತ್ತವೆಂದು ಇದು ಸೂಚಿಸುತ್ತದೆ.[14] "ದೇವರಾತ್ಮನ ಮೂಲಕ" ಮತ್ತು "ನಂಬಿಕೆಯಿಂದ" ಎಂಬವುಗಳನ್ನು "ಶರೀರಭಾವದಿಂದ" (ಮಾನವ ಪ್ರಯತ್ನಗಳು ಸಾಧಿಸುವದಕ್ಕೆ ಸಾಧ್ಯವಾಗುವಂತದ್ದರ ಮೂಲಕ) ಮತ್ತು "ಧರ್ಮಶಾಸ್ತ್ರದ ಕ್ರಿಯೆಗಳ ಮೂಲಕ" ಎಂಬ ಮಾತುಗಳಿಗೆ ವಿರುದ್ಧವಾಗಿ ಹೋಲಿಕೆ ಮಾಡಲ್ಪಟ್ಟಿರುತ್ತವೆ.[15]

ಪೌಲನು ಹೇಳಿದ "ದೇವರಾತ್ಮನ ಮೂಲಕವಾಗಿ" ಎಂಬ ಪದಗುಚ್ಛದ ತಾತ್ಪರ್ಯವೇನಾಗಿತ್ತು? ಆತನು ಪವಿತ್ರಾತ್ಮನ ಮೂಲಕ ವರವಾಗಿ ಅನುಗ್ರಹಿಸಲ್ಪಡುವ ನೀತಿಯನ್ನು ಸೂಚಿಸುತ್ತಿದ್ದಾನೋ? ಆತನು ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಶಕ್ತಿ, ಕ್ರೈಸ್ತೀಯ ಜೀವಿತವನ್ನು ನಡಿಸಲು ಬಲಗೊಳಿಸುವಂಥ ಆತ್ಮೀಕ ಶಕ್ತಿಯ ಬಗ್ಗೆ ಪರೋಕ್ಷವಾಗಿ ಹೇಳುತ್ತಿದ್ದನೋ? ಆ ಪದಗುಚ್ಛವು ಇವೆರಡೂ ಯೋಚನೆಗಳನ್ನು ಮತ್ತು ಇನ್ನೂ ಅಧಿಕವಾದದ್ದನ್ನು ಒಳಗೊಂಡಿರಬಹುದಾಗಿದೆ. ಖಂಡಿತವಾಗಿಯೂ, ಪೌಲನು ಕೇವಲ ಮಾನವ ಪ್ರಯತ್ನಗಳಿಂದ ಯಾವದೇ ನೀತಿಯು ಸಿಕ್ಕುತ್ತದೆಂಬದನ್ನು ತಳ್ಳಿ ಹಾಕುತ್ತಿದ್ದಾನೆ. ಅಂತೂ, ಆತನು ಬೇರೊಂದು ಕಡೆಯಲ್ಲಿ ಹೇಳಿದ್ದೇನೆಂದರೆ "ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ "ಉಂಟುಮಾಡುವವನಾಗಿದ್ದಾನೆ" (ಫಿಲಿಪ್ಪಿ 2:13). "ನೀತಿವಂತಿಕೆ," "ಶುದ್ಧೀಕರಣ," ಮತ್ತು ವಿಮೋಚನೆ" ಇವೆಲ್ಲವೂ ಕ್ರಿಸ್ತನ ಮುಖಾಂತರವಾಗಿ

ದೇವರಿಂದಲೇ ಬರುತ್ತವಾದ್ದರಿಂದ, ಒಬ್ಬ ಕ್ರೈಸ್ತನು ತನ್ನಲ್ಲಿ ಅಲ್ಲ, ಆದರೆ "ಕರ್ತನಲ್ಲಿಯೇ ಹೆಚ್ಚಳ" ಪಡಬೇಕು (1 ಕೊರಿಂಥ 1:30, 31; NKJV).

5ನೇ ವಚನದ ಕಡೆಯ ಭಾಗವು "ನೀತಿವಂತರಾಗುತ್ತೇವೆಂಬುವ ನಿರೀಕ್ಷೆ ಸಫಲವಾಗುವದೆಂದು ಎದುರುನೋಡುತ್ತೇವೆ" ಎಂದು ಹೇಳುತ್ತದೆ. ἀπεκδέχομαι (*apekdechomai*) ಎಂಬ ಗ್ರೀಕ್ ಕ್ರಿಯಾಪದದ ಅರ್ಥವು "ತವಕದಿಂದ ಎದುರುನೋಡುತ್ತೇವೆ" (NIV; REB) ಎಂದಾಗಿರುತ್ತದೆ. NCV ತರ್ಜುಮೆಯು ಹೇಳುವದೇನೆಂದರೆ "ಈ ನಿರೀಕ್ಷೆಗಾಗಿ ನಾವು ಉತ್ಸಾಹದಿಂದ ಕಾಯುತ್ತೇವೆ" ಎಂಬುದೆ. ಪೌಲನು "ನಿರೀಕ್ಷೆ"ಯನ್ನು ಉಲ್ಲೇಖಿಸಿದ ವೇಳೆ, ಆತನು ವ್ಯಕ್ತಿನಿಷ್ಠ ಅರ್ಥದಲ್ಲಿರುವ ನಿರೀಕ್ಷೆ ಎಂಬದಾಗಿ ಹೇಳಲಿಲ್ಲ, ಅಂಥ ನಿರೀಕ್ಷೆಯು ನಮ್ಮ ಮನಸ್ಸುಗಳೊಳಗೆ ನಮ್ಮ ಭಾವವನ್ನು ಪ್ರಚೋದಿಸುವದಾಗಿದೆ. ಬದಲಾಗಿ, ವಸ್ತುನಿಷ್ಠ ಅರ್ಥದಲ್ಲಿರುವ ನಿರೀಕ್ಷೆಯನ್ನು ಸೂಚಿಸಿ ಹೇಳಿದನು, ಎದುರುನೋಡುತ್ತಿರುವ ವಸ್ತುವನ್ನು ಸೂಚಿಸಿದನು; ಆತನು ನಮ್ಮ ನಿರೀಕ್ಷೆಯ ಲಕ್ಷ್ಯವನ್ನು ಕುರಿತು - ಈ ಪ್ರಕರಣದಲ್ಲಿ, ಸ್ವತಃ "ನೀತಿವಂತಿಕೆ"ಯನ್ನು, ತೋರ್ಪಡುವ ರೀತಿಯಲ್ಲಿ ಸಾಕಾರಗೊಳ್ಳುವ ನೀತಿವಂತಿಕೆಯನ್ನು ಕುರಿತು ಮಾತಾಡುತ್ತಿದ್ದಾನೆ.

ನಾವು ವ್ಯಕ್ತಿನಿಷ್ಠೆಯ ಅರ್ಥದಲ್ಲಿರುವ ನಿರೀಕ್ಷೆಗಾಗಿ ನಾವು ಎದುರುನೋಡುವ ಅಗತ್ಯವಿಲ್ಲ, ಯಾಕೆಂದರೆ ನಾವು ಈಗ ನಿರೀಕ್ಷೆಯನ್ನು ಅನುಭವಿಸುತ್ತಿದ್ದೇವೆ. ಈಗಲೂ ನಾವು ನಮ್ಮ ಲೆಕ್ಕಕ್ಕೆ ಎಣಿಸಲ್ಪಟ್ಟಿರುವ ನೀತಿಯನ್ನು ನಮ್ಮದಾಗಿಸಿಕೊಳ್ಳಬಹುದು. ಇದನ್ನು ನಾವು ದೇವರ ವಾಗ್ದಾನಗಳಲ್ಲಿ ನಂಬಿಕೆಯಿಡುವವರಾಗಿ ಸ್ವೀಕರಿಸಿಕೊಳ್ಳುತ್ತೇವೆ. ಪೌಲನು ರೋಮಾಪುರದವರಿಗೆ ಹೀಗೆ ಬರೆದನು,

> ಯಾಕಂದರೆ ದೇವರು ತನ್ನ ಮಗನಿಗೆ ಅನೇಕ ಮಂದಿ ಸಹೋದರರಿದ್ದು ಅವರಲ್ಲಿ ಆತನೇ ಹಿರಿಯನಾಗಿರಬೇಕೆಂದು ಉದ್ದೇಶಿಸಿ ತಾನು ಯಾರನ್ನು ತನ್ನವರೆಂದು ಮೊದಲು ತಿಳುಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವದಕ್ಕೆ ಮೊದಲೇ ನೇಮಿಸಿದನು. ಮತ್ತು ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು; ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು; ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮಪದವಿಗೆ ಸೇರಿಸಿದನು (ರೋಮಾ 8:29, 30).

ಸ್ಪಷ್ಟವಾಗಿರುವಂತೆ, ಆ ಮಹಿಮೆಕರಣವನ್ನು ನಾವು ಪೂರ್ಣವಾಗಿ ಗ್ರಹಿಸಿಕೊಳ್ಳಲು ಇನ್ನೂ ಶಕ್ತರಾಗಿರುವದಿಲ್ಲ; ಆದರೆ ನಮ್ಮ ನಿತ್ಯನಾದ ದೇವರ ಮನಸ್ಸಿನಲ್ಲಿ, ಅದು ಈಗಾಗಲೇ ನಿಜವಾಗಿರುತ್ತದೆ. ನಾವು ಆತನಲ್ಲಿ ವಿಶ್ವಾಸವಿಡುವದಾದರೆ, ನಾವು ಅದನ್ನು ನಮ್ಮ ಸ್ವಾಭಾವಿಕವಾದ ಕಣ್ಣುಗಳಿಂದ ನೋಡುವದಕ್ಕೆ ಸಾಧ್ಯವಿಲ್ಲವಾದರೂ, ಅದು ಆಗಲೂ ಒಂದು ಅಂತಿಮವಾದ ವಾಸ್ತವಿಕತೆಯಾಗಿದ್ದು ಅದಕ್ಕಾಗಿ ನಾವು "ನಂಬಿಕೆಯಿಂದ" ಎದುರುನೋಡುತ್ತೇವೆ.

**ವಚನ 6.** ಪೌಲನು ಈ ವಚನವನ್ನು **ಕ್ರಿಸ್ತ ಯೇಸುವಿನಲ್ಲಿ** ಎಂಬ ಪದಗುಚ್ಛದೊಂದಿಗೆ ಆರಂಭಿಸುತ್ತಾನೆ. ಗಲಾತ್ಯದವರಿಗೆ ಬರೆದ ಪತ್ರಿಕೆ, ಮತ್ತು ಪೌಲನು ಬರೆದ ಇನ್ನಿತರ ಪತ್ರಿಕೆಗಳ ಸನ್ನಿವೇಶದಲ್ಲಿ, "ಕ್ರಿಸ್ತನಲ್ಲಿ" ಎಂಬುದರ ಅರ್ಥವು "ಕ್ರಿಸ್ತನ ಆಳ್ವಿಕೆಯ ಅಡಿಯಲ್ಲಿ" ಎಂದಾಗಿರುತ್ತದೆ. ನಂಬಿಕೆಯ ಮೂಲಕ ಕೃಪೆಯೆಂಬ ಸುವಾರ್ತೆಯಿಂದಾಗಿ ಧರ್ಮಶಾಸ್ತ್ರವು ರದ್ದುಗೊಳಿಸಲ್ಪಟ್ಟಿರುವದರಿಂದ, ಹಿಂದಿನ ಒಡಂಬಡಿಕೆಯ ಸಂಬಂಧಿಸಿದ ಭಿನ್ನತೆಗಳೆಲ್ಲಾ ಇಲ್ಲದಂತಾಗಿ ಹೋಗಿರುತ್ತವೆ. ಜನಾಂಗೀಯ ಮತ್ತು ಆರ್ಥಿಕ ಸ್ಥಾನಮಾನದಲ್ಲಿನ ಯಾವದೇ

ವ್ಯತ್ಯಾಸಗಳಿಗೆ ದೇವರ ದೃಷ್ಟಿಯಲ್ಲಿ ಯಾವದೇ ಅರ್ಥವಿರುವದಿಲ್ಲ (3:23-29). ಎಫೆಸ 1:3-14ರಲ್ಲಿ, "ಕ್ರಿಸ್ತನಲ್ಲಿ," "ಆತನಲ್ಲಿ," ಮತ್ತು "ಪ್ರಿಯನಲ್ಲಿ" ಎಂಬ ಪದಗುಚ್ಛಗಳು ಪದೇ ಪದೇ ಕಾಣಿಸಿಕೊಳ್ಳುತ್ತವೆ. ಎಫೆಸ 1:3 ಹೇಳುವದೇನೆಂದರೆ ದೇವರು "ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ *ಕ್ರಿಸ್ತ ಯೇಸುವಿನಲ್ಲಿ* ಅನುಗ್ರಹಿಸಿದ್ದಾನೆ"; ಮತ್ತು ಎಫೆಸ 1:10ನೇ ವಚನವು ದೇವರು "ಭೂಪರಲೋಕಗಳಲ್ಲಿರುವ ಸಮಸ್ತವನ್ನೂ *ಕ್ರಿಸ್ತನಲ್ಲಿ* ಒಂದಾಗಿ ಕೂಡಿಸಬೇಕೆಂಬದೇ. *ಕ್ರಿಸ್ತನಲ್ಲಿಯೇ* ಸಮಸ್ತವು ಒಂದಾಗುವದು" ಎಂದು ಹೇಳುತ್ತದೆ (ಒತ್ತಿ ಹೇಳಿದ್ದು ನನ್ನದು). ಪೌಲನ ತಾತ್ಪರ್ಯವು ಸ್ಪಷ್ಟವಾಗಿದೆ. ಸಕಲ ಆತ್ಮೀಕ ಆಶೀರ್ವಾದಗಳೆಲ್ಲಾ "ಕ್ರಿಸ್ತನಲ್ಲಿ," ಸಭೆಯಾಗಿರುವ ಆತನ ದೇಹದಲ್ಲಿ ಸಿಕ್ಕುತ್ತವೆ (ಎಫೆಸ 1:22, 23).

ಪೌಲನು ವಿವರಿಸಿದ್ದೇನೆಂದರೆ "ಕ್ರಿಸ್ತ ಯೇಸುವಿನಲ್ಲಿ" **ಸುನ್ನತಿಯಾದರೂ ಪ್ರಯೋಜನವಿಲ್ಲ, ಆಗದಿದ್ದರೂ ಪ್ರಯೋಜನವಿಲ್ಲ.** "ಪ್ರಯೋಜನವಿಲ್ಲ" ಎಂಬುದು ಗ್ರೀಕ್ ಭಾಷೆಯ ἰσχύω (*ischuō*) ಎಂಬ ಪದದಿಂದ ಬರುತ್ತದೆ, ಅದು ಒಂದು ತಾಂತ್ರಿಕವಾದ ಕಾನೂನಿನ ಪದವಾಗಿದ್ದು "ಊರ್ಜಿತವಾಗು" ಅಥವಾ "ಜಾರಿಯಲ್ಲಿರು" ಎಂದರ್ಥವನ್ನು ಕೊಡುತ್ತದೆ.[16] NIVಯು ಆ ಪದವನ್ನು "ಯಾವದೇ ಬೆಲೆಯಿರುವದಿಲ್ಲ" ಎಂದು ಅನುವಾದಿಸುತ್ತದೆ. ಪೌಲನು ಇಲ್ಲಿ ಹೇಳುತ್ತಿದ್ದು ಏನೆಂದರೆ "ಸುನ್ನತಿ" ಮತ್ತು ಸುನ್ನತಿಯಿಲ್ಲದಿರುವಿಕೆ" ಗಲಾತ್ಯದವರಿಗೆ ಕ್ರಿಸ್ತನಲ್ಲಿ ಸಿಕ್ಕಿರುವ ಆತ್ಮೀಕ ಸಮತಲಕ್ಕೆ ಸಂಬಂಧಿಸಿದಂತೆ ಅರ್ಥಹೀನವಾಗಿದ್ದವು.

"ಸುನ್ನತಿ" ಆಗಿರುವದು ಮತ್ತು "ಸುನ್ನತಿಯಿಲ್ಲದಿರುವದು" ಎಂದು ಹೇಳುವ ಮೂಲಕ ಪೌಲನ ತಾತ್ಪರ್ಯವು ಸಾಮಾನ್ಯವಾಗಿ ಶಸ್ತ್ರಚಿಕಿತ್ಸೆ ಕಾರ್ಯಾಚರಣೆಗಿಂತಲೂ ಅಧಿಕವಾಗಿತ್ತು. ಎರಡೂ ಪದಗಳು ಅನೇಕ ಸಾರಿ ಈ ಧಾರ್ಮಿಕ ವಿಧಿಯನ್ನು ಆಚರಿಸುವ ಅಥವಾ ಆಚರಿಸದಿರುವ ಜನರನ್ನು ವರ್ಗೀಕರಣಗೊಳಿಸಲು, ಅಂದರೆ ಯೆಹೂದ್ಯರು ಮತ್ತು ಅನ್ಯಜನರು ಎಂದು ವರ್ಗೀಕರಣಗೊಳಿಸಲು ಬಳಸಲಾಗುತ್ತಿದ್ದವು. ಹೇಗೂ, ಈ ಸನ್ನಿವೇಶದಲ್ಲಿ, ಆತನು ಸ್ವತಃ ಈ ಧಾರ್ಮಿಕ ಆಚರಣೆಯ ಬಗ್ಗೆಯೇ ಯೋಚಿಸುವವನಾಗಿದ್ದನು. ಪೌಲನು ಈ ವಿಷಯವನ್ನು ನಿರ್ಲಕ್ಷ್ಯಿಸುವದಕ್ಕೆ ಸಾಧ್ಯವಾಗಲಿಲ್ಲ. ಆತನು ತೀತನ (ಒಬ್ಬ ಅನ್ಯಜನಾಂಗದವರನು) ವಿಷಯದಲ್ಲಿ ಈ ಆಚರಣೆಯನ್ನು ತಿರಸ್ಕರಿಸಿದನು, "ಸುವಾರ್ತೆಯ ಸತ್ಯಾರ್ಥವು [ಸಹೋದರರಲ್ಲಿ] ಸ್ಥಿರವಾಗಿರಬೇಕೆಂದು" ಹೀಗೆ ಮಾಡಿದನು (2:5). ಕ್ರೈಸ್ತನಿಗಾದರೋ, ಸ್ವತಃ ಸುನ್ನತಿಯು ತಟಸ್ಥ ಮೌಲ್ಯವುಳ್ಳದ್ದಾಗಿತ್ತು. ಪೌಲನು ತಿಮೊಥೆಯನನ್ನು (ಒಬ್ಬ ಯೆಹೂದ್ಯನು) ತನ್ನ ಸಂಗಡ ಕರೆದುಕೊಂಡು ಹೋದಾಗ, ಆತನಿಗೆ ಸುನ್ನತಿ ಮಾಡಿಸುವದು ಸೂಕ್ತವೆಂದು ಯೋಚಿಸಿದನು - ಆದರೆ ಆತನು ಯಾವ ಯೆಹೂದ್ಯರನ್ನು ಕ್ರಿಸ್ತನಿಗೋಸ್ಕರ ಗೆಲ್ಲಬೇಕೆಂದು ಪ್ರಯತ್ನಿಸುತ್ತಿದ್ದನೋ ಅವರಿಗೆ ಸಮ್ಮತಿಯಾಗಲೆಂಬುದಕ್ಕಾಗಿ ಮಾತ್ರವೇ ಹಾಗೆ ಮಾಡಿದನು (ಅಪೊಸ್ತಲರ ಕೃತ್ಯಗಳು 16:1-3). ಈ ಕೃತ್ಯದಲ್ಲಿ ಅಡಗಿದ್ದ ಪ್ರೀತಿಪೂರ್ವಕವಾದ ಕಳಕಳಿಯು ಸುವಾರ್ತೆಯ ಹೃದಯಭಾಗವನ್ನು ತೋರಿಸಿ ಕೊಟ್ಟಿತ್ತು. ತೀಕ್ಷ್ಣವಾದ ತದ್ವಿರುದ್ಧತೆಯಲ್ಲಿ, ಯೆಹೂದಿಕರಣಗೊಳಿಸುವವರು ಸುನ್ನತಿ ಮಾಡಿಸಿಕೊಳ್ಳುವದನ್ನು ರಕ್ಷಣೆಗೆ ಒಂದು ಅರ್ಹತೆಯೆಂಬುದಾಗಿ ಉಪದೇಶಿಸುತ್ತಿದ್ದರು. ಈ ಕಾರಣಕ್ಕಾಗಿಯೇ ಪೌಲನು ಗಲಾತ್ಯದವರಿಗೆ ಪತ್ರಿಕೆಯನ್ನು ಬರೆದನು. ಸುನ್ನತಿಯು ಧರ್ಮಶಾಸ್ತ್ರದಲ್ಲಿ ನಿಜಕ್ಕೂ ಕಡ್ಡಾಯವಾಗಿತ್ತದಾದರೂ, ಇನ್ನು ಮೇಲೆ ಅದನ್ನು ರಕ್ಷಣೆ ಹೊಂದುವದಕ್ಕೆ ಒಂದು ಅರ್ಹತೆಯೆಂದು ಉಪದೇಶಿಸುವದಕ್ಕೆ ಸಾಧ್ಯವಿರಲಿಲ್ಲ (5:1-4). ಅದು ಹಿಂದಿನ ಯುಗಕ್ಕೆ ಸಂಬಂಧಿಸಿದ್ದಾಗಿತ್ತು. ಸುವಾರ್ತೆಯ ಯುಗದಲ್ಲಿ, ಕ್ರಿಸ್ತನಲ್ಲಿರುವ ಜೀವಿತದ ಆತ್ಮೀಕ ಸ್ವಭಾವಕ್ಕೆ ಅದು ಅಪರಿಚಿತವಾದದ್ದಾಗಿತ್ತು.[17]

ಸುನ್ನತಿಯ ಬದಲಾಗಿ, ದೇವರು ಕ್ರೈಸ್ತರಿಂದ ಬಯಸುವದೇನೆಂದರೆ **ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗಿದೆ**. "ನಂಬಿಕೆ" (πίστις, *pistis*) ಎಂಬ ಪದಕ್ಕೆ ಅದು ಬಳಸಲ್ಪಟ್ಟಿರುವ ಸನ್ನಿವೇಶಕ್ಕನುಗುಣವಾಗಿ ವಿವಿಧ ಅರ್ಥಗಳಿರುತ್ತವೆ.

*ಒಂದು ಸಂಗತಿಯನ್ನು ಸತ್ಯ ಅಥವಾ ವಾಸ್ತವಿಕವೆಂದು ಬುದ್ಧಿಪೂರ್ವಕವಾಗಿ ಸ್ವೀಕರಿಸಿಕೊಳ್ಳುವಿಕೆ ಆಗಿರಬಹುದು*, ಅಂಥ ವಸ್ತುವು ಇಷ್ಟವಾಗುವಂಥದ್ದೋ (ಉದಾಹರಣೆಗೆ ಕ್ರೈಸ್ತನಲ್ಲಿರುವ ನಿರೀಕ್ಷೆಯಿಂದ ಕೂಡಿರುವ ನಂಬಿಕೆ; ಇಬ್ರಿಯ 11:1) ಅಥವಾ ಇಷ್ಟವಾಗದಂಥದ್ದೋ (ನಡುಗುವ ದೆವ್ವಗಳಲ್ಲಿನ ಭಯಭರಿತ ನಂಬಿಕೆ; ಯಾಕೋಬ 2:19) ಎಂದು ಸ್ವೀಕರಿಸಿಕೊಳ್ಳುವದು. ಈ ಎರಡೂ ಉದಾಹರಣೆಗಳು ವಸ್ತುನಿಷ್ಠ ಮನವರಿಕೆಯನ್ನು ಬಣ್ಣಿಸುತ್ತವೆ.

*"ನಂಬಿಕೆ" ಎಂಬದು ಗ್ರೀಕ್ ಪದಗಳಲ್ಲಿ ಅಡಕವಾಗಿರುವಂತಹ ನಂಬಿಕೆಯನ್ನು (ಅಥವಾ, ಪರ್ಯಾಯವಾಗಿ, ನಂಬಿಗಸ್ತಿಕೆ) ಸೂಚಿಸಬಹುದಾಗಿದೆ,* ಉದಾಹರಣೆಗೆ πίστις Χριστοῦ (*pistis Christou*). ಸನ್ನಿವೇಶಕ್ಕೆ ಅನುಗುಣವಾಗಿ, ಈ ಪದಗುಚ್ಛದ ಅರ್ಥವು "ಕ್ರಿಸ್ತನ ನಂಬಿಗಸ್ತಿಕೆ" ಅಥವಾ ವಿಶ್ವಾಸಿಗಳು "ಕ್ರಿಸ್ತನಲ್ಲಿಟ್ಟಿರುವ ನಂಬಿಕೆ" ಎಂದಾಗಿರಬಹುದು (ನೋಡಿರಿ 2:16; 3:22; ರೋಮಾ 3:26).

*ಈ ಪದವು ಕೆಲವು ಸಾರಿ "ನಂಬಿಕೆ"ಯನ್ನು, ಅಂದರೆ ಕ್ರೈಸ್ತರು ವಿಶ್ವಾಸಿಸುವಂಥ ಹುರುಳನ್ನು ಸೂಚಿಸಬಹುದು.* ಈ ರೀತಿಯ ಬಳಕೆಯಲ್ಲಿ, "ನಂಬಿಕೆ" ಎಂಬುದು ರಕ್ಷಣೆಯುಂಟು ಮಾಡುವ ಸುವಾರ್ತೆಯ ಸಂದೇಶದಲ್ಲಿರುವದೆಲ್ಲದರ ಪ್ರಕಟನೆ ಆಗಿರುತ್ತದೆ. ಅದರ ತಾತ್ಪರ್ಯವು ಸ್ವತಃ ಸುವಾರ್ತೆಯೇ ಆಗಿರುತ್ತದೆ, ಯೂದನು "ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ನೀವು ಹೋರಾಡಬೇಕೆಂದು" ಬುದ್ಧಿವಾದ ಹೇಳುವದರಲ್ಲಿರುವ ಪ್ರಕಾರವೇ (ಯೂದನು 3).[18]

5:6ರಲ್ಲಿ, "ನಂಬಿಕೆ" ವಿಶ್ವಾಸಿಯ ಮನವೋಲಿಕೆ ಅಥವಾ ಮನವರಿಕೆಯ ವಸ್ತುನಿಷ್ಠೆಯ ಗುಣವಾಗಿರುತ್ತದೆ. ಅದರಲ್ಲಿ ನಿರೀಕ್ಷೆಯ ಅಂಶವು ಇರುತ್ತದಾದರೂ (ಇಬ್ರಿಯ 11:1ಲ್ಲಿರುವಂತೆ), ಅದು ಕ್ರಿಯೆಯಲ್ಲಿ ಫಲಿತಗೊಳ್ಳದಿದ್ದರೆ, ಅದು ಈಗಿನ ಕಾಲಕ್ಕಾಗಲಿ ಅಥವಾ ಮುಂದಿನ ಲೋಕಕ್ಕಾಗಲಿ ಯಾವದೇ ಪ್ರಯೋಜನವಿಲ್ಲದ್ದಾಗಿದೆ. ಈ ನಂಬಿಕೆ "ಕೆಲಸ ನಡಿಸುವ" ನಂಬಿಕೆಯಾಗಿದ್ದು, "ಪ್ರೀತಿಯ ಮೂಲಕವಾಗಿ ತನ್ನನ್ನು ವ್ಯಕ್ತಪಡಿಸುತ್ತದೆ" (NIV). "ಕೆಲಸ ನಡಿಸುವ" ಎಂಬುದು ಗ್ರೀಕ್ ಭಾಷೆಯ ἐνεργέω (*energeō*) ಎಂಬ ಪದದಿಂದ ಬರುತ್ತದೆ, ಅದು ಆಂಗ್ಲದ "ಎನರ್ಜೀ" ಮತ್ತು "ಎನರ್ಜೈಜ್" ಎಂಬ ಪದಗಳೊಂದಿಗೆ ವ್ಯುತ್ಪತ್ತಿಶಾಸ್ತ್ರೀಕವಾಗಿ ಮಾತ್ರವಲ್ಲದೆ ಭಾವನೆಯಲ್ಲಿ ಸಹ ಸಂಬಂಧ ಹೊಂದಿದೆ. ಇಲ್ಲಿ ಬಳಸಲ್ಪಟ್ಟಿರುವ ಭಾಷೆಯು "ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ" ಎಂಬ ಯಾಕೋಬನ ಹೇಳಿಕೆಯನ್ನು ಜ್ಞಾಪಿಸುವದಾಗಿದೆ (ಯಾಕೋಬ 2:26). ಆತನು ಹೀಗೆ ಎಚ್ಚರಿಕೆ ಕೊಟ್ಟನು, "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ" (ಯಾಕೋಬ 1:22). 2 ಪೇತ್ರ 1:5-11ರಲ್ಲಿನ ಸದ್ಗುಣಗಳನ್ನು ಆತ್ಮೀಕ ಬೆಳವಣಿಗೆ ಮತ್ತು ಅಭಿವೃದ್ಧಿಯ ಅತ್ಯಂಥ ಮೂಲಭೂತದಿಂದ ಮೊದಲ್ಗೊಂಡು ಅತ್ಯಂಥ ಪ್ರಬುದ್ಧತೆಯ ಹಂತಗಳಿಗೆ ಸೇರಿದ ಗುಣಗಳ ಒಂದು ಸರಣಿಯನ್ನು ಮುಂದಿಡುತ್ತವೆ.

ಕ್ರೈಸ್ತ ನಂಬಿಕೆಯು ನಿರಂತರವಾಗಿ ಸಕ್ರಿಯವಾಗಿರತಕ್ಕದ್ದು. ದೇವರ ಮುಂದೆ ಯಾವದು ಮುಖ್ಯವೆಂದರೆ "ಪ್ರೀತಿಯಲ್ಲಿ ಕೆಲಸ ನಡಿಸುವ ನಂಬಿಕೆಯೇ." ಯೇಸುವು ಆತನ ಆಜ್ಞೆಗಳನ್ನು ಪ್ರೀತಿಸುವಿಕೆ ಮತ್ತು ವಿಧೇಯವಾಗುವಿಕೆಗಳು ಅವಶ್ಯಕವಾಗಿ ಬೇರ್ಪಡಿಸಲಾರದವುಗಳೆಂಬ

ವಾಸ್ತವಾಂಸದ ಕುರಿತು ಬಹಳ ಸ್ಪಷ್ಟವಾಗಿ ಹೇಳಿದನು (ಯೋಹಾನ 14:15-24; 15:10-17). ಒಳ್ಳೇದನ್ನು ಮಾಡುವದಕ್ಕೆ ಇರುವ ಅನೇಕ ಉದ್ದೇಶಗಳು ಮಾಡುವವನಿಗೆ ಅದರ ಪ್ರಯೋಜನವು ಸಿಕ್ಕದಂತೆ ನಿರರ್ಥಕಗೊಳಿಸಬಲ್ಲವು. ಒಂದು ಪೈಪೋಟಿಯ ಮನೋಭಾವ, ತನ್ನನ್ನು ಘನ ಪಡಿಸಿಕೊಳ್ಳಬೇಕೆಂಬ ಬಯಕೆ, ಸ್ವ-ನೀತಿಯನ್ನು ಸಾಧಿಸಲು ಪ್ರಯತ್ನವನ್ನು ಮಾಡುವದು, ಅಥವಾ ಬೇರೆಯವರಿಗೆ ಕಷ್ಟವನ್ನುಂಟುಮಾಡುವ ಬಯಕೆ ಇತ್ಯಾದಿಗಳು (ಫಿಲಿಪ್ಪಿ 1:15-18) ಮಾಡಲ್ಪಟ್ಟಿರುವ ಯಾವದೇ ಒಳ್ಳೇ ಕಾರ್ಯವನ್ನು ಮಾಡಿದವನಿಗೆ ನಿಷ್ಪ್ರಯೋಜಕವಾಗುವಂತೆ ಮಾಡುವವು. ಈ ಸತ್ಯವನ್ನು ಪೌಲನು ಕಣ್ಣಿಗೆ ಕಟ್ಟಿದಂತೆ ದೃಷ್ಟಾಂತ ಪಡಿಸಿದನು, ಆತನು ಘೋಷಿಸಿದ್ದೇನೆಂದರೆ, "ನನಗಿರುವದೆಲ್ಲವನ್ನು ಅನ್ನದಾನಮಾಡಿದರೂ ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವದಿಲ್ಲ" (1 ಕೊರಿಂಥ 13:3).

"ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆ" ಎಂಬ ಪದಗುಚ್ಛದ ಮೂಲಕವಾಗಿ, ಪೌಲನು ಇಲ್ಲಿ ಒಬ್ಬನನ್ನು ಪ್ರೀತಿಯುಳ್ಳ ಕಾರ್ಯಗಳನ್ನು ನಡಿಸುವಂತೆ ಪ್ರೇರಣೆ ನೀಡುವ ಅಥವಾ ಬಲವನ್ನು ನೀಡುವ ನಂಬಿಕೆಯ ಬಗ್ಗೆ ಮಾತಾಡುತ್ತಿದ್ದಾನೆ. ಅಂಥ ಕ್ರಿಯೆಗಳು ನಂಬಿಕೆಯನ್ನು ವ್ಯಕ್ತಪಡಿಸುತ್ತವಾದ್ದರಿಂದ, ಅಪೊಸ್ತಲನು ಇಲ್ಲಿ *ἀγάπη* (*agapē*) ಎಂದು ಪರಿಚಿತವಿರುವ ಪ್ರೀತಿಯ ಬಗ್ಗೆ ಸೂಚಿಸುತ್ತಿದ್ದಾನೆಂಬುದು ಸ್ಪಷ್ಟವಾಗಿರುತ್ತದೆ. ಕ್ರೈಸ್ತನ ನಂಬಿಕೆಯಿಂದ ಹೊರಹೊಮ್ಮುವ ಈ ಪ್ರಚೋದಕ ಶಕ್ತಿಯು ಇದಾಗಿರುತ್ತದೆ ಮತ್ತು ಭಕ್ತಿಯ ಜೀವಿತವನ್ನು ನಡಿಸುವದರಲ್ಲಿ ಫಲಿತಗೊಳ್ಳುತ್ತದೆ. ನಾವು ಪ್ರೀತಿಸುವದನ್ನು ದೇವರಿಂದ ಕಲಿತುಕೊಂಡಿದ್ದೇವೆ, ಆತನು ಗೋಲ್ಗಥಾದ ಶಿಲುಬೆಯ ಮೇಲೆ ಸರ್ವೋನ್ನತವಾದ ಪ್ರೀತಿಯನ್ನು ನಮಗೆ ತೋರಿಸುವ ಮೂಲಕವಾಗಿ ಮಾನವರ ಮೇಲೆ ತನಗಿರುವ ಶ್ರೇಷ್ಠ ಪ್ರೀತಿಯನ್ನು ಪ್ರಕಟಗೊಳಿಸಿದನು ಮತ್ತು ನಮ್ಮ ಹೃದಯಗಳನ್ನು ಸ್ಪರ್ಶಿಸಿದನು. ಯೋಹಾನನು ಹೀಗೆ ಬರೆದನು, "ಆತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದ್ದರಲ್ಲಿಯೇ ದೇವರ ಪ್ರೀತಿ ಇಂಥದ್ದೆಂದು ನಮಗೆ ತಿಳಿದು ಬಂದಿದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ" (1 ಯೋಹಾನ 3:16; NKJV). ಅಲ್ಲದೆ ಆತನು ಈ ಮಾತುಗಳನ್ನು ಸಹ ಬರೆದನು: "ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿ ಬರುತ್ತದೆ" (1 ಯೋಹಾನ 4:10); "ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ" (1 ಯೋಹಾನ 4:19). ಈ ಎಲ್ಲಾ ವಾಕ್ಯಭಾಗಗಳು *ಅಗಾಪೆ* ಎಂಬ ನಾಮಪದವನ್ನು ಮತ್ತು/ಅಥವಾ ಅದಕ್ಕೆ ಸಂಬಂಧಪಟ್ಟ *ἀγαπάω* (*agapaō*) ಎಂಬ ಕ್ರಿಯಾಪದವನ್ನು ಬಳಸುತ್ತವೆ. ಎರಡೂ ಪದಗಳ ಮೂಲಭೂತ ಭಾವನೆಯು ಯಾವ ವ್ಯಕ್ತಿಯ ಕಡೆಗೆ ಒಂದು ಕ್ರಿಯೆಯು ಮಾಡಲ್ಪಡುತ್ತದೋ ಆ ವ್ಯಕ್ತಿಯ ಪರವಾಗಿ ಪ್ರಯೋಜನಕರವಾದ ಕೃತ್ಯದ ಕುರಿತಾಗಿರುತ್ತದೆ.

## ಗಲಾತ್ಯದವರ ತಪ್ಪು (5:7-9)

**[7]ಚೆನ್ನಾಗಿ ಓಡುತ್ತಾ ಇದ್ದಿರಿ; ನೀವು ಸತ್ಯವನ್ನು ಅನುವರ್ತಿಸದಂತೆ ಯಾರು ನಿಮ್ಮನ್ನು ತಡೆದರು? [8]ಈ ಬೋಧನೆಯು ನಿಮ್ಮನ್ನು ಕರೆದಾತನಿಂದ ಹುಟ್ಟಿದ್ದಲ್ಲ. [9]ಸ್ವಲ್ಪ ಹುಳಿಯಿಂದ ಕಣಿಕವೆಲ್ಲಾ ಹುಳಿಯಾಗುವದು.**

ಯೆಹೂದಿ ಕ್ರೈಸ್ತರು ಹಳೆಯ ಧರ್ಮಶಾಸ್ತ್ರದ ಭಾರದಿಂದ ಮುಕ್ತಗೊಳಿಸಲ್ಪಟ್ಟಿದ್ದರಿಂದ, ಪುನಃ ಅದಕ್ಕೆ ತಮ್ಮನ್ನು ಅಧೀನಪಡಿಸಿಕೊಳ್ಳಕೂಡದೆಂದು ಪೌಲನು ತನ್ನ ವಾಚಕರನ್ನು ಬೇಡಿಕೊಳ್ಳುತ್ತಾನೆ.

**ವಚನ 7. ಚೆನ್ನಾಗಿ ಓಡುತ್ತಾ ಇದ್ದಿರಿ** ಎಂಬ ಹೇಳಿಕೆಯು ಗಲಾತ್ಯದವರ ಆತ್ಮೀಕ ಓಟದ ಆರಂಭವನ್ನು ಕುರಿತಾಗಿ ಪೌಲನ ವ್ಯಾಖ್ಯಾನವಾಗಿತ್ತು (ನೋಡಿರಿ 4:9, 15). ನಂಬಿಗಸ್ತಿಕೆ ಮತ್ತು ಕಡೇ ವರೆಗೂ ಸ್ಥಿರವಾಗಿರುವಂತೆ ಕ್ರೈಸ್ತರನ್ನು ಸ್ಫೂರ್ತಿಗೊಳಿಸಲು ಪೌಲನು ಅನೇಕ ಸಾರಿ ಕ್ರೀಡಾ ರೂಪಕೋಕ್ತಿಗಳನ್ನು ಬಳಸಿದನು. ಆತನಿಗೆ ಗ್ರೀಕ್ ಸಂಸ್ಕೃತಿಯಲ್ಲಿ ಕ್ರೀಡಾ ಪೈಪೋಟಿಗಳಿಗೆ ಬಹಳ ಪ್ರೀತಿ ತೋರಿಸಲ್ಪಡುತ್ತಿತ್ತದೆಂಬುದು ಚೆನ್ನಾಗಿ ಗೊತ್ತಿತ್ತು. ಅಖಿಲ ಗ್ರೀಕ್ ಏಕೀಕರಣದ ನಾಲ್ಕು ಮಹಾ ಕ್ರೀಡಾಕೂಟಗಳನ್ನು ನಿಯತಕ್ರಮವಾಗಿ ಓಲಂಪಿಯಾ, ಡೆಲ್ಫಿ, ಇಸ್ತಮಿಯಾ ಮತ್ತು ನೆಮೇಯ ಎಂಬ ಸ್ಥಳಗಳಲ್ಲಿ ನಡಿಸಲಾಗುತ್ತಿತ್ತು. ಅಷ್ಟುಮಾತ್ರವಲ್ಲದೆ, ಅಥೇನೆಯಲ್ಲಿ ನಡೆಯುತ್ತಿದ್ದ ಅಖಿಲ ಅಥೇನೆ ಏಕೀಕರಣದ ಮತ್ತು ಗ್ರೀಸ್ ಸುತ್ತಮುತ್ತ ನಡೆಯುತ್ತಿದ್ದ ಇತರ ಸ್ಥಳೀಯ ಹಬ್ಬಗಳು ಗ್ರೀಕ್ ಸಂಸ್ಕೃತಿಯು ಮುಖ್ಯವಾದ ಘಟಕಗಳಾಗಿದ್ದವು.

ಅಂಥ ಕಾರ್ಯಕ್ರಮಗಳು ಪೌಲನಿಗೆ ಆರ್ಥಿಕವಾಗಿ ತನ್ನ ಜೀವನೋಪಾಯಕ್ಕೆ ಸಹಾಯ ಮಾಡಿಕೊಳ್ಳಲು ಸದವಕಾಶಗಳನ್ನು ಒದಗಿಸರಬಹುದಾಗಿದೆ. ಆತನ ಎರಡನೆಯ ಸುವಾರ್ತಾ ಪ್ರಯಾಣದ ವೇಳೆ ಕೊರಿಂಥದಲ್ಲಿ ಉಳಿದುಕೊಂಡಿದ್ದಾಗ ಒಬ್ಬ ಚಮ್ಮಾರನಾಗಿ ಕೆಲಸವನ್ನು ಕಂಡುಕೊಂಡಿದ್ದನು,[19] ಬಹುಶಃ ಗುಡಾರ ತಯಾರಿಸುವವನಾಗಿ ಕೆಲಸವನ್ನು ಕಂಡುಕೊಂಡಿರಬಹುದು (σκηνοποιός, *skēnopoios*; ಅಪೊಸ್ತಲರ ಕೃತ್ಯಗಳು 18:1-3). ಕೊರಿಂಥ ಪಟ್ಟಣವು ಮೇಲ್ವಿಚಾರಣೆ ವಹಿಸಿದ್ದಂಥ, ಹತ್ತಿರದ ಇಸ್ತಮೀಯದಲ್ಲಿ ನಡೆಯುತ್ತಿದ್ದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಮತ್ತು ಪ್ರೇಕ್ಷರಕಾಗಿ ಬರುತ್ತಿದ್ದವರಿಗೆ ಆತನ ಉತ್ಪನ್ನಗಳು ಮಾರಾಟ ಮಾಡಲ್ಪಟ್ಟಿರಬಹುದಾಗಿದೆ. ಆತನು ಅಲ್ಲಿ, ಬಹಳ ಸಂಭಾವ್ಯವಾಗಿ ಮಾರುಕಟ್ಟೆಯಲ್ಲಿ ತನ್ನ ವ್ಯಾಪಾರವನ್ನು ಮಾಡುವ ವೇಳೆ, ಸ್ಪರ್ಧೆಗಳ ಬಗ್ಗೆ ಬಹಳಷ್ಟು ಸಂಭಾಷಣೆಗಳನ್ನು ಕೇಳಿಸಿಕೊಂಡಿರಬಹುದು. ಅಲ್ಲದೆ ಸ್ವತಃ ಆತನೇ ಆ ಕ್ರೀಡೆಗಳನ್ನು ನೋಡಲು ಹೋಗಿರಬಹುದಾದ ಸಾಧ್ಯತೆಯಿದೆ. ಹೇಗೆ ಇದ್ದರೂ ಸರಿಯೇ, ಆತನು ಕ್ರೀಡೆಗಳಿಂದ ಆರಿಸಿಕೊಂಡ ರೂಪಕೋಕ್ತಿಗಳ ಬಳಕೆ ಮಾಡಿದನು, ಉದಾಹರಣೆಗೆ 1 ಕೊರಿಂಥ 9:24-27ರಲ್ಲಿ ಅಂತಹ ಕೆಲವು ರೂಪಕೋಕ್ತಿಗಳನ್ನು ಕಾಣುತ್ತೇವೆ: "ಓಟವನ್ನು ಓಡಿರಿ," "ಬಿರುದು," "ಹೋರಾಡುವವರೆಲ್ಲರು," "[ಜಯ]ಮಾಲಿಕೆ," "ಗುದ್ದುವವನು," "ನನ್ನ ಮೈಯನ್ನು ಜಜ್ಜಿ ಸ್ವಾದೀನಪಡಿಸಿಕೊಳ್ಳುತ್ತೇನೆ," ಮತ್ತು "ಅಯೋಗ್ಯನೆನಿಸಿಕೊಂಡೇನೋ."[20]

ಪತ್ರಿಕೆಗಳಲ್ಲಿ, "ಓಡು" (τρέχω, *trechō*) ರೂಪದ ವಿವಿಧ ಪದಗಳನ್ನು ಹತ್ತು ಸಾರಿ ರೂಪಕೋಕ್ತಿಯ ಅರ್ಥದಲ್ಲಿ ಬಳಕೆ ಮಾಡಿರುತ್ತಾನೆ; ಮತ್ತು ಅವುಗಳಲ್ಲಿ ಒಂಭತ್ತು ಪದಗಳು ಕ್ರೈಸ್ತನನ್ನು ಒಂದು ಕ್ರೀಡಾ ಸ್ಪರ್ಧೆಯಲ್ಲಿ ಸ್ಪರ್ಧಿಸುವವನೆಂದು ಬಣ್ಣಿಸಲಾಗಿದೆ.[21] ಪದವು ಈ ಪತ್ರಿಕೆಯಲ್ಲಿ ಮುಂಚೆ ಕಾಣಿಸಿಕೊಳ್ಳುವದಾಗಿದ್ದು, ಪೌಲನು ಅಲ್ಲಿ ಯೆರೂಸಲೇಮಿಗೆ ಭೇಟಿ ನೀಡಿದ್ದರ ಕುರಿತಾಗಿ ತನ್ನ ಆತ್ಮಚರಿತ್ರಾತ್ಮಕ ರೂಪರೇಶೆಯನ್ನು ಒದಗಿಸುತ್ತಾನೆ. ಅಲ್ಲಿ ಆತನು ಅನ್ಯಜನರೊಳಗೆ ಸಾರುತ್ತಿದ್ದ ಸುವಾರ್ತೆಯು ಎಂಥದ್ದೆಂದು ಸಭೆಯ ಕೆಲವೊಬ್ಬ ನಾಯಕರಿಗೆ ತಿಳಿಯಪಡಿಸಿದ್ದನು. ಆತನು ಹೀಗೆ ಬರೆದನು, "ಆದರೆ ನಾನು ಪಡುತ್ತಿರುವ ಪ್ರಯಾಸವಾಗಲಿ ಪಟ್ಟ ಪ್ರಯಾಸವಾಗಲಿ ನಿಷ್ಫಲವಾಗಬಾರದೆಂದು ಮಾನಿಷ್ಠರಿಗೆ ಏಕಾಂತದಲ್ಲಿ ತಿಳಿಸಿದೆನು" (2:2).

5:7ರಲ್ಲಿ "ಚೆನ್ನಾಗಿ ಓಡುತ್ತಾ ಇದ್ದಿರಿ" ಎಂಬುದು ಗಲಾತ್ಯದ ಸಭೆಯ ಇತ್ತೀಚಿನ

ಗತಕಾಲವನ್ನು ಸೂಚಿಸುವದಾಗಿದೆ. ಪೌಲನು ಇದನ್ನು ಅವರ ಪ್ರಸ್ತುತ ಪರಿಸ್ಥಿತಿಗೆ ಮತ್ತು ಈಗಿನ ದಾರಿಯಲ್ಲಿಯೇ ನಡೆಯುವದನ್ನು ಮುಂದುವರೆಸಿದರೆ ಬರಲಿದ್ದ ವಿನಾಶಕಾರಿ ಪರಿಣಾಮಗಳಿಗೆ ವಿರುದ್ಧ ಹೋಲಿಕೆ ಮಾಡುತ್ತಿದ್ದಾನೆ. ಅವರು "ಕ್ರಿಸ್ತನಿಂದ ಅಗಲಿ ಹೋಗುವರು" (5:4).

ಪೌಲನು ಗಲಾತ್ಯದವರಿಗೆ ಹೀಗೆ ಕೇಳಿದನು, **ನೀವು ಸತ್ಯವನ್ನು ಅನುವರ್ತಿಸದಂತೆ ಯಾರು ನಿಮ್ಮನ್ನು ತಡೆದರು?** ಕ್ರಿಯಾಪದ ಕಾಲರೂಪಗಳನ್ನು ಗಮನಿಸುವಾಗ, ಈ ಪ್ರಶ್ನೆಯ ಅಕ್ಷರಶಃ ಅನುವಾದವು ಈ ವಿಧದಲ್ಲಿ ಇರುವದಾಗಿತ್ತು, "ಸತ್ಯಕ್ಕೆ ವಿಧೇಯರಾಗುವದನ್ನು ಮುಂದುವರೆಸದಂತೆ ನಿಮ್ಮನ್ನು ತಡೆದವರು ಯಾರು?" NIVಯು ಕ್ರೀಡೆಗಳಲ್ಲಿ ಓಡುವವನ ರೂಪಕೋಕ್ತಿಯೊಂದಿಗಿನ ಸಂಬಂಧವನ್ನು ಉಳಿಸಿಕೊಂಡಿರುತ್ತದೆ. "ತಡೆ" (ἐνκόπτω, *enkoptō*) ಎಂಬ ಕ್ರಿಯಾಪದದ ವ್ಯುತ್ಪತ್ತಿಶಾಸ್ತ್ರೀಕ ಅರ್ಥದ ಶಬ್ದಾಡಂಬರವನ್ನು ಬಳಸುತ್ತಾ, ಅದು ಪ್ರಶ್ನೆಯನ್ನು "ಸತ್ಯಕ್ಕೆ ವಿಧೇಯರಾಗುವದರಿಂದ ನಿಮ್ಮನ್ನು ತಡೆಯುವದಕ್ಕೆ ನಿಮ್ಮ *ಮಧ್ಯದಲ್ಲಿ ಬಂದವರು* ಯಾರು?" ಎಂದು ಅನುವಾದಿಸಿರುತ್ತದೆ (ಒತ್ತಿ ಹೇಳಿದ್ದು ನನ್ನದು). ಇದು ಮತ್ತೊಬ್ಬ ಓಟಗಾರನನ್ನು ಎಡವುವಂತೆ ಮಾಡುವ ಅಥವಾ ಓಟದ ದಾರಿಯಿಂದ ಪಕ್ಕಕ್ಕೆ ಸರಿಯುವಂತೆ ಮಾಡಿ ಓಟವನ್ನು ಮುಂದುವರೆಸದಂತೆ ಕಾರಣವಾಗುವ ರೀತಿಯಲ್ಲಿ ಒಬ್ಬ ಓಟಗಾರನು ಅತ್ಯಂಥ ಸಮೀಪಕ್ಕೆ ಓಡುವ ಚಿತ್ರಣವನ್ನು ಇದು ಹೊರ ತರುತ್ತದೆ.

ಒಬ್ಬ ಓಟಗಾರನು ದಾರಿ ಬಿಟ್ಟು ಹೋಗುವದು ಅಥವಾ ತನಗೆ ನೇಮಕವಾದ ಗೆರೆಯನ್ನು ದಾಟುವ ಯೋಚನೆಯು ಈ ದಿನದಲ್ಲಿರುವ ಪ್ರಕಾರವೇ ಪ್ರಾಚೀನ ಕ್ರೀಡೆಗಳಿಗೆ ಬಹಳಷ್ಟು ಪ್ರಸ್ತುತವಾಗಿತ್ತು. ಗಲಾತ್ಯದವರು ತಮಗೆ ಏನನ್ನು ಸಂಭವಿಸುವಂತೆ ಅವಕಾಶ ಕೊಟ್ಟಿದ್ದರೋ ಅದಕ್ಕೆ ಇದರ ಅನ್ವಯಿಕೆಯು ಬಹಳ ಸರಿಹೊಂದುವಂತಿತ್ತು. ಪೌಲನ ತಾತ್ಪರ್ಯವನ್ನು ಅಪಾರ್ಥ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ: ಕ್ರಿಸ್ತನಲ್ಲಿ ಸ್ವಾತಂತ್ರ್ಯದ ತನ್ನ ಹೊಸ ಜೀವಿತವನ್ನು ಆರಂಭಿಸಿದ್ದ ಬಳಿಕ ಮೋಶೆಯ ಕಟ್ಟಳೆಗಳ ಸಂಕೋಲೆಯನ್ನು ಹಾಕಿಸಿಕೊಳ್ಳಲು ಅನುಮತಿಸಿಕೊಂಡ ಯಾವನೇ ಆಗಲಿ ಕ್ರೈಸ್ತರಿಗೆ ಓಡಬೇಕೆಂದು ಕರೆಯಲಾಗಿರುವ ಓಟದ ಪಂದ್ಯಕ್ಕೆ ತನ್ನನ್ನು ಅನರ್ಹಗೊಳಿಸಿಕೊಳ್ಳುವನು. ಈ ಅಧ್ಯಾಯದ ಆರಂಭಿಕ ವಚನಗಳಲ್ಲಿ ಬಳಸಲಾಗಿರುವ ಇತರ ರೂಪಕೋಕ್ತಿಗಳ ಭಾಷೆಯಲ್ಲಿ ನೋಡುವದಾದರೆ, ಧರ್ಮಶಾಸ್ತ್ರ-ಕೈಕೊಂಡು ನಡೆಯುವವನು ತನ್ನನ್ನು "ದಾಸತ್ವದ ನೊಗ"ಕ್ಕೆ ಸಿಕ್ಕಿಸಿಕೊಂಡವನು ಮತ್ತು "ಧರ್ಮಶಾಸ್ತ್ರದಲ್ಲಿ ಹೇಳಿರುವದನ್ನೆಲ್ಲಾ ಮಾಡುವ ಹಂಗಿನಲ್ಲಿ" ಇದ್ದವನಾಗಿದ್ದನು (5:1, 3). ವಾಸ್ತವಿಕದಲ್ಲಿ, ಆತನು "ಕ್ರಿಸ್ತನಿಂದ ಅಗಲಿ ಹೋಗಿದ್ದನು" ಮತ್ತು "ಕೃಪಾಶ್ರಯದೊಳಗಿಂದ ಬಿದ್ದು" ಹೋದವನು (5:4).

ವಿಧೇಯತೆಯ ದಾರಿಯಲ್ಲಿ ಮುಂದುವರೆಯುವದರಿಂದ ಅವರನ್ನು ತಡೆದವರು "ಯಾರು" ಎಂಬದನ್ನು ನೋಡುವದಾದರೆ, ಆ ಪ್ರಶ್ನೆಯು ಕೇವಲ ಭಾವೋತ್ತೇಜಕ ಪ್ರಶ್ನೆಯಾಗಿರುತ್ತದಷ್ಟೆ. ಸನ್ನಿವೇಶದ ಬೆಳಕಿನಲ್ಲಿ, ಪೌಲನು ಯೆಹೂದಿಕರಣಗೊಳಿಸುವವರನ್ನು ಕುರಿತು ಮಾತಾಡಿರಬಹುದಾಗಿದೆ. ಅವರು ಗಲಾತ್ಯದ ಕ್ರೈಸ್ತರನ್ನು ಸುವಾರ್ತೆಗೆ ವಿಧೇಯರಾದರಷ್ಟೆ ಸಾಲದು ಎಂಬುದಾಗಿ ಒಡಂಬಡಿಸಿದ್ದರು - ಅಂದರೆ ದೇವರ ಮುಂದೆ ನೀತಿವಂತರೆಂದು ನಿರ್ಣಯಿಸಲ್ಪಟ್ಟು ನಿಲ್ಲಬೇಕಾದರೆ ಅವರು ಮೋಶೆಯ ಧರ್ಮಶಾಸ್ತ್ರದ ಕೆಲವೊಂದು ನಿಯಮಗಳಿಗೆ ವಿಧೇಯರಾಗತಕ್ಕದ್ದೆಂದು ಮನವೊಲಿಸಿದ್ದರು.

"ಸತ್ಯ" (ἀλήθεια, *alētheia*) ಕುರಿತಾದ ಪೌಲನ ವ್ಯಾಖ್ಯೆಗಳು ಕ್ರೈಸ್ತನ ನಂಬಿಕೆ ಮತ್ತು ಆಚರಣೆಗಳಿಗೆ ತಳಹದಿಯಾಗಿ ಧರ್ಮಶಾಸ್ತ್ರ ಮತ್ತು ಸುವಾರ್ತೆಗಳ ನಡುವೆ ತೀಕ್ಷ್ಣವಾದ ಭಿನ್ನತೆಯಿರುತ್ತದೆಂದು ಸೂಚ್ಯಾರ್ಥವಾಗಿ ತಿಳಿಸುತ್ತವೆ. ಆದದರಿಂದ, "ಸತ್ಯ" ಎಂಬುದು ಈ

ಸನ್ನಿವೇಶದಲ್ಲಿ "ಸುವಾರ್ತೆ" ಎಂಬುದಕ್ಕೆ ಸಮಾನಾರ್ಥಕ ಪದವಾಗಿದೆ. ದೇವರಿಂದ ಹೇಳಲ್ಪಟ್ಟಿರುವ ಯಾವದೇ ಆಗಲಿ ಸತ್ಯವಾದದ್ದು; ಆತನ ವಾಕ್ಯವು, ಅದು ಯಾವ ಯುಗದಲ್ಲಿ ಮಾತಾಡಲ್ಪಟ್ಟಿದ್ದಾಗ್ಯೂ ಸತ್ಯವೇ ಆಗಿರುತ್ತದೆ (ಯೋಹಾನ 17:17). ಹೇಗೂ, ಧರ್ಮಶಾಸ್ತ್ರಕ್ಕೆ ಇಂದು ಯಾವ ಸಮರ್ಪಕವಾದ ಪಾತ್ರ ಮತ್ತು ಉದ್ದೇಶವಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕೆಂದರೆ ಹೊಸ ಒಡಂಬಡಿಕೆಯನ್ನೇ ವಿಚಾರಿಸತಕ್ಕದ್ದು (1 ತಿಮೊಥೆ 1:6-11), ಮತ್ತು ಇಲ್ಲಿ ಧರ್ಮಶಾಸ್ತ್ರ ಮತ್ತು ಸುವಾರ್ತೆಯ ("ಸತ್ಯ") ನಡುವಿನ ಭಿನ್ನತೆಯು ಇದಕ್ಕಿಂತ ಸ್ಪಷ್ಟವಾಗಿರಲಾರದು.

ನಾಲ್ಕನೆಯ ಸುವಾರ್ತೆಯ ಪುಸ್ತಕದ ಲೇಖಕನಾದ ಯೋಹಾನನು, ಈ ರೀತಿ ಹೇಳಿದನು, "ಧರ್ಮಶಾಸ್ತ್ರವು ಮೋಶೆಯ ಮುಖಾಂತರ ಕೊಡಲ್ಪಟ್ಟಿತು; ಕೃಪೆಯೂ ಸತ್ಯವೂ ಯೇಸು ಕ್ರಿಸ್ತನ ಮುಖಾಂತರ ಬಂದವು[22]" (ಯೋಹಾನ 1:17). ಯೋಹಾನನು ಎರಡು ಒಡಂಬಡಿಕೆಗಳ ನಡುವೆ ಒಂದು ಸ್ಫುಟವಾದ ವ್ಯತ್ಯಾಸವನ್ನು ಗುರುತಿಸುತ್ತಾನೆ. ಇಲ್ಲಿರುವ ಸೂಚ್ಯಾರ್ಥವು ಏನೆಂದರೆ, ಯೇಸು ಕ್ರಿಸ್ತನೊಂದಿಗೆ, ಏನೋ ಒಂದು ಹೊಸದು - ಭೂಮಿಯ ಮೇಲೆ ಈ ಮುಂಚೆ ಅಸ್ತಿತ್ವದಲ್ಲಿ ಇಲ್ಲದಂಥ ಸಂಗತಿಯೊಂದು - ಲೋಕದೊಳಗೆ ಬಂದಿತ್ತು. ಯೇಸುವಿನ ಮೂಲಕವಾಗಿ ಯೋಹಾನನಿಂದ ಗುರುತಿಸಲ್ಪಟ್ಟ ಪ್ರಕಾರ "ಕೃಪೆಯೂ [ತುಂಬಿದ] ಸತ್ಯವೂ" ಬಂದವು (ಯೋಹಾನ 1:14). ಇದು ಸೀನಾಯಿ ಪರ್ವತದಲ್ಲಿ ಮೋಶೆಗೆ ಕೊಡಲ್ಪಟ್ಟ ಧರ್ಮಶಾಸ್ತ್ರಕ್ಕೆ ಸ್ಫುಟವಾದ ವ್ಯತ್ಯಾಸವನ್ನು ಹೊಂದಿತ್ತು.

ಇಬ್ರಿಯರಿಗೆ ಪತ್ರಿಕೆಯ ಲೇಖಕನು ವಿವರಿಸಿದ ಹಾಗೆ, ಧರ್ಮಶಾಸ್ತ್ರವು "ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆ"ಯನ್ನು ಒಳಗೊಂಡಿತ್ತು (ಇಬ್ರಿಯ 10:1). ಧರ್ಮಶಾಸ್ತ್ರದ ವಿವಿಧ ಅಂಶಗಳ ವಿಷಯದಲ್ಲಿ, ಪೌಲನು ಸಹ ಹೇಳಿದ್ದೇನೆಂದರೆ, "ಇವು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿವೆ; ಇವುಗಳ ನಿಜಸ್ವರೂಪವು ಕ್ರಿಸ್ತನೇ" (ಕೊಲೊಸ್ಸೆ 2:17; NIV). ಒಂದು ಗಟ್ಟಿಯಾದ ಲೋಹದ ಸಾಮಗ್ರಿಯ ಬೆಳಕಿನ ಸಮ್ಮುಖದಲ್ಲಿರುವದಾದರೆ, ಗೋಡೆ ಅಥವಾ ನೆಲದ ಮೇಲೆ ನೆರಳನ್ನು ಮೂಡಿಸುತ್ತದೆಂಬ ವಿಚಾರವನ್ನು ತಿಳಿಯಪಡಿಸುವ ಉದ್ದೇಶವು ಈ ಚಿತ್ರಣದ್ದಾಗಿದೆ. ಛಾಯೆಯು ಅಮೂರ್ತ, ಅಪಾರ್ಥಿಯವಾಗಿದ್ದು, ರಾಶಿ ಅಥವಾ ನಿಜವಾದ ತಿರುಳನ್ನಾಗಲಿ ಹೊಂದಿರುವದಿಲ್ಲ. ಹೇಗೂ, ಅದು ಪ್ರಶ್ನೆಯಲ್ಲಿರುವ ವಸ್ತುವಿನ ರೂಪವೊಂದಕ್ಕೆ ಛಾಯೆಯಾಗಿರುವದರಿಂದ, ಅದು ಆ ವಸ್ತುವಿನ ಆಕಾರದ ಕುರಿತಾಗಿ ಸುಳಿವು ಕೊಡಬಹುದಾಗಿದೆ.

ಅದೇ ರೀತಿಯಲ್ಲಿಯೇ, ಧರ್ಮಶಾಸ್ತ್ರವು, ಕೆಲವು ಸಾರಿ ಮಸುಕಾಗಿದ್ದರೂ, ಕ್ರಿಸ್ತನ ಸುವಾರ್ತೆಯು ಒಳಗೊಂಡಿರುವ ಆತ್ಮೀಕ ವಾಸ್ತವಿಕತೆಗಳ ಕೆಲವೊಂದು ಪ್ರಾಮುಖ್ಯವಾದ ಅಂಶಗಳಿಗೆ ಪೂರ್ವಛಾಯೆಯಾಗಿತ್ತು. ಉದಾಹರಣೆಗೆ, ದೇವಾಲಯವು, ಸಭೆಗೂ ಮತ್ತು ದೇವರಾತ್ಮನು ವಾಸಮಾಡುವ (1 ಕೊರಿಂಥ 3:16, 17; 6:19, 20) ಕ್ರೈಸ್ತನಿಗೂ ಸಂಬಂಧ ಪಟ್ಟಂತೆ, ಸತ್ಯ (ನಿಜವಾದ) ದೇವಾಲಯದ ಒಂದು ಛಾಯೆಯಾಗಿತ್ತು. ದೇವಾಲಯದ ಕಲ್ಲುಗಳು ದೇವರ ಆತ್ಮೀಕ ಆಲಯವನ್ನು ನಿರ್ಮಿಸುವ ಜೀವವುಳ್ಳ ಕಲ್ಲುಗಳಿಗೆ ಪೂರ್ವಛಾಯೆಯಾಗಿದ್ದವು (1 ಪೇತ್ರ 2:4, 5). ಧರ್ಮಶಾಸ್ತ್ರದ ಕಾಲದಲ್ಲಿ, ಅರಣ್ಯದಲ್ಲಿ ಅಲೆದಾಡುವ ಸಂದರ್ಭ ಸರ್ಪಗಳ ವಿಷಭರಿತ ಕಡಿತಗಳನ್ನು ಗುಣಪಡಿಸುವದಕ್ಕಾಗಿ (ನಂಬಿಕೆಯ ಮೂಲಕ) ತಾಮ್ರದಿಂದ ಸರ್ಪದ ಪ್ರತಿಮೆಯು ನಿರ್ಮಿಸಲ್ಪಟ್ಟಿತು. ಆ ವಸ್ತುವು ಶಿಲುಬೆಗೇರಿಸಲ್ಪಟ್ಟ ಕ್ರಿಸ್ತನಿಗೆ ಪೂರ್ವಛಾಯೆಯಾಗಿತ್ತು, ಆತನು (ಸಹ ನಂಬಿಕೆಯ ಮೂಲಕ) ಸೈತಾನನ ಪಂಜುಗಳಿಂದಾದ ಮರಣಾಂತಿಕ ಗಾಯಗಳನ್ನು ಗುಣಪಡಿಸಿ ನಿತ್ಯಜೀವವನ್ನು ಕೊಡುತ್ತಾನೆ (ಯೋಹಾನ 3:14, 15).

ಯಜ್ಞಕ್ಕರ್ಪಿಸುವ ಕುರಿ ಮರಿಯು ಸತ್ಯವಾದ (ನಿಜ) "ದೇವರ ಕುರಿಮರಿ"ಯ ಛಾಯೆಯಾಗಿತ್ತು (ಯೋಹಾನ 1:29). ಸುವಾರ್ತೆಯ ಕುರಿತು ಈ ಎಲ್ಲಾ ಅಮೂಲ್ಯವಾದ ಸಾಕ್ಷಿಗಳ ಹೊರತಾಗಿಯೂ, ಧರ್ಮಶಾಸ್ತ್ರವು ಮನುಷ್ಯನಿಗೆ ಒಂದು ರಕ್ಷಣೆಯ ದಾರಿಯನ್ನು ಮತ್ತು ಪಾಪಗಳಿಗೆ ಸಂಪೂರ್ಣ ಕ್ಷಮಾಪಣೆಯನ್ನು ಒದಗಿಸಬೇಕೆಂಬ ಉದ್ದೇಶವನ್ನು ಎಂದಿಗೂ ಹೊಂದಿರಲೇ ಇಲ್ಲ (ಯೋಹಾನ 5:39, 40).

**ವಚನ 8. ಈ ಬೋಧನೆಯು ನಿಮ್ಮನ್ನು ಕರೆದಾತನಿಂದ ಹುಟ್ಟಿದ್ದಲ್ಲ** ಎಂದು ಪೌಲನು ಹೇಳುತ್ತಾನೆ. ಉಲ್ಲೇಖಿಸಲಾದ "ಬೋಧನೆ" ಎಂಬುದು ಈ ಸಹೋದರರು ದೇವರಿಂದ ಅಂಗೀಕಾರಕ್ಕೊಳಗಾಗಬೇಕೆಂದರೆ ಸುನ್ನತಿಯನ್ನು ಸ್ವೀಕರಿಸಿಕೊಂಡು ಧರ್ಮಶಾಸ್ತ್ರದ ಕೆಲವೊಂದು ನಿಯಮಗಳನ್ನು ಕೈಕೊಂಡು ನಡೆಯಬೇಕೆಂಬ ಚಿಕ್ಕ ನಂಬಿಕೆ ಎಂಬಂತೆ ಕಾಣಿಸುತ್ತದೆ (ಅಪೊಸ್ತಲರ ಕೃತ್ಯಗಳು 15:1, 5). ಅಂತೂ, ಇದೊಂದು ರೀತಿಯಲ್ಲಿ ಅವರು ಕ್ರಿಸ್ತನನ್ನು ತಿರಸ್ಕರಿಸುತ್ತಿದ್ದಾರೆಂಬಂತೆ ಆಗಿರಲಿಲ್ಲ - ಆ ವಿಷಯದಲ್ಲಿ ನೋಡಿದರೆ, ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಆ ರೀತಿಯಾಗಿರಲಿಲ್ಲ. ಹೇಗೂ, ಯಾವ ಹೊಸ ನಂಬಿಕೆಯ ಮೂಲಕವಾಗಿ ಗಲಾತ್ಯದವರು ರಕ್ಷಣೆಯನ್ನು ಹೊಂದಿಕೊಂಡಿದ್ದರೋ ಅದು ಯೆಹೂದ್ಯರ ಪ್ರಾಚೀನ ಧರ್ಮದ ಸ್ಥಾನವನ್ನು ತೆಗೆದುಕೊಳ್ಳುವ ಉದ್ದೇಶವನ್ನು ಹೊಂದಿರಲಿಲ್ಲ ಎಂಬ ಮನವರಿಕೆಯನ್ನು ಅವರು ಹೊಂದಿಕೊಂಡಿದ್ದರು.

ಬಹುಶಃ ಗಲಾತ್ಯದವರು, ಪ್ರತಿಯೊಂದು ದೇವರಿಗೆ ಘನ ಸಲ್ಲಿಸುವ ಮೂಲಕ "ಸುರಕ್ಷಿತ" ಆಗಿರುವದಕ್ಕೆ ಪ್ರಯತ್ನಿಸುತ್ತಿದ್ದ ಅಥೇನೆಯರಂತೆ ಇರಲಿಲ್ಲ. ಅವರಿದ್ದ ಅನ್ಯಧರ್ಮಿಯ ಸನ್ನಿವೇಶದಲ್ಲಿ, ಆರಾಧನೆಯ ವಸ್ತುಗಳನ್ನು ನಿಲ್ಲಿಸಿ ಅಸಂಖ್ಯಾತ ದೇವದೇವತೆಗಳಿಗೆ ಯಜ್ಞವೇದಿಗಳನ್ನು ನಿರ್ಮಿಸಬೇಕಾಗಿತ್ತು. ಯಾವದಾದರೂ ಪ್ರಮುಖ್ಯವಾಗಿರಬಹುದಾದ ಅಥವಾ ಪ್ರತೀಕಾರ ಸಲ್ಲಿಸಬಹುದಾದ ದೇವರನ್ನು ಕೈ ಬಿಟ್ಟಿದ್ದರೆ ಹೇಗೆಂಬ ಭಯದಿಂದ ಅವರು "ತಿಳಿಯದ ದೇವರುಗಳಿಗೆ" ಸಹ ಯಜ್ಞವೇದಿಗಳನ್ನು ನಿರ್ಮಿಸಿದ್ದರು. ಪೌಲನು ಪಟ್ಟಣದಲ್ಲಿ ತಿರುಗಾಡುತ್ತಿರುವ ವೇಳೆ ಅಂತಹ ಯಜ್ಞವೇದಿಯೊಂದನ್ನು ಕಂಡಿದ್ದನು (ಅಪೊಸ್ತಲರ ಕೃತ್ಯಗಳು 17:23). ಹೇಗೂ, ಸುವಾರ್ತೆಯ ಜೊತೆಯಲ್ಲಿ ಧರ್ಮಶಾಸ್ತ್ರಕ್ಕೂ ವಿಧೇಯವಾಗತಕ್ಕದ್ದು ಎಂಬ "ಈ ಬೋಧನೆ" ದೇವರಿಂದ ಹುಟ್ಟಿದ್ದಲ್ಲ ಎಂದು ಆತನು ಹೇಳಿದನು. ವಾಸ್ತವಿಕದಲ್ಲಿ, ಅದು ಸೈತಾನನಿಂದ ಹುಟ್ಟಿದ್ದಾಗಿತ್ತು. ಆ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಕ್ರೈಸ್ತರು ತಮ್ಮನ್ನು "ಸುರಕ್ಷಿತ" ಮಾಡಿಕೊಳ್ಳುವವರಾಗಿರಲಿಲ್ಲ; ಅವರು ತಮ್ಮ ನಿತ್ಯವಾದ ಅಂತ್ಯಾವಸ್ಥೆಯನ್ನೇ ಗಂಡಾಂತರಕ್ಕೀಡು ಮಾಡಿಕೊಳ್ಳುತ್ತಿದ್ದರು (ನೋಡಿರಿ ಗಲಾತ್ಯ 1:6-9; 3:10; 5:2-4).

**ವಚನ 9.** ಅಪೊಸ್ತಲನು ಹೀಗೆ ಎಚ್ಚರಿಕೆ ಕೊಡುತ್ತಾನೆ, **ಸ್ವಲ್ಪ ಹುಳಿಯಿಂದ ಕಣಿಕವೆಲ್ಲಾ ಹುಳಿಯಾಗುವದು.** "ಹಿಟ್ಟಿನ" ಎಂಬ ಪದವು ಈ ಹೇಳಿಕೆಯನ್ನು ಆಧುನಿಕ ವಾಚಕನಿಗೆ ಹೆಚ್ಚು ಅರ್ಥಗರ್ಭಿತಗೊಳಿಸುವದಕ್ಕಾಗಿ NASBಯ ಅನುವಾದಕರು ಸೇರ್ಪಡೆಗೊಳಿಸಿರುತ್ತಾರೆ, ಆಧುನಿಕ ವಾಚಕನು ಎಂದಿಗೂ ರೊಟ್ಟಿಯನ್ನು ಸುಡದೆ ಅಥವಾ ಹಿಟ್ಟಿನಲ್ಲಿ ಹುಳಿಯನ್ನು (ζύμη, *zumē*) ನಾದದೆ ಇರಬಹುದಾಗಿದೆ. "ಕಣಿಕ" (φύραμα, *phurama*) ಎಂಬುದಕ್ಕಿರುವ ಗ್ರೀಕ್ ಪದವು ವಾಸ್ತವಿಕದಲ್ಲಿ "ನೀರಿನೊಂದಿಗೆ ಮಿಶ್ರಣ ಮಾಡಿ ನಾದುವ ಯಾವದೇ ವಸ್ತು"[23] ವನ್ನು ಸೂಚಿಸಬಹುದಾಗಿದೆ. ಅದು ರೋಮಾ 9:21ರಲ್ಲಿ ಮಣ್ಣಿನ "ಕಣಿಕ" ಎಂಬುದಕ್ಕಾಗಿ ಬಳಸಲ್ಪಟ್ಟಿದೆಯಾದರೂ, ಹೊಸ ಒಡಂಬಡಿಕೆಯಲ್ಲಿ ಈ ಪದವು ಕಾಣಿಸಿಕೊಳ್ಳುವ ಪ್ರತಿ ಸಂದರ್ಭಗಳಲ್ಲಿಯೂ ಹಿಟ್ಟನ್ನು ಒಳಗೊಂಡಿರುತ್ತದೆ.[24]

1 ಕೊರಿಂಥ 5:6ರಲ್ಲಿ ಪೌಲನು, ಕುಖ್ಯಾತವಾದ ಲೈಂಗಿಕ ಅನೈತಿಕತೆಯ (πορνεία, *porneia*, "*ಜಾರತ್ವ*") ಪ್ರಕರಣವನ್ನು ಸಭೆಯು ಭಕ್ತಿಹೀನತೆಯಿಂದ ಸಹಿಸಿಕೊಂಡಿರುವದರ ವಿಷಯವಾಗಿ ಅದೇ ರೂಪಕೋಕ್ತಿಯನ್ನು ಬಳಸಿದನು. ಕೊರಿಂಥವು ಬಹಳ ಕೆಟ್ಟ ನಗರವಾಗಿತ್ತು, ಅದೇ ರೀತಿಯೇ ನಮ್ಮ ದಿನದಲ್ಲಿರುವ ಬಂದರು ಪಟ್ಟಣಗಳಿರುತ್ತವಷ್ಟೆ. 1 ಕೊರಿಂಥ 5:1, 2, 6 ವಚನಗಳಿಂದ ಸ್ಪಷ್ಟವಾಗಿರುವದೇನೆಂದರೆ ಸಭೆಯವರು ತಮ್ಮ ಮಧ್ಯದಲ್ಲಿ ನಡೆಯುವ ಅಂತಹ ಪಾಪಗಳ ಬಗ್ಗೆ ಚಿಂತೆಯನ್ನೇ ಮಾಡುತ್ತಿರಲಿಲ್ಲ ಮತ್ತು ಅವರು ವಾಸ್ತವಿಕದಲ್ಲಿ ಅದರ ಕುರಿತು ಹೆಮ್ಮೆಯಿಂದಿದ್ದರು ಮತ್ತು ಹೆಚ್ಚಳ ಪಡುತ್ತಿದ್ದರು. ಸ್ಪಷ್ಟವಾಗಿರುವಂತೆ, ದೇವರ ಕೃಪೆಯು ಎಷ್ಟೊಂದು ದೊಡ್ಡದೆಂದರೆ ಅದು ಈ ರೀತಿಯಾಗಿ ಮುಂದುವರೆಸುವ ಪಾಪಗಳಿಗೆ ಕ್ಷಮೆಯನ್ನು ಕೊಡುವದಾಗಿತ್ತದೆಂದು ಅವರು ವಾದಿಸುತ್ತಿದ್ದರು. ಅಪೊಸ್ತಲನು ಅವರನ್ನು, ಪಾಪ ಮಾಡುತ್ತಿದ್ದವನ ನಿಮಿತ್ತವಾಗಿಯೂ ಸಭಿಕರಲ್ಲಿ ಆತ್ಮೀಕ ಶುದ್ಧತೆಯನ್ನು ಸಂರಕ್ಷಿಸುವದಕ್ಕಾಗಿಯೂ, "ಕರ್ತನಾದ ಯೇಸುವಿನ ಪ್ರತ್ಯಕ್ಷತೆಯ ದಿನದಲ್ಲಿ ಅಂಥವನ ಆತ್ಮವು ರಕ್ಷಣೆ ಹೊಂದುವದಕ್ಕಾಗಿ ಅವನ ಶರೀರಭಾವವು ನಾಶವಾಗಬೇಕೆಂದು ನಮ್ಮ ಕರ್ತನಾದ ಯೇಸುವಿನ ಹೆಸರಿನಲ್ಲಿ ಅವನನ್ನು ಸೈತಾನನಿಗೆ ಒಪ್ಪಿಸಿಕೊಡಬೇಕು" ಎಂದು ಅವರಿಗೆ ಆಜ್ಞಾಪಿಸುತ್ತಾನೆ (1 ಕೊರಿಂಥ 5:5). ಹೀಗೆ ಹೇಳುವದರ ಮೂಲಕವಾಗಿ, ಆತನ ತಾತ್ಪರ್ಯವು ಏನಾಗಿತ್ತದೆಂದರೆ ಆ ವ್ಯಕ್ತಿಯನ್ನು ಪಶ್ಚಾತ್ತಾಪಕ್ಕೆ ನಡಿಸುವ ದೃಷ್ಟಿಯಿಂದ ಮತ್ತು ಅಂಥ ಅನೈತಿಕ ನಡವಳಿಕೆಯು ಪರವಾಗಿಲ್ಲ ಎಂಬ ನಿರ್ಣಯಕ್ಕೆ ಸಭಿಕರು ಬರದಂತೆ ತಡೆಯುವದಕ್ಕೆ ಆತನನ್ನು ಅನ್ಯೋನ್ಯತೆಯಿಂದ ಹೊರಗೆ ಇಡಬೇಕು ಎಂದಾಗಿತ್ತು.

ಹುಳಿಯ ಚಿತ್ರಣವು ವಿಮೋಚನಕಾಂಡ 12:14-20ರಷ್ಟು ಆರಂಭದಲ್ಲಿ ಸಹ ಬೈಬಲಿನಲ್ಲಿ ನಕಾರಾತ್ಮಕ ಅಥವಾ ವಿನಾಶಕಾರಿ ಪ್ರಭಾವವುಳ್ಳದ್ದೆಂದು ಮುಂದಿಡಲ್ಪಟ್ಟಿದೆ.[25] ಅದು ಲೌಕಿಕ ಸಾಹಿತ್ಯದಲ್ಲಿ ಮತ್ತು ರಬ್ಬಿಗಳ ಬಳಕೆ ಎರಡರಲ್ಲಿಯೂ ಗಾದೆಯ ಮಾತಾಗಿತ್ತು. ಗಲಾತ್ಯ 5:9ರಲ್ಲಿ, "ಹುಳಿ"ಯನ್ನು ಕೇಡಿಸುವಂಥ ಪ್ರಭಾವವುಳ್ಳದೆಂದು ಸಹ ಚಿತ್ರಿಸಲಾಗಿದೆ. ಅದು ಗಲಾತ್ಯದ ಸಭೆಗಳಲ್ಲಿ ಧರ್ಮಶಾಸ್ತ್ರದ ವಿಧಿಗಳನ್ನು ಕಡ್ಡಾಯಗೊಳಿಸುವ ಮೂಲಕವಾಗಿ ಸುವಾರ್ತೆಯನ್ನು ಮಾರ್ಪಡಿಸುವದಕ್ಕೆ (1:7) ಪ್ರಯತ್ನಿಸುತ್ತಿದ್ದಂಥ, ಯೆಹೂದಿರಕಣಗೊಳಿಸುವ ವ್ಯಕ್ತಿಗಳ ದೋಷಪೂರಿತ ಬೋಧನೆಯನ್ನು ಸೂಚಿಸುತ್ತದೆ. ಇದು ಅವರಿಗೆ ಒಂದು ಅವರಿಗೆ ಒಂದು ಗಂಡಾಂತರ ಆಗಿದ್ದದ್ದು ಮಾತ್ರವೇ ಅಲ್ಲ, ಆದರೆ ಈ ದೋಷಪೂರಿತ ಬೋಧನೆಯು ಉಪದೇಶ ಮಾಡಲ್ಪಡುವ ಯಾವದೇ ಯುಗ ಮತ್ತು ಯಾವದೇ ಸ್ಥಳದಲ್ಲಿರುವ ಸಭೆಗಳಿಗೂ ಗಂಡಾಂತರಕಾರಿ ಆಗಿರುತ್ತದೆ.

## ಅಪೊಸ್ತಲನ ಪ್ರತಿಕ್ರಿಯೆ (5:10-12)

**[10]ನನಗಂತೂ ನೀವು ಬೇರೆ ಅಭಿಪ್ರಾಯವನ್ನು ಹಿಡಿಯುವದಿಲ್ಲವೆಂದು ಕರ್ತನಲ್ಲಿ ನಿಮ್ಮನ್ನು ಕುರಿತು ಭರವಸ ಉಂಟು. ನಿಮ್ಮಲ್ಲಿ ಭೇದವನ್ನು ಹುಟ್ಟಿಸುವವನು ಯಾವನಾದರೂ ಸರಿಯೇ ಬರುವ ದಂಡನೆಯನ್ನು ಅನುಭವಿಸುವನು. [11]ನಾನಾದರೆ ಸಹೋದರರೇ, ಸುನ್ನತಿಯಾಗಬೇಕೆಂದು ಇನ್ನೂ ಸಾರುವವನಾಗಿದ್ದರೆ ಇನ್ನು ನನಗೆ ಹಿಂಸೆಯಾಗುವದು ಯಾಕೆ? ಆ ಪಕ್ಷದಲ್ಲಿ ಶಿಲುಬೆಯ ದೆಸೆಯಿಂದ ಉಂಟಾದ ಆಕ್ಷೇಪವು ಹೋಯಿತಲ್ಲಾ? [12]ನಿಮ್ಮನ್ನು ಕಳವಳಪಡಿಸುವವರು ಅಂಗಚ್ಛೇದನೆಯನ್ನಾದರೂ ಮಾಡಿಕೊಂಡರೆ ವಾಸಿ.**

**ವಚನ 10.** ಗಲಾತ್ಯದವರು ತಮ್ಮ ತಪ್ಪಿರುವ ದಾರಿಯನ್ನು ಸರಿಪಡಿಸಿಕೊಳ್ಳುವ ಹೊರತು

ಅವರಿಗೆ ಕಾದಿರುವ ಅಶುಭಕರವಾದ ಅಂತ್ಯ ಸ್ಥಿತಿಯ ಕುರಿತಾಗಿ ಪೌಲನು ವಿವರಿಸಿದ ಬಳಿಕ, 10ನೇ ವಚನವು ಚೈತನ್ಯವನ್ನು ನೀಡುವಂಥ ಉಪಶಮನವಾಗಿ ಬರುತ್ತದೆ. ಪೌಲನು ಅವರನ್ನು ಪ್ರೋತ್ಸಾಹಿಸುತ್ತಾ ಹೀಗೆ ಹೇಳಿದನು, **ನನಗಂತೂ ನೀವು ಬೇರೆ ಅಭಿಪ್ರಾಯವನ್ನು ಹಿಡಿಯುವದಿಲ್ಲವೆಂದು ಕರ್ತನಲ್ಲಿ ನಿಮ್ಮನ್ನು ಕುರಿತು ಭರವಸ ಉಂಟು.** ಆತನು ಇನ್ನೂ ಅವರ ಮೇಲಿನ ಭರವಸೆಯನ್ನು ಕೈ ಬಿಟ್ಟಿರಲಿಲ್ಲ ಆದರೆ ಅವರು ಪಶ್ಚಾತ್ತಾಪ ಪಟ್ಟು ಪುನಃ ಅವರ ಮೊದಲಿದ್ದ ಪ್ರೀತಿಗೆ ಹಿಂದಿರುಗುವರೆಂಬ ಭರವಸವು ಆತನಿಗಿತ್ತು. ಹಾಗಿದ್ದರೂ, ಅಪೊಸ್ತಲನ ಭರವಸವು "ಕರ್ತನಲ್ಲಿ" ಆಗಿತ್ತು. ಗಾದೆಯ ಮಾತಿಗೆ ಗುರಿಯಾಗಿದ್ದ ಗಲಾತ್ಯದವರ ಚಂಚಲತನವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವಾಗ, ಇದು ಬಹಳ ಅರ್ಥಮಾಡಿಕೊಳ್ಳಬಹುದಾದ ಸಂಗತಿಯಾಗಿದೆ.

ಅದರಲ್ಲಿ ಯೆಹೂದಿಕರಣಗೊಳಿಸುವವರು ಮಾಡಿದ್ದಷ್ಟು ದೊಡ್ಡ ತಪ್ಪು ಇವರದ್ದಾಗಿರಲಿಲ್ಲ ಎಂದು ಪೌಲನಿಗೆ ಗೊತ್ತಿತ್ತು. ಒಂದು ಕಡೆಯಲ್ಲಿ ಆತನಿಗಿದ್ದ ತೀವ್ರಾಸಕ್ತಿಯ ಕಳವಳ ಮತ್ತು ಇನ್ನೊಂದು ಕಡೆಯಲ್ಲಿ ಆತನ ಕರ್ತನಲ್ಲಿ ಆತನಿಗಿದ್ದ ನಂಬಿಕೆಯ ನಡುವೆ ಸಿಕ್ಕಿಕೊಂಡಿದ್ದನು, ಎರಡನೆಯದ್ದಕ್ಕೆ ಜಯವಾಯಿತು ಮತ್ತು ಅದರಿಂದ ಸ್ಫೂರ್ತಿಗೊಂಡು ಅವರಲ್ಲಿ ಭರವಸವನ್ನು ವ್ಯಕ್ತಪಡಿಸುವವನಾದನು. ಅವರನ್ನು ಆತನ ಮೇಲೆ ಅವರಿಟ್ಟಿದ್ದ ಮೊದಲಿನ ಪ್ರೀತಿಗೆ ಮಾತ್ರವೇ ಅಲ್ಲ ಆದರೆ ಸುವಾರ್ತೆಯ ಸತ್ಯದ ಕುರಿತಾಗಿ ಅವರು ಕೇಳಿದ್ದ ಮುಂಚಿನ ಬೋಧನೆಯ ಕಡೆಗೆ ಸಹ ಹಿಂದಿರುಗುವಂತೆ ಮನವೊಲಿಸುವದಕ್ಕೆ ಸಾಧ್ಯವಿದೆ ಎಂಬ ನಂಬಿಕೆಯು ಆತನಲ್ಲಿ ಉಂಟಾಗಿತ್ತು.

ಈ ವಿಧವಾಗಿ ಭರವಸವನ್ನು ವ್ಯಕ್ತಪಡಿಸುವದರ ಮೂಲಕವಾಗಿ, ಪೌಲನು ಸಂಧಾನಾತ್ಮಕವಾಗಿ ಮತ್ತು ಮನೋಶಾಸ್ತ್ರೀಕವಾಗಿ ಚತುರನಾಗಿದ್ದನು, ಅದು ಇನ್ನೂ ಹೆಚ್ಚಿನದನ್ನು ಪ್ರತಿನಿಧಿಸುವಂತೆ ತೋರುತ್ತದೆ. ಆತನ ಭರವಸವು ಕೇವಲ ಆತನು ಇಷ್ಟಪಡುವಂಥ ಲಕ್ಷ್ಯವನ್ನು ತಲುಪಬೇಕೆಂಬುದಕ್ಕಾಗಿ ಲೆಕ್ಕಾಚಾರದಿಂದ ದಾರಿ ಮಾತ್ರವೇ ಆಗಿರಲಿಲ್ಲ, ಆದರೆ ಬದಲಾಗಿ ಈ ಶ್ರೇಷ್ಠ ಅಪೊಸ್ತಲನ ವೈಶಿಷ್ಟ್ಯವಾಗಿದ್ದ ಆಳವಾದ ಆತ್ಮೀಕತೆ ಮತ್ತು ಸತ್ಯವಂತಿಕೆಯ ಒಂದು ಪ್ರತಿಫಲನವಾಗಿತ್ತಷ್ಟೆ. ಆ ನಂಬಿಕೆಯ ಜಯವೇ ಅತನ ಜೀವಿತವನ್ನು ನಿರಂತರವಾಗಿ ಸ್ಫೂರ್ತಿಗೊಳಿಸುತ್ತಿತ್ತು ಮತ್ತು ನಿಯಂತ್ರಿಸುವದಾಗಿತ್ತು.

ಈ ಕಾಲಘಟ್ಟದಲ್ಲಿ, ಪೌಲನು ತಾನು ಕ್ರಿಸ್ತನಲ್ಲಿ ಜನ್ಮ ಕೊಟ್ಟಿದ್ದ ಪ್ರಿಯರಾದ ಸಹೋದರರ (4:19) ಮತ್ತು ಅವರನ್ನು ಅಷ್ಟೊಂದು ಘೋರವಾದ ತಪ್ಪಿನೊಳಗೆ ನಡಿಸಿದವರ ನಡುವೆ ಗೂಟವನ್ನು ಜಡಿದನು: **ನಿಮ್ಮಲ್ಲಿ ಭೇದವನ್ನು ಹುಟ್ಟಿಸುವವನು ಯಾವನಾದರೂ ಸರಿಯೇ ಬರುವ ದಂಡನೆಯನ್ನು ಅನುಭವಿಸುವನು.** ವಿವೇಕಯುತನಾಗಿ, ಪೌಲನು ಇಲ್ಲಿ ಯಾರ ಹೆಸರುಗಳನ್ನೂ ಪ್ರಸ್ತಾಪಿಸಲಿಲ್ಲ. ಬದಲಾಗಿ, ಆತನು ತನ್ನ ಅಧಿಕಾರವನ್ನು ಕಡಿಸುವದಕ್ಕೆ ಮತ್ತು ಆತನ ಆತ್ಮೀಕ ಮಕ್ಕಳನ್ನು ತಮ್ಮೊಂದಿಗೆ ಕೂಡಿಸಿಕೊಳ್ಳುವದಕ್ಕಾಗಿ ಆತನಿಂದ ದೂರವಾಗಿ ಸೆಳೆಯಲು ಪ್ರಯತ್ನಿಸುವವರ ವಿಷಯದಲ್ಲಿ ಹೆಸರು ಹೇಳದೆ ಮಾತಾಡಿದನು. ಈ ಮುಂಚಿನ ಅಧ್ಯಾಯಗಳಲ್ಲಿ ಸಹ ಕಂಡು ಬಂದ, ಆತನ ಕೋಪವು ಸಂಪೂರ್ಣ ಅರ್ಥಮಾಡಿಕೊಳ್ಳಬಹುದಾಗಿತ್ತು. ಯಾರಾದರೊಬ್ಬರು ತನ್ನ ಮಕ್ಕಳಿಗೆ ಹಾನಿಯನ್ನುಂಟು ಮಾಡುವದಕ್ಕೆ ಅಥವಾ ಆತನಿಂದ ಅವರನ್ನು ದೂರ ಮಾಡುವದಕ್ಕೆ ಪ್ರಯತ್ನಿಸುವದನ್ನು ಕಂಡರೆ, ಯಾವ ತಂದೆಯು ಕೋಪದಿಂದ ಪ್ರತಿಕ್ರಿಯಿಸಿ ಅವರನ್ನು ಕಾಪಾಡಲು ಪ್ರಯತ್ನಿಸದೆ ಇರುವದಕ್ಕೆ ಸಾಧ್ಯ?

**ವಚನ 11.** ಅಪೊಸ್ತಲನು ಹೀಗೆ ವಿಚಾರಿಸಿದನು, **ನಾನಾದರೆ ಸಹೋದರರೇ, ಸುನ್ನತಿಯಾಗಬೇಕೆಂದು ಇನ್ನೂ ಸಾರುವವನಾಗಿದ್ದರೆ ಇನ್ನು ನನಗೆ ಹಿಂಸೆಯಾಗುವದು ಯಾಕೆ?**

ಆತನು ಏಕೆ ಮಧ್ಯದಲ್ಲಿ ಏಕಾಏಕಿ ಈ ಪ್ರಶ್ನೆಯನ್ನು ಕೇಳಿದನು? ಆತನು ಮಾಡುವ ಉಪದೇಶ ಮತ್ತು ಆಚರಣೆಯಲ್ಲಿ ಸಾಮಂಜಸ್ಯತೆಯೇ ಇಲ್ಲ ಎಂಬಂತೆ ಬಿಂಬಿಸುವದಕ್ಕಾಗಿ ಆತನ ವಿರೋಧಿಗಳು ಆತನು ಈಗಲೂ ಸುನ್ನತಿ ಮಾಡಿಸಿಕೊಳ್ಳಬೇಕೆಂದು ಬೋಧಿಸುತ್ತಿದ್ದಾನೆಂಬುದಾಗಿ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಿರಬಹುದಾಗಿದೆ. Kenneth L. Bolesನ ಪ್ರಕಾರವಾಗಿ, "ಮಾತಾಡುವವನು ಹೇಳಿಕೆಯನ್ನು ವಾಸ್ತವಿಕತೆಯಿಂದ ಕೂಡಿದ್ದೆಂಬುದನ್ನು ಅಂಗೀಕರಿಸಿಕೊಳ್ಳದಿರುವ ವೇಳೆಯಲ್ಲಿ, ಆದರೆ ಇತರರು ಹಾಗಿರುವದೆಂದು ಆರೋಪಿಸಿರುತ್ತಾರೆಂಬುದನ್ನು ಒಪ್ಪಿಕೊಳ್ಳುವಾಗ 'ಆಗಿದ್ದರೆ' (*ಎಯಿ*) ಎಂಬ ಪದವು ಸತತವಾಗಿ ಬಳಸಲ್ಪಡುತ್ತದೆ (ಉದಾಹರಣೆಗೆ ಯೇಸುವು ಹೀಗೆ ಹೇಳಿದನು, 'ನಾನು ಬೆಲ್ಜೆಬೂಲನ ಬಲದಿಂದ ದೆವ್ವಗಳನ್ನು ಬಿಡಿಸುವದಾದರೆ . . .')."[26]

"ಸುನ್ನತಿಯಾಗಬೇಕೆಂದು ಇನ್ನೂ ಸಾರುವವನಾಗಿದ್ದರೆ" ಎಂದು ಹೇಳುವ ಮೂಲಕ, ತಾನು *ಈ ಮುಂಚೆ* ಸುನ್ನತಿಯ ಬಗ್ಗೆ ಬೋಧಿಸುತ್ತಿದ್ದನೆಂಬುದನ್ನು ಒಪ್ಪಿಕೊಂಡನು. ವಾಸ್ತವಿಕದಲ್ಲಿ, ಒಬ್ಬ ಫರಿಸಾಯ ಮತ್ತು ಮುಂಚೆ ರಬ್ಬಿಗಳ ವಿದ್ಯಾರ್ಥಿಯಾಗಿದ್ದವನಾಗಿ (ಅಪೊಸ್ತಲರ ಕೃತ್ಯಗಳು 22:3; 23:6; 26:5), ಆತನು ತನ್ನ ಪಿತೃಗಳ ಸಂಪ್ರದಾಯಿಕ ನಂಬಿಕೆಗೆ ನಂಬಿಗಸ್ತನಾಗಿಲ್ಲದ ಯಾವದೇ "ಪಾಷಂಡಿ"ಯನ್ನು ಮನಸಾರೆ ಬಂಧಿಸಿದ್ದನು ಮತ್ತು ಆತನ ಮರಣಕ್ಕೆ ಸಮ್ಮತಿಸಿದ್ದನು (ಅಪೊಸ್ತಲರ ಕೃತ್ಯಗಳು 9:1, 2; 26:10). ಈ ಧಾರ್ಮಿಕ ವಿಧಿಯು ಅವಶ್ಯಕವೆಂಬುದನ್ನು ಆತನು ಇನ್ನೂ ಬೋಧಿಸುತ್ತಿದ್ದಲ್ಲಿ, ನಂಬಿಕೆಯಿಲ್ಲದ ಯೆಹೂದ್ಯರಿಗೆ ಆತನನ್ನು ಹಿಂಸೆ ಮಾಡುವದಕ್ಕೆ ಕಾರಣವೇ ಇರುತ್ತಿರಲಿಲ್ಲ. ಅಷ್ಟುಮಾತ್ರವಲ್ಲದೆ, ವಿಶ್ವಾಸಿಸುವ ಯೆಹೂದ್ಯರಿಗೆ ಆತನನ್ನು ವಿರೋಧಿಸುವದಕ್ಕೆ ಯಾವ ನೆಲೆಗಳೂ ಇರುತ್ತಿರಲಿಲ್ಲ.[27] ಅದೇ ರೀತಿಯಲ್ಲಿ ಗಲಾತ್ಯದಲ್ಲಿ ಅಥವಾ ಬೇರೆ ಯಾವದೇ ಸ್ಥಳದಲ್ಲಾಗಲಿ ಪೌಲನು ಮಾಡಿದ್ದ ಸೇವೆಯನ್ನು ಕೆಡಿಸುವದು ಯೆಹೂದಿಕರಣಗೊಳಿಸುವವರಿಗೆ ಅನಾವಶ್ಯಕವಾಗಿರುತ್ತಿತ್ತು.

ಪೌಲನು ಸುನ್ನತಿಯಾಗಬೇಕೆಂದು ಬೋಧಿಸುತ್ತಿರಲಿಲ್ಲ. ವಾಸ್ತವಿಕದಲ್ಲಿ, ಸುನ್ನತಿಯನ್ನು ಮಾಡಿಸಿಕೊಳ್ಳಬೇಕೆಂದು ಬೋಧಿಸುವದು ಆತನು ಸ್ಥಾಪಿಸಿದ ಸಭೆಗಳಲ್ಲಿ ಆತನು ಸಂಪೂರ್ಣವಾಗಿ ಸಹಿಸಿಕೊಳ್ಳದ ಸಂಗತಿಯಾಗಿತ್ತು (ನೋಡಿರಿ 2:3; ಅಪೊಸ್ತಲರ ಕೃತ್ಯಗಳು 15:1, 2). ಯೆರೂಸಲೇಮಿನಲ್ಲಿ ಅಪೊಸ್ತಲರು ಹಾಗೂ ಹಿರಿಯರು ಸಮಾಲೋಚನೆ ಸಭೆಯನ್ನು ನಡಿಸುವದಕ್ಕೆ ಸಂದರ್ಭವನ್ನು ಒದಗಿಸಿದ್ದು ಇದೇ ವಿಚಾರವೇ ಆಗಿತ್ತು. ಆತನು ಸುನ್ನತಿಯಾಗಬೇಕೆಂದು ಈಗಲೂ ಬೋಧಿಸುತ್ತಿದ್ದದ್ದು ನಿಜವೇ ಆಗಿದ್ದಲ್ಲಿ, ಆತನನ್ನು ಏಕೆ ಈಗಲೂ ಹಿಂಸೆ ಪಡಿಸಲಾಗುತ್ತಿತ್ತು? ಈ ಪ್ರಶ್ನೆಗೆ ಯಾವದೇ ತಾರ್ಕಿಕ ಉತ್ತರವನ್ನು ಕೊಡುವದಕ್ಕೆ ಸಾಧ್ಯವಾಗದಿರಬಹುದು. ಈ ಪತ್ರಿಕೆಯು ಯೆರೂಸಲೇಮಿನಲ್ಲಿ ಸಮಾಲೋಚನೆ ಸಭೆಯು ನಡಿಸಲ್ಪಡುವದಕ್ಕೆ ಸ್ವಲ್ಪ ಮುಂಚೆ ಬರೆಯಲ್ಪಟ್ಟಿರುವದಾದರೆ, ಪೌಲನು ಮಾಡಿದ ಸುವಾರ್ತಾ ಪ್ರಯಾಣಗಳಲ್ಲಿ ಮೊದಲನೆಯದ್ದಷ್ಟೇ ಮುಗಿದಿರುವದಾಗಿತ್ತು. ಈ ವೇಳೆಯಲ್ಲಿ, ಆತನು ಮತ್ತು ಬಾರ್ನಬ ಕಠೋರವಾದ ಹಿಂಸೆಯನ್ನು ಅನುಭವಿಸಿದ್ದರು (ಅಪೊಸ್ತಲರ ಕೃತ್ಯಗಳು 13:50; 14:5, 6); ಒಂದು ಸಾರಿ ಕಲ್ಲುಗಳಿಂದ ಸಹ ಹೊಡೆಯಲ್ಪಟ್ಟು ಸತ್ತನೆಂದು ಬಿಟ್ಟು ಹೋಗಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 14:19). ಇನ್ನೂ ಅತ್ಯಧಿಕವಾದ ಹಿಂಸೆಯು ಮುಂದೆ ಬರುವದಿತ್ತು.

ಆತನು ಸುನ್ನತಿಯಾಗಬೇಕೆಂದು ಇನ್ನೂ ಸಾರುತ್ತಿದ್ದದ್ದು ನಿಜವೇ ಆಗಿದ್ದರೆ, ಪೌಲನು ಹೀಗೆ ಹೇಳುತ್ತಾನೆ, **ಆ ಪಕ್ಷದಲ್ಲಿ ಶಿಲುಬೆಯ ದೆಸೆಯಿಂದ ಉಂಟಾದ ಆಕ್ಷೇಪವು ಹೋಯಿತಲ್ಲಾ?**[28] NRSVಯು ಹೀಗೆ ಅನುವಾದಿಸುತ್ತದೆ, "ಆ ಪಕ್ಷದಲ್ಲಿ ಶಿಲುಬೆಯ ವಿಘ್ನವು ನೀಗಿಸಲ್ಪಟ್ಟಿದೆ

ಎಂದಾಯಿತು." ಅಪೊಸ್ತಲನು ಸುನ್ನತಿ ಸಂದೇಶ (ಧರ್ಮಶಾಸ್ತ್ರ) ಮತ್ತು ಶಿಲುಬೆಯ ಸಂದೇಶ (ಸುವಾರ್ತೆ) ಪರಸ್ಪರ ಪ್ರತ್ಯೇಕ ಆಗಿರುತ್ತವೆಂಬುದನ್ನು ತಿಳಿಯಪಡಿಸುತ್ತಿದ್ದಾನೆಂಬುದು ಸ್ಪಷ್ಟವಾಗಿರುತ್ತದೆ. NLTಯು ಹೀಗೆ ಹೇಳಿತ್ತದೆ, "ನಾನು ಇನ್ನು ಮೇಲೆ ರಕ್ಷಣೆಯು ಕ್ರಿಸ್ತನ ಶಿಲುಬೆಯ ಮೂಲಕವಾಗಿ ಸಿಕ್ಕುತ್ತದೆಂದು ಸಾರುತ್ತಿಲ್ಲವಾದರೆ, ಯಾವನೂ ಮನನೋಯಿಸಲ್ಪಡುವದಿಲ್ಲ."

"ಆಕ್ಷೇಪಣೆ"ಯ (ಅಥವಾ "ಮನನೋಯಿಸಲ್ಪಡುವಿಕೆ") ಭಾವನೆಯು ಬೈಬಲಿನಲ್ಲಿ ಆಳವಾಗಿ ಬೇರೂರಿರುತ್ತದೆ. ಅದು ಗ್ರೀಕ್ ನಾಮಪದ σκάνδαλον (*skandalon*) ಎಂಬದರಿಂದ ಬರುತ್ತದೆ ಮತ್ತು ಅದಕ್ಕೆ ಸಂಬಂಧಪಟ್ಟ ಕ್ರಿಯಾಪದವು σκανδαλίζω (*skandalizō*) ಎಂದಾಗಿದ್ದು, ಅದರಿಂದಲೇ ಆಂಗ್ಲದ "ಸ್ಕ್ಯಾಂಡಲ" ಮತ್ತು "ಸ್ಕ್ಯಾಂಡಲೈಜ್" ಎಂಬ ಪದಗಳು ಬಂದಿರುತ್ತವೆ. ಈ ಪದಗಳಲ್ಲಿ ಒಬ್ಬನನ್ನು ಎಡವುವಂತೆ ಮಾಡುವದು, ಆತನನ್ನು ಬೀಳುವಂತೆ ಮಾಡುವದು ಎಂಬ ಯೋಚನೆಯು ಅಡಕವಾಗಿರುತ್ತದೆ. *ಸ್ಕಂಡಾಲೊನ* ಎಂಬ ಪದವು LXXನಲ್ಲಿ מִכְשׁוֹל (*mikshol*) ಎಂಬ ಇಬ್ರಿಯ ಪದವನ್ನು ಅನುವಾದಿಸುವದಕ್ಕೆ ಬಳಸಲ್ಪಟ್ಟಿರುತ್ತದೆ, ಈ ಪದದ ಅರ್ಥವು "ಎಡವುವ ಕಲ್ಲು"[29] ಎಂದಾಗಿರುತ್ತದೆ. ಉದಾಹರಣೆಗೆ, ಯಾಜಕಕಾಂಡ 19:14ರಲ್ಲಿ ಅದು ಬಳಸಲ್ಪಟ್ಟಿದೆ, ಅಲ್ಲಿ ದೇವರು ಇಸ್ರಾಯೇಲ್ಯರಿಗೆ "ಕುರುಡರು ನಡೆಯುವ ದಾರಿಯಲ್ಲಿ ಕಾಲು ಎಡವುವಂತೆ ಕಲ್ಲನ್ನು" ಇಡಬಾರದೆಂದು ಅಪ್ಪಣೆ ಕೊಡುತ್ತಾನೆ, ಮತ್ತು ಕೀರ್ತನೆ 119:165ರಲ್ಲಿ ಬಳಸಲ್ಪಟ್ಟಿದೆ, ಅದು ಹೀಗೆ ಹೇಳುತ್ತದೆ, "[ನಿನ್ನ ಧರ್ಮಶಾಸ್ತ್ರವನ್ನು ಪ್ರೀತಿಸುವವರಿಗೆ] ವಿಘ್ನಕರವಾದದ್ದೇನೂ ಇರುವದಿಲ್ಲ."

5:11ರಲ್ಲಿ, ಉಲ್ಲೇಖಿಸಲ್ಪಟ್ಟಿರುವ "ಆಕ್ಷೇಪಣೆ"ಯು ಕ್ರಿಸ್ತನ "ಶಿಲುಬೆ"ಯೇ. ಪೌಲನು ಕೊರಿಂಥದವರಿಗೆ ಅನಂತರದಲ್ಲಿ ಹೀಗೆ ಬರೆದನು,

> ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚುಮಾತಾಗಿದೆ, ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ . . . ಯೆಹೂದ್ಯರು ಸೂಚಕಕಾರ್ಯಗಳನ್ನು ಕೇಳುತ್ತಾರೆ, ಗ್ರೀಕರು ಜ್ಞಾನವನ್ನು ಹುಡುಕುತ್ತಾರೆ; ನಾವಾದರೋ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ. ಇಂಥ ಕ್ರಿಸ್ತನ ಸಂಗತಿಯು ಯೆಹೂದ್ಯರಿಗೆ *ವಿಘ್ನವೂ* ಅನ್ಯಜನರಿಗೆ ಹುಚ್ಚುಮಾತೂ ಆಗಿದೆ (1 ಕೊರಿಂಥ 1:18-23; ಒತ್ತಿ ಹೇಳಿದ್ದು ನನ್ನದು).

ಯೆಹೂದ್ಯನಾಗಲಿ ಅಥವಾ ಅನ್ಯಜನಾಂಗದವನಾಗಲಿ ಅಧಿಕೃತವಾಗಿ ತೀರ್ಪು ಮಾಡಲ್ಪಟ್ಟು ಮರಣದಂಡನೆಗೆ ಗುರಿಯಾಗಿರುವ ಅಪರಾಧಿಯೊಬ್ಬನು ಹೇಗೆ ಯಾವನನ್ನಾದರೂ ರಕ್ಷಿಸಬಲ್ಲನು ಎಂಬುದನ್ನು ಗ್ರಹಿಸಿಕೊಳ್ಳಲು ಶಕ್ತರಾಗಲಿಲ್ಲ. ಈ ಯೋಚನೆಯನ್ನು ಬಹಳಷ್ಟು ಜನರು ವಿಚಿತ್ರವೆಂದು ಕಂಡರು. ಶಿಲುಬೆಯ ಸಂದೇಶವು ದೇಹದ ಪುನರುತ್ಥಾನವನ್ನು ಸಹ ಒಳಗೊಂಡಿತ್ತು, ಅದು ವಿಶೇಷವಾಗಿ ಗ್ರೀಕರಿಗೆ ಹಾಸ್ಯಾಸ್ಪದವಾಗಿತ್ತು. ಪೌಲನು ಅರಿಯೋಪಾಗದಲ್ಲಿ ಬೋಧಿಸುವದನ್ನು ಕೇಳಿದ ಅಥೇನೆಯ ತತ್ವಜ್ಞಾನಿಗಳು ನೀಡಿದ ಪ್ರತಿಕ್ರಿಯೆಯಿಂದ ಈ ವಿಷಯವು ಸ್ಪಷ್ಟಗೊಳ್ಳುತ್ತದೆ (ಅಪೊಸ್ತಲರ ಕೃತ್ಯಗಳು 17:32). ಬಹುಶಃ, ಯಾವದೇ ವಿದ್ಯಾವಂತ ಗ್ರೀಕನು ಅದೇ ನಿರ್ಣಯಕ್ಕೆ ಬಂದಿರುತ್ತಿದ್ದನು. ಧರ್ಮೋಪದೇಶಕಾಂಡ 21:23ರಲ್ಲಿ ಮೋಶೆಯು ನೀಡಿದ ಹೇಳಿಕೆಯು ಯೆಹೂದ್ಯರಿಗೆ ಗೊತ್ತಿತ್ತು, ಅದನ್ನೇ ಪೌಲನು ಗಲಾತ್ಯ 3:13ರಲ್ಲಿ ಉಲ್ಲೇಖಿಸುತ್ತಾನೆ: "ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು."[30] ಎಂತಹ ಒಂದು "ಆಕ್ಷೇಪಣೆ"! ಯೆಹೂದ್ಯರು ಶಿಲುಬೆಯ ಸಂದೇಶಕ್ಕೆ ಎಡವಿ

ಬಿದ್ದರು ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ.

**ವಚನ 12.** ಕಠೋರವಾದ ಭಾಷೆಯನ್ನು ಬಳಸುವವನಾಗಿ, ಪೌಲನು ಯೆಹೂದಿಕರಣಗೊಳಿಸುವವರಿಗೆ ಹೀಗೆ ಹೇಳಿದನು, **ನಿಮ್ಮನ್ನು ಕಳವಳಪಡಿಸುವವರು ಅಂಗಚ್ಛೇದನೆಯನ್ನಾದರೂ ಮಾಡಿಕೊಂಡರೆ ವಾಸಿ.** "ಅಂಗಚ್ಛೇದನೆ" ಎಂಬುದಕ್ಕಿರುವ ಗ್ರೀಕ್ ಪದ ἀποκόπτω (*apokoptō*) ಎಂಬುದು, ಅದರ ಅಕ್ಷರಶಃ ಅರ್ಥವು "ಕತ್ತರಿಸು" ಅಥವಾ "ಕತ್ತರಿಸಿ ತೆಗೆ" ಎಂದಾಗಿದೆ. ಈ ಪದವನ್ನು ಹೇಗೆ ಅರ್ಥಮಾಡಿಕೊಳ್ಳತಕ್ಕದ್ದು?

ಹಳೆಯ ಒಡಂಬಡಿಕೆಯಲ್ಲಿ, "ಕತ್ತರಿಸು" ಎಂಬುದು ಅನೇಕ ಸಾರಿ ಒಬ್ಬನನ್ನು ಆತನನ ಜನರಿಂದ ಅಥವಾ ಜೀವಿಸುವವರ ದೇಶದಿಂದ ಅಗಲಿ ಹೋಗುವಂತೆ ಮಾಡುವದನ್ನು ಸೂಚಿಸುತ್ತದೆ, ಅದು ಮರಣ ದಂಡನೆಯನ್ನು ತಿಳಿಸುವದಾಗಿದೆ. ಅದು ಒಂದು ಪಟ್ಟಣದ ನಾಶನವನ್ನು ಅಥವಾ ಇಡೀ ಜನಾಂಗದ ನಾಶನವನ್ನು ಬಣ್ಣಿಸಬಹುದಾಗಿದೆ. ಹೇಗೂ, ಇದಕ್ಕಾಗಿ LXXನಲ್ಲಿ ಸಂಪೂರ್ಣ ವ್ಯತ್ಯಾಸವಾದ ಗ್ರೀಕ್ ಪದವು (ἀπόλλυμι, *apollumi*, ಅಥವಾ ἀποολλύω, *apolluō*) ಬಳಸಲ್ಪಟ್ಟಿದೆ. 5:12ರಲ್ಲಿ ಪೌಲನು ಬಳಸಿದ ಪದವು (*apokoptō*) LXX ಅದಕ್ಕೆ ಹೋಲಿಸಿದರೆ ವಿರಳವಾಗಿರುತ್ತದೆ. ಅದು ಕಾಣಿಸಿಕೊಂಡದ್ದೇ ಆದಲ್ಲಿ, ಅದು ಅನೇಕ ಸಾರಿ ಒಬ್ಬ ದೇಹದ ಅಂಗವೊಂದನ್ನು, ಉದಾಹರಣೆಗೆ ಹೆಬ್ಬೆರಳು, ಕಾಲಿನ ಹೆಬ್ಬೆರಳು, ಅಥವಾ ಕೈಯನ್ನು ಕಡಿದು ಹಾಕುವದನ್ನು ಸೂಚಿಸುತ್ತದೆ (ಧರ್ಮೋಪದೇಶಕಾಂಡ 25:12; ನ್ಯಾಯಸ್ಥಾಪರು 1:6, 7). ಒಂದು ಸಾರಿ ಅದು ಮನುಷ್ಯರನ್ನು ನಾಚಿಕೆಗೆ ಗುರಿಪಡಿಸುವದಕ್ಕಾಗಿ ಅವರ ವಸ್ತ್ರವನ್ನು ಕತ್ತರಿಸಿ ಹಾಕುವದನ್ನು ಸೂಚಿಸಲು ಬಳಸಲ್ಪಟ್ಟಿದೆ (2 ಸಮುವೇಲ 10:4, 5) ಮತ್ತು ಒಂದು ಸಂದರ್ಭದಲ್ಲಿ ಅದು ದ್ರಾಕ್ಷಿ-ಪಾಲಕನು ತನ್ನ ದ್ರಾಕ್ಷೇ ಬಳ್ಳಿಗಳನ್ನು ಕತ್ತರಿಸಿ ಓರಣಗೊಳಿಸುವದನ್ನು ಸೂಚಿಸುತ್ತದೆ (ಯೆಶಾಯ 18:5). ಧರ್ಮೋಪದೇಶಕಾಂಡ 23:1ರಲ್ಲಿ ಈ ಪದದ ಅರ್ಥವನ್ನು ಅರ್ಥಮಾಡಿಕೊಳ್ಳುವದಕ್ಕಾಗಿ LXXನಲ್ಲಿ ಈ ಪದವು ಅತ್ಯಂಥ ಪ್ರಸ್ತುತವಾಗುವ ರೀತಿಯಲ್ಲಿ ಕಾಣಿಸಿಕೊಳ್ಳುವಿಕೆಯು ಯಾವದೆಂದರೆ, ಅಲ್ಲಿ ಅದು ಒಬ್ಬ ಕಂಚುಕಿಯಾಗಿರುವ ಮನುಷ್ಯನನ್ನು ಉಲ್ಲೇಖಿಸುತ್ತದೆ.[31]

ಈ ಹಿನ್ನಲೆಯನ್ನು ದೃಷ್ಟಿಯಲ್ಲಿಟ್ಟು ನೋಡುವದಾದರೆ, ಪೌಲನು ರೂಪಕಾರ್ಥದಲ್ಲಿ ಮಾತಾಡುತ್ತಿಲ್ಲ ಆದರೆ ಯೆಹೂದಿಕರಣಗೊಳಿಸುವವರು ವಾಸ್ತವಿಕದಲ್ಲಿ ತಮ್ಮ "ಅಂಗಚ್ಛೇದಮಾಡಿಕೊಂಡರೆ" ಚೆನ್ನಾಗಿರುತ್ತದೆ ಎಂದು ಹಾರೈಸುತ್ತಿದ್ದಾನೆಂಬುದನ್ನು ಸ್ಪಷ್ಟವಾಗಿರುತ್ತದೆ. ಈ ಭಾಷೆಯು ಆತನು ಯೆಹೂದಿಕರಣಗೊಳಿಸುವವರ ಕುರಿತು ಫಿಲಿಪ್ಪಿ 3:2, 3ರಲ್ಲಿ ಬರೆದ ಮಾತುಗಳ ರೀತಿಯಲ್ಲಿಯೇ ಇರುತ್ತದೆ: "ಆ ನಾಯಿಗಳಿಗೆ ಎಚ್ಚರಿಕೆಯಾಗಿರಿ; ದುರ್ಮನಸ್ಸಿನಿಂದ ಕೆಲಸಮಾಡುವವರಿಗೆ ಎಚ್ಚರಿಕೆಯಾಗಿರಿ. *ಸುನ್ನತಿಯೆಂದು* ಹೇಳಿಕೊಂಡು ಅಂಗಚ್ಛೇದನ ಮಾಡುವವರಿಗೆ ಎಚ್ಚರಿಕೆಯಾಗಿರಿ. *ನಿಜವಾದ ಸುನ್ನತಿಯವರು* ಯಾರಂದರೆ - ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತ ಯೇಸುವಿನಲ್ಲಿ ಹರ್ಷಗೊಳ್ಳುವವರೂ ಶರೀರಸಂಬಂಧವಾದವುಗಳಲ್ಲಿ ಭರವಸವಿಲ್ಲದವರೂ ಆಗಿರುವ ನಾವೇ" (ಒತ್ತಿ ಹೇಳಿದ್ದು ನನ್ನದು). "ನಿಜ" ಎಂಬ ಮಾತು ಮೂಲವಾಕ್ಯದಲ್ಲಿ ಇಲ್ಲವಾದರೂ, ಈ ಅನುವಾದವು ಗೌರವವುಳ್ಳದ್ದು ಮತ್ತು ಮನನೋಯಿಸದಂತದ್ದಾಗಿದ್ದು, ಗ್ರೀಕ್ ವಾಕ್ಯದಲ್ಲಿರುವ ಶಬ್ದಾಡಂಬರವನ್ನು ಬಹಳ ಚೆನ್ನಾಗಿ ಸೆರೆ ಹಿಡಿಯುತ್ತದೆ.[32] "ಸುಳ್ಳು ಸುನ್ನತಿ" (κατατομή, *katatomē*) ಎಂಬದರ ಹೆಚ್ಚು ಅಕ್ಷರಶಃ ಅರ್ಥವು "ಅಂಗಚ್ಛೇದನ" ("ಕತ್ತರಿಸಿ ಹಾಕು") ಎಂದಾಗಿದ್ದರೆ, "ನಿಜವಾದ ಸುನ್ನತಿ" ಎಂಬುದನ್ನು ಅನುವಾದಿಸಿರುವ ಪದದ (περιτομὴ, *peritomē*) ಅಕ್ಷರಶಃ ಅರ್ಥವು "ಸುನ್ನತಿ" ("ಸುತ್ತಲು ಕತ್ತರಿಸು") ಎಂದಾಗಿರುತ್ತದೆ.

ಆಧುನಿಕ ವಾಚಕರಿಗೆ ಈ ವಾಕ್ಯಭಾಗಗಳು ಇಷ್ಟವಾಗದಿರಬಹುದಾದರೂ, ತನ್ನ ಆನ್ಯಜನಾಂಗದ ಸಹೋದರರಿಗೆ ಸುನ್ನತಿಯಾಗಬೇಕೆಂದು ಬೇಡಿಕೆಯನ್ನಿಟ್ಟು ಅವರ ದೇಹವನ್ನು ಕತ್ತರಿಸುವದು ಮಾತ್ರವೇ ಅಲ್ಲ, ಆದರೆ ಶುದ್ಧ ಸುವಾರ್ತೆಯನ್ನು ಕತ್ತರಿಸುವ ಮೂಲಕ ಇನ್ನೂ ಘೋರವಾದದ್ದನ್ನು ಸಹ ಮಾಡುವವರಾಗಿದ್ದ ಜನರ ಕಡೆಗೆ ಪೌಲನಿಗಿದ್ದ ಆಳವಾದ ಹಗೆತನವನ್ನು ಸುಸ್ಪಷ್ಟವಾಗಿ ತೋರಿಸುತ್ತದೆ (ನೋಡಿರಿ 1:6, 7). ಯೆಹೂದಿಕರಣಗೊಳಿಸುವವರ ಕೃರ್ಯಗಳಿಂದಾಗುವ ಗಂಭೀರವಾದ ಪರಿಣಾಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಈಗ ಆಹ್ಲಾದಕರ ಮಾತುಗಳನ್ನಾಡುವ ಸಮಯವಲ್ಲ, ಆದರೆ ಬದಲಾಗಿ ಸತ್ಯದ ಪೂರ್ಣ ಪರಿಣಾಮವನ್ನು ತಿಳಿಸಿ ತನ್ನ ವಾಚಕರಿಗೆ ಆಘಾತವನ್ನುಂಟು ಮಾಡಬೇಕೆಂದು ಪೌಲನು ನಿರ್ಧರಿಸಿಕೊಂಡನು.

## "ಸ್ವತಂತ್ರರಾಗಿರಬೇಕೆಂದು ಕರೆದನು" (5:13-15)

**[13]ಸಹೋದರರೇ, ನೀವು ಸ್ವತಂತ್ರರಾಗಿರಬೇಕೆಂದು ದೇವರು ನಿಮ್ಮನ್ನು ಕರೆದನು. ಆದರೆ ನಿಮಗಿರುವ ಸ್ವಾತಂತ್ರ್ಯವನ್ನು ಶರೀರಾಧೀನಸ್ವಭಾವಕ್ಕೆ ಆಸ್ಪದವಾಗಿ ಬಳಸದೆ ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡಿರಿ. [14]ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು ಎಂಬ ಒಂದೇ ಮಾತಿನಲ್ಲಿ ಧರ್ಮಶಾಸ್ತ್ರವೆಲ್ಲಾ ಅಡಕವಾಗಿದೆ. [15]ಆದರೆ ನೀವು ಒಬ್ಬರನ್ನೊಬ್ಬರು ಕಚ್ಚಿ ಹರಕೊಂಡು ನುಂಗುವವರಾದರೆ ಒಬ್ಬರಿಂದೊಬ್ಬರು ನಾಶವಾದೀರಿ, ನೋಡಿರಿ.**

**ವಚನ 13.** ಪೌಲನು ಹೀಗೆ ಬರೆದನು, **ಸಹೋದರರೇ, ನೀವು ಸ್ವತಂತ್ರರಾಗಿರಬೇಕೆಂದು ದೇವರು ನಿಮ್ಮನ್ನು ಕರೆದನು.** "ಯಾಕೆಂದರೆ" (*γάρ*, *gar*) ಸಂಬಂಧಾವ್ಯಯವು ಮುಂಚಿನ ವಚನದಲ್ಲಿ ಹೇಳಲ್ಪಟ್ಟ ಸಂಗತಿಗೆ ಕಾರಣವನ್ನು ಪರಿಚಯಿಸುತ್ತದೆ. ಗಲಾತ್ಯದವರನ್ನು ಕ್ರಿಸ್ತನಲ್ಲಿ ಅವರು ಹೊಸದಾಗಿ ಕಂಡುಕೊಂಡಿದ್ದ ಸ್ವಾತಂತ್ರ್ಯದಿಂದ ದೂರವಾಗಿ ಧರ್ಮಶಾಸ್ತ್ರದ ದಾಸತ್ವದೊಳಗೆ ನಡಿಸಲು ಪ್ರಯತ್ನಿಸುತ್ತಿದ್ದ ಯೆಹೂದಿಕರಣಗೊಳಿಸುವವರಿಗೆ ಆತನು ಅಲ್ಲಿ ಶಾಪಹಾಕಿದ್ದನು.

"ಸ್ವತಂತ್ರ" ಎಂಬ ಚರ್ಚೆಯಾಂಶವು 4ನೇ ಅಧ್ಯಾಯದಲ್ಲಿನ ಎರಡು ಒಡಂಬಡಿಕೆಗಳ ಸಾಂಕೇತಿಕ ನಿರೂಪಣೆಗೆ ಸಂಬಂಧ ಹೊಂದಿರುತ್ತದೆ. ಆ ವಾಕ್ಯಭಾಗದಲ್ಲಿ, ದಾಸಿಯಾಗಿದ್ದ ಹಾಗರಳು, ಸೀನಾಯಿ ಪರ್ವತದಲ್ಲಿ ಮಾಡಲ್ಪಟ್ಟ ಒಡಂಬಡಿಕೆಯನ್ನು (ಧರ್ಮಶಾಸ್ತ್ರ) ಪ್ರತಿನಿಧಿಸುತ್ತಾಳೆ, ಸಾರಳು ಪರಲೋಕದ ಒಡಂಬಡಿಕೆಯನ್ನು (ಸುವಾರ್ತೆ) ಪ್ರತಿನಿಧಿಸುವವಳು. ಪರಲೋಕದ ಒಡಂಬಡಿಕೆಯ ಕುರಿತು ಮಾತಾಡುವವನಾಗಿ, ಪೌಲನು ಹೀಗೆ ಹೇಳಿದನು, "ಆದರೆ ಮೇಲಣ ಯೆರೂಸಲೇಮ್ ಎಂಬವಳು ಸ್ವತಂತ್ರಳು, ಇವಳೇ ನಮಗೆ ತಾಯಿ" (4:26). ಆತನು ಈ ರೀತಿಯಾಗಿ ಮುಕ್ತಾಯಗೊಳಿಸಿದನು,

> ಸಹೋದರರೇ, ನಾವು ದಾಸಿಯ ಮಕ್ಕಳಲ್ಲ, ಆ ಧರ್ಮಪತ್ನಿಯ ಮಕ್ಕಳೇ ಎಂದು ತಿಳುಕೊಳ್ಳಿರಿ. ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ (4:31; 5:1).

4 ಮತ್ತು 5 ಇಡೀ ಅಧ್ಯಾಯಗಳಿಂದ ಸ್ಪಷ್ಟವಾಗುವದೇನೆಂದರೆ ಇದು ಧರ್ಮಶಾಸ್ತ್ರದಿಂದ ಸಿಕ್ಕ ಬಿಡುಗಡೆಯಾಗಿರುತ್ತದೆ. ಯೆಹೂದಿಕರಣಗೊಳಿಸುವವರು ಗಲಾತ್ಯದ ಸಭೆಗಳಿಗೆ ಅಥವಾ ದೇವರ ಜನರ ಬೇರೆ ಯಾವದೇ ಸಭಿಕರ ಮೇಲೆ ಧರ್ಮಶಾಸ್ತ್ರವನ್ನು ಕಡ್ಡಾಯಗೊಳಿಸಲು

ಯಾವ ಅಧಿಕಾರವನ್ನೂ ಹೊಂದಿರಲಿಲ್ಲ. ಗಲಾತ್ಯದವರು ಸ್ವತಂತ್ರರಾಗಿರಬೇಕೆಂದು "ಕರೆ"ಯಲ್ಪಟ್ಟವರು ಎಂದು ಒತ್ತಿ ಹೇಳಿದನು. ಆದದರಿಂದ, ಅವರು ಸ್ವತಂತ್ರರಾಗಿಯೇ ಉಳಿಯತಕ್ಕದ್ದು. ದಾಸರಿಗೆ ಕೆಲವು ಸಾರಿ ಸ್ವತಂತ್ರರಾಗುವದಕ್ಕೆ ಆಯ್ಕೆಯನ್ನು ಕೊಡಲಾಗುತ್ತಿತ್ತು (ವಿಮೋಚನಕಾಂಡ 21:1-6; 1 ಕೊರಿಂಥ 7:21-23). Augustusನ ಆಳ್ವಿಕೆಯ ವೇಳೆಯಲ್ಲಿ, ಬಹಳಷ್ಟು ದಾಸರು ಬಿಡುಗಡೆಗೊಳಿಸಲ್ಪಡುತ್ತಿದ್ದದರಿಂದ ಆತನು ಸಾಮ್ರಾಜ್ಯದಲ್ಲಿ ಇಂತಹ ಪ್ರವೃತ್ತಿಗೆ ಕಡಿವಾಣ ಹಾಕುವದಕ್ಕೆ ಕಾನೂನುಗಳನ್ನು ಜಾರಿಗೆ ತರುವದು ಅವಶ್ಯವೆಂದು ಕಂಡುಕೊಂಡನು.

ಪ್ರಾಚೀನ ಜಗತ್ತಿನಲ್ಲಿ ಜನರು ಅನೇಕ ದಾರಿಗಳಲ್ಲಿ ದಾಸರಾಗುತ್ತಿದ್ದರು: (1) ಯುದ್ಧದಲ್ಲಿ ಸೆರೆ ಹಿಡಿಯಲ್ಪಡುವ ಮೂಲಕ; (2) ಅಪಹರಣ ಅಥವಾ ಕಡಲಕಳ್ಳರ ಕೈಗೆ ಸಿಕ್ಕುವ ಮೂಲಕ; (3) ಖರೀದಿಯ ಮೂಲಕ, ನಿರ್ದಿಷ್ಟವಾಗಿ ಅವರಿಗಿರುವ ವಿಶೇಷ ಪ್ರತಿಭೆಗಳು ಅಥವಾ ಸಾಮರ್ಥ್ಯಗಳಿಗಾಗಿ; ಮತ್ತು (4) ಕೂಸುಗಳಾಗಿರುವ ವೇಳೆ ಕೈ ಬಿಡಲ್ಪಟ್ಟು (ತೊರೆಯಲ್ಪಟ್ಟು) ಬೇರೆಯವರಿಂದ ಎತ್ತಿಕೊಂಡು ಅವರನ್ನು ಮನೆಗಳಲ್ಲಿ ದಾಸರಾಗಿ ಬೆಳೆಸುವದರ ಮೂಲಕ. (5) ಹೆಣ್ಣಾಳುಗಳಿಗೆ ಹುಟ್ಟಿದ ಮಕ್ಕಳು ತನ್ನಿಂದ ತಾನೇ ಅವರ ತಾಯಿಯ ಯಜಮಾನನ ಸ್ವತ್ತಾಗುತ್ತಿದ್ದರು; ಅವರು "ಮನೆಯಲ್ಲಿ-ಹುಟ್ಟಿದ" ದಾಸರು.[33] (6) ನ್ಯಾಯಾಲಯಗಳಲ್ಲಿ ಅಪಾರಾಧಿಗಳ ನಿಮಿತ್ತವಾಗಿ ದೋಷಿಗಳೆಂದು ತೀರ್ಪು ಮಾಡಲ್ಪಟ್ಟವರನ್ನು ದೇಶದ ಗುಲಾಮರನ್ನಾಗಿ ಮಾಡಲಾಗುತ್ತಿತ್ತು ಮತ್ತು ಒತ್ತಾಯದಿಂದ ಕೆಲಸಕ್ಕೆ ಬಳಸಲ್ಪಡುತ್ತಿದ್ದರು. (7) ಅವರು ಸ್ವತಃ ತೀರ್ಮಾನ ಮಾಡಿಕೊಳ್ಳುವ ಮೂಲಕ, ಜನರು ಮೊತ್ತವು ಸರಿಯೆಂದು ತೋರುವದಾದರೆ ಕೆಲವು ಸಾರಿ ಅತ್ಯಂಥ ಕೀಳುಮಟ್ಟದ ಅಥವಾ ಅಪಾಯಕಾರಿ ಕೆಲಸಗಳನ್ನು ವಹಿಸಿಕೊಳ್ಳುತ್ತಿದ್ದರು (ಕತ್ತಿಮಲ್ಲರಾಗಿ ಸಹ ಸೇವೆ ಮಾಡಲು ಸಿದ್ಧರಿರುತ್ತಿದ್ದರು).[34]

ದಾಸರು ವಿವಿಧ ದಾರಿಗಳಲ್ಲಿ ಬಿಡುಗಡೆಯನ್ನು ಸಹ ಪಡೆಯಬಹುದಾಗಿತ್ತು, ಈ ದಾರಿಗಳ ಕುರಿತು *Lex Aelia Sentia*.[35] ಎಂದು ಕರೆಯಲ್ಪಡುವ ರೋಮನ್ ಕಾನೂನುಗಳಲ್ಲಿ ಸಂಕೀರ್ಣವಾಗಿರುವ ಭಾಗದಲ್ಲಿ ವಿವರವಾಗಿ ಬರೆಯಲಾಗಿದೆ. ಇವುಗಳೊಳಗೆ ಬಹುಪಾಲು ಕಾನೂನುಗಳು ವಿವಿಧ ರೀತಿಯ ಗುಲಾಮ ವಿಮೋಚನೆಗಳಿಗೆ ಸಂಬಂಧಿಸಿದ್ದಾಗಿದೆ, ಇದೊಂದು ಪ್ರಕ್ರಿಯೆಯಾಗಿದ್ದು Thomas Wiedemannನು ಈ ಮಾತುಗಳಲ್ಲಿ ಅದನ್ನು ಬಣ್ಣಿಸುತ್ತಾನೆ:

> ಒಬ್ಬ ದಾಸನನ್ನು ವಿಮೋಚಿಸಲಾಗಿದೆ [ಸ್ವತಂತ್ರಗೊಳಿಸಲಾಗಿದೆ] ಎಂದು ಹೇಳಲಾಗುತ್ತದೆ, ಆ ವೇಳೆ ಆತನ ಯಜಮಾನನು ಆ ದಾಸನ ತಲೆ ಅಥವಾ ಆತನ ದೇಹದ ಬೇರೆ ಯಾವುದಾದರೂ ಅಂಗವನ್ನು ಹಿಡಿದುಕೊಂಡು ಹೀಗೆ ಹೇಳುವನು "ಈ ಮನುಷ್ಯನು ಸ್ವತಂತ್ರನಾಗಬೇಕೆಂದು ಬಯಸುತ್ತೇನೆ" ಮತ್ತು ತನ್ನ ಕೈಯನ್ನು ಆತನಿಂದ ದೂರಕ್ಕೆ ತೆಗೆದುಕೊಳ್ಳುವನು [ಅಕ್ಷರಶಃ, "ಆತನನ್ನು ತನ್ನ ಕೈಯಿಂದ ದೂರವಾಗುವಂತೆ ಬಿಡುವನು"].[36]

ಪ್ರಾಚೀನ ಗ್ರೀಕರೊಳಗೆ ದಾಸರನ್ನು ಬಿಡುಗಡೆಗೊಳಿಸುವದಕ್ಕಿದ್ದ ಒಂದು ಕುತೂಹಲ ಕೆರಳಿಸುವ ದಾರಿಯೆಂದರೆ ಅದು ಪವಿತ್ರ ವಿಮೋಚನೆಯ ಧಾರ್ಮಿಕ ವಿಧಿ, ಒಬ್ಬ ದಾಸನನ್ನು ವಿಗ್ರಹಾರಾಧಕ ದೇವಾಲಯಕ್ಕೆ ಕಾಲ್ಪನಿಕವಾಗಿ ಮಾರಾಟ ಮಾಡುವದು. Delphiಯಲ್ಲಿರುವ ಅಪೊಲ್ಲೊವಿನ ಆಲಯದಲ್ಲಿ, ದೇವಾಲಯದಲ್ಲಿ ಉಳಿದಿರುವ ಬಹುಕೋನಗಳ ಗೋಡೆಯ ಮೇಲೆ, ಅಂಥ ದಾಸರ ಮಾರಾಟದ ದಸ್ತಾವೇಜುಗಳು ಕೆತ್ತಲ್ಪಟ್ಟಿರುವದನ್ನು ಈ ದಿನದಲ್ಲಿಯೂ ಅಲ್ಲಗೆ ಭೇಟಿ ಕೊಡುವ ಪ್ರವಾಸಿಯು ಕಾಣಬಹುದಾಗಿದೆ. ಈ ವ್ಯಕ್ತಿಗಳು ಅಧಿಕೃತವಾಗಿ ದೇವರಿಗೆ ದಾಸರಾದರು, ಆದರೆ ಸಕಲ ಕಾರ್ಯರೂಪದ ಕಾರಣಗಳಿಗಾದರೋ ಅವರು ಸ್ವತಂತ್ರರೆಂದು ಪರಿಗಣಿಸಲ್ಪಟ್ಟಿದ್ದರು.[37]

ಕ್ರೈಸ್ತತ್ವವು ಹರಡಿದ ಹಾಗೆ, ದೇವರ ದೃಷ್ಟಿಯಲ್ಲಿ ನಿಜವಾಗಿಯೂ "ಆಳು ಒಡೆಯ" ಇಲ್ಲ (3:28) ಎಂಬ ವಾಸ್ತವಾಂಶದಿಂದ ಸಂವೇದನಶೀಲರಾಗುತ್ತಿದ್ದ ಕ್ರೈಸ್ತ ಯಜಮಾನರುಗಳಿಂದ ದಾಸರು ಸತತವಾಗಿ ಬಿಡುಗಡೆಗೊಳಿಸಲ್ಪಡುವದು ಸಂಭವಿಸುವದರಲ್ಲಿ ಫಲಿತಗೊಂಡಿತ್ತೆಂದು ಒಬ್ಬನು ಎದುರು ನೋಡಬಹುದಾಗಿದೆ. ಸ್ಪಷ್ಟವಾಗಿರುವಂತೆ, ಗುಲಾಮತನದ ಪದ್ಧತಿಯನ್ನು ನಿರ್ಮೂಲನೆಯನ್ನು ತ್ವರಿತಗೊಳಿಸಲು ಆರಂಭಿಕ ಕ್ರೈಸ್ತ ಶತಮಾನಗಳಲ್ಲಿ ಅಷ್ಟಾಗಿ ಕ್ರಮವನ್ನು ತೆಗೆದುಕೊಳ್ಳಲಾಗಿರಲಿಲ್ಲ.

ಕ್ರಿ.ಶ. ಶತಮಾನದಲ್ಲಿ ಕ್ರೈಸ್ತರು ನಿರ್ಮೂಲನೆ ಅಥವಾ ಸರ್ಕಾರಿ ಸುಧಾರಣೆಗಳಿಗಾಗಿ ಚಳುವಳಿಗಳನ್ನು ಉತ್ತೇಜಿಸಿದರೆಂಬುದಕ್ಕೆ ಬೈಬಲಿನಲ್ಲಿ ಯಾವದೇ ಪುರಾವೆ ಇರುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ದಾಸರು ತಮ್ಮ ಯಜಮಾನರಿಗೆ ಅಧೀನರಾಗಬೇಕೆಂದು ಆಜ್ಞಾಪಿಸಲ್ಪಟ್ಟಿರುತ್ತಾರೆ ಮತ್ತು ಕ್ರೈಸ್ತರು ಸ್ವತಃ ಕ್ರಿಸ್ತನಿಗೆ ಸೇವೆ ಮಾಡುತ್ತಿರುವರೋ ಎಂಬಂತೆ ತಮ್ಮನ್ನು ಆಳುವ ರಾಜರಿಗೆ ಅಧೀನರಾಗಿರಬೇಕೆಂದು ಆಜ್ಞೆ ಮಾಡಲ್ಪಟ್ಟರು (ಎಫೆಸ 6:5-8; ಕೊಲೊಸ್ಸೆ 3:22-24). ಯಜಮಾನರಿಗೆ ತಮ್ಮ ದಾಸರ ವಿಷಯದಲ್ಲಿ ನ್ಯಾಯವಾಗಿ ಮತ್ತು ದಾಕ್ಷಿಣ್ಯತೆಯಿಂದ ನಡೆದುಕೊಳ್ಳಿರಿ ಎಂದು ಬುದ್ಧಿ ಹೇಳಲಾಗಿರುತ್ತದೆ (ಎಫೆಸ 6:9; ಕೊಲೊಸ್ಸೆ 4:1). ಮನೋಭಾವಗಳು ಬದಲಾವಣೆಗೊಳ್ಳುವ ಕಡೆಯಲ್ಲಿ, ಕ್ರಿಸ್ತನಲ್ಲಿರುವವರೊಳಗೆ ಸಾಮಾಜಿಕ ಅಸಮಾನತೆಗಳಿದ್ದಾಗ್ಯೂ ಸಾಮರಸ್ಯ ಮತ್ತು ಪ್ರೀತಿಗಳಿರಬಲ್ಲವು. ದೇವರಾತ್ಮನು ತನ್ನ ಪ್ರಭಾವವನ್ನು ಈ ಮಟ್ಟದಲ್ಲಿ ಬೀರಬೇಕಾಗಿತ್ತು (1 ತಿಮೊಥೆ 6:1, 2).[38] ಪ್ರಸ್ತುತ ಸನ್ನಿವೇಶದಲ್ಲಿ, ಪೌಲನು ಗಲಾತ್ಯದವರನ್ನು ಕ್ರಿಸ್ತನಲ್ಲಿ ಸಿಕ್ಕಿರುವ ತಮ್ಮ ಸ್ವಾತಂತ್ರ್ಯತೆಯಲ್ಲಿ ನಿಲ್ಲಬೇಕೆಂದು ಮತ್ತು "ದಾಸತ್ವದ ನೊಗದಲ್ಲಿ" ಸಿಕ್ಕಿಕೊಳ್ಳಲು ಹಿಂದಿರುಗಬಾರದೆಂದು ಬೇಡಿಕೊಳ್ಳುತ್ತಿದ್ದನು (5:1). ಆತನು ಅವರಿಗೆ ಹೀಗೆ ಎಚ್ಚರಿಸಿದನು, **ಆದರೆ ನಿಮಗಿರುವ ಸ್ವಾತಂತ್ರ್ಯವನ್ನು ಶರೀರಾಧೀನಸ್ವಭಾವಕ್ಕೆ ಆಸ್ಪದವಾಗಿ ಬಳಸದೆ ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡಿರಿ.** ಒಂದು ಶಕ್ತಯುತ ಸ್ವಾತಂತ್ರ್ಯವು, ವಿಶೇಷವಾಗಿ ಪ್ರಾಚೀನ ಗ್ರೀಕ್ ಸಂಸ್ಕೃತಿಯೊಳಗೆ ಎಷ್ಟೊಂದು ಅಪಾಯಕಾರಿ ಆಗಬಲ್ಲದು ಎಂಬುದರ ಅರಿವು ಆತನಿಗಿತ್ತು. ಆತ್ಮೀಕರಲ್ಲದ ಜನರು ಸ್ವಾತಂತ್ರ್ಯವನ್ನು ಪಾಪ ಮಾಡುವದಕ್ಕೆ ಪರವಾನಿಗೆಯಾಗಿ ಮಾರ್ಪಡಿಸಿಕೊಳ್ಳುವ ಒಲವು ಹೊಂದಿರುವರೆಂದು ಆತನಿಗೆ ಗೊತ್ತಿತ್ತು. ಇಲ್ಲಿರುವ ಸಂವೇದನೆಗಳು ರೋಮಾಪುರದಲ್ಲಿನ ಸಭೆಗೆ ವ್ಯಕ್ತಪಡಿಸಿದ ಸಂವೇದನೆಗಳಂತೆಯೇ ಇರುತ್ತವೆ. ದೇವರ ಸಮೃದ್ಧವಾದ ಕೃಪೆಯು ಲಭ್ಯವಿರುವದಕ್ಕಾಗಿ ಮಹಿಮೆಯನ್ನು ಸಲ್ಲಿಸಿ ಮುಗಿಸಿದ ಕೂಡಲೆ, ಆತನು ಹೀಗೆ ಕೇಳಿದನು, "ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು" (ರೋಮಾ 6:1, 2; ನೋಡಿರಿ ಯೂದನು 4). ಈ ಭಾವೋದ್ರಿಕ್ತ ಪ್ರಶ್ನೆಗಳ ಮೂಲಕವಾಗಿ, ದೇವರ ಕೃಪೆಯ ಮೂಲಕ ಮನುಷ್ಯನ ನಂಬಿಕೆಯಿಂದ ಸಿಕ್ಕುವ ರಕ್ಷಣೆಯು ಒಬ್ಬ ಕ್ರೈಸ್ತನನ್ನು ಅನೈತಿಕವಾಗಿ ಜೀವಿಸುವದರಿಂದ ನಿಷೇಧಿಸುತ್ತದೆ ಎಂಬುದನ್ನು ಆತನು ಸ್ಪಷ್ಟಗೊಳಿಸಲು ಬಯಸಿದನು.

"ನಂಬಿಕೆ-ಮಾತ್ರವೇ" ವಿಧದ ಕ್ರೈಸ್ತತ್ವವು ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ (ನೋಡಿರಿ ಯಾಕೋಬ 2:19). ವಿಧೇಯತೆ, ಸೇವೆ, ಮತ್ತು ತ್ಯಾಗಗಳ ಕುರಿತಾಗಿ ಯೇಸುವು ತನ್ನ ಅಪೊಸ್ತಲರ ಮೂಲಕವಾಗಿ ನೀಡಿದ ಅನೇಕ ಆಜ್ಞೆಗಳಿಗೆ ಕಿವಿಗೊಡತಕ್ಕದ್ದು. ಈ ಬುದ್ಧಿಮಾತುಗಳು ನಮಗಾಗಿ ಕೃಪೆ, ನಂಬಿಕೆ, ಮತ್ತು ಪ್ರೀತಿಯ ನಿಜವಾದ ಅರ್ಥವನ್ನು ಸ್ಫುಟವಾಗಿ ವಿವರಿಸುತ್ತವೆ. ಧರ್ಮಶಾಸ್ತ್ರದ ಹೃದಯಭಾಗದಲ್ಲಿಯೇ, ಸುವಾರ್ತೆಯ ಹೃದಯ ಭಾಗದಲ್ಲಿ ಸಹ, *ἀγάπη* (*agapē*) ಪ್ರೀತಿಯು ಇರುತ್ತದೆ.[39]

**ವಚನ 14.** ದೇವರ ಮಗುವು ಬೆಳೆಸಿಕೊಳ್ಳಬೇಕಾಗಿರುವ ಸಕಲ ಆತ್ಮೀಕ ಗುಣಗಳೊಳಗೆ, ಸರ್ವೋನ್ನತವಾದ ಗುಣವು ಅಪೊಸ್ತಲನು ಬರೆದಂಥ ಈ ವಿಧವಾದ ಪ್ರೀತಿಯೇ ಆಗಿರುತ್ತದೆ: **ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು ಎಂಬ ಒಂದೇ ಮಾತಿನಲ್ಲಿ ಧರ್ಮಶಾಸ್ತ್ರವೆಲ್ಲಾ ಅಡಕವಾಗಿದೆ.**[40] 5:13ರಲ್ಲಿರುವ ಪ್ರಕಾರ, ಈ ವಚನದಲ್ಲಿರುವ (*γάρ*, *gar*) ಎಂಬುದು ಅದರ ಹಿಂದಿನ ವಚನಗಳಿಗೆ ಕಾರಣವನ್ನು ಒದಗಿಸುತ್ತದೆ. ಗಲಾತ್ಯದವರು ಶರೀರಭಾವಕ್ಕೆ ಒಂದು ಸಂದರ್ಭ ಸಿಕ್ಕುವದಕ್ಕಾಗಿ ತಮ್ಮ ಸ್ವಾತಂತ್ರ್ಯವನ್ನು ಬಳಸಿಕೊಳ್ಳಬಾರದಿತ್ತು, ಆದರೆ ಬದಲಾಗಿ "ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡ"ಬೇಕಿತ್ತು (5:13). ಇದು ಸತ್ಯವಾಗಿತ್ತು ಯಾಕೆಂದರೆ ಪ್ರೀತಿಯೇ ಧರ್ಮಶಾಸ್ತ್ರದ ನೆರವೇರಿಕೆಯಾಗಿತ್ತು.

ಧರ್ಮೋಪದೇಶಕನೊಬ್ಬನು ಧರ್ಮಶಾಸ್ತ್ರದಲ್ಲಿ ಅತಿ ದೊಡ್ಡ ಆಜ್ಞೆ ಯಾವದು ಎಂದು ಯೇಸುವನ್ನು ಕೇಳಿದಾಗ, ಆತನು ಹೀಗೆ ಉತ್ತರ ಕೊಟ್ಟನು,

> ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವದಂದರೆ - ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ (ಮತ್ತಾಯ 22:37-39).

ಪೌಲನು ಇಲ್ಲಿ ಒಬ್ಬನು ಎರಡನೆಯ ಆಜ್ಞೆಯನ್ನು ಕೈಕೊಂಡು ನಡೆಯುವದರ ಮೇಲೆಯೇ ಇಡೀ ಧರ್ಮಶಾಸ್ತ್ರವು ನೆರವೇರಿಸಲ್ಪಡುತ್ತದೆಂದು ಹೇಳುತ್ತಿದ್ದಾನಾದರೂ, ಆತನು ಯೇಸುವಿನ ಮಾತುಗಳಿಗೆ ತದ್ವಿರುದ್ಧವಾಗಿ ಮಾತಾಡುತ್ತಿಲ್ಲ. ಬದಲಾಗಿ, ಆತನು ತನ್ನ ಮುಂದಿರುವ ಪ್ರಸ್ತುತ ಪರಿಸ್ಥಿತಿಗೆ ಹೆಚ್ಚು ಸೂಕ್ತವಾಗಿದ್ದಂಥ ಆಜ್ಞೆಯೊಂದನ್ನು ಉಲ್ಲೇಖಿಸುತ್ತಿದ್ದಾನಷ್ಟೆ. ಒಬ್ಬನು ತನ್ನ ನೆರೆಯವನನ್ನು ಪ್ರೀತಿಸಬೇಕೆಂದು ಕಟ್ಟಳೆಯನ್ನು ಕೊಟ್ಟಿದ್ದು ಗಲಾತ್ಯದವರಲ್ಲಿದ್ದ ಇನ್ನೊಂದು ದೊಡ್ಡ ಸಮಸ್ಯೆಯನ್ನು ಬಗೆಹರಿಸುವದಾಗಿತ್ತು - ಅದು ಅವರೊಳಗಿನ ಪರಸ್ಪರ ಸಂಬಂಧವೇ (ಗಲಾತ್ಯ 5:15).

ಜೀವಿತವನ್ನು ಸುಧಾರಣೆ ಮಾಡುವದಕ್ಕಾಗಿ ಧರ್ಮಶಾಸ್ತ್ರವು ಅಷ್ಟಾಗಿ ಶಕ್ತಿಯನ್ನು ಒದಗಿಸಲಿಲ್ಲ. ಯೇಸುವು ಪ್ರಸ್ತಾಪಿಸಿದ ಎರಡು ಪ್ರೀತಿಯ ಶ್ರೇಷ್ಠ ಆಜ್ಞೆಗಳಲ್ಲಿ, ಖಂಡಿತವಾಗಿಯೂ ಧರ್ಮಶಾಸ್ತ್ರದಲ್ಲಿ ಒಂದು ಆದರ್ಶವು ಸ್ಪಷ್ಟವಾಗಿ ಉಚ್ಚರಿಸಲ್ಪಟ್ಟಿತ್ತು (ಯಾಜಕಕಾಂಡ 19:18; ಧರ್ಮೋಪದೇಶಕಾಂಡ 6:5). ಹೇಗೂ, ಶಕ್ತಿಯನ್ನು ಕೊಟ್ಟಿದ್ದಂತೂ ಸುವಾರ್ತೆಯೇ (ಹೊಸ ಒಡಂಬಡಿಕೆ), ಯಾಕೆಂದರೆ "ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ" (ರೋಮಾ 5:5; ನೋಡಿರಿ ತೀತನಿಗೆ 3:4-6; 1 ಪೇತ್ರ 1:22, 23). ಈ ಕಾರಣಕ್ಕಾಗಿಯೇ ಪೌಲನು ಇಲ್ಲಿ ಶ್ರೇಷ್ಠ ಪ್ರೀತಿಯ ಆಜ್ಞೆಯ ಮೇಲೆ ಮುಖ್ಯ ಗಮನವನ್ನು ಕೊಟ್ಟನು, ಯಾಕೆಂದರೆ ಈ ಕ್ರೈಸ್ತ ಸದ್ಗುಣದಲ್ಲಿಯೇ ಗಲಾತ್ಯದ ಸಹೋದರರು ಕಡಿಮೆಯಾಗಿ ಕಂಡು ಬರುತ್ತಿದ್ದರು.

**ವಚನ 15.** ಪೌಲನು ಈ ಎಚ್ಚರಿಕೆಯನ್ನು ಕೊಡುತ್ತಾನೆ, **ಆದರೆ ನೀವು ಒಬ್ಬರನ್ನೊಬ್ಬರು ಕಚ್ಚಿ ಹರಕೊಂಡು ನುಂಗುವವರಾದರೆ ಒಬ್ಬರಿಂದೊಬ್ಬರು ನಾಶವಾದೀರಿ, ನೋಡಿರಿ.** ಈ ಸಭೆಗಳೊಳಗಿನ ಸಹೋದರರಲ್ಲಿ ಗಂಭೀರವಾದ ರೀತಿಯಲ್ಲಿ ವೈಯಕ್ತಿಕವಾದ ಆಂತರಿಕ ಸಮಸ್ಯೆಗಳಿದ್ದವು ಎಂಬುದು ಇದು ಮೊದಲನೆಯ ಸ್ಪಷ್ಟ ಸುಳಿವು ಆಗಿರುತ್ತದೆ. ಅವರು ಪರಸ್ಪರರ ವಿಷಯದಲ್ಲಿ ನಡೆದುಕೊಳ್ಳುತ್ತಿದ್ದ ರೀತಿಯಿಂದ ಸಂಭವಿಸುವದಕ್ಕೆ ಸಾಧ್ಯವಿದ್ದ ವಿನಾಶತೆಯನ್ನು

ಬಣ್ಣಿಸುವದಕ್ಕೆ ಇಲ್ಲಿ ಬಳಸಲಾಗಿರುವ ಭಾಷೆಯು ಈ ಸಮಸ್ಯೆಗಳು ಅತ್ಯಂಥ ಗಂಭೀರವಾಗಿದ್ದವೆಂಬುದನ್ನು ತೋರಿಸುತ್ತದೆ. ವಾಚಕನು ಇಂಥ ವಿಷಮವಾದ ವಿಷಯವನ್ನು ಪತ್ರಿಕೆಯಲ್ಲಿ ಇಷ್ಟೊಂದು ತಡವಾಗಿ ಪರಿಚಯಿಸಲ್ಪಡುವದಕ್ಕೆ ಆಶ್ಚರ್ಯಗೊಳ್ಳಬಹುದು. ಭಾಷೆಯು ರೂಪಕಾರ್ಥದಲ್ಲಿರುತ್ತದಾದರೂ, ಇದು ಅತ್ಯಂಥ ರೋಷದಿಂದ ಕೂಡಿದ್ದಾಗಿದೆ ಮತ್ತು ಮನಃಸೆಳೆಯುವಂಥದ್ದು.

"ಕಚ್ಚಿ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು (δάκνω, *daknō*) ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಆದರೆ LXXನಲ್ಲಿ ಹಲವಾರು ಸಾರಿ ಕಾಣಿಸಿಕೊಳ್ಳುತ್ತದೆ. ಇವುಗಳಲ್ಲಿ ಬಹಳಷ್ಟು ಸಂದರ್ಭಗಳು ಒಂದು ಸರ್ಪದಿಂದ ಕಚ್ಚಲ್ಪಡುವದನ್ನು ಸೂಚಿಸುತ್ತವೆ.[41] ಈ ಪದವು ಒಂದು ಸಾರಿ ಆಹಾರವನ್ನು ಸೇವಿಸುವದನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತದೆ (ಮೀಕ 3:5) ಮತ್ತು ಸಾಲ ಕೊಡುವವರನ್ನು ಸೂಚಿಸಲು ಒಂದು ಸಾರಿ ಬಳಸಲ್ಪಟ್ಟಿದೆ, ರೂಪಕಾರ್ಥದಲ್ಲಿ ಹೇಳುವದಾದರೆ, ಇವರು ಸಾಲಗಾರರನ್ನು "ಕಚ್ಚುವವರು" (ಹಬಕ್ಕೂಕ 2:7; KJV; ASV).

"ನುಂಗುವವರು" (κατεσθίω, *katesthiō*) ಎಂದರೆ ಅಕ್ಷರಶಃ "ತಿಂದು ಹಾಕು" ಅಥವಾ "ತಿಂದುಬಿಡು" ಎಂದಾಗಿರುತ್ತದೆ (ಮತ್ತಾಯ 13:4; ಮಾರ್ಕ 4:4; ಲೂಕ 8:5). ಅಲ್ಲದೆ ಅದು ಧಹಿಸಿ ಬಿಡುವಿಕೆ ಮತ್ತು ನಾಶನವನ್ನು ಸೂಚಿಸುವದಕ್ಕೆ ಸಹ ರೂಪಕಾರ್ಥದಲ್ಲಿ ಬಳಸಲ್ಪಟ್ಟಿದೆ (ಮಾರ್ಕ 12:40; ಲೂಕ 20:47). ಪ್ರಕಟನೆ ಪುಸ್ತಕದಲ್ಲಿ, ಚಿತ್ರಣವು ಹಿಂಸಾತ್ಮಕವಾಗಿರುತ್ತದೆ, ಕೆಲವು ಸಾರಿ ಯಾರದರೊಬ್ಬನು ಅಥವಾ ಯಾವದಾದರೂ ಸಂಗತಿಯು ಬೆಂಕಿಯಿಂದಾಗಲಿ ಅಥವಾ ಘಟಸರ್ಪವೊಂದರಿಂದಾಗಲಿ ನುಂಗಿ ಹಾಕಲ್ಪಡುತ್ತದೆ (ಪ್ರಕಟನೆ 11:5; 12:4; 20:9).

"ನಾಶವಾದೀರಿ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು, ἀναλίσκω (*analiskō*), ಇದು ಸಂಪೂರ್ಣ ನಾಶನದ ಚಿತ್ರಣವಾಗಿರುತ್ತದೆ. ಇದು ಈ ಸ್ಥಳದಲ್ಲಿ (ರೂಪಕಾರ್ಥವಾಗಿ) ಮತ್ತು ಲೂಕ 9:54ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಅದು ಪರಲೋಕದಿಂದ ಬೆಂಕಿ ಬಿದ್ದು ನಾಶಮಾಡುವದನ್ನು ಸೂಚಿಸಿ ಉಲ್ಲೇಖಿಸಲ್ಪಟ್ಟಿರುತ್ತದೆ. ಎರಡನೆಯ ವಾಕ್ಯಭಾಗದಲ್ಲಿನ ಭಾಷೆಯು 2 ಅರಸು 1:1–12ನ್ನು ಜ್ಞಾಪಿಸುತ್ತದೆ, ಅಲ್ಲಿ ಎಲೀಯನು ಪರಲೋಕದಿಂದ ಅಗ್ನಿಯನ್ನು ಬರಮಾಡಿದನು ಮತ್ತು ಭಕ್ತಿಹೀನ ಅರಸನಾದ ಅಹಜ್ಯನು ಕಳುಹಿಸಿದ 102 ಮಂದಿ ಜನರು ನಾಶಗೊಳಿಸಲ್ಪಟ್ಟರು.

ಈ ಹಂತದ ತನಕ, ಪೌಲನ ಎಚ್ಚರಿಕೆಯ ಮುಖ್ಯ ಗಮನವು ಸಿದ್ಧಾಂತಿಕ ದೋಷವನ್ನು ಮತ್ತು ಅದರ ಸರಬರಾಯಿಗಾರರನ್ನು (ಯೆಹೂದಿಕರಣಗೊಳಿಸುವವರು) ತಡೆಯುವದರ ಮೇಲಿತ್ತು. ಅವರ ದೋಷಪೂರಿತ ಉಪದೇಶ ಮತ್ತು ಚಟುವಟಿಕೆಯನ್ನು ಗದರಿಸುವದರಲ್ಲಿ, ಅದನ್ನು ಸ್ವೀಕರಿಸಿಕೊಂಡಿದ್ದಕ್ಕಾಗಿ ಆತನು ಗಲಾತ್ಯದವರನ್ನು ಸಹ ಶಿಕ್ಷಿಸಿದ್ದನು, ಅವರನ್ನು "ಬುದ್ಧಿಯಿಲ್ಲದವರೇ" ಎಂದು ಕರೆದಿದ್ದನು (3:1, 3). ಆತನ ಬೋಧನೆಯ ಜೊತೆಯಲ್ಲಿ ನಡೆದಿದ್ದ ಅದ್ಭುತಕರವಾದ ಸೂಚಕಕಾರ್ಯಗಳನ್ನು (3:5) ಮತ್ತು ಅವರು ಈಗ ಹಿಡಿದಿರುವ ದಾರಿಯಿಂದ ವಿಮುಖರಾಗದ ಹೋದರೆ ಅವರ ಮೇಲೆ ನಿಶ್ಚಯವಾಗಿ ಬರಲಿದ್ದ ಪರಿಣಾಮಗಳನ್ನು ಅವರು ಮರೆತು ಹೋಗಿದ್ದರು. ಅಲ್ಲದೆ ಅವರು ಕ್ರಿಸ್ತನಲ್ಲಿ ಹೊಸದಾಗಿ ಕಂಡುಕೊಂಡಿದ್ದ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಬಾರದೆಂದು ಸಹ ಎಚ್ಚರಿಸಿದ್ದನು (5:13). ಅಷ್ಟೇ ಅಲ್ಲದೆ, ಆತನು ಧರ್ಮಶಾಸ್ತ್ರವನ್ನು ಕ್ರಿಸ್ತನಲ್ಲಿ ಸಿಕ್ಕುವ ಸ್ವಾತಂತ್ರ್ಯಕ್ಕೆ ವಿರುದ್ಧ ಹೋಲಿಕೆ ಮಾಡುವ ಮೂಲಭೂತ ಚರ್ಚೆಯಾಂಶವನ್ನು ಬಿಟ್ಟು ವಿಷಯಾಂತರ ಮಾಡಿರಲೇ ಇಲ್ಲ.

ಈ ಘರ್ಷಣೆಗಳು ಯೆಹೂದಿಕರಣಗೊಳಿಸುವವರನ್ನು ಸರಿಯೆಂದು ಸಮರ್ಥಿಸುವ ಮತ್ತು

ತಪ್ಪೆಂದು ಆಕ್ರಮಣ ಮಾಡುವ ಗುಂಪುಗಾರಿಕೆಗಳಾಗಿ ಬೆಳವಣಿಗೆಯುಂಟಾಗಿತ್ತೋ? ಅವರ ಮನೋಭಾವಗಳು ಕರುಣೆ ಮತ್ತು ಕೃಪೆಯ ಆತ್ಮನಿಗೆ ಬದಲಾಗಿ, ನೇಮನಿಷ್ಠೆಯ ತೀರ್ಪುಮಾಡುವಂತಹ ಗುಣಸ್ವಭಾವವುಳ್ಳವುಗಳಾಗಿ ತಿರುಗಿಕೊಂಡಿದ್ದವೋ? ಅದು ಮುಂದೆ ಕೊರಿಂಥದಲ್ಲಿ ವ್ಯಕ್ತಿಯಾಧಾರಿತ ಪಾಷಂಡಮತವಾಗಿ ಅಭಿವೃದ್ಧಿಗೊಳ್ಳಲಿದ್ದ ಬಹುಕಾಲದಿಂದಿರುವ ಶೋಧನೆಯಾಗಿತ್ತೋ? ನಮಗೆ ಅದು ಎಂದಿಗೂ ತಿಳಿಯದೆ ಹೋಗಬಹುದು, ಆದರೆ ಪಂಗಡಗಳನ್ನುಂಟು ಮಾಡುವಂತಹ ಕೆಲವೊಂದು ಕಾರಣ ಅಥವಾ ಕಾರಣಗಳು ಉದ್ಭವವಾಗಿದ್ದವೆಂಬುದು, ಅವು ಈ ಸಭೆಗಳಲ್ಲಿದ್ದ ಪ್ರೀತಿಯನ್ನು ನಾಶಮಾಡಿ ಅನ್ಯೋನ್ಯತೆಗೆ ಭಂಗ ತರುತ್ತಿದ್ದವೆಂಬುದಂತೂ ಸ್ಪಷ್ಟವಾಗಿರುತ್ತದೆ. ಯಾವ ರೀತಿಯ ಪರಿಸ್ಥಿತಿಯಿದ್ದರೂ ಸರಿಯೇ, ಈ ಪತ್ರಿಕೆಯಲ್ಲಿನ ಸಿದ್ಧಾಂತಿಕ ಭಾಗವನ್ನು ಮುಕ್ತಾಯಕ್ಕೆ ತಂದು ತನ್ನ ಕಾರ್ಯರೂಪದ ಅನ್ವಯಿಕೆಯನ್ನು ಆರಂಭಿಸುವ ಸಮಯವು ಪೌಲನಿಗೆ ಬಂದಿತ್ತು. ಆತನು ತನ್ನ ಪ್ರತಿಯೊಂದು ಬರಹಗಳಲ್ಲಿ ಇದೇ ಮಾದರಿಯನ್ನು ಅನುಸರಿಸುತ್ತಿದ್ದನು.

## ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳುವದು (5:16-26)

ಈ ಬೋಧನೆಯನ್ನು ಅನ್ವಯಪಡಿಸುವದಕ್ಕಾಗಿ, ಪೌಲನು "ದುರ್ಗುಣಗಳ ಪಟ್ಟಿ" ಮತ್ತು "ದುರ್ಗುಣಗಳ ಪಟ್ಟಿ" ಎಂದು ಹೆಸರು ಪಡೆದುಕೊಂಡ ಪ್ರಾಮುಖ್ಯವಾದ ಸಾಹಿತ್ಯಕ ಸಾಧನಗಳನ್ನು ಪರಿಚಯಿಸುತ್ತಾನೆ. ಇವುಗಳು ಲೌಕಿಕ ಮತ್ತು ಆತ್ಮೀಕವಾದ ಮನೋಭಾವಗಳ ಹಾಗೂ ಕ್ರಿಯೆಗಳ ನಡುವೆ ಒಂದು ತೀವ್ರವಾದ ವ್ಯತ್ಯಾಸವನ್ನು ಗುರುತಿಸುತ್ತವೆ. ಪೌಲನಿಗಾದರೋ, ಈ ವ್ಯತ್ಯಾಸವನ್ನು ತೋರಿಸುವದಕ್ಕಿಂತಲೂ ಪ್ರಾಮುಖ್ಯವಾದದ್ದು ಬೇರೊಂದಿರಲಿಲ್ಲ. ಇಲ್ಲಿ ಲೋಕದಲ್ಲಿರುವ ಗರ್ವಭರಿತ, ಸ್ವಾರ್ಥ, ಪ್ರೀತಿಯಿಲ್ಲದ ಯೋಚನೆ ಹಾಗೂ ಪವಿತ್ರಾತ್ಮನ ಮನಸ್ಸಿನ ನಡುವೆ ಸ್ಫುಟವಾದ ವಿರುದ್ಧ ಹೋಲಿಕೆಯನ್ನು ಮಾಡಲ್ಪಟ್ಟಿದೆ.

### ಪವಿತ್ರಾತ್ಮನು Vs ಶರೀರಭಾವ (5:16-18)

**16ನಾನು ಹೇಳುವದೇನಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ. 17ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ. 18ಆದರೆ ನೀವು ಆತ್ಮನಿಂದ ನಡಿಸಿಕೊಳ್ಳುವವರಾದರೆ ನೇಮನಿಷ್ಠೆಗಳಿಗೆ ಅಧೀನರಲ್ಲ.**

**ವಚನ 16.** ಪೌಲನು ಈಗಾಗಲೇ ಗಲಾತ್ಯದ ಕ್ರೈಸ್ತರನ್ನು "ನಿಮಗಿರುವ ಸ್ವಾತಂತ್ರ್ಯವನ್ನು ಶರೀರಾಧೀನಸ್ವಭಾವಕ್ಕೆ ಆಸ್ಪದವಾಗಿ ಬಳಸದೆ" ಇರಬೇಕೆಂದು ಎಚ್ಚರಿಸಿದ್ದನು (5:13). ಈಗ ಆತನು ಅವರಿಗೆ ಅಪ್ಪಣೆ ಕೊಟ್ಟಿದ್ದೇನೆಂದರೆ, **ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ.** ಪವಿತ್ರಾತ್ಮನ ಚಿತ್ತಕ್ಕೆ ಒಪ್ಪಿಸಿಕೊಳ್ಳುವ ಮೂಲಕ, ಸಹೋದರರು ಪಾಪದ ಅಭಿಲಾಷೆಗಳಿಗೆ ಒಳಗಾಗುವದರಿಂದ ತಪ್ಪಿಸಿಕೊಳ್ಳುವರು.

ಮನುಷ್ಯನು ಬಿದ್ದು ಹೋಗಿರುವ ಜೀವಿಯಾಗಿದ್ದಾನಾದರೂ, ಆತನು ಮೂಲತಃ ಆತ್ಮಸ್ವರೂಪನಾಗಿರುವ ದೇವರ ಸಾರೂಪ್ಯದಲ್ಲಿ ಉಂಟು ಮಾಡಲ್ಪಟ್ಟಿದ್ದನು (ಆದಿಕಾಂಡ 1:27;

ಯೋಹಾನ 4:24). ಮನುಷ್ಯನು ಈಗಲೂ ತನ್ನೊಳಗೆ ತನ್ನ ಸೃಷ್ಟಿಕರ್ತನ ದೈವಿಕ ಸ್ವಭಾವವನ್ನು ಹೊಂದಿರುತ್ತಾನೆ (ಯಾಕೋಬ 3:9).[42] ದೇವರ ಸ್ವರೂಪದಲ್ಲಿ ರೂಪಿಸಲ್ಪಟ್ಟವನಾಗಿ, ಮನುಷ್ಯನು ಮೂಲಭೂತವಾಗಿ ಒಬ್ಬ ಆತ್ಮೀಕ ಜೀವಿಯಾಗಿರುವನು. ಹೇಗೂ, ಆತನು ಭೂಮಿಯಲ್ಲಿ ನಿವಾಸಿಸುವ ಕಾಲವೆಲ್ಲಾ ಆತನು ಶರೀರಭಾವ ಮತ್ತು ಆತ್ಮ ಹೊಂದಿರುವ ಜೀವಿಯಾಗಿರುತ್ತಾನೆ. ದೇವರು ಕ್ರೈಸ್ತರಿಗೆ ತನ್ನ ಸ್ವಂತ ಆತ್ಮನನ್ನು ಅನುಗ್ರಹಿಸಿದ್ದಾನಾದ್ದರಿಂದ (ಅಪೊಸ್ತಲರ ಕೃತ್ಯಗಳು (2:38), ನಾವು ಶರೀರಭಾವದ ಮೇಲೆ ಜಯವನ್ನು ಪಡೆಯಬಹುದಾಗಿದೆ. ದೇವರ ಕೃಪೆಯಿಂದ, ಶರೀರಭಾವ ಮತ್ತು ಆತ್ಮನ ನಡುವೆ ಅನುದಿನ ನಡೆಯುವ ಯುದ್ಧವನ್ನು ಜಯಿಸಬಲ್ಲೆವು.

ಈ ವಿಶ್ಲೇಷಣೆಯು ರೋಮಾಪುರದಲ್ಲಿರುವ ದೇವಜನರಿಗೆ ಪೌಲನು ಬರೆದ ಸಂಗತಿಯೊಂದಿಗೆ ಒಮ್ಮತವನ್ನು ಹೊಂದಿರುತ್ತದೆ:

> ಶರೀರಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು. ನೀವಾದರೋ, ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರ ಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ (ರೋಮಾ 8:8, 9).

ಈ ವಚನಗಳಲ್ಲಿ "ಆತ್ಮನು," "ದೇವರಾತ್ಮನು," ಮತ್ತು "ಕ್ರಿಸ್ತನ ಆತ್ಮ" ಎಂಬವುಗಳೆಲ್ಲಾ ಒಂದೇ ಆಗಿರುತ್ತವೆ. ಕ್ರೈಸ್ತರು ನಮಗೆ ದೇವರಾತ್ಮನು ಇದ್ದಾನೆಂದು ತಿಳಿದುಕೊಳ್ಳುವದು ಅತ್ಯಂತ ಪ್ರಾಮುಖ್ಯವಾಗಿರುತ್ತದೆ - ಮತ್ತು ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳುವದನ್ನು ಕಲಿತುಕೊಳ್ಳುವದು ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾಗಿರುತ್ತದೆ. ಕ್ರೈಸ್ತನು ತನ್ನ ವಿಚಾರಧಾರೆ, ನಡವಳಿಕೆ, ಮತ್ತು ಜೀವಿತದ ಇಡೀ ರೀತಿಯನ್ನು ಪವಿತ್ರಾತ್ಮನ ನಡಿಸುವಿಕೆಗನುಗುಣವಾಗಿ ಹೊಂದಿಸಿಕೊಳ್ಳಬೇಕು (ನೋಡಿರಿ ಗಲಾತ್ಯ 5:25).

"ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ" ಎಂಬ ಪದಗುಚ್ಛದಲ್ಲಿರುವ "ನಡೆದುಕೊಳ್ಳಿರಿ" (περιπατέω, *peripateō*) ಎಂಬ ಪದದ ಅಕ್ಷರಶಃ ಅರ್ಥವು "ಮಗ್ನವಾಗಿರು" ಎಂದಾಗಿದೆ. ಇದು ಹೊಸ ಒಡಂಬಡಿಕೆಯಲ್ಲಿ ಅನೇಕ ಸಾರಿ "ಸರಿಯಾಗಿ ವರ್ತಿಸುವ," "ಒಬ್ಬನ ಜೀವಿತವನ್ನು ಸರಿಯಾಗಿ ನಡಿಸುವದು," ಅಥವಾ "ಜೀವಿಸುವದು" ಎಂಬ ಸೂಚ್ಯಾರ್ಥದೊಂದಿಗೆ ಬಳಸಲಾಗಿರುತ್ತದೆ.[43] ಆದದರಿಂದ, "ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳುವದು" ಎಂದರೆ "ಪವಿತ್ರಾತ್ಮನ ಮನೋಭಾವ" (ರೋಮಾ 8:27) ಜೊತೆಯಲ್ಲಿ ಸಾಮರಸ್ಯದಿಂದಿರುವ ರೀತಿಯಲ್ಲಿ "ವರ್ತಿಸುವದು" ಎಂದಾಗಿರುತ್ತದೆ. ಪವಿತ್ರಾತ್ಮನ ದಾರಿಯಂತೆ ನಡೆಯುವವರಿಗೆ ಶೋಧನೆಯನ್ನು ಎದುರಿಸಿ ನಿಂತು ಪಾಪವನ್ನು ಜಯಿಸುವದಕ್ಕಾಗಿ ಒಂದು ಪರಿಣಾಮಕಾರಿಯಾದ ವಿಧಾನವು ಅನುಗ್ರಹಿಸಲ್ಪಟ್ಟಿರುತ್ತದೆ. ಪೌಲನು ರೋಮಾಪುರದವರಿಗೆ ಹೀಗೆ ಬರೆದನು, "ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ" (ರೋಮಾ 8:13).

ವಚನ 17. ಅಪೊಸ್ತಲನು ಭುಗಿಲೇಳುವ ಆತ್ಮೀಕ ಯುದ್ಧದ ಕುರಿತು ವಿವರವಾಗಿ ತಿಳಿಸುತ್ತಾನೆ: ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ. ಈ ಮಾತುಗಳನ್ನು ಪಾಪಭರಿತ

ಅಭಿಲಾಷೆಗಳ ವಿರುದ್ಧ ನಿರಂತರವಾಗಿ ಯುದ್ಧಮಾಡಬೇಕಾಗಿರುವ ಕ್ರೈಸ್ತರಿಗೆ ಬರೆಯಲಾಗಿರುತ್ತದೆ.

ಭೌತಿಕ ಸೃಷ್ಟಿಯು ತಾತ್ಕಾಲಿಕ ಎಂಬುದನ್ನು ಶಾಸ್ತ್ರಗಳು ಸ್ಪಷ್ಟಗೊಳಿಸುತ್ತವೆ. ಪೇತ್ರನು ಹೇಳಿದ್ದೇನೆಂದರೆ "ಈಗಿರುವ ಭೂಮ್ಯಾಕಾಶಗಳು . . . ಬೆಂಕಿಯ ಮೂಲಕ ನಾಶವಾಗುವದಕ್ಕೆ ಇಡಲ್ಪಟ್ಟಿವೆ" (2 ಪೇತ್ರ 3:7). ಆತನು ಮುಂದುವರೆದು ಹೇಳಿದ್ದೇನೆಂದರೆ "ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು, ಸೂರ್ಯಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು" (2 ಪೇತ್ರ 3:10). ನಮ್ಮ ಜಗತ್ತು ಕ್ಷಣಿಕ ಸ್ವಭಾವದ್ದಾಗಿದೆ ಎಂಬುದರ ಬೆಳಕಿನಲ್ಲಿ, ನಮ್ಮ ನಿರೀಕ್ಷೆಯನ್ನು ಭೂಲೋಕದ ಸಂಗತಿಗಳ ಮೆಲೆ ನೆಲೆಗೊಳಿಸುವದು ಮೂರ್ಖತನವೆಂದು ಕಾಣಿಸುವದಿಲ್ಲವೋ?

ಯೋಹಾನನು ತನ್ನ ವೃದ್ಧಾಪ್ಯದ ವಯಸ್ಸಿನಲ್ಲಿ, ಎಫೆಸದಲ್ಲಿದ್ದ ತನ್ನ ಆತ್ಮೀಕ ಮಕ್ಕಳಿಗೆ ಹೆಚ್ಚುಕಡಿಮೆ ಎರಡು ಸಹಸ್ರ ವರ್ಷಗಳ ಹಿಂಗೆ ಹೀಗೆ ಬರೆದನು:

> ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವವುಗಳೆಲ್ಲವು ಅಂದರೆ ಶರೀರದಾಶೆ, ಕಣ್ಣಿನಾಶೆ, ಜೀವನದ ಗರ್ವ ಇವು ತಂದೆಗೆ ಸಂಬಂಧ ಪಟ್ಟವುಗಳಲ್ಲ, ಲೋಕಕ್ಕೆ ಸಂಬಂಧಪಟ್ಟವುಗಳಾಗಿವೆ. ಲೋಕವು ಅದರ ಆಶೆಯೂ ಗತಿಸಿಹೋಗುತ್ತವೆ, ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು (1 ಯೋಹಾನ 2:15-17; NKJV).

ಯೋಹಾನನು ಭೌತಿಕ ವಸ್ತುಗಳ ಕುರಿತಾಗಿ ಮಾತಾಡುತ್ತಿಲ್ಲ, ಆದರೆ ಅವುಗಳ ಕಡೆಗೆ ಮನುಷ್ಯನ ಮನೋಭಾವ ಮತ್ತು ಸಂಬಂಧದ ವಿಷಯವಾಗಿ ಮಾತಾಡುತ್ತಿದ್ದಾನೆ. ಲೋಕದಲ್ಲಿರುವ ಯಾವದೇ ಸಂಗತಿಯಾಗಲಿ ಆತ್ಮೀಕ ಸಂಗತಿಗಳಿಗಿಂತಲೂ ನಮಗೆ ಹೆಚ್ಚು ಪ್ರಾಮುಖ್ಯವಾಗುವಂತೆ ಮತ್ತು ಇಷ್ಟವಾಗುವಂತೆ ಅವಕಾಶ ಕೊಟ್ಟರೆ, ನಾವು ಲೋಕವನ್ನು ಪ್ರೀತಿಸುವವರಾಗುತ್ತೇವೆ. ಲೋಕದ ಸರಕುಗಳು ಅಥವಾ ಭೋಗಗಳು, ಆತ್ಮೀಕ ಮೌಲ್ಯಗಳನ್ನು ಕುರಿತಾಗಿ ನಮಗಿರುವ ಗ್ರಹಿಕೆ ಮತ್ತು ಶ್ಲಾಘನೆಯನ್ನು ಅಸ್ಪಷ್ಟಗೊಳ್ಳುವಂತೆ ನಮ್ಮನ್ನು ಗಮನವನ್ನು ಬೇರೆ ಕಡೆಗೆ ಸೆಳೆಯುವ ಹಾಗೆ ಮತ್ತು ನಮ್ಮನ್ನು ಮೋಹಕ್ಕೊಳಪಡಿಸುವಂತೆ ಅನುಮತಿಸಿದರೆ, ನಾವು ಲೋಕವನ್ನು ಪ್ರೀತಿಸುವವರು. ದೇವರ ದೃಷ್ಟಿಯಲ್ಲಿ ಹೇಗಿರುತ್ತೇವೆಂಬುದಕ್ಕಿಂತ (ನಮ್ಮ ನಿಜವಾದ ಗುಣಸ್ವಭಾವ) ಹೆಚ್ಚಾಗಿ ಮನುಷ್ಯರ ದೃಷ್ಟಿಯಲ್ಲಿ ಹೆಸರನ್ನು ಹೊಂದಿರುವದು ನಮಗೆ ಪ್ರಾಮುಖ್ಯವೆಂದಾಗಿರುವದಾದರೆ, ನಮ್ಮನ್ನು ವಂಚಿಸುವದರಲ್ಲಿ ಸೈತಾನನು ಯಶಸ್ವಿಯಾಗಿದ್ದಾನೆ ಎಂದಾಗುತ್ತದೆ.

17ನೇ ವಚನದ ಅಂತ್ಯದಲ್ಲಿ, ಪೌಲನು ಈ ಮಾತುಗಳನ್ನು ಕೂಡಿಸುತ್ತಾನೆ: **ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ.** ಈ ಪರಿಚ್ಛೇದವನ್ನು ಕನಿಷ್ಠ ಎರಡು ದಾರಿಗಳಲ್ಲಿ ಅರ್ಥಮಾಡಿಕೊಳ್ಳಲಾಗಿರುತ್ತದೆ. ಮೊದಲನೆಯದಾಗಿ, "ನೀವು ಮಾಡಲಿಚ್ಛಿಸುವದನ್ನು" ಎಂಬುದನ್ನು ಕ್ರೈಸ್ತನು ನಡಿಸಬೇಕೆಂದು ಬಯಸುವ ಸಂಗತಿಗಳೆಂಬುದಾಗಿ ಸಕಾರಾತ್ಮಕ ಅರ್ಥವೊಂದರಲ್ಲಿ ವ್ಯಾಖ್ಯಾನಿಸಬಹುದಾಗಿದೆ. ಹೇಗೂ, "ಶರೀರಭಾವದ" ಅಂತರ್ಮುಖವಾದ ಸೆಳೆತದ ಕಾರಣದಿಂದಾಗಿ ಆತನು ಮಾಡದವನಾಗುತ್ತಾನೆ. ಹೀಗಿರುವಾಗ, ಪೌಲನು ರೋಮಾ 7:14-23ರಲ್ಲಿ ಚರ್ಚಿಸಿದ ಪ್ರಕಾರ ಒಳ್ಳೇದನ್ನು ಮಾಡಬೇಕೆಂದು ಅಂತರ್ಯದಲ್ಲಿ ನಡೆಯುವ ಹೋರಾಟದ ರೀತಿಯಲ್ಲಿಯೇ ಈ ಭಾಷೆಯು ಇರುವದಾಗಿದೆ. ವ್ಯತಿರಿಕ್ತವಾಗಿ, "ನೀವು ಮಾಡಲಿಚ್ಛಿಸುವ" ಸಂಗತಿಗಳು ಹಿಂದಿನ

ವಚನಗಳಲ್ಲಿ "ಶರೀರಭಾವದ ಅಭಿಲಾಷೆಗಳಿಗೆ" ಸಮಾನವಾಗಿರಬಹುದಾಗಿದೆ. ಇದು ಸರಿಯೇ ಆಗಿರುವದಾದರೆ, ಕ್ರೈಸ್ತನು ಕೆಟ್ಟದ್ದನ್ನು ಮಾಡಬೇಕೆಂಬ ತುಡಿತದ ಮೇಲೆ ಗಳಿಸುವ ಜಯವು ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಶಕ್ತಿಯ ಮೂಲಕ ಸಾಧ್ಯವಿರುತ್ತದೆಂಬುದನ್ನು ಉಪವಾಕ್ಯವು ಒತ್ತಿ ಹೇಳುತ್ತದೆ. ಪವಿತ್ರಾತ್ಮನಲ್ಲಿ ನಡೆಯುವದಕ್ಕೆ ಸಮರ್ಪಣೆ ಮಾಡಿಕೊಂಡಿರುವವರು ಪಾಪಭರಿತ ಬಯಕೆಗಳಿಗೆ ಶರಣಾಗದೆ ಪವಿತ್ರಾತ್ಮನ ಮಾರ್ಗದರ್ಶನಕ್ಕೆ ಶರಣಾಗಬೇಕು ಎಂಬುದನ್ನು ಜ್ಞಾಪಿಸುವದಾಗಿದೆ.

**ವಚನ 18.** ಪವಿತ್ರಾತ್ಮನನ್ನು ಅನುಸರಿಸಿ ನಡೆಯಬೇಕೆಂಬ ಮತ್ತು ದೇವರ ಒಬ್ಬ ಮಗುವಾಗಿ ಬದುಕಬೇಕೆಂಬ ತನ್ನ ಚರ್ಚೆಯಾಂಶವನ್ನು ಮುಂದುವರೆಸುತ್ತಾ, ಪೌಲನು ಹೀಗೆ ಬರೆಯುತ್ತಾನೆ, **ಆದರೆ ನೀವು ಆತ್ಮನಿಂದ ನಡಿಸಿಕೊಳ್ಳುವವರಾದರೆ ನೇಮನಿಷ್ಠೆಗಳಿಗೆ ಅಧೀನರಲ್ಲ.** ಆತನು ಮತ್ತೊಂದಾವರ್ತಿ ವಿಶ್ವಾಸಿಗಳು ದಾಸತ್ವದ ನೊಗದಿಂದ ವಿಮೋಚನೆಗೊಳಿಸಲ್ಪಟ್ಟಿದ್ದಾರೆ ಎಂಬುದನ್ನು ಒತ್ತಿ ಹೇಳಿದನು (5:1).

ಇಸ್ರಾಯೇಲ್ಯರು "ಧರ್ಮಶಾಸ್ತ್ರಾಧೀನರಾಗಿ" ಜೀವಿಸಿದ್ದರು, ಅದು ಸೀನಾಯಿ ಪರ್ವತದಿಂದ ಆರಂಭಗೊಂಡಿತ್ತು. ದೇವರನ್ನು ಮೆಚ್ಚಿಸಬೇಕೆಂಬುದಾಗಿ ಅವರು ಮಾಡಿದ ಸಕಲ ಹೋರಾಟಗಳ ಮತ್ತು ಯಜ್ಞವೇದಿಯ ಅಡಿಯಲ್ಲಿ ಸುರಿಸಿದ ಯಜ್ಞಗಳ ಎಲ್ಲಾ ರಕ್ತದ ಹೊರತಾಗಿಯೂ, ಜನರು ಇನ್ನೂ ಪಾಪದ ದಾಸತ್ವದಲ್ಲಿದ್ದರು. ವಾಗ್ದಾನ ಮಾಡಲ್ಪಟ್ಟ ವಿಮೋಚಕನು ಬರುವ ತನಕ, ಸ್ವಾತಂತ್ರವೆಂಬುದು ಇರಲೇ ಇಲ್ಲ; ಆ ಒಡಂಬಡಿಕೆಯ ಅಡಿಯಲ್ಲಿ ಪಾಪದ ಮೇಲೆ ಸಂಪೂರ್ಣ ಜಯವನ್ನು ಸಂಪಾದಿಸಿಕೊಳ್ಳುವದು ಸಾಧ್ಯವಿಲ್ಲದ್ದಾಗಿತ್ತು. ಅವರು ದಾಸತ್ವದಲ್ಲಿರುವ ಮಕ್ಕಳಾಗಿದ್ದು (4:25) ಮೆಸ್ಸೀಯನ ಬರೋಣವನ್ನು ಮಾತ್ರವೇ ನಿರೀಕ್ಷಿಸಿಕೊಂಡಿರಲು ಸಾಧ್ಯವಿತ್ತು. ಈಗ, ಆ ದಿನವು ಉದಯಿಸಿತ್ತು (4:4).

ಧರ್ಮಶಾಸ್ತ್ರಾಧೀನರಾಗಿ ಇರುವದರ ಬದಲಾಗಿ, ಕ್ರೈಸ್ತರು "ಪವಿತ್ರಾತ್ಮನಿಂದ ನಡಿಸಿಕೊಳ್ಳುವ"ವರಾಗಿದ್ದರು. ಹಾಗಿದ್ದರೂ, ಪೂರ್ಣ ವಿಧೇಯತೆಯನ್ನು ತೋರಿಸುವದರಲ್ಲಿ ಹೋರಾಟವನ್ನು ಈಗಲೂ ಅನುಭವಿಸುತ್ತೇವೆ; ಒಬ್ಬನು ತನ್ನನ್ನು ಜಯಿಸಿಕೊಳ್ಳಬೇಕಾಗಿರುವ ವೈಯಕ್ತಿಕ ಯುದ್ಧವೊಂದು ಈಗಲೂ ಇರುತ್ತದೆ. ಹೇಗೂ, ಯುದ್ಧವು ಕ್ರಿಸ್ತನಿಂದ ಮತ್ತು ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದ ಮೂಲಕ ಜಯಿಸಲ್ಪಟ್ಟಿದೆ. ಯೇಸುವು ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿದ್ದಾನೆ, ಮರಣವನ್ನು ಜಯಿಸಿದ್ದಾನೆ, ಪರಲೋಕದೊಳಗೆ ಏರಿಹೋಗಿದ್ದಾನೆ, ಮತ್ತು ತನ್ನ ಪವಿತ್ರಾತ್ಮನನ್ನು ಸುರಿಸಿದ್ದಾನೆ ಎಂಬುದಕ್ಕಾಗಿ ದೇವರಿಗೆ ಸ್ತೋತ್ರ! *ಆತನಲ್ಲಿದ್ದವರಾಗಿ ನಡೆಯುವದರಿಂದ, ನಾವು ಆತನ ಕೃಪೆಯ ಮೂಲಕವಾಗಿ, ಸೈತಾನ ಮತ್ತು ಪಾಪದ ಮೇಲಿನ ಆ ಜಯದಲ್ಲಿ ಪಾಲುಗಾರರಾಗುವಂತಾಗಲಿ.*

### "ಶರೀರಭಾವದ ಕರ್ಮಗಳು" (5:19-21)

**[19]ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ; ಯಾವವಂದರೆ - ಜಾರತ್ವ ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೇಕಿಚ್ಚು ಸಿಟ್ಟು [20]ಕಕ್ಷಭೇದ ಭಿನ್ನಮತ ಮತ್ಸರ ಕುಡಿಕತನ ದುಂದೌತಣ ಇಂಥವುಗಳೇ. [21]ಇವುಗಳ ವಿಷಯದಲ್ಲಿ - ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ.**

**ವಚನ 19.** ಈ ವಿಭಾಗವು ಕೆಲವರು ಹೆಸರಿಟ್ಟಿರುವ ಪ್ರಕಾರ "ದುರ್ಗುಣಗಳ ಪಟ್ಟಿ" ಅಥವಾ

“ದುರ್ಗುಣಗಳ ವಿವರಣಾಪಟ್ಟಿ” ಎಂಬ ಭಾಗವನ್ನೊಳಗೊಂಡಿದೆ. ಅಂಥ ಪಟ್ಟಿಗಳು ಶಾಸ್ತ್ರಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. ಈ ಸನ್ನಿವೇಶದಲ್ಲಿರುವ ಪಟ್ಟಿಯು ಒಂದು ವಿಧವಾದ ಪೀಠಿಕೆಯೊಂದಿಗೆ ಆರಂಭಗೊಳ್ಳುತ್ತದೆ: **ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ.** ತಾನು ಗಮನಿಸಬಹುದಾದ ಕೃತ್ಯಗಳ ಬಗ್ಗೆ ಚರ್ಚಿಸುತ್ತಿದ್ದಾನೆಂಬುದನ್ನು ಪೌಲನು ಗಮನಕ್ಕೆ ತರುತ್ತಾನೆ; ಅಂಥ “ಕರ್ಮಗಳು” ಅಥವಾ “ಕ್ರಿಯೆಗಳು” (KJV) “ಪ್ರಸಿದ್ಧವಾಗಿವೆ.” ಇಲ್ಲಿ φανερός (*phaneros*) ಎಂಬ ಗ್ರೀಕ್ ಪದವನ್ನು “ಕಾಣಿಸುವ,” “ಸ್ಪಷ್ಟವಾಗಿರುವ,” “ಸರಳವಾಗಿ ಗೋಚರವಾಗುವ” ಎಂಬುದಾಗಿ ಅನುವಾದಿಸಬಹುದು.[44] “ಶರೀರಭಾವ” (σάρξ, *sarx*) ಎಂಬ ಪದಕ್ಕೆ ಶಾಸ್ತ್ರಗಳಲ್ಲಿ ಅನೇಕ ಸೂಚ್ಯಾರ್ಥಗಳಿರುತ್ತವಾದರೂ, ಇಲ್ಲಿ ಅದು ಮಾನವರು ಯೋಚಿಸುವ ಮತ್ತು ಕ್ರಿಯೆ ಮಾಡುವ “ಸ್ವಾಭಾವಿಕ” ರೀತಿಯಲ್ಲಿ ಸೂಚಿಸುತ್ತದೆ. ಇದು ಆತ್ಮದಿಂದ ಹುಟ್ಟಿದವರೊಂದಿಗೆ ಒಂದು ಸ್ಫುಟವಾದ ವಿರುದ್ಧ ಹೋಲಿಕೆಯಾಗಿರುತ್ತದೆ (5:22, 23). “ಶರೀರಭಾವದ ಕರ್ಮಗಳು” ಎಂದರೆ ಪ್ರಾಕೃತನಾದ, ವಿಮೋಚಿಸಲ್ಪಡದ ಮನುಷ್ಯನು ಸ್ವಾಭಾವಿಕವಾಗಿ ಮಾಡುವಂತ ಕೃತ್ಯಗಳಾಗಿವೆ. ಈ ಪಾಪಗಳು ಅನೇಕ ಸಾರಿ ಶಾರೀರಿಕ ರೀತಿಯಲ್ಲಿ ವ್ಯಕ್ತಪಡಿಸುವವುಗಳಾಗಿದ್ದು, ವಾಸ್ತವಿಕದಲ್ಲಿ ಮನಸ್ಸಿನೊಳಗಿಂದ (ಅಥವಾ ಹೃದಯ) ಹುಟ್ಟುವವುಗಳಾಗಿವೆ.

ಆತ್ಮೀಕವಲ್ಲದ ದುರ್ಗುಣಗಳು (5:19-21) ಮತ್ತು ಆತ್ಮೀಕ ಸದ್ಗುಣಗಳು (5:22, 23) ವಿವೇಚಿಸಲ್ಪಡಬಲ್ಲವುಗಳಾಗಿವೆ ಎಂಬುದನ್ನು ಪೌಲನು ತೋರಿಸಿ ಕೊಡುತ್ತಿದ್ದಾನೆ. ಯೇಸುವು ಸುಳ್ಳು ಪ್ರವಾದಿಯ ಕುರಿತು ಮಾತಾಡಿದಾಗ, ಆತನು ಅವರನ್ನು ದ್ರಾಕ್ಷೆ ಹಣ್ಣುಗಳನ್ನು (ಒಳ್ಳೇ ಫಲಗಳು) ಬಿಡುವದಕ್ಕೆ ಅಸಮರ್ಥವಾಗಿರುವ ಮುಳ್ಳುಗಿಡಗಳಿಗೆ ಹೋಲಿಕೆ ಮಾಡುತ್ತಾನೆ. ಆತನು ಈ ಮಾತುಗಳಿಂದ ಮುಕ್ತಾಯಗೊಳಿಸುತ್ತಾನೆ: “ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ” (ಮತ್ತಾಯ 7:15-20; ನೋಡಿರಿ ಲೂಕ 6:43-45). ಅಲ್ಲದೆ, ಸ್ನಾನಿಕನಾದ ಯೋಹಾನನು, ಬರಲಿರುವ ಮೆಸ್ಸೀಯನ ರಾಜ್ಯಕ್ಕೋಸ್ಕರ ಸಿದ್ಧಮಾಡಿಕೊಳ್ಳುವದಕ್ಕಾಗಿ ತಮ್ಮ ಜೀವಿತಗಳನ್ನು ಬದಲಾಯಿಸಿಕೊಳ್ಳಬೇಕೆಂದು ಕರೆ ಕೊಡುವ ವೇಳೆ, “ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬದನ್ನು ತಕ್ಕ ಫಲದಿಂದ ತೋರಿಸಿರಿ” ಎಂದು ಬೋಧಿಸಿದನು. ಅವರು ಅಂಥ ಬದಲಾವಣೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂಬುದಕ್ಕೆ ತಮ್ಮ ನಡವಳಿಕೆಗಳ ಮೂಲಕವಾಗಿ ತೋರಿಸಬೇಕಾಗಿತ್ತು (ಮತ್ತಾಯ 3:7, 8). ಯೇಸುವು ಶಿಷ್ಯರನ್ನು ಲೋಕದಲ್ಲಿ ಪ್ರಕಾಶಿಸುವ ಬೆಳಕು ಮತ್ತು ಮರೆಯಾಗಿರುವದಕ್ಕೆ ಸಾಧ್ಯವಿಲ್ಲದಂಥ ಬೆಟ್ಟದ ಮೇಲಿನ ಒಂದು ಪಟ್ಟಣ ಎಂಬುದಾಗಿ ಹೋಲಿಕೆ ಮಾಡಿದನು. ಆತನು ತನ್ನ ಹಿಂಬಾಲಕರಿಗೆ ಹೀಗೆ ಬುದ್ಧಿವಾದ ಹೇಳಿದನು, “ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು” (ಮತ್ತಾಯ 5:16). ಪೌಲನು ಸಹ ನಡವಳಿಕೆಯ ಕುರಿತಾಗಿ ಮಾತಾಡಿದನು, ಆತನು ಹೇಳಿದ್ದೇನೆಂದರೆ, “ಕೆಲವರ ಪಾಪಕೃತ್ಯಗಳು ಪ್ರಸಿದ್ಧವಾಗಿದ್ದು ಅವರು ಇಂಥವರೆಂದು ಮೊದಲೇ ತಿಳಿಯಪಡಿಸುತ್ತವೆ; . . . ಹಾಗೆಯೇ ಕೆಲವರ ಸತ್ಕ್ರಿಯೆಗಳು ಪ್ರಸಿದ್ಧವಾಗಿವೆ, ಬೇರೆ ಕೆಲವರ ಸತ್ಕ್ರಿಯೆಗಳು ಅಪ್ರಸಿದ್ಧವಾಗಿದ್ದರೂ ಮರೆಯಾಗಿರಲಾರವು” (1 ತಿಮೊಥೆ 5:24, 25). “ಶರೀರಭಾವದ ಕರ್ಮಗಳು” ಮತ್ತು “ದೇವರಾತ್ಮನಿಂದ ಉಂಟಾಗುವ ಫಲಗಳು” ಇವೆರಡರ ಬಗ್ಗೆಯೂ ಪೌಲನು ಈ ಅರ್ಥದಲ್ಲಿಯೇ ಮಾತಾಡಿದನು.

5:19-21ರಲ್ಲಿರುವ “ಶರೀರಭಾವದ ಕರ್ಮಗಳ”ನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದಾಗಿದೆ:[45] (1) ಮೊದಲ ಮೂರು ಕೃತ್ಯಗಳು ಲೈಂಗಿಕ ಪಾಪಗಳನ್ನೊಳಗೊಂಡಿವೆ:

"ಜಾರತ್ವ ಬಂಡುತನ ನಾಚಿಕೆಗೇಡಿತನ." (2) ನಂತರದ ಎರಡು ಕೃತ್ಯಗಳು ಅನ್ಯಧರ್ಮಿಯ ಮತಾಚಾರಣೆಯ ಪಾಪಗಳು: "ವಿಗ್ರಹಾರಾಧನೆ ಮಾಟ." (3) ಇನ್ನು ಎಂಟು ಪಾಪಗಳು ಪರಸ್ಪರ ವೈಯಕ್ತಿಕ ಸಂಬಂಧಗಳ ವಿಷಯವಾದ ಪಾಪಗಳು: "ಹಗೆತನ ಜಗಳ ಹೊಟ್ಟೇಕಿಚ್ಚು ಸಿಟ್ಟು ಕಕ್ಷಭೇದ ಒಳಸಂಚು ಭಿನ್ನಮತ ಮತ್ಸರ"[46] (4) ಕಡೆಯ ಎರಡು ಪಾಪಗಳು ಸ್ವೇಚ್ಛಾಚಾರದ ಜೀವಿತಕ್ಕೆ ಸಂಬಂಧಿಸಿದವುಗಳಾಗಿವೆ: "ಕುಡಿಕತನ ದುಂದೌತಣ."

1. ಲೈಂಗಿಕ ಪಾಪಗಳು (5:19)

ಪಟ್ಟಿಯಲ್ಲಿರುವ ಮೊದಲ ಮೂರು ಪಾಪಗಳು ಲೈಂಗಿಕತೆಗೆ ಸಂಬಂಧಿಸಿರುವಂತೆ ಕಾಣಿಸುತ್ತವೆ. ದುರ್ಗುಣಗಳ ಪಟ್ಟಿಯು **ಜಾರತ್ವ** ಮಾತಿನಿಂದ ಆರಂಭಗೊಳ್ಳುತ್ತದೆ, ಅದು ಲೈಂಗಿಕವಾಗಿ ಅಶ್ಲೀಲವಾದ ಅಥವಾ "ಹಾದರ"ವನ್ನು ಸೂಚಿಸುವದಕ್ಕೆ ಒಂದು ರೀತಿಯಲ್ಲಿ ಸೌಮ್ಯೋಕ್ತಿಯಾಗಿರುತ್ತದೆ. ಗ್ರೀಕ್ ಪದವಾಗಿರುವ πορνεία (*porneia*) ಎಂಬುದು, ವ್ಯಭಿಚಾರ, ವಿವಾಹಪೂರ್ವ ಸಂಭೋಗ, ವೇಶ್ಯಾವಾಟಿಕೆ, ರಕ್ತಸಂಬಂಧಿಗಳೊಂದಿಗೆ ಸಂಭೋಗ, ಮತ್ತು ಸಲಿಂಗಕಾಮ ಹಾಗೂ ಸಲಿಂಗಸ್ತ್ರೀಕಾಮ ಇತ್ಯಾದಿಗಳನ್ನೊಳಗೊಂಡ ನಿರ್ದಿಷ್ಟವಾದ ಲೈಂಗಿಕ ಪಾಪಗಳ ವಿವಿಧ ವರ್ಗಗಳೆಲ್ಲವೂ ಅಡಕವಾಗಿರುವಂಥ ಒಂದು ಜೈವಿಕ ಪದವಾಗಿರುತ್ತದೆ. ದೇವರ ಇಂಗಿತ ಮತ್ತು ಉದ್ದೇಶದಲ್ಲಿ, ಲೈಂಗಿಕ ಐಕ್ಯತೆಯು ಒಬ್ಬ ಪುರುಷ ಮತ್ತು ಒಬ್ಬ ಹೆಂಗಸು, ಒಬ್ಬ ಗಂಡ ಮತ್ತು ಆತನ ಹೆಂಡತಿಯ ನಡುವೆ ಮಾತ್ರವೇ ಸೀಮಿತಗೊಳಿಸಲ್ಪಟ್ಟಿತ್ತು. ಮಾನವ ಕುಲವನ್ನು ಹಬ್ಬಿಸುವದಕ್ಕೆ ಮಾತ್ರವಲ್ಲದೆ ನಿಕಟವಾದ ಸಹವಾದರಿಂದಾಗುವ ಆಶೀರ್ವಾದವನ್ನು ಅನುಭವಿಸುವದಕ್ಕೆ ಅದನ್ನು ಅವರಿಗೆ ಕೊಡಲಾಗಿತ್ತು.[47]

ಶಾಸ್ತ್ರಗಳ ಪ್ರಕಾರವಾಗಿ, ದೇವರಿಗೆ ಸ್ವೀಕಾರ್ಹವಾಗುವ ಮತ್ತು ಮೆಚ್ಚಿಕೆಯಾಗುವಂತಹ ಏಕೈಕ ಲೈಂಗಿಕ ಚಟುವಟಿಕೆಯೆಂದರೆ ಗಂಡ ಮತ್ತು ಹೆಂಡತಿಯ ನಡುವಿನ ಚಟುವಟಿಕೆಯೇ. ಇಂದು ನಾವು ಜೀವಿಸುತ್ತಿರುವಂಥ ಅನಿರ್ಬಂಧಿತ ವಾತಾವರಣದಲ್ಲಿ ಈ ಹೇಳಿಕೆಯು ಅನೇಕರ ಅನುಮೋದನೆಯನ್ನು ಪಡೆಯುವದಿಲ್ಲ. ಹೇಗೂ, ಯಾವದೇ ಯುಗದಲ್ಲಿ ಜನರಿಂದ ಯಾವುದು ಅನುಮೋದನೆಯನ್ನು ಪಡೆಯಬಹುದು ಎಂಬುದು ನಮ್ಮ ಕಳಕಳಿಯಲ್ಲ, ಆದರೆ ದೇವರು ಏನನ್ನು ಅನುಮೋದಿಸುತ್ತಾನೆಂಬುದೇ ಆಗಿರುತ್ತದೆ.

"ಶರೀರಭಾವದ ಕರ್ಮಗಳಲ್ಲಿ" ಪೌಲನು ಹೆಸರಿಸಿದ ಎರಡನೆಯದು **ಬಂಡುತ** (ἀκαθαρσία, *akatharsia*). ಈ ಪದದ ಅಕ್ಷರಶಃ ಅರ್ಥವು "ಅಶುದ್ಧತೆ," ಆದರೆ ಈ ಸನ್ನಿವೇಶದಲ್ಲಿ ಇದು ಹೊಲಸು ಇರುವಿಕೆ ಅಥವಾ ದೈಹಿಕ ನಿರ್ಮಲತೆಯೊಂದಿಗೆ ಯಾವದೇ ಸಂಬಂಧವನ್ನು ಹೊಂದಿರುವದಿಲ್ಲ. ಬದಲಾಗಿ, ಅದು ನೈತಿಕ ಭ್ರಷ್ಟತೆ, ಅಶುದ್ಧತೆ, ಅಥವಾ ಅಶುದ್ಧ ಉದ್ದೇಶಗಳನ್ನು ಸೂಚಿಸುವದಕ್ಕೆ ಸಾಂಕೇತಿಕವಾಗಿ ಬಳಸಲ್ಪಟ್ಟಿದೆ. ಅದು ವಿಶೇಷವಾಗಿ ಲೈಂಗಿಕ ಪಾಪಗಳನ್ನು ಸೂಚಿಸಲು ಬಳಸಲ್ಪಟ್ಟಿದೆ (2 ಕೊರಿಂಥ 12:21; ಎಫೆಸ 5:3; ಕೊಲೊಸ್ಸೆ 3:5), ಅವುಗಳಲ್ಲಿ ಸ್ವಾಭಾವಿಕವಾದ ದುರ್ಗುಣಗಳು ಸೇರಿರುತ್ತವೆ (ರೋಮಾ 1:24).

ಪೌಲನು ಪಾಪಗಳ ಈ ಗುಂಪಿನಲ್ಲಿ ಕೊನೆಯದಾಗಿ **ನಾಚಿಕೆಗೇಡಿತನ** (ἀσέλγεια, *aselgeia*) ಎಂಬುದರೊಂದಿಗೆ ಮುಗಿಸುತ್ತಾನೆ. ಗ್ರೀಕ್ ಪದವನ್ನು "ಅಸಭ್ಯತೆ," "ಸ್ವೇಚ್ಛಾ ಪ್ರವೃತ್ತು," "ಕಾಮುಕತೆ," ಮತ್ತು "ದುರ್ಗುಣ" ಎಂದು ಸಹ ಅರ್ಥನಿರೂಪಿಸಬಹುದಾಗಿದೆ. ಅದು ಸಾಮಾನ್ಯವಾಗಿ ಲೈಂಗಿಕ ವಿಪರೀತಗಳನ್ನು ಸೂಚಿಸುತ್ತದೆ ಮತ್ತು κοίτη (*koitē,* "ಲೈಂಗಿಕ ಸಂಭೋಗ")[48] ಮತ್ತು *porneia* ("ಜಾರತ್ವ" ಅಥವಾ "ಹಾದರ") ಎಂಬ ಪದಗಳ ಸಂಬಂಧದಲ್ಲಿ ಕಾಣಿಸಿಕೊಳ್ಳುತ್ತದೆ. ಕನ್ನಡದ "ಪರವಾನಿಗೆ" ಎಂಬ ಪದದ ವಿಷಯದಲ್ಲಿ ನೋಡುವ ಪ್ರಕಾರವೇ,

ಇದರಲ್ಲಿ ನೈತಿಕ ಕಟ್ಟುಪಾಡುಗಳಿಲ್ಲದಿರುವಿಕೆ ಅಥವಾ ನಿರ್ಲಕ್ಷ್ಯತೆಯು, ವಿಶೇಷವಾಗಿ ಲೈಂಗಿಕ ಮಂಡಲದಲ್ಲಿ ಇರುವಂತೆ ಕಾಣುತ್ತದೆ. ಒಬ್ಬನು ಸಂಪೂರ್ಣವಾಗಿ ತನ್ನನ್ನು ಕಾಮಾಭಿಲಾಷೆಗೆ ಒಪ್ಪಿಸಿಕೊಳ್ಳುವದು ಎಂಬ ವಿಚಾರವು ಅಡಕವಾಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿ, ಈ ಪದವು ಹಲವಾರು ವಾಕ್ಯಭಾಗಗಳಲ್ಲಿ ಬಳಸಲ್ಪಟ್ಟಿದೆ, ಅವೆಲ್ಲವು ಲೈಂಗಿಕ ಅಸಭ್ಯತೆಯ ಕಡೆಗೆ ಒಲವು ತೋರಿಸುವದನ್ನು ಪ್ರದರ್ಶಿಸುತ್ತವೆ.[49]

2. ಅನ್ಯಧರ್ಮಿಯ ಮತಾಚಾರಣೆಯ ಪಾಪಗಳು (5:20)

**ವಚನ 20.** ದುರ್ಗುಣಗಳ ಪಟ್ಟಿಯಲ್ಲಿ ನಂತರ ಇರುವದು **ವಿಗ್ರಾಹಾರಧನೆ**, ಈ ಪದವು ಶಾಸ್ತ್ರಗಳಲ್ಲಿ ಎಷ್ಟೊಂದು ಪರಿಚಿತವಾಗಿರುತ್ತದೆಂದರೆ ಅದಕ್ಕೆ ವಿವರಣೆಯ ಅಗತ್ಯವೇ ಇರುವದಿಲ್ಲ. ಹಾಗಿದ್ದರೂ, ಪ್ರಾಚೀನ ಜಗತ್ತಿನಲ್ಲಿ ವ್ಯಾಪಕವಾಗಿದ್ದ ಈ ಆಚರಣೆಯ ಕೆಲವೊಂದು ಅಂಶಗಳನ್ನು ಕುರಿತು ಸಮೀಕ್ಷೆಯೊಂದನ್ನು ನಡಿಸುವದು ಸಹಾಯಕವಾಗಿರುತ್ತದೆ. ಅನ್ಯಧರ್ಮಿಯರೊಳಗೆ ವಿಗ್ರಹಾರಾಧನೆಯು ಏಕೆ ಅಸ್ತಿತ್ವದಲ್ಲಿತ್ತು?

ಅನ್ಯಧರ್ಮಿಯರು ವಿವಿಧ ದೇವರುಗಳನ್ನು ಆರಾಧಿಸುತ್ತಿದ್ದರು ಯಾಕೆಂದರೆ ಮನುಷ್ಯನಲ್ಲಿ ದೇವರಿಗೋಸ್ಕರ ಅಂತರ್ಗತವಾದ ಒಂದು ಅಗತ್ಯತೆಯಿರುತ್ತದೆ. ನಿಜವಾದ ದೇವರನ್ನು ಅರಿಯದೆ ಇದ್ದ ಸಂಸ್ಕೃತಿಗಳ ಜನರು ಹುಟ್ಟು ಗುಣದಿಂದಾಗಿ ದೇವರುಗಳನ್ನು ಸೃಷ್ಟಿಕೊಂಡರು ಅಥವಾ ಕಲ್ಪಸಿಕೊಂಡು ಅಸ್ತಿತ್ವಕ್ಕೆ ತಂದರು. ಮನುಷ್ಯನಿಗೆ ಆರಾಧಿಸುವದಕ್ಕೆ ಏನಾದರೂ ಬೇಕು ಅನ್ನಿಸುತ್ತದೆ, ತಾನು ಅವಲಂಭಿಸಬಹುದಾದ ಯಾರಾದರೊಬ್ಬರು ಬೇಕೆಂದು ಆತನು ಬಯಸುತ್ತಾನೆ.[50] ಪೌಲನು ಅರಿಯೊಪಾಗದಲ್ಲಿ ಮಾಡಿದ ಭಾಷಣದಲ್ಲಿ, ಮನುಷ್ಯರನ್ನು ಭೂಮಿಯಲ್ಲಿ ಇಟ್ಟಿರುವ ಪ್ರಾಥಮಿಕ ಕಾರಣವು ದೇವರಿಗಾಗಿ ಹುಡುಕಾಡಬೇಕು ಎಂಬುದೇ ಎಂದು ಹೇಳಿದನು: "ಒಂದು ವೇಳೆ ಅವರು ತಡವಾಡಿ ಕಂಡುಕೊಂಡಾರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು. ಆತನು ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ" (ಅಪೊಸ್ತಲರ ಕೃತ್ಯಗಳು 17:27). ಅಪೊಸ್ತಲನು ಹೀಗೆ ಸಹ ಹೇಳಿದನು, "ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ" (ರೋಮಾ 1:20).

ದೇವರು ಅಪ್ಪಟವಾಗಿ ಆತ್ಮೀಕ ಸ್ವಭಾವದನಾದ್ದರಿಂದ (ಯೋಹಾನ 4:24) ಮತ್ತು ಮನುಷ್ಯನು ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿದ್ದಾನಾದ್ದರಿಂದ (ಆದಿಕಾಂಡ 1:27), ಮನುಷ್ಯನು ಪ್ರಾಥಮಿಕವಾಗಿ ಒಬ್ಬ ಆತ್ಮೀಕ ಜೀವಿಯಾಗಿದ್ದಾನೆ. ಆತನು ಎರಡನೆಯದಾಗಿ ಮಾತ್ರವೇ ಒಂದು ದೈಹಿಕ ಶರೀರವನ್ನು ಧರಿಸಿಕೊಂಡಿರುತ್ತಾನೆ. ಈ ವಾಸ್ತವಾಂಶವನ್ನು ಮನಸ್ಸಿನಲ್ಲಿಟ್ಟುಕೊಂಡವರಾಗಿ, ಪೌಲ ಮತ್ತು ಪೇತ್ರ ಇಬ್ಬರೂ ದೈಹಿಕ ಶರೀರವನ್ನು ಒಂದು "ಗುಡಾರ" ಎಂದು ಕರೆದರು (2 ಕೊರಿಂಥ 5:1, 4; 2 ಪೇತ್ರ 1:13; NIV). ಮನುಷ್ಯನ ಸಾರಭೂತವಾದ ಜೀವವು ದೇವರಲ್ಲಿಯೇ ಮೂಲೋತ್ಪತ್ತಿಯಾಗಿರುವದರಿಂದ, ಮನುಷ್ಯನು ತನ್ನ ಆತ್ಮೀಕ ತಂದೆಗಾಗಿ ಒಂದು ಮೂಲಭೂತವಾದ ಹಂಬಲವನ್ನು ಹೊಂದಿರುವದು ಸಹಜವೇ ಆಗಿರುತ್ತದೆ. Augustineನು ಹೀಗೆ ಹೇಳಿದನು, "ನೀನು ನಮ್ಮನ್ನು ನಿನಗೋಸ್ಕರ ನಿರ್ಮಿಸಿದಿ ಮತ್ತು ನಮ್ಮ ಹೃದಯಗಳು ನಿನ್ನಲ್ಲಿ ವಿಶ್ರಮಿಸಿಕೊಳ್ಳುವ ತನಕವೂ ಸಮಾಧಾನವನ್ನು ಕಂಡುಕೊಳ್ಳುವದಿಲ್ಲ."[51]

ತಂದೆಗಾಗಿ ಈ ಅನ್ವೇಷಣೆಯು ಅನೇಕ ಸಾರಿ ದುರ್ಬಲ, ತಪ್ಪು ದಾರಿ ಹಿಡಿಯುವಂತದ್ದು,

ಅಥವಾ ಮನ್ನಣೆಯಿಲ್ಲದ್ದು ಆಗಿರುತ್ತದಾದರೂ, ಅಂಥ ಅನ್ವೇಷಣೆಯು ಈಗಲೂ ಇದ್ದೇ ಇದೆ. ಪೌಲನು ಕೆಲವೊಬ್ಬ ಗ್ರೀಕ್ ಕವಿಗಳಿಂದ ತನ್ನ ಎಳೆಯನ್ನು ಎತ್ತಿಕೊಂಡು, ಅರಿಯೊಪಾಗದ ಭಾಷಣದಲ್ಲಿ ಈ ವಿಚಾರವನ್ನು ಸೂಚ್ಯಾರ್ಥವಾಗಿ ತಿಳಿಸಿದನು. ಗ್ರೀಕ್ ದೇವರುಗಳ ಪಿತೃವಾಗಿರುವ ದೌಸ್ಯನ ಕುರಿತ ನೀತಿಬೋಧಕ ಪದ್ಯವೊಂದರಿಂದ ಉಲ್ಲೇಖಿಸುವವನಾಗಿ, ಪೌಲನು ತನ್ನ ಶ್ರೋತೃಗಳಿಗೆ ನಿಸ್ಸಂದೇಹಕರವಾಗಿ ಪರಿಚಿತವಿದ್ದಂಥ ಉಲ್ಲೇಖವನ್ನು ಮಾಡಿದನು. ಹೇಗೂ, ಆತನು ಆ ಭಾಷೆಯನ್ನು ಸತ್ಯ ಹಾಗೂ ಜೀವವುಳ್ಳ ದೇವರಿಗೆ ಅನ್ವಯಗೊಳಿಸಿದನು: "ಆತನಲ್ಲಿಯೇ ನಾವು ಜೀವಿಸುತ್ತೇವೆ ಚಲಿಸುತ್ತೇವೆ ಇರುತ್ತೇವೆ. ನಿಮ್ಮ ಸ್ವಂತ ಕವಿಗಳಲ್ಲಿಯೂ ಕೆಲವರು--ನಾವೂ ಆತನ ಸಂತಾನದವರೇ ಎಂಬ ದಾಗಿ ಹೇಳಿದ್ದಾರೆ" (ಅಪೊಸ್ತಲರ ಕೃತ್ಯಗಳು 17:28; NIV).[52]

ದೇವರುಗಳನ್ನು ಹುಡುಕಬೇಕೆಂಬ ಅಥವಾ ಆವಿಷ್ಕರಿಸಬೇಕೆಂದು ಸ್ವಾಭಾವಿಕ ಮನುಷ್ಯನಲ್ಲಿ ಈ ಅಂತರ್ಗತವಾದ ಕಡ್ಡಾಯಕ್ಕೆ ನಿರ್ವಿವಾದಕರವಾದ ಪುರಾವೆಯು ಮಾನವ ಇತಿಹಾಸದಲ್ಲಿರುತ್ತದೆ. ಪ್ರಾಕ್ತನ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು, ಮತ್ತು ಪ್ರಾಗ್ಜೀವವಿಜ್ಞಾನಿಗಳು ವಿಶ್ವದಲ್ಲೆಡೆಯೂ ವಿವಿಧ ಲೋಹದ, ಕಟ್ಟಿಗೆ, ಮತ್ತು ಕಲ್ಲಿನ ಪ್ರತಿಮೆಗಳನ್ನು ಇದುವರೆಗೂ ಕಂಡು ಹಿಡಿಯುತ್ತಲೇ ಇದ್ದಾರೆ - ಅವುಗಳನ್ನೆಲ್ಲಾ ನಾವು "ವಿಗ್ರಹಗಳು" ಎಂದು ಕರೆಯುತ್ತೇವೆ. ಈ ಪ್ರತಿಮೆಗಳು ಯಾವಾಗಲೂ ಆರಾಧಿಸಲ್ಪಡುತ್ತಿರಲಿಲ್ಲ; ಕೆಲವು ಸಾರಿ ಅವುಗಳು ಜನರಿಗೆ ವಾಸ್ತವಿಕವಾಗಿರುವಂಥ ದೇವರುಗಳ ಪ್ರಾತಿನಿಧಿಕ ರೂಪಗಳಷ್ಟೇ ಆಗಿರುತ್ತಿದ್ದವು. ಗ್ರೀಕ್ ಪ್ರಾಚೀನತೆಯ ಜಗತ್ತಿನಲ್ಲಿ, ಪ್ರತಿಮೆಗಳ ಮತ್ತು ಯಜ್ಞವೇದಿಗಳ ಸಮೂಹಗಳೇ ಇದ್ದವು (ಉದಾಹರಣೆಗೆ ಪೌಲನು ಅಥೇನೆಯಲ್ಲಿ ಕಂಡ "ಪೂಜಿಸುವ ದೇವತಾಪ್ರತಿಮೆಗಳು"; ಅಪೊಸ್ತಲರ ಕೃತ್ಯಗಳು 17:23). ಇವುಗಳಲ್ಲಿ ಎರಡನ್ನು ವಿಶೇಷವಾಗಿ ಗಮನಿಸತಕ್ಕದ್ದಾಗಿದೆ ಮತ್ತು ಅವುಗಳು ನಿಶ್ಚಯವಾಗಿಯೂ ವಿಗ್ರಹಗಳಾಗಿ ಪೂಜಿಸಲ್ಪಡುತ್ತಿದ್ದವು. (1) ಅಥೇನೆಯ ವೃತ್ತಾಕಾರದ ಕ್ರೀಡಾಂಗಣದ ಮೇಲೆ ನಿಂತಿದ್ದ ಅಥೇನಾಳ ಬೃಹತ್, ಎತ್ತರವಾದ ಪ್ರತಿಮೆ. ಆಕೆಯ ಥಳಥಳಿಸುವ, ಬಂಗಾರದ ಶೀರಸ್ತ್ರಾಣ ಮತ್ತು ಈಟಿಗಳು ಅಥೇನೆಯ ಬಂದರು ಆಗಿರುವ ಪೈರಾವುಸ್ ಸಮೀಪಕ್ಕೆ ಬರುತ್ತಿದ್ದಂತೆ ನಾವಿಕರಿಗೆ ಗೋಚರವಾಗುತ್ತಿದ್ದವು. (2) ಅದಕ್ಕಿಂತ ಮನಮೋಹಕವಾದದ್ದೆಂದರೆ ದೌಸ್ಯ ದೇವತೆಯ ಬೃಹದಾಕಾರದ ವಿಗ್ರಹ, ಅದರ ತಲೆಯು - ಓಲಂಪಿಯದ ದೇವಾಲಯದಲ್ಲಿ ಕೂತಿರುವಂತೆ ಚಿತ್ರಿಸಲ್ಪಟ್ಟಿದ್ದರೂ - ಮೇಲ್ಛಾವಣಿಯಷ್ಟು ಎತ್ತರದಲ್ಲಿ ಕಾಣಿಸುತ್ತಿತ್ತು. ಎರಡನೆಯದ್ದು ಪ್ರಾಚೀನ ಜಗತ್ತಿನ ಏಳು ಅದ್ಭುತಗಳಲ್ಲಿ ಒಂದೆಂದು ಎಣಿಸಲ್ಪಟ್ಟಿರುತ್ತೆಂಬುದಾಗಿ ತಿಳಿಯಲಾಗಿರುತ್ತದೆ.

ಪ್ರತಿಮೆಯ ಮೇಲೆ ಮತ್ತು ಆಚೆಯಲ್ಲಿ, ಬಹಳಷ್ಟು ಜನರಿಗಾದರೋ, ಸನ್ಮಾನಿಸಲ್ಪಡುತ್ತಿದ್ದ ಅಥವಾ ಆರಾಧಿಸಲ್ಪಡುತ್ತಿದ್ದ ಒಬ್ಬ ದೇವರು ಅಥವಾ ವೀರನಾಯಕನ ಭಾವನೆ ಇರುತ್ತಿತ್ತು. Samosataದ Lucianನು (ಕ್ರಿ.ಶ. 115-200), ಈತನು ಒಬ್ಬ ವಿಡಂಬನಾತ್ಮಕ ಸಂಭಾಷಣೆಗಳ ಬರಹಗಾರನಾಗಿದ್ದು, ಒಂದು ಸಾರಿ ಈತನು ಒಬ್ಬ ಶಿಲ್ಪಿಯಾಗುವ ತರಬೇತಿಗೆ ಸೇರಿಕೊಂಡಿದ್ದನು ಮತ್ತು ಅಂಥ ಪ್ರತಿಮೆಗಳು ಹೇಗೆ ಅಸ್ತಿತ್ವಕ್ಕೆ ಬಂದವೆಂಬುದನ್ನು ಚೆನ್ನಾಗಿ ಬಲ್ಲವನಾಗಿದ್ದನು. ಆತನ ಬರಹಗಳಲ್ಲೊಂದರಲ್ಲಿ, ಆತನು ತನ್ನ ವಿಡಂಬನೆಯನ್ನು ಅಂತಹ ವಿಗ್ರಹಗಳನ್ನು ಘನಪಡಿಸುವದಕ್ಕೆ ಮನಸ್ಸು ಮಾಡುವವರ ಕಡೆಗೆ ತಿರುಗಿಸಿದನು - ಓಲಂಪಿಯಾದಲ್ಲಿದ್ದ ದೌಸ್ಯ ದೇವತೆಯ ಮಹಾ ವಿಗ್ರಹದ ಬಗ್ಗೆ ಸಹ ವಿಡಂಬನೆ ಮಾಡಿದನು. ಅದು ಹೊರಗಡೆಯಲ್ಲಿ ಚಿನ್ನ ಮತ್ತು ದಂತಗಳಿಂದ ಕೂಡಿದ್ದಾಗಿದ್ದರೂ, ಅದು ಒಳಗಡೆಯಲ್ಲಿ ಕಂಬಿಗಳು, ಚೇಲಕಗಳು, ಕಟ್ಟಿಗೆಗಳು, ಮೊಳೆಗಳು, ಮತ್ತು ಗೂಟಗಳಿಂದ ಜೋಡಿಸಲ್ಪಟ್ಟು

ನಿಂತಿತ್ತು.[53]

ಅದೇ ರೀತಿಯ ಕಟುವಾದ ಆದರೆ ಕಡಿಮೆಯಾದ ಹಾಸ್ಯದೊಂದಿಗೆ ಮೂರ್ಖತನವನ್ನು ಬಯಲಿಗೆ ಎಳೆಯುವಿಕೆಯು ಯೆಶಾಯ 44:9-20ರಲ್ಲಿ ಕಾಣಿಸಿಕೊಳ್ಳುತ್ತದೆ. ಯೆಶಾಯನು (ಯೆಶಾಯ 44) ಮತ್ತು ಪೌಲನು (ಅಪೊಸ್ತಲರ ಕೃತ್ಯಗಳು 17) ಹೊಂದಿದ್ದ ಮನೋಭಾವವು ನಂಬಿಗಸ್ತರಾದ ಯೆಹೂದ್ಯರ ವೈಶಿಷ್ಟ್ಯತೆಯಾಗಿತ್ತು. ದೇವರು ಸೀನಾಯಿ ಪರ್ವತದ ಮೇಲೆ ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವನ್ನು ಕೊಟ್ಟ ವೇಳೆ ನಿಖರವಾಗಿ ಇದನ್ನೇ ಅವರಿಂದ ಎದುರುನೋಡಿದ್ದನು (ವಿಮೋಚನಕಾಂಡ 20:3-6) ಮತ್ತು ಕಾನಾನ್ ದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಯೋರ್ದಾನ್ ನದಿಯನ್ನು ದಾಟುವದಕ್ಕೆ ಸಿದ್ಧತೆ ಮಾಡಿಕೊಳ್ಳುವ ವೇಳೆ ಘನಗಂಭೀರವಾಗಿ ಅದನ್ನು ಪುನರುಚ್ಚರಿಸಿದರು (ಧರ್ಮೋಪದೇಶಕಾಂಡ 5:7-10). ಎರಡೂ ಸಂದರ್ಭಗಳಲ್ಲಿ, ಅತ್ಯಂಥ ಒತ್ತಿ ಹೇಳಲ್ಪಡುವಿಕೆ ಮತ್ತು ಎಚ್ಚರಿಕೆಯೊಂದಿಗೆ ಹೇಳಲ್ಪಟ್ಟ ಕಟ್ಟಳೆಯು ವಿಗ್ರಹಾರಾಧನೆಗೆ ಸಂಬಂಧಿಸಿದ್ದಾಗಿತ್ತು.[54] ಯೆಹೋಶುವನು, ಇಸ್ರಾಯೇಲ್ಯರಿಗೆ ತನ್ನ ಅಂತಿಮ ಅಪ್ಪಣೆಗಳನ್ನು ನೀಡುವ ವೇಳೆ, ಪರದೇಶದ ದೇವರುಗಳನ್ನು ಪೂಜಿಸಬಾರದೆಂದು ಜನರನ್ನು ಎಚ್ಚರಿಸುವದು ಅವಶ್ಯಕವೆಂಬುದಾಗಿ ಕಂಡನೆಂಬುದು ಸ್ಪಷ್ಟವಾಗಿರುತ್ತದೆ (ಯೆಹೋಶುವ 24:20-24). ಆತನು ಬುದ್ಧಿವಾದ ಹೇಳಿದ್ದರ ಹೊರತಾಗಿಯೂ, ನ್ಯಾಯಸ್ಥಾಪಕರಿಂದ ಮೊದಲ್ಗೊಂಡು ಅರಸರ ಕಾಲದ ತನಕ ವಿಸ್ತರಿಸಲ್ಪಟ್ಟಿರುವ ಇಸ್ರಾಯೇಲ್ಯರ ಚರಿತ್ರೆಯ ಕಾಲದಲ್ಲಿ, ಈ ವಿಗ್ರಹಾರಾಧನೆಯಷ್ಟು ಹೆಚ್ಚು ಸಾಮಾನ್ಯವಾಗಿದ್ದ, ವಂಚನಾತ್ಮಕ, ಮತ್ತು ಹಾನಿಕಾರಕ ಪಾಪವು ಬೇರೆ ಇನ್ನಾವದೂ ಇರಲಿಲ್ಲ. ಕ್ರಮೇಣದಲ್ಲಿ ಯೆಹೂದ ಮತ್ತು ಇಸ್ರಾಯೇಲ್ಯ ಎರಡೂ ರಾಜ್ಯಗಳು ಸೆರೆಯಾಳಾಗಿ ಕೊಂಡೊಯ್ಯಲ್ಪಡುವದಕ್ಕೆ - ಇಸ್ರಾಯೇಲ್ಯವು ಅಶ್ಶೂರ್ಯಕ್ಕೆ ಮತ್ತು ಯೆಹೂದವು ಬಾಬೆಲಿಗೆ - ಇದ್ದ ಪ್ರಮುಖ ಕಾರಣಗಳಲ್ಲಿ ಇದು ಒಂದಾಗಿತ್ತು. ದೇವರ ದಂಡನೆಯು ಕೊನೆಗೆ ಇಚ್ಛಿತ ಫಲಿತವನ್ನು ಸಾಧಿಸಿತ್ತು; ಸೆರೆವಾಸ ಕಾಲದ ಬಳಿಕ, ಇಸ್ರಾಯೇಲ್ಯವು ಸಾರಭೂತವಾಗಿ ವಿಗ್ರಹಾರಾಧನೆಯೊಂದಿಗೆ ಸಂಬಂಧವನ್ನು ಅಂತ್ಯಗೊಳಿಸಿಕೊಂಡಿತ್ತು.

ಅಂತರ್-ಒಡಂಬಡಿಕೆಗಳ ಕಾಲದ ವೇಳೆ, Antiochus IV Epiphanesನಿಂದಾದ ಹಿಂಸೆಯ ನಿಮಿತ್ತವಾಗಿ, ಯೆಹೂದ್ಯರು ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳಲು Seleucidsರೊಂದಿಗೆ ರಾಜಿ ಮಾಡಿಕೊಳ್ಳಬೇಕೆಂಬ ಪ್ರಲೋಭನೆಗೊಳಗಾಗಿದ್ದರು. ಇದರಲ್ಲಿ ಧರ್ಮಶಾಸ್ತ್ರವನ್ನು ತೊರೆದು ಬಿಡುವದು ಮತ್ತು ಸುಳ್ಳು ದೇವರುಗಳನ್ನು ಪೂಜಿಸುವದು ಸೇರಿತ್ತು. ಹೇಗೂ, ಮೆಕಬ್ಬಿಯರು ತಮ್ಮನ್ನು ದಬ್ಬಾಳಿಕೆ ಮಾಡುವವರಿಗೆ ವಿರುದ್ಧ ದಂಗೆ ಎದ್ದರು ಮತ್ತು ಅವರನ್ನು ಅಧಿಕಾರದಿಂದ ಕಿತ್ತೇಸೆದರು (ಕ್ರಿ.ಪೂ. 167-164). ಪ್ರಥಮ ಕ್ರೈಸ್ತ ಶತಮಾನ ಮತ್ತು ಸ್ನಾನಿಕನಾದ ಯೋಹಾನನ ಹಾಗೂ ಯೇಸುವಿನ ಆಗಮನದ ಹೊತ್ತಿಗೆ ಯೆಹೂದ್ಯರೊಳಗೆ ವಿಗ್ರಹಾರಾಧನೆಗೆ ಅಷ್ಟೇನೂ ಪುರಾವೆಯು ಇರುವದಿಲ್ಲ.

*ಹಳೆಯ ಒಡಂಬಡಿಕೆಯಲ್ಲಿ ದೇವರ ಜನರಿಗೆ ವಿಗ್ರಹಾರಾಧನೆಯು ಏಕೆ ಅಂತಹ ಒಂದು ಶೋಧನೆಯಾಗಿತ್ತು?* ಇಸ್ರಾಯೇಲ್ಯರು ಮೋಹಕ್ಕೆ ಒಳಗಾಗಿ ದೇವರಿಗೂ ಆತನ ಧರ್ಮಶಾಸ್ತ್ರಕ್ಕೂ ವಿಮುಖರಾಗುವಷ್ಟರ ಮಟ್ಟಿಗೆ ಬೈಬಲಿನ ಕಾಲಗಳಲ್ಲಿ ವಿಗ್ರಹಾರಾಧನೆಯಲ್ಲಿ ಅಂತಹದ್ದೇನಿತ್ತು? ಈ ಮುಂಚೆ ತಿಳಿಸಿದ ಪ್ರಕಾರವೇ, ವಿಗ್ರಹಾರಾಧನೆಯು ಅನ್ಯಧರ್ಮಿಯ ಜಗತ್ತಿನ ಮೇಲೆ ಹೊಂದಿದ್ದ ಶಕ್ತಿಯು ಅದು ಪ್ರತಿನಿಧಿಸುವ ದೇವತೆಯ ಹೊರಗಿನ ರೂಪ ಅಥವಾ ಪ್ರತಿಮೆಯೊಂದಿಗೆ ಅಷ್ಟೇನೂ ಸಂಬಂಧವನ್ನು ಹೊಂದಿರಲಿಲ್ಲ. ಪ್ರಾಚೀನತೆಯ ಬಹುಪಾಲು ದೇವರುಗಳು ಅಸ್ವಾಭಾವಿಕವೆಂದು ಪರಿಗಣಿಸಲಾಗಿದ್ದ ನಿರ್ದಿಷ್ಟವಾದ ಶಕ್ತಿಗಳಿಗೆ ಸಂಬಂಧವನ್ನು

ಹೊಂದಿದ್ದವು.[55] ಪ್ರಾಚೀನ ಜಗತ್ತಿನಲ್ಲಿದ್ದ ಬಹುಪಾಲು ಜನರು ತಮ್ಮ ಜೀವನೋಪಾಯಕ್ಕೆ ಸ್ವಾಭಾವಿಕ ಶಕ್ತಿಗಳನ್ನು ಅವಲಂಬಿಸಿದ್ದರು. ಕ್ಷಾಮದ ಮತ್ತು ಯುದ್ಧದ ಗಂಡಾಂತರಗಳು ಸದಾ-ಇರುತ್ತಿದ್ದವು. ದೌಸ್ಯನ ಗುಡುಗುಗಳ ಜೊತೆಗಳಲ್ಲಿ ಆಕಾಶದಿಂದ ಮಳೆಯು ಬರದೆ ಹೋದರೆ, ದೆಮೆತೆರನು ಧಾನ್ಯಗಳನ್ನು ಮತ್ತು ಭೂಮಿಯ ಇತರ ಹಣ್ಣುಗಳನ್ನು ಬೆಳೆಯುವಂತೆ ಮಾಡದಿದ್ದರೆ, ಅಥವಾ ಅಥೇನಾಳು ಪಟ್ಟಣವನ್ನು ಕಾಪಾಡದಿದ್ದರೆ, ಮರಣವೇ ಫಲಿತವಾಗುವದು ಎಂಬುದಾಗಿ ಇಸ್ರಾಯೇಲ್ಯರ ನೆರೆಯವರು ನಂಬಿದ್ದರು. ಸೂಕ್ತವಾದ ದೇವರಿಗೆ ಅಥವಾ ದೇವರುಗಳಿಗೆ ಪ್ರಸನ್ನಗೊಳಿಸತಕ್ಕದ್ದು, ಇಲ್ಲವಾದರೆ ವಿನಾಶವು ನಿಶ್ಚಿತವೆಂದು ಭಾವಿಸಿಕೊಳ್ಳಲಾಗಿತ್ತು. ಈ ನಂಬಿಕೆಗಳು ಇಸ್ರಾಯೇಲ್ಯರ ಮೇಲೆ ಪ್ರಭಾವ ಬೀರಿದವು.

ಅಪೊಸ್ತಲನು ಎರಡನೆಯ ಅನ್ಯಧರ್ಮಿತ ಮತಾಚಾರಣೆಯ ಪಾಪವನ್ನು ಪಟ್ಟಿ ಮಾಡಿದನು, ಅದು **ಮಾಟ**. ಈ ಪದವು φαρμακεία (*pharmakeia*) ಎಂಬುದರಿಂದ ಬರುತ್ತದೆ ಮತ್ತು ಆಂಗ್ಲದ "ಫಾರ್ಮಸಿ," "ಫಾರ್ಮಸಿಸ್ಟ್," ಮತ್ತು "ಫಾರ್ಮಾಸೆವುಟಿಕಲ್" ಎಂಬ ಪದಗಳನ್ನು ಜ್ಞಾಪಿಸುವದಾಗಿದೆ. ಅದಕ್ಕೆ ಸಂಬಂಧಿತ ಗ್ರೀಕ್ ಕ್ರಿಯಾಪದವು φαρμακεύω (*pharmakeuō*) ಎಂದಾಗಿದ್ದು ಅದರರ್ಥವು "ಒಂದು ಮದ್ದನ್ನು ಅಥವಾ ಔಷಧವನ್ನು ಕೊಡು," "ಮಂತ್ರಗಳನ್ನು ಬಳಸು," "ಮಾಟವನ್ನು ಅಭ್ಯಾಸಿಸು," ಅಥವಾ "ಒಬ್ಬ ವ್ಯಕ್ತಿಗೆ ಮದ್ದು ನೀಡು, ಆತನಿಗೆ ವಿಷಕರವಾದ ಅಥವಾ ಮಂಕುಗೊಳಿಸುವ ಮದ್ದನ್ನು ಕೊಡು" ಎಂದಾಗಿರುತ್ತದೆ.[56] ಅದಕ್ಕೆ ಸಂಬಂಧಿಸಿದ ಇನ್ನೂ ಎರಡು ಪದಗಳು ಹೊಸ ಒಡಂಬಡಿಕೆಯಲ್ಲಿ ಕಾಣಿಸಿಕೊಳ್ಳುತ್ತವೆ. Φάρμακος (*pharmakos*) ಎಂಬ ಪದವು ಒಬ್ಬ "ಮಾಟಗಾರನನ್ನು, ಗಾರುಡಿ ವಿದ್ಯೆ ಅಥವಾ ಮಾಟಮಂತ್ರವನ್ನು ಅಭ್ಯಾಸಿಸುವವನನ್ನು" ಸೂಚಿಸುತ್ತದೆ; ಮತ್ತು φάρμακον (*pharmakon*) ಎಂಬ ಪದವು "ಮಾಟ," "ಗಾರುಡಿ ವಿದ್ಯೆ," ಅಥವಾ ಒಂದು "ಗಾರುಡಿ ಔಷಧ ಗುಟುಕು" ಎಂಬುದನ್ನು ಸೂಚಿಸುತ್ತದೆ.[57] ಇವುಗಳಲ್ಲಿ ಕೆಲವು ಸಹಾಯಕರ ಔಷಧ ಎಂಬುದಾಗಿ ಸೂಚ್ಯಾರ್ಥವನ್ನು ನೀಡಬಹುದಾದರೂ, ಪದದ ಗುಂಪಿಗೆ ನಕಾರಾಥ್ಮಕ ಸೂಚ್ಯಾರ್ತಗಳಿರುತ್ತವೆ, ಅವುಗಳಲ್ಲಿ ಮಂತ್ರವಿದ್ಯೆ, ಮಾಟ, ಯಕ್ಷಿಣಿ, ಮತ್ತು ವಿಷ ಎಂಬುವುಗಳು ಸೇರಿರುತ್ತವೆ. Leon Morris ವಾದಿಸಿದ್ದೇನೆಂದರೆ, ಪ್ರಾಚೀನ ಜಗತ್ತಿನಲ್ಲಿ ವೈದ್ಯಕೀಯ ಜ್ಞಾನವು ಮಿತವಾಗಿತ್ತಾದ್ದರಿಂದ, "ಚಿಕಿತ್ಸಕಾ ಮೌಲ್ಯವನ್ನು ಮಾತ್ರವಲ್ಲದೆ ಗುಣಪಡಿಸುವದಕ್ಕಿದ್ದ ಮಾಂತ್ರಿಕ ದಾರಿಗಳಿಗೆ ಸಹ ಈ ಪದಗಳು ಬಳಕೆಗೆ ಬಂದವು ಮತ್ತು ಬಳಿಕ ಯಾವದೇ ವಿಧವಾದ ಮಂತ್ರವಿದ್ಯೆಗೆ ಇವುಗಳನ್ನು ಬಳಸಲಾರಂಭಿಸಲಾಗಿತ್ತು (cf. ಪ್ರಕಟನೆ 9:21; 18:23)."[58]

ಹಳೆಯ ಒಡಂಬಡಿಕೆಯಲ್ಲಿ ಮಂತ್ರಗಾರರು ಅಥವಾ ಮಾಟಗಾರರ ವಿಷಯದಲ್ಲಿ ಯಾವದೇ ಸಹಿಷ್ಣುತೆಯನ್ನು ತೋರಿಸಲಾಗಲಿಲ್ಲ. ಮೋಶೆಯು ಹೀಗೆ ಸಲಹೆಯನ್ನು ಕೊಟ್ಟನು, "ಮಾಟಗಾರ್ತಿಯನ್ನು ಬದುಕಲೀಸಬಾರದು" (ವಿಮೋಚನಕಾಂಡ 22:18). ಆತನು ಹೀಗೆ ಸಹ ಹೇಳಿದನು,

> ಮಕ್ಕಳನ್ನು ಆಹುತಿಕೊಡುವವರು, ಕಣಿಹೇಳುವವರು, ಶಕುನನೋಡುವವರು, ಯಂತ್ರಮಂತ್ರಗಳನ್ನು ಮಾಡುವವರು, ಮಾಟಗಾರರು, ತಂತ್ರಗಾರರು, ಸತ್ತವರನ್ನು ವಿಚಾರಿಸುವವರು, ಬೇತಾಳಕರು, ಪ್ರೇತಸಿದ್ಧರು ಇಂಥವರು ಯಾರೂ ನಿಮ್ಮಲ್ಲಿ ಇರಬಾರದು. ಇಂಥ ಕೆಲಸಗಳನ್ನು ನಡಿಸುವವರು ಯೆಹೋವನಿಗೆ ಅಸಹ್ಯರಾಗಿದ್ದಾರೆ (ಧರ್ಮೋಪದೇಶಕಾಂಡ 18:10-12).

3. ಪರಸ್ಪರ ಸಂಬಂಧಗಳಲ್ಲಿ ಭಕ್ತಿಹೀನತೆ (5:20, 21)

ತರುವಾಯ, ಪೌಲನು **ಹಗೆತನ**ವನ್ನು ಮನುಷ್ಯನ ಆಂತರೀಕ ಸಂಬಂಧಗಳಲ್ಲಿ ಶಾರೀರಭಾವದ ಕರ್ಮವೆಂಬುದಾಗಿ ಪಟ್ಟಿ ಮಾಡುತ್ತಾನೆ. ಹಗೆತನಗಳು ಎಂಬ ಬಹುವಚನವು[59] ἔχθρα (*echthra*) ಎಂಬ ಪದದಿಂದ ಬರುತ್ತದೆ, ಅದು "ವೈರತ್ವ" ಅಥವಾ "ದ್ವೇಷ" ಎಂಬ ಯೋಚನೆಯನ್ನು ತಿಳಿಯಪಡಿಸುತ್ತದೆ. ಅದು ἐχθρός (*echthros*) ಎಂಬ ಪದಕ್ಕೆ ಸಂಬಂಧ ಹೊಂದಿದೆ, ಇದರರ್ಥವು "ವೈರಿ" ಅಥವಾ "ದ್ವೇಷಕ್ಕೊಳಗಾದವನು" ಎಂದಾಗಿದೆ. ಎರಡೂ ಗ್ರೀಕ್ ಪದಗಳ ನಕಾರಾತ್ಮಕ ಸೂಚ್ಯಾರ್ಥಗಳು ಸಂದೇಹಾಸ್ಪದವಿಲ್ಲದವುಗಳಾಗಿವೆ.

ಕೆಲವು ವಾಕ್ಯಭಾಗಗಳಲ್ಲಿ, ಈ ಪದಗಳು ಒಂದು ದುಷ್ಟ ಹೃದಯದ ಪ್ರತಿಕ್ರಿಯೆಯನ್ನು ಗುರುತಿಸುತ್ತವೆ. ರೋಮಾ 8:7 ಹೇಳುವದೇನೆಂದರೆ "ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು." ಅದೇ ರೀತಿಯಲ್ಲಿಯೇ, ಯಾಕೋಬ 4:4 ಹೇಳುವದೇನೆಂದರೆ "ಇಹಲೋಕಸ್ನೇಹವು ದೇವವೈರ." ಕರ್ತನ "ವೈರಿ"ಯಾಗಿ, ಸೈತಾನನು ಲೋಕದಲ್ಲಿ ಕರ್ತನ ರಾಜ್ಯವು ಪ್ರಗತಿ ಹೊಂದದ ಹಾಗೆ ಮತ್ತು ಫಲವನ್ನು ಕೊಡದ ಹಾಗೆ ತಡೆಯನ್ನೊಡ್ಡಲು ಆತನ ಹೊಲದಲ್ಲಿ ಹಣಜಿಗಳನ್ನು ಬಿತ್ತುತ್ತಾನೆ (ಮತ್ತಾಯ 13:37-39). ನಾಶನದಲ್ಲಿರುವವರನ್ನು ರಕ್ಷಿಸಬೇಕೆಂಬ ಕ್ರಿಸ್ತನ ವಿಮೋಚನಾತ್ಮಕ ಧ್ಯೇಯದೊಳಗೆ ಮರಣವು ಕಡೆಯ "ವೈರಿ" ಆಗಿದೆ (1 ಕೊರಿಂಥ 15:25, 26).

ಇಲ್ಲಿ ಭಾಗಿಯಾಗಿರುವ ವೈರತ್ವವು, ಯಾವದೇ ಕಾರಣಕ್ಕಾಗಿ (ಗಳಿಗಾಗಿ) ವ್ಯಕ್ತಿಗಳ ಪರಸ್ಪರ ಮಟ್ಟದಲ್ಲಿ ಎದ್ದೇಳಬಹುದಾದ ಭಾವಗಳು ಅಥವಾ ಕ್ರಿಯೆಗಳಿಗೆ ಸಂಬಂಧ ಹೊಂದಿರುತ್ತವೆ. ಅಂತಹ ವಿರೋಧತ್ವವು ಪೈಪೋಟಿಗಳು, ಅಸೂಯೆ, ಹೊಟ್ಟೆಕಿಚ್ಚು, ಮುನಿಸಿಕೊಳ್ಳುವಿಕೆ, ಅನುಭವಿಸಿದ ನಿಂದೆಗಳು, ಅಥವಾ ಬಹುಶಃ ಒಂದು ಸ್ವಾಭಾವಿಕ ಹಗೆತನ ಅಥವಾ ಇಷ್ಟವಾಗದಿರುವಿಕೆ ಇವುಗಳಿಂದ ಹೊರಹೊಮ್ಮಬಹುದಾಗಿದೆ.

"ಹಗೆತನಗಳು" ಎಂಬದರಿಂದ ಆರಂಭವಾಗಿ ಅದು ಮೇಲ್ಮುಖವಾಗಿ ಏರುವದನ್ನು, ಪ್ರತಿ ಪದದೊಂದಿಗೆ ತೀಕ್ಷ್ಣಗೊಳ್ಳುತ್ತಾ ಸಾಗಿ ಕೊನೆಗೆ "ಕೊಲೆಗಳು" (5:21; KJV)[60] ಎಂಬದರಲ್ಲಿ ಸಮಾಪ್ತಿಯಾಗುವದನ್ನು ಗಮನಿಸುತ್ತೇನೆಂದು J. B. Lightfootನು ಭಾವಿಸಿದನು. ಹೇಗೂ, ಈ ವಿಶ್ಲೇಷಣೆಯನ್ನು ಎಲ್ಲಾ ವ್ಯಾಖ್ಯಾನಕಾರರೂ ಒಪ್ಪಿಕೊಳ್ಳುವದಿಲ್ಲ. ಅದರ ವಿರುದ್ಧವಾದ ಒಂದು ಬಲವಾದ ವಾದವು ಏನೆಂದರೆ ಅತ್ಯುತ್ತಮ ಹಸ್ತಪ್ರತಿಗಳೊಳಗೆ "ಕೊಲೆಗಳು" (φόνοι, *phonoi*) ಎಂಬುದು ಕಾಣಿಸಿಕೊಳ್ಳುವದಿಲ್ಲ ಎಂಬದೆ.[61]

ಪಟ್ಟಿಯಲ್ಲಿ ಮುಂದೆ ಕಾಣಿಸಿಕೊಳ್ಳುವದು **ಮತಭೇದ** ಎಂಬುದು. ಗ್ರೀಕ್ ಪದ ἔρις (*eris*) ಎಂಬುದನ್ನು "ವೈಷಮ್ಯ" (NIV) "ಜಗಳವಾಡುವಿಕೆ" (NLT) ಎಂದು ಸಹ ಅನುವಾದಿಸಬಹುದು. ಈ ಅರ್ಥನಿರೂಪಣೆಗಳಿಗೆ Bauerನ ಶಬ್ದಕೋಶವು "ವೈರತ್ವ," "ಕಲಹ," ಮತ್ತು "ವ್ಯಾಜ್ಯಗಳು" ಎಂಬ ಯೋಚನೆಗಳನ್ನು ಕೂಡಿಸುತ್ತದೆ.[62] ಗ್ರೀಕ್ ಯೋಚನೆಯಲ್ಲಿ, "ಮತಭೇದ" ಎಂಬುದನ್ನು ಮೂರ್ತಿಕರಣಗೊಳಿಸಲಾಗಿತ್ತು ಮತ್ತು ಎರೀಸ ದೇವತೆಯಲ್ಲಿ ದೈವೀಕರಣಗೊಳಿಸಲಾಗಿತ್ತು, ಆ ದೇವತೆಯ "ಹೊಲಸಾದ ಪ್ರಭಾವವು ಯುದ್ಧ ಹಾಗೂ ನಾಶನಗಳನ್ನು ಉಂಟು ಮಾಡಿ[ತ್ತು]."[63] ಪೌಲನ ಬಯಕೆಯು ವೈಷಮ್ಯ ಮತ್ತು ಜಗಳಗಳನ್ನು ಸಭೆಯಿಂದ ಹೊರಗಿಡಬೇಕು ಎಂದಾಗಿತ್ತು (ನೋಡಿರಿ 1 ಕೊರಿಂಥ 1:11; 3:3); ಯೇಸುವಿನ ಇಚ್ಛೆ ಮತ್ತು ಪ್ರಾರ್ಥನೆಗನುಗುಣವಾಗಿ (ಯೋಹಾನ 17:20-23), ಸಹೋದರರು ಸಮಾಧಾನದಿಂದ ಮತ್ತು ಸಾಮರಸ್ಯದಿಂದ ಬದುಕಬೇಕೆಂಬುದು ಆತನ ಬಯಕೆಯಾಗಿತ್ತು.

"ಮತಭೇದ"ದ ಬಳಿಕ **ಹೊಟ್ಟೇಕಿಚ್ಚು** (ζῆλος, *zēlos*) ಬರುತ್ತದೆ. ಗ್ರೀಕ್ ಪದವು, ಆಂಗ್ಲದ

"ಝೀಲ" ಎಂಬುದರ ಹಿಂದೆ ನಿಲ್ಲುವದಾಗಿದ್ದು, ಧಹಿಸುವ ತೀವ್ರಾಸಕ್ತಿಯನ್ನು ಸೂಚಿಸುತ್ತದೆ. ಅದು "[ಒಂದು ಕಾರ್ಯ]ದಲ್ಲಿರುವ ತೀಕ್ಷ್ಣವಾದ ಸಕಾರಾತ್ಮಕ ಆಸಕ್ತಿ, *ಅಭಿಮಾನ, ಕಡು ಪ್ರೀತಿ"* ಯನ್ನು ಸೂಚಿಸಬಹುದಾಗಿದೆ. ಇನ್ನೊಂದೆಡೆಯಲ್ಲಿ, ಅದು ಕೆಲವು ಸಾರಿ "ಮತ್ತೊಬ್ಬನ ಸಾಧನೆಗಳನ್ನು ಅಥವಾ ಯಶಸ್ಸನ್ನು ಕಂಡು ತೀಕ್ಷ್ಣವಾದ ನಕಾರಾತ್ಮಕ ಭಾವಗಳನ್ನು ಹೊಂದಿರುವದು, *ಹೊಟ್ಟೇಕಿಚ್ಚು, ಅಸೂಯೆ"* ಇವುಗಳನ್ನು ಸೂಚಿಸಬಹುದಾಗಿದೆ.[64] ಈ ಸನ್ನಿವೇಶದಲ್ಲಿ, "ಹೊಟ್ಟೇಕಿಚ್ಚು" ಎರಡನೆಯ ಅರ್ಥದಲ್ಲಿ ಬಳಸಲಾಗಿದೆ, ಅದು ಮನುಷ್ಯರ ಹೃದಯಗಳಲ್ಲಿರುವ ಸ್ವಾರ್ಥ, ಶರೀರಭಾವದ ಬಯಕೆಗಳ ಕಡೆಗೆ ನಡಿಸುವದಾಗಿದೆ.

ಖಂಡಿತವಾಗಿಯೂ, ದೇವರನ್ನು ಬಣ್ಣಿಸುವದಕ್ಕೆ ಬಳಸುವದಾದರೆ (ವಿಮೋಚನಕಾಂಡ 20:5; ಧರ್ಮೋಪದೇಶಕಾಂಡ 4:24; 5:9; 6:14, 15), "ಹೊಟ್ಟೇಕಿಚ್ಚು" ಎಂಬ ಪದವು ಒಂದು ಸಕಾರಾತ್ಮಕ ಸೂಚ್ಯಾರ್ಥವನ್ನು ಒಳಗೊಂಡಿರುತ್ತದೆ. ಮೋಶೆಯು ಹೀಗೆ ಬರೆದನು, "ಸ್ವಗೌರವವನ್ನು ಕಾಪಾಡಿಕೊಳ್ಳುವವನು ಎಂಬ ಹೆಸರುಳ್ಳ ಯೆಹೋವನು ತನಗೆ ಸಲ್ಲಬೇಕಾದ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದ್ದರಿಂದ" (ವಿಮೋಚನಕಾಂಡ 34:14). ದೇವರಿಗಿರುವ ಹೊಟ್ಟೇಕಿಚ್ಚು ಅಥವಾ ರೋಷವು ಆತನ ಪ್ರೀತಿಯೊಳಗಿಂದ ಹೊರಹೊಮ್ಮುವದಾಗಿದೆ. ಆತನ ಹೊಟ್ಟೇಕಿಚ್ಚು ಯಾವಾಗಲೂ ಮನುಷ್ಯನ ಆಶೀರ್ವಾದದ ಬಗ್ಗೆ ಕಾಳಜಿ ಹೊಂದಿದ್ದರೆ, ಪ್ರಾಕೃತ ಮನುಷ್ಯನ ಹೊಟ್ಟೇಕಿಚ್ಚು ವಿನಾಶಕರವಾಗಿರಬಲ್ಲದು ಮತ್ತು ಅನೇಕ ಸಾರಿ ಅದು ಹಾಗೆಯೇ ಇರುತ್ತದೆ.

ಒಬ್ಬ ಆತ್ಮೀಕ ಮನುಷ್ಯನ ಹೊಟ್ಟೇಕಿಚ್ಚು ಸಹ ಪ್ರೀತಿಯಿಂದ ಹೊರಹೊಮ್ಮಬಹುದಾಗಿದೆ, ಪೌಲನ ವಿಷಯದಲ್ಲಿ ಅದನ್ನು ಕಾಣುತ್ತೇವೆ. ಆತನು ಕೊರಿಂಥದಲ್ಲಿದ್ದ ಪ್ರಿಯರಾದ ಸಹೋದರರಿಗೆ ಈ ಮಾತುಗಳನ್ನು ಬರೆದನು:

> ಯಾಕಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ [ζηλόω, *zēloō*] ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯಮಾಡಿದೆನಲ್ಲಾ (2 ಕೊರಿಂಥ 11:2).

ದೇವರ ಹೊಟ್ಟೇಕಿಚ್ಚು ಯಾವಾಗಲೂ ತನ್ನ ಜನರಿಗೆ ಒಳಿತನ್ನೇ ಕೋರುವ ಪ್ರಕಾರವೇ, ಪೌಲನ ಹೊಟ್ಟೇಕಿಚ್ಚು ಅದೇ ರೀತಿಯೇ ಆಗಿತ್ತು. ಅದು ದೇವರಾತ್ಮನಿಂದ ಹೊರಹೊಮ್ಮಿದ್ದಾಗಿತ್ತದೆಂಬುದು ಸ್ಪಷ್ಟವಾಗಿರುತ್ತದೆ, ಆ ಆತ್ಮನು ಸೈತಾನನ ಹಾನಿಕರ ಉದ್ದೇಶಗಳನ್ನು ಭಂಗಪಡಿಸುವದಕ್ಕಾಗಿ ಪೌಲನಲ್ಲಿ ಕಾರ್ಯಮಾಡುತ್ತಿದ್ದನು.

ಹೇಗೂ, ಆತ್ಮೀಕರಲ್ಲದ ಮನುಷ್ಯರ ಹೃದಯಗಳಲ್ಲಿ ಹೊಟ್ಟೇಕಿಚ್ಚು (ಅಥವಾ ಅಸೂಯೆ) ಹುಟ್ಟುವಾಗ, ಅದು ಇಂಗಿತ ಮತ್ತು ಪರಿಣಾಮಗಳೆಡರಲ್ಲೂ ಕೆಟ್ಟದ್ದಾಗಿರಬಲ್ಲದು.[65] ಮತ್ತೊಬ್ಬ ವ್ಯಕ್ತಿಯು ತನ್ನ ಲಾಭಕ್ಕಾಗಿ ಇರಬೇಕೆಂದು ಬಯಸಿದ ಗುಣ, ಪ್ರತಿಭೆ, ಅಥವಾ ಸ್ವತ್ತುಗಳನ್ನು ಬೇರೊಬ್ಬ ವ್ಯಕ್ತಿಯು ಹೊಂದಿರಬಹುದಾಗಿದೆ. ಇದರ ಫಲಿತವಾಗಿ ವೈಷಮ್ಯ ಮತ್ತು ಹೊಟ್ಟೆಯುರಿ ಉಂಟಾಗುತ್ತವೆ.

ಪಟ್ಟಿಯಲ್ಲಿರುವ ಮುಂದಿನ ಗುರ್ಗುಣವೆಂದರೆ **ಸಿಟ್ಟು**, ಇದು θυμός (*thumos*) ಎಂಬುದರ ಬಹವಚನ ಪದದ ಅನುವಾದವಾಗಿರುತ್ತದೆ. ಒಂದು ಅಕ್ಷರಶಃ ಅನುವಾದವು "ಸಿಟ್ಟುಗಳು" ಅಥವಾ "ರೌದ್ರಗಳು" ಎಂದಾಗಿರುವದು, ಆದರೆ ಅಂತಹ ಅನುವಾದಗಳು ಆಂಗ್ಲದಲ್ಲಿ ಸೂಕ್ತವೆಂದು ಅನ್ನಿಸುವದಿಲ್ಲ. NASBಯು ಆಂಗ್ಲ ಭಾಷೆಗೆ ಅನುಗುಣವಾಗಿದ್ದು, ಅದೇ ವೇಳೆಯಲ್ಲಿ ಆ ಪದದ ಬಹುವಚನದ ಅರ್ಥವನ್ನು ಸಹ ಕಾಪಾಡಿಕೊಳ್ಳುವಲ್ಲಿ ಅತ್ಯುತ್ತಮ ಕೆಲಸ

ಮಾಡಿರುತ್ತದೆ. NIVಯು ಸಹ "ಕೋಪದ ಕೆರಳುವಿಕೆಗಳು" ಎಂಬ ಅನುವಾದದೊಂದಿಗೆ ಅದೇ ಮಾನದಂಡವನ್ನು ಸಾಧಿಸಿರುತ್ತದೆ.

*ಥುಮೊಸ* ಎಂಬುದು ಹೊಸ ಒಡಂಬಡಿಕೆಯಲ್ಲಿ ಅನೇಕ ಸಾರಿ ὀργή (*orgē,* "ಕೋಪ" ಅಥವಾ "ರೌದ್ರ") ಎಂಬುದರ ಜೊತೆಯಲ್ಲಿ ಕಾಣಿಸಿಕೊಳ್ಳುತ್ತದೆ. ಎರಡು ಪದಗಳ ನಡುವಿನ ವ್ಯತ್ಯಾಸವು ಏನೆಂದರೆ *ಒರ್ಗೇ* ಎಂಬುದು "ಹೆಚ್ಚಾಗಿ ನಿರಂತರವಾಗಿರುವ ಮತ್ತು ನೆಲೆಯಾಗಿರುವ ಮನಸ್ಸಿನ ರೂಢಿಯನ್ನು" ಸೂಚಿಸಿದರೆ, *ಥುಮೊಸ* ಎಂಬುದು "ಹೆಚ್ಚಾಗಿ ಅಲ್ಲೋಲಕಲ್ಲೋಲವಾದ ಕೂಗಾಟ, ಭಾವಗಳ ಕುದಿಯುತ್ತಿರುವಂಥ ವ್ಯಾಕುಲತೆಯನ್ನು" ಸೂಚಿಸುತ್ತದೆ. ಅದು "ಹೆಚ್ಚು ಭಾವೋದ್ರಿಕ್ತ ಮತ್ತು ಅದೇ ವೇಳೆಯಲ್ಲಿ ಹೆಚ್ಚು ಕ್ಷಣಿಕವಾದದ್ದು" ಆಗಿರುತ್ತದೆ.[66]

**ಕಕ್ಷಭೇದಗಳು** ಎಂಬುದು ಇನ್ನೊಂದು ಬಹುವಚನದ ಅನುವಾದವಾಗಿರುತ್ತದೆ, ಅದರ ಏಕವಚನವು ἐριθεία (*eritheia*) ಎಂದಾಗಿದೆ. ಈ ಪದವು ἔριθος (*erithos*) ಎಂಬುದರಿಂದ ತೆಗೆದುಕೊಳ್ಳಲ್ಪಟ್ಟದ್ದೆಂಬುದು ಸ್ಪಷ್ಟವಾಗಿರುತ್ತದೆ, ಅದು ಮೂಲತಃ "ಒಬ್ಬ ದಿನಗೂಲಿ"ಯನ್ನು ಸೂಚಿಸುತ್ತದೆ. ಅದಕ್ಕೆ ಸಂಬಂಧಪಟ್ಟ ಕ್ರಿಯಾಪದವಾದ ἐριθεύω (*eritheuō*) ಎಂಬುದು "ದಿನದ ಬಾಡಿಗೆಯಂತೆ ಕೆಲಸ ಮಾಡು" ಎಂಬ ಅರ್ಥವನ್ನು ಕೊಡುತ್ತದೆ. *ಎರಿಥೆಯಿಯಾ* ಎಂಬುದು ಒಬ್ಬ ದಿನಗೂಲಿಯವನ ರೀತಿ, ಮನೋಭಾವ, ಅಥವಾ ಇಚ್ಛೆಯ್ನನು ಬಣ್ಣಿಸುವದಾಗಿ ಬಳಕೆಗೆ ಬಂದಿತು. ಈ ಪದವು ಒಂದು ಗೌರವಯುತವೆಂದು ಕಾಣಿಸುವ ವೃತ್ತಿಯಿಂದ ಬೆಳವಣಿಗೆಗೊಂಡಿದ್ದು ಹೇಗೆಂದು ಸ್ಪಷ್ಟವಾಗಿರುವದಿಲ್ಲ. Friedrich Büchselನು ಯೋಚಿಸಿದ್ದೇನೆಂದರೆ ತಿರಸ್ಕರದಿಂದ ಕೂಡಿದ ಶ್ರೀಮಂತ ವರ್ಗದವರು ದಿನಗೂಲಿಯವರ ಬಗ್ಗೆ ಸಂದೇಹಾಸ್ಪದವಾಗಿದ್ದದರಿಂದ ಇದು ಬಳಕೆಗೆ ಬಂದಿತು, ಆ ಕೂಲಿಯವರು ಗಳಿಕೆ ಬಗ್ಗೆ ಅತಿಯಾಗಿ ಚಿಂತೆಯುಳ್ಳವರಾಗಿ ಕೇವಲ ಒಂದು ಲಾಭಕ್ಕಾಗಿ ಮಾತ್ರವೇ ಕೆಲಸ ಮಾಡುವದಕ್ಕೆ ಸಿದ್ಧರಿರುತ್ತಿದ್ದರು. ಆತನು ಇನ್ನಷ್ಟು ಹೇಳಿದ್ದೇನೆಂದರೆ ಮುಂದೆ *ಎರಿಥೆಯಿಯಾ*ವು ಸ್ವಾರ್ಥ-ಚಿಂತಕರ ಮತ್ತು ಜಾರಸ್ತ್ರೀಯರ - "ತಮ್ಮನ್ನು ಮತ್ತು ತಮ್ಮ ಕೆಲಸವನ್ನು ಕೀಳು ಮಾಡಿಕೊಂಡು, ತಮ್ಮ ಸ್ವಹಿತಾಸಕ್ತಿಗಳಲ್ಲಿಯೇಮಗ್ನರಾಗಿ ಮತ್ತು ಸಕ್ರಿಯರಾಗಿರುವವರು, ತಮ್ಮ ಸ್ವಂತ ಪ್ರಯೋಜನ ಅಥವಾ ಲಾಭವನ್ನು ನೋಡಿಕೊಳ್ಳುವವರು" - ಮನೋಭಾವವನ್ನು ಸೂಚಿಸುವದಾಗಿ ಮಾರ್ಪಟ್ಟಿತು.[67] ಪದವು ಪೈಪೋಟಿ ಮತ್ತು ಬೇರೆಯವರನ್ನು ಅಸಡ್ಡೆ ಮಾಡಿ ವೈಯಕ್ತಿಕ ಲಾಭ ಗಳಿಸಲು ಪ್ರಯತ್ನಿಸುವದನ್ನು ಒಳಗೊಂಡಿರುವಂತೆ ಕಾಣಿಸುತ್ತದೆ. ಕ್ರಿ.ಪೂ. ಶತಮಾನದಲ್ಲಿ ಅರಿಸ್ಟಾಟಲನು ಅದನ್ನು "ಅನ್ಯಾಯಕರವಾದ ದಾರಿಗಳ ಮೂಲಕ ರಾಜಕೀಯ ಹುದ್ದೆಗೋಸ್ಕರ ಸ್ವಾರ್ಥದ ಹುಡುಕಾಟ" ಎಂಬುದನ್ನು ಸೂಚಿಸಲು ಬಳಸಿದನು.[68]

ಅಂಥ ಮನೋಭಾವವೊಂದು ಒಬ್ಬ ಕ್ರೈಸ್ತನ ಗುಣವಿಶೇಷವಾಗಿದ್ದರೂ ಸರಿಯೇ, ಸ್ಥಳೀಯ ಸಭೆಯೊಂದರ ಗುಂಪಿನ, ಅಥವಾ ಸಹಪಾಠಿ ಸಭೆಗಳಲ್ಲಿನ ಗುಂಪುಗಳ (ಗಲಾತ್ಯದಲ್ಲಿರುವವರು) ಗುಣಸ್ವಭಾವವಾಗಿದ್ದರೂ ಸರಿಯೇ, ಪರಿಣಾಮವು ಯಾವಾಗಲೂ ದೇವರ ಜನರ ಸಮಾಧಾನ ಹಾಗೂ ಸಾಮರಸ್ಯವನ್ನು ನಿರ್ಧರಿಸುವಂಥದ್ದಾಗಿತ್ತು. ಆ ದೃಶ್ಯಾವಳಿಗಳಲ್ಲಿ ಇರಬಹುದಾದ ಒಂದೇ ವ್ಯತ್ಯಾಸವೆಂದರೆ ಪರಿಣಾಮವು ಎಷ್ಟೆಷ್ಟು ಪ್ರಮಾಣಗಳಲ್ಲಿ ಇತ್ತು ಎಂಬುದೆ. ಪರಸ್ಪರ ಪೈಪೋಟಿಯಲ್ಲಿದ್ದು ಒಬ್ಬರ ಮತ್ತೊಬ್ಬರನ್ನು ಕಡಿಮೆಯಾಗಿ ಕಾಣಿಸುವಂತೆ ಮಾಡುವದಕ್ಕೆ ಪ್ರಯತ್ನಿಸುವದು ಕ್ರೈಸ್ತರಿಗೆ ಒಂದು ದುರಂತಕರ ಸಂಗತಿಯಾಗಿದೆ.

NASBಯು "ಕಕ್ಷಭೇದಗಳು" ಎಂದು ಅನುವಾದಿಸುವದು ನಿಖರವೆಂಬಂತೆ ಕಾಣಿಸುವದಿಲ್ಲ. ಭಾಷಾ ಪುರಾವೆಯ ಪ್ರಕಾರ, *ಎರಿಥೆಯಿಯಾ* ಎಂಬ ಪದದ ಮುಖ್ಯ ಒತ್ತು ಸ್ವತಃ ಪದದ

ಮೇಲಿರದೆ, ಭಿನ್ನಾಭಿಪ್ರಾಯಗಳನ್ನು ಮತ್ತು ವ್ಯಾಜ್ಯಗಳನ್ನುಂಟು ಮಾಡುವ ಮನೋಭಾವದ ಮೇಲಿರುತ್ತದೆ. ಬೇರೆ ವಾಕ್ಯಭಾಗಗಳಲ್ಲಿ, ಈ ಪದವು ಏಕವಚನದಲ್ಲಿ ಕಾಣಿಸಿಕೊಳ್ಳುವ ಕಡೆಗಳಲ್ಲಿ, NASBಯು ಅದನ್ನು "ಸ್ವಾರ್ಥ ಹೆಬ್ಬಯಕೆ" ಎಂದು ಅನುವಾದಿಸುತ್ತದೆ (ಫಿಲಿಪ್ಪಿ 1:17; ಯಾಕೋಬ 3:14, 16). REBಯು ಅದನ್ನು "ಸ್ವಾರ್ಥ ಹೆಬ್ಬಯಕೆಗಳು" ಎಂದು ಅನುವಾದಿಸಿದರೆ, ESVಯು "ಪೈಪೋಟಿಗಳು" ಎಂದು ಅನುವಾದಿಸುತ್ತದೆ. ನಿಖರವಾದ ಅನುವಾದವು ಏನೇ ಇದ್ದರೂ ಸರಿಯೇ, ತನ್ನನ್ನು ಪ್ರಸಿದ್ಧಿಪಡಿಸಿಕೊಂಡು ಬೇರೆಯವರನ್ನು ತುಳಿದು ತಾನು ಉನ್ನತವಾಗಿ ಕಾಣಿಸಿಕೊಳ್ಳಬೇಕೆಂಬ ಸ್ವಾರ್ಥ ಬಯಕೆಯು ಒಬ್ಬ ಕ್ರೈಸ್ತನಲ್ಲಿರುವದಾದರೆ ಅದು ಖಂಡಿತವಾಗಿಯೂ ಹಗೆತನ ಮತ್ತು ಭೇದಗಳನ್ನು ಉಂಟು ಮಾಡುವದಾಗಿದೆ. ಇದು ಕ್ರಿಸ್ತನ ಆತ್ಮಕ್ಕೆ ಅತಿ ಒರಟಾಗಿ ತದ್ವಿರುದ್ಧವಾಗಿರುತ್ತದೆ (ಫಿಲಿಪ್ಪಿ 2:5-8).

**ಭಿನ್ನಮತಗಳು** ಎಂಬ ಪದವು διχοστασία (*dichostasia*) ಎಂಬುದರ ಬಹುವಚನವನ್ನು ಪ್ರತಿನಿಧಿಸುತ್ತದೆ, ಮತ್ತು ಅದರ ಅರ್ಥದ ಬಗ್ಗೆ ಸಂಶಯವೇ ಇರುವದಿಲ್ಲ. ಬೇರೆ ತರ್ಜುಮೆಗಳಲ್ಲಿ ಸಹ ಅದು "ಭಿನ್ನಮತ" ಅಥವಾ "ಭಿನ್ನಮತಗಳು" ಎಂದು ಅನುವಾದಿಸಲಾಗಿದೆ (NRSV; NIV; NKJV; REB; ESV). ಈ ಪದವು ಹೊಸ ಒಡಂಬಡಿಕೆಯೊಳಗೆ ಈ ಸ್ಥಳದಲ್ಲಿ ಮತ್ತು ರೋಮಾ 16:17ರಲ್ಲಿ ಮಾತ್ರವೇ ಕಂಡುಬರುತ್ತದೆ ಮತ್ತು ಗ್ರೀಕ್ ಹಳೆಯ ಒಡಂಬಡಿಕೆಯ ಪ್ರೇರಿತವಲ್ಲದ ಪುಸ್ತಕದಲ್ಲಿ ಒಂದು ಸಾರಿ ಕಾಣಿಸಿಕೊಳ್ಳುತ್ತದೆ (1 Maccabees 3:29). ಇದನ್ನು "ಭಿನ್ನಾಭಿಪ್ರಾಯ," "ಪಂಗಡ," "ಭೇದ," ಅಥವಾ "ಪಿತೂರಿ" ಎಂದು ಸಹ ಅನುವಾದಿಸಬಹುದು. ಈ ಪದವು "ಪಕ್ಷಪಾತಿ ಮತ್ತು ನಿರಂತರವಾದ ಜಗಳವಾಡುವಿಕೆ" ಎಂಬ ಅರ್ಥವನ್ನು ಹೊಂದಿದೆ. ರೋಮಾ 16:17ರಲ್ಲಿ, ಅದು "ಭೇದಗಳನ್ನು ಉಂಟು ಮಾಡುವವರು" "ಪಂಗಡಗಳನ್ನು ಉಂಟು ಮಾಡುವವರು" (NKJV) ಎಂದು ಸೂಚಿಸುತ್ತದೆ. ಈ ಪಾಪವು ಎಷ್ಟೊಂದು ಗಂಭೀರವೆಂದರೆ ಅದನ್ನು ನಡಿಸುವವರನ್ನು "ಬಿಟ್ಟು ದೂರ ತೊಲಗ[ತಕ್ಕದ್ದಾಗಿದೆ]" (NKJV); ಅವರನ್ನು ಸಭೆಯ ಶಿಸ್ತಿಗೊಳಪಡಿಸಬೇಕು ಮತ್ತು ದೇವಜನರ ಅನ್ಯೋನ್ಯತೆಯಿಂದ ಹೊರಗೆ ಇಡಬೇಕು (ಸರಳವಾಗಿ ಹೇಳುವದಾದರೆ, "ಅನ್ಯೋನ್ಯತೆಯಿಂದ ನಿಷಿದ್ಧಿಸಬೇಕು").[69]

"ಕಕ್ಷಭೇದಗಳು" ನಂತರ **ಭಿನ್ನಮತಗಳು** ಎಂಬ ಪದವು ಇರುತ್ತದೆ. ಗ್ರೀಕ್ ವಾಕ್ಯಭಾಗವು αἵρεσις (*hairesis*) ಎಂಬುದರ ಬಹುವಚನವನ್ನು ಹೊಂದಿರುತ್ತದೆ, ಅದರಿಂದಲೇ ಆಂಗ್ಲದ "ಹೆರೆಸಿ" ಎಂಬ ಪದವು ಬರುತ್ತದೆ. ಅದಕ್ಕೆ ಸಂಬಂಧಿಸಿದ ಕ್ರಿಯಾಪದವು αἱρέομαι (*haireomai*) ಎಂದಾಗಿದ್ದು, ಅದು "ಆರಿಸಿಕೋ" ಅಥವಾ "ಇಷ್ಟಪಡು" ಎಂಬ ಅರ್ಥವನ್ನು ಕೊಡುತ್ತದೆ. ಆದದರಿಂದ, *hairesis* ಒಂದು ಆಯ್ಕೆ ಮಾಡಿಕೊಳ್ಳುವಿಕೆಯ ಫಲಿತವನ್ನು ಸೂಚಿಸುತ್ತದೆ. ಅದರ ನಕಾರಾತ್ಮಕ ಅರ್ಥದಲ್ಲಿ, ಈ ಪದವು ಒಂದು ಭಿನ್ನಮತ, ಒಂದಿಷ್ಟು ಪ್ರಮಾಣದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುತ್ತದೆಂದು ಪ್ರಕಟಗೊಳಿಸುತ್ತದೆ. ಈ ವಿಧದಲ್ಲಿಯೇ 1 ಕೊರಿಂಥ 11:19ರಲ್ಲಿ ಈ ಪದವು ಬಳಸಲ್ಪಟ್ಟಿದೆ, ಅಲ್ಲಿ ಸಭೆಯೊಳಗೆ "ಭಿನ್ನಾಭಿಪ್ರಾಯಗಳು" ಇದ್ದವು ಎಂಬುದಾಗಿ ಹೇಳಲಾಗಿದೆ. 2 ಪೇತ್ರ 2:1ರಲ್ಲಿ, "ನಾಶಕರವಾದ ಮತಭೇದಗಳನ್ನು . . . ಹುಟ್ಟಿಸುವವರೂ ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡ ತಾವು ಅರಿಯೆವು ಎಂದು ಹೇಳುವವರೂ" ಆಗಿರುವ ಕೆಲವೊಬ್ಬ ಸುಳ್ಳು ಬೋಧಕರ ಅಪಾಯವು ಸನ್ನಿಹಿತವಾಗಿರುತ್ತದೆಂಬುದನ್ನು ತಿಳಿಸುವದಕ್ಕೆ *ಹಾಯರೆಸಿಸ್*ದ ಜೊತೆಯಲ್ಲಿ ಒಂದು ವಿಶೇಷಣವು ಬಳಸಲ್ಪಟ್ಟಿರುತ್ತದೆ. ಪೇತ್ರನು ಗುಣವಾಚಕವಾದ "ನಾಶಕರವಾದ" ಎಂಬುದನ್ನು *hairesis* ಎಂಬ ಪದದೊಂದಿಗೆ ಬಳಸುತ್ತಿರುವದು ಈ ಕಡೆಯ ಪದವು ಯಾವಾಗಲೂ ನಕಾರಾತ್ಮಕ ಆಗಿರಲಿಲ್ಲ ಎಂಬುದನ್ನು ತೋರಿಸಿ ಕೊಡುತ್ತದೆ.[70]

ಪೌಲನು ಕೆಲವು ಸಾರಿ ತನ್ನ ಕಾಲದಲ್ಲಿದ್ದ ಯೆಹೂದಿ "ಪಂಥಗಳ" ಬಗ್ಗೆ ಚರ್ಚಿಸುವ ವೇಳೆ ಪದವನ್ನು ಸ್ವಲ್ಪ ಮಟ್ಟಿಗೆ ತಟಸ್ಥವಾದ ರೀತಿಯಲ್ಲಿ ಬಳಕೆ ಮಾಡಿದನು. ಇವುಗಳಲ್ಲಿ ಫರಿಸಾಯರು, ಸದ್ದುಕಾಯರು, ಮತ್ತು ಎಸ್ಸೇನರು ಸೇರಿದ್ದರು. ವಾಸ್ತವಿಕದಲ್ಲಿ, ಅಗ್ರಿಪ್ಪ ರಾಜನ ಮುಂದೆ ತನ್ನ ಪ್ರತಿವಾದ ಮಾಡಿಕೊಳ್ಳುತ್ತಿರುವ ವೇಳೆ, ಪೌಲನು ಮುಂಚೆ ತಾನು "ನಮ್ಮ ಧರ್ಮದಲ್ಲಿ ಬಹು ಖಂಡಿತವಾದ ಮತವನ್ನನುಸರಿಸಿ ಫರಿಸಾಯನಾಗಿ ನಡಕೊಂಡೆನೆಂದು" ಮುಕ್ತವಾಗಿ ಅರಿಕೆ ಮಾಡುತ್ತಾನೆ (ಅಪೊಸ್ತಲರ ಕೃತ್ಯಗಳು 26:5). ಹೇಗೂ, ಫೇಲಿಕ್ಸನ ಮುಂದೆ ಈತನು "*ನಜರೇತಿನವರ ಪಾಷಂಡಮತದಲ್ಲಿ* ಪ್ರಮುಖನೆಂತ" ಆರೋಪವನ್ನು ಹೊರಿಸದ ವೇಳೆ (ಅಪೊಸ್ತಲರ ಕೃತ್ಯಗಳು 24:5; ಒತ್ತಿ ಹೇಳಿದ್ದು ನನ್ನದು), ತನಗೆ ಭಾಷಣಕಾರನಾದ ತೆರ್ತುಲ್ಲನಿಂದ ಅನ್ವಯಿಸಲ್ಪಟ್ಟ ಈ ಪದವನ್ನು ಅಂಗೀಕರಿಸಿಕೊಳ್ಳಲು ಆತನು ಸಿದ್ಧನಿರಲಿಲ್ಲ. ಪೌಲನು ಹೀಗೆ ಸ್ಪಷ್ಟಗೊಳಿಸುತ್ತಾನೆ, "*ಇವರು ಪಾಷಂಡಮತವೆಂದು ಹೇಳುವ ಮಾರ್ಗಕ್ಕನುಸಾರವಾಗಿ* ನಾನು ನಮ್ಮ ಪಿತೃಗಳ ದೇವರನ್ನು ಸೇವಿಸುವವನಾಗಿದ್ದೇನೆ. ಧರ್ಮಶಾಸ್ತ್ರಕ್ಕನುಗುಣವಾಗಿರುವ ಮತ್ತು ಪ್ರವಾದಿಗಳ ಗ್ರಂಥಗಳಲ್ಲಿ ಬರೆದಿರುವ ಎಲ್ಲಾ ವಿಷಯಗಳನ್ನು ನಂಬುತ್ತೇನೆ" (ಅಪೊಸ್ತಲರ ಕೃತ್ಯಗಳು 24:14; ಒತ್ತಿ ಹೇಳಿದ್ದು ನನ್ನದು). ಸಭೆಯು ದೇವರಾದುಕೊಂಡ ಜನರು, ಹೊಸ ಇಸ್ರಾಯೇಲ್ಯರು ಆಗಿರುತ್ತಾರೆ ಎಂಬುದಾಗಿ ಆತನು ಉನ್ನತವಾದ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರಿಂದ, ದೇವರ ಪರಲೋಕದ ರಾಜ್ಯಕ್ಕೆ ಭೂಮಿಯ ಮೇಲಿನ ಪ್ರತಿನಿಧಿಯಂತಿರುವ ಇದು ವಿಭಜಿಸಲ್ಪಟ್ಟಿರುವ ಯೆಹೂದಿಮತದಲ್ಲಿ ಮತ್ತೊಂದು ಪ್ರತಿಸ್ಪರ್ಧಿಯಷ್ಟೇ ಹೊರತು ಹೆಚ್ಚಿನದ್ದೇನೂ ಆಗಿರುವದಿಲ್ಲ ಎಂಬ ವಿಚಾರವನ್ನು (ಅಥವಾ ಅಂತಹ ಅನಿಸಿಕೆಯನ್ನಾದರೂ) ಅಂಗೀಕರಿಸಿಕೊಳ್ಳಲು ಆತನು ಸಿದ್ಧನಿರಲಿಲ್ಲ.

ಈ ಕೆಲವು ಉದಾಹರಣೆಗಳನ್ನು ನೋಡುವಾಗ, *ಹಾಯರೆಸಿಸ್* ಎಂಬ ಪದವು ಪೌಲನ ಕಾಲದಲ್ಲಿದ್ದ ಯೆಹೂದ್ಯರು ಅವರ ವಿವಿಧ ಧಾರ್ಮಿಕ ಪಕ್ಷಗಳಿಗೆ (ಧರ್ಮದ ವಿವಿಧವಾದ ಭಾವನೆಗಳುಳ್ಳ ಗುಂಪುಗಳು) ಆಕ್ಷೇಪಕರವಲ್ಲದಂತೆಯೂ ಸ್ವೀಕಾರರ್ಹವಾದ ರೀತಿಯಲ್ಲಿಯೂ ಬಳಸಲ್ಪಟ್ಟಿತ್ತೆಂದು ಕಾಣಿಸುತ್ತದೆ. ಆದಾಗ್ಯೂ, ಪೌಲನಿಗಾದರೋ, ದೇವರ ಸಭೆಯನ್ನು ಸೂಚಿಸುವದಕ್ಕಾಗಿ *hairesis* ಎಂಬದನ್ನು ಬಳಸುವದು ಒಂದು ನಕಾರಾತ್ಮಕ ಸೂಚ್ಯಾರ್ಥವನ್ನು ಕೊಡುವದಾಗಿತ್ತು. ದೇವರ ಪ್ರಿಯವಾದ ಸಮುದಾಯವನ್ನು ಸೂಚಿಸುವದಕ್ಕೆ ಅದನ್ನು ಬಳಸುವದು ಸೂಕ್ತವಲ್ಲವೆಂದು ಆತನು ಪರಿಗಣಿಸಿದ್ದನು.

ಪವಿತ್ರಾತ್ಮನಲ್ಲಿ ಕ್ರೈಸ್ತನ ನಡೆಯನ್ನು ಮಾದರಿಯಾಗಿಸುವ ಮನೋಭಾವಗಳನ್ನು ಮತ್ತು ಕ್ರಿಯೆಗಳನ್ನು ನೇರವಾಗಿ ವಿರೋಧಿಸುವ ಶರೀರಭಾವದ ಒಂದು ಕ್ರಿಯೆಯೇ ಈ "ಭಿನ್ನಮತಗಳು." ಅನಂತರದ ಕಾಲಗಳಲ್ಲಿ, ಪದವು "ಸಿದ್ಧಾಂತಿಕ ದೋಷಗಳು" ಎಂಬ ಅರ್ಥಕ್ಕೆ ಬದಲಾಗಿತ್ತು, ಇದು ಆಂಗ್ಲದ "ಹೆರೆಸಿ" ಎಂಬ ಪದದಿಂದ ವ್ಯಕ್ತಪಡಿಸಲ್ಪಡುತ್ತದೆ.

**ವಚನ 21.** ಪಟ್ಟಿಯಲ್ಲಿರುವ ಅನೇಕ ದುರ್ಗುಣಗಳ ಪ್ರಕಾರವೇ, **ಮತ್ಸರವು** ಸಹ ಗ್ರೀಕ್ ಭಾಷೆಯ ಬಹುವಚನದ ಪದದಿಂದ ಬರುತ್ತದೆ. ಅದರ ಏಕವಚನ ರೂಪವು φθόνος (*phthonos*), ಅದು ಅರ್ಥದಲ್ಲಿ 5:20ರಲ್ಲಿನ *zēlos* ("ಹೊಟ್ಟೇಕಿಚ್ಚು") ಎಂಬ ಪದದಂತೆಯೇ ಇರುತ್ತದೆ. ಹೇಗೂ, *ಫಥೊನೊಸ* ಬಹಳ ಸಾರಿ ಮತ್ತೊಬ್ಬ ವ್ಯಕ್ತಿಗೆ ಹಾನಿಯನ್ನುಂಟು ಮಾಡುವಷ್ಟರ ಮಟ್ಟೊಗೆ ಸ್ವಾರ್ಥ-ಚಿಂತೆಯ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಆದದರಿಂದ, ಕೆಲವು ಶಬ್ದಕೋಶಗಳು ಈ ಪದವನ್ನು "ಹೊಟ್ಟೆಯುರಿ" ಎಂದು ಅರ್ಥನಿರೂಪಣೆ ಮಾಡುತ್ತವೆ. ಸ್ಪಷ್ಟವಾಗಿರುವಂತೆ, ಈ ಪದಕ್ಕೆ ಒಂದು ಕೇಡಿನ ಗುಣವನ್ನು ಜೋಡಿಸಲಾಗಿರುತ್ತದೆಂಬುದು ಖಚಿತವಾಗಿರುತ್ತದೆ.

ಮತ್ಸರದ ಹಾನಿಕಾರಕ ಪರಿಣಾಮವನ್ನು ಹಳೆಯ ಒಡಂಬಡಿಕೆಯ ಯೋಬ 5:2 ರಂತಹ ವಾಕ್ಯಭಾಗಗಳಿಂದ ದೃಷ್ಟಾಂತಗೊಳಿಸಲ್ಪಡಬಲ್ಲದು. ಹೊಸ ಒಡಂಬಡಿಕೆಯು ಮತ್ಸರದ ದುಷ್ಟ ಸ್ವಭಾವದ ಕುರಿತು ಇನ್ನಷ್ಟು ಸಾಕ್ಷಿಯನ್ನು ಒದಗಿಸುತ್ತದೆ. 5:19-21ರಲ್ಲಿ ಅದು ಬಳಸಲ್ಪಟ್ಟಿದ್ದರ ಜೊತೆಗೆ, "ಮತ್ಸರ" (*phthonos*) ಎಂಬ ಪದವು ಪೌಲನ ಪತ್ರಿಕೆಗಳಲ್ಲಿನ ಇನ್ನು ಮೂರು ದುರ್ಗುಣ ಪಟ್ಟಿಗಳಲ್ಲಿ ಕಾಣಿಸಿಕೊಳ್ಳುತ್ತದೆ (ರೋಮಾ 1:29; 1 ತಿಮೊಥೆ 6:4; ತೀತನಿಗೆ 3:3).[71]

ಪೌಲನು ಗೃಹಬಂಧನದಲ್ಲಿದ್ದಂಥ ರೋಮಾಪುರದಲ್ಲಿ, ಕೆಲವು ಸಹೋದರರು ಸುವಾರ್ತೆಯನ್ನು ಸಾರುವದಕ್ಕೆ ಹೊಂದಿದ್ದ ಉದ್ದೇಶದಿಂದ ಈ ಪದದ ಕೇಡಿನ ನಾತವು ಸ್ಪಷ್ಟಗೊಳ್ಳುತ್ತದೆ:

> ಕೆಲವರು ಹೊಟ್ಟೆಕಿಚ್ಚುಪಟ್ಟು [*phthonos*] ಭೇದ ಹುಟ್ಟಿಸಬೇಕೆಂಬ ಭಾವನೆಯಿಂದ . . . ಕ್ರಿಸ್ತನನ್ನು ಪ್ರಚುರಪಡಿಸುತ್ತಾರೆ . . . ಆ ಬೇರೆ ತರದವರಾದರೋ ನಾನು ಬೇಡಿಬಿದ್ದಿರುವಾಗಲೂ ನನಗೆ ಸಂಕಟವನ್ನು ಎಬ್ಬಿಸಬೇಕೆಂದು ಯೋಚಿಸಿ ಕ್ರಿಸ್ತನನ್ನು ಯಥಾರ್ಥವಾಗಿ ಪ್ರಸಿದ್ಧಿಪಡಿಸದೆ ಕಕ್ಷಿಭಾವದಿಂದ ಪ್ರಸಿದ್ಧಿಪಡಿಸುತ್ತಾರೆ (ಫಿಲಿಪ್ಪಿ 1:15-17).

ಅತ್ಯಂತ ಕಟುವಾದ ಉದಾಹರಣೆಯು ಯೆಹೂದ್ಯ ನಾಯಕರನ್ನೊಳಗೊಂಡಿದೆ, ಅವರು ತಮ್ಮ "ಮತ್ಸರ" (*phthonos*) ನಿಮಿತ್ತವಾಗಿ, ಯೇಸುವನ್ನು ಶಿಲುಬೆಗೇರಿಸುವಂತೆ ಪಿಲಾತನ ಕೈಗಳಿಗೆ ಒಪ್ಪಿಸಿ ಕೊಟ್ಟರು (ಮತ್ತಾಯ 27:17, 18; ಮಾರ್ಕ 15:10). ಯೇಸುವು "ದೇವರ ಸ್ಥಿರಸಂಕಲ್ಪಕ್ಕೂ ಭವಿಷ್ಯದ್‌ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿ"ದ್ದಾಗ್ಯೂ (2:23), ಯೇಸುವನ್ನು ಶಿಲುಬೆಗೇರಿಸಬೇಕೆಂದು ತೀವ್ರಾಸಕ್ತಿಯಿಂದ ಚಿತ್ತೈಸಿದವರ ಅಪರಾಧದ ಘೋರತೆಯ ಸ್ವಭಾವವನ್ನು ಕಡಿಮೆಗೊಳಿಸುವದಿಲ್ಲ. ಅವರು ಶುದ್ಧನಾದ ಮತ್ತು ಪ್ರೀತಿಯುಳ್ಳಂಥ ದೇವರ ಮಗನನ್ನು ಏಕೆ ಒಪ್ಪಿಸಿ ಕೊಟ್ಟರು? ಏಕೆಂದರೆ ಅವರಲ್ಲಿ ಮತ್ಸರವಿತ್ತು! ಈ ದುರ್ಗುಣವು ಎಷ್ಟೊಂದು ಕೆಟ್ಟದ್ದೆಂಬುದನ್ನು ಇದಕ್ಕಿಂತ ಹೆಚ್ಚು ಸ್ಫುಟವಾಗಿ ದೃಷ್ಟಾಂತಪಡಿಸಲು ಸಾಧ್ಯವಿಲ್ಲ.

4. ಸ್ವೇಚ್ಛಾಚಾರದ ಜೀವನ (5:21)

**ಕುಡಿಕತನ** ಎಂಬುದು ಸಹ ವಾಕ್ಯದಲ್ಲಿ ಬಹುವಚನದ ಅನುವಾದವಾಗಿದೆ. ಈ ಪದದ ನಿಘಂಟಿನ ರೂಪವು μέθη (*methē*) ಎಂದಾಗಿದೆ, ಮತ್ತು ಇದು ಹೊಸ ಒಡಂಬಡಿಕೆಯೊಳಗೆ ಬೇರೆ ಕಡೆಯಲ್ಲಿ ಲೂಕ 21:34 ಮತ್ತು ರೋಮಾ 13:13ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ.

ಪ್ರಾಚೀನ ಗ್ರೀಕರೊಳಗೆ, ಸಾಮಾನ್ಯವಾಗಿ ದ್ರಾಕ್ಷಾರಸವನ್ನು ಅದರ "ಪೂರ್ಣ ಸಾರ"ದೊಂದಿಗೆ ಅಥವಾ "ಸಾರಗುಂದಿಸದೆ" (ἄκρατος, *akratos*) ಕುಡಿಯುತ್ತಿರಲಿಲ್ಲ. ಗ್ರೀಕರ ಪದ್ಧತಿಯಂತೆ ಊಟದ ವೇಳೆ ಸಾಮಾನ್ಯವಾಗಿ ಒಂದು ಪ್ರಮಾಣದ ದ್ರಾಕ್ಷಾರಸಕ್ಕೆ ಮೂರು ಪ್ರಮಾಣದಷ್ಟು ನೀರನ್ನು ಮಿಶ್ರಣ ಮಾಡಿ ಸೇವಿಸಲಾಗುತ್ತಿತ್ತೆಂದು ಸಾಕಷ್ಟು ದಾಖಲೆಗಳಿರುತ್ತವೆ. ಅವರ ಸಾಹಿತ್ಯದಲ್ಲಿ, ಕುಡಿಕತನದ ಅಪಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೆಚ್ಚಿನ ಪ್ರಮಾಣಗಳಲ್ಲಿ ದ್ರಾಕ್ಷಾರಸ ಸೇವಿಸುವದರ ವಿರುದ್ಧ ಹಲವಾರು ಎಚ್ಚರಿಕೆಗಳು ಕಾಣಿಸಿಕೊಳ್ಳುತ್ತವೆ. ಹೊಸ ಒಡಂಬಡಿಕೆಯಲ್ಲಿ ಏನೂ ಬೆರಸದ ದ್ರಾಕ್ಷಾರಸವೆಂದು ಒಂದು ಸಾರಿ ಕಾಣಿಸಿಕೊಳ್ಳುವದಾಗಿದ್ದು ಅದು ಸಂಭ್ರಮ ಅಥವಾ ಕೊಂಡಾಟಕ್ಕೆ ಸಂಬಂಧಿಸಿದ್ದಲ್ಲ, ಆದರೆ ಬದಲಾಗಿ ದೇವರ ರೌದ್ರಕ್ಕೆ ಸಂಬಂಧಪಟ್ಟದ್ದಾಗಿದೆ: "ದೇವರ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ [ಅಕ್ರಾಟೊಸ] ಹಾಕಿದ ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯುವನು; ಪರಿಶುದ್ಧ ದೇವದೂತರ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ

ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆಪಡುವನು" (ಪ್ರಕಟನೆ 14:10).

ಅಮೆರಿಕದ ಸಂಸ್ಕೃತಿಯಲ್ಲಿ, ಆದಿ ಪುರಿಟನ್ ಪಿತೃಗಳ ಕ್ಯಾಲ್ವಿನ್ ಸಿದ್ಧಾಂತದ ಮನವರಿಕೆಗಳಿಂದ ಹೊರಹೊಮ್ಮಿರುವ ಸಾಧ್ಯತೆಯಿದ್ದು, ಸಾಕಷ್ಟು ಪ್ರಮಾಣದ ಜನಸಂಖ್ಯೆಯವರು ಹೆಚ್ಚುಕಡಿಮೆ ಮದ್ಯಪಾನಿಯಗಳ ಮಾರಾಟ ಮತ್ತು ಸೇವನೆಯನ್ನು ಯಾವಾಗಲೂ ಸಂಪೂರ್ಣ ವಿರೋಧ ಮಾಡುತ್ತಲೇ ಬಂದಿರುತ್ತಾರೆ. 1919 ಮತ್ತು 1933ರ ನಡುವೆ, ಈ ವಿರೋಧದ ಫಲಿತವಾಗಿ ಮದ್ಯಪಾನಿಯಗಳ ಉತ್ಪಾದನೆ, ಸಾಗಾಟ, ಮತ್ತು ಮಾರಾಟಗಳನ್ನು (ವೈದ್ಯಕೀಯ ಹಾಗೂ ಧಾರ್ಮಿಕ ಉದ್ದೇಶಗಳಿಗಾಗಿ ಹೊರತು) ನಿಷೇಧಿಸುವಂತೆ ಕಾನೂನನ್ನು ತರುವಂತೆ ಮಾಡಿತ್ತು. ಈ ಕಾನೂನುಗಳನ್ನು ಈಗ ಪರಿಚಿತವಿರುವಂಥ "ನಿಷೇಧ" ಎಂಬ ಕಾಲದಲ್ಲಿ ಜಾರಿಗೆ ತರಲ್ಪಟ್ಟು. ಹೇಗೂ, ಕಾಲವು ಕಳೆದ ಹಾಗೆ, ಅದರ ಕರ್ತೃಗಳು ಗುಣಪಡಿಸಬೇಕೆಂದು ಅಪೇಕ್ಷಿಸಿದ್ದ ಸಾಮಾಜಿಕ ಹಾಗೂ ವೈಯಕ್ತಿಕಕ ವ್ಯಾಧಿಗಳಿಎ ಕೇವಲ ಶಾಸನವನ್ನು ರೂಪಿಸುವದು ಪರಿಹಾರವನ್ನು ಒದಗಿಸಲಿಲ್ಲ ಎಂಬುದು ಸ್ಪಷ್ಟವಾಗಿತ್ತು, ಮತ್ತು ಕಡ್ಡಾಯಗೊಳಿಸಲಾಗದ ಶಾಸನವನ್ನು ರದ್ದುಗೊಳಿಸಲಾಗಿತ್ತು.

ಯೇಸುವು ಆಗಲಿ ಅಥವಾ ಆತನ ಅಪೊಸ್ತಲರಾಗಲಿ ಸಹ ದ್ರಾಕ್ಷಾರಸದ ಅಥವಾ ಹುದುಗೆಬ್ಬಿಸಲಾದ ಪಾನಿಯದ ಸೇವೆಯನ್ನು ನಿಷಿದ್ಧಗೊಳಿಸಲಿಲ್ಲ. ವಾಸ್ತವಿಕದಲ್ಲಿ, ದ್ರಾಕ್ಷಾರಸವನ್ನು ಔಷಧವಾಗಿ ಬಳಸುವಂತೆ ಪೌಲನು ತಿಮೊಥೆಯನಿಗೆ ಶಿಫಾರಸ್ಸು ಮಾಡಿದನು: "ಇನ್ನು ಮೇಲೆ ನೀರನ್ನು ಮಾತ್ರ ಕುಡಿಯುವವನಾಗಿರದೆ ನಿನ್ನ ಅಜೀರ್ಣದ ಮತ್ತು ನಿನಗೆ ಆಗಾಗ್ಗೆ ಉಂಟಾಗುವ ಅಸ್ವಸ್ಥತೆಯ ಪರಿಹಾರಕ್ಕಾಗಿ ದ್ರಾಕ್ಷಾರಸವನ್ನು ಸ್ವಲ್ಪವಾಗಿ ತೆಗೆದುಕೋ" (1 ತಿಮೊಥೆ 5:23). ಪೌಲನು ತಿಮೊಥೆಯನಿಗೆ ಬಹಳ ಒಳ್ಳೇ ಕಾರಣಗಳಿಗಾಗಿ ಆ ಬುದ್ಧಿಮಾತನ್ನು ಹೇಳಿದ್ದನು, ಯಾಕೆಂದರೆ ಮೆಡಿಟೆರ್ರೇನಿಯ ಸಮುದ್ರದ ಸುತ್ತಲಿನ ನೀರು ಶುದ್ಧವಾಗಿರಲಿಲ್ಲ ಮತ್ತು ಖಂಡಿತವಾಗಿಯೂ ಹೊಟ್ಟೆಯ ನೋವು ಉಂಟು ಮಾಡುವಂಥದ್ದಾಗಿತ್ತು.[72] ಈ ನೀರಿನ ಜೊತೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ (ಶೇಕಡಾ 25ರಷ್ಟು) ದ್ರಾಕ್ಷಾರಸವನ್ನು ಮಿಶ್ರಣ ಮಾಡುವಂಥದ್ದು ನೀರನ್ನು ಶುದ್ಧೀಕರಿಸುವ ಹಾಗೂ ಮದ್ಯದ ಅಂಶದಿಂದ ವ್ಯಸನಿಯಾಗುವದನ್ನು ತಪ್ಪಿಸುವದಕ್ಕಾಗಿ ದ್ರಾಕ್ಷಾರಸಕ್ಕೆ ಬೆರಸುವದಂತಹ ಎರಡು ಉದ್ದೇಶಗಳನ್ನು ನೆರವೇರಿಸಿದಂತಾಗುತ್ತಿತ್ತು. ತಿಮೊಥೆಯನಿಗಿದ್ದ ಹೊಟ್ಟೆಯ ನೋವನ್ನು ಕಡಿಮೆಗೊಳಿಸಬೇಕೆಂಬುದು ಪೌಲನ ಕಳಕಳಿಯಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ. ಪ್ರಾಚೀನ ಗ್ರೀಕರ ಲೌಕಿಕ ಬರಹಗಳಂತೆಯೇ, ಹೊಸ ಒಡಂಬಡಿಕೆಯು ಅತಿಯಾದ ಬಳಕೆಯನ್ನು ಮಾಡಬಾರದೆಂದು ಎಚ್ಚರಿಸುತ್ತದೆ (ಸಭಾಹಿರಿಯರು ಮತ್ತು ಸಭಾಸೇವಕರ ವಿಷಯದಲ್ಲಿ ನೋಡುವ ಪ್ರಕಾರ; 1 ತಿಮೊಥೆ 3:3, 8; ತೀತನಿಗೆ 1:7). ಹೇಗೂ, ಕಟ್ಟುನಿಟ್ಟಿನಿಂದ ತ್ಯಜಿಸಬೇಕೆಂಬುದರ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಕಂಡು ಬರುವದಿಲ್ಲ, ಸ್ನಾನಿಕನಾದ ಯೋಹಾನ ಮತ್ತು ನಜರೇಯನ ಹರಕೆಗೆ ಸಂಬಂಧಪಟ್ಟ ವಾಕ್ಯಭಾಗಗಳಲ್ಲಷ್ಟೆ ಅದನ್ನು ಕಾಣುತ್ತೇವೆ.[73] ಶರೀರಭಾವದ ಕರ್ಮವಾಗಿ ನಿಷಿದ್ಧ ಮಾಡಲ್ಪಟ್ಟಿರುವದು ದ್ರಾಕ್ಷಾರಸವಲ್ಲ ಎಂದು ಹೇಳಬಹುದು, ಆದರೆ ಅದು ಕುಡಿಕತನದಲ್ಲಿ ಅಂತ್ಯಗೊಳ್ಳುವ ರೀತಿಯಲ್ಲಿ ಅತಿಯಾಗಿ ಬಳಕೆ ಮಾಡುವದೇ ಆಗಿರುತ್ತದೆ.

ದ್ರಾಕ್ಷಾರಸವನ್ನು ಕುಡಿಯುವದರ ವಿಷಯದಲ್ಲಿ ಇನ್ನೊಂದು ಆಲೋಚನೆಯು ಬೇರೆಯವರ ಮನಸ್ಸಾಕ್ಷಿಗೆ ನೋವುಂಟು ಮಾಡುವದಕ್ಕೆ ಸಂಬಂಧಿಸಿರುತ್ತದೆ. ಕ್ರಿಸ್ತನಲ್ಲಿ ಸಿಕ್ಕಿರುವ ವೈಯಕ್ತಿಕ ಸ್ವಾತಂತ್ರ್ಯದ ಸನ್ನಿವೇಶದಲ್ಲಿ, ಪೌಲನು ಹೀಗೆ ಅಪ್ಪಣೆ ಕೊಟ್ಟನು,

ದೇವರು ಕಟ್ಟಿದ್ದನ್ನು ನೀನು ಆಹಾರದ ನಿಮಿತ್ತವಾಗಿ ಕೆಡವಬೇಡ. ಎಲ್ಲಾ ಪದಾರ್ಥಗಳೂ

> ಶುದ್ಧವೇ; ಆದರೆ ತಿಂದು ಮತ್ತೊಬ್ಬರಿಗೆ ವಿಘ್ನವನ್ನುಂಟುಮಾಡುವದು ಕೆಟ್ಟದ್ದು. ಮಾಂಸ ತಿನ್ನುವದನ್ನಾಗಲಿ ದ್ರಾಕ್ಷಾರಸ ಕುಡಿಯುವದನ್ನಾಗಲಿ ನಿನ್ನ ಸಹೋದರನಿಗೆ ಅಡ್ಡಿಯನ್ನುಂಟುಮಾಡುವ ಬೇರೆ ಯಾವದನ್ನಾಗಲಿ ಬಿಟ್ಟುಬಿಡುವದೇ ಒಳ್ಳೇದು (ರೋಮಾ 14:20, 21; NIV).

ಇನ್ನೊಂದು ಸಂದರ್ಭದಲ್ಲಿ, ಅಪೊಸ್ತಲನು ಹೀಗೆ ಸಹ ಬರೆದನು,

> ಹೀಗಿರಲಾಗಿ ನೀವು ಉಂಡರೂ ಕುಡಿದರೂ ಇನ್ನೇನು ಮಾಡಿದರೂ ಎಲ್ಲವನ್ನೂ ದೇವರ ಘನತೆಗಾಗಿ ಮಾಡಿರಿ. ಯೆಹೂದ್ಯರಿಗಾಗಲಿ ಗ್ರೀಕರಿಗಾಗಲಿ ದೇವರ ಸಭೆಗಾಗಲಿ ವಿಘ್ನವಾಗಬೇಡಿರಿ. ನಾನಂತೂ ಸ್ವಪ್ರಯೋಜನಕ್ಕಾಗಿ ಚಿಂತಿಸದೆ ಮನುಷ್ಯರೆಲ್ಲರೂ ರಕ್ಷಣೆಹೊಂದಬೇಕೆಂದು ಅವರ ಪ್ರಯೋಜನಕ್ಕಾಗಿ ಚಿಂತಿಸಿ ಎಲ್ಲರನ್ನೂ ಎಲ್ಲಾ ವಿಷಯಗಳಲ್ಲಿ ಮೆಚ್ಚಿಸುವವನಾಗಿದ್ದೇನೆ (1 ಕೊರಿಂಥ 10:31-33).

ಬೇರೊಬ್ಬನನ್ನು ಪಾಪದಲ್ಲಿ ಬೀಳುವಂತೆ ಮಾಡುವ ಹಾಗೆ ಯಾವದೇ ನಡವಳಿಕೆಯಿಂದ ಒಬ್ಬ ವಿಶ್ವಾಸಿಯು ವಿಘ್ನವನ್ನುಂಟು ಮಾಡುವದು ಚಿಕ್ಕ ವಿಷಯವಲ್ಲ (1 ಕೊರಿಂಥ 8:1-13). ಅಂತರ್ಗತವಾಗಿ ಅಂಗೀಕಾರವಾಗಬಲ್ಲ ಮತ್ತು ಅದಾಗ್ಯೂ, ಸಂದರ್ಭಕ್ಕನುಗುಣವಾಗಿ, ಬೇರೊಬ್ಬ ವ್ಯಕ್ತಿಗೆ ಅದು ಆತ್ಮೀಕವಾಗಿ ವಿನಾಶಕರವಾಗಬಲ್ಲದು ಎಂಬುದರ ಸಾಧ್ಯತೆಯು ಬಹಳವಿರುತ್ತದೆ. ಇಂಥ ಪರಿಸ್ಥಿತಿಗಳಲ್ಲಿ, ಅಂತಹ ಒಂದು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವದು ಕರ್ತನ ವಿರುದ್ಧದ ಒಂದು ಭಯಂಕರ ಪಾಪವಾಗುತ್ತದೆ ಮತ್ತು ಆತನು ಈ ಲೋಕದೊಳಗೆ ಬಂದಂಥ ಉದ್ದೇಶಕ್ಕೇ ಭಂಗವನ್ನುಂಟು ಮಾಡುವದಾಗಿದೆ!

**ದುಂದೌತಣ** ಎಂಬುದು κῶμος (*kōmos*) ಎಂಬ ಪದದ ಬಹುವಚನ ರೂಪದ ಪದದಿಂದ ಬರುತ್ತದೆ, ಈ ಪದಕ್ಕೆ "ಮಿತಿಮೀರಿದ ಔತಣ," "ಭಾರಿಮೋಜು," ಅಥವಾ "ಕಾಮಕೇಳಿ" ಎಂದು ಸಹ ಅನುವಾದ ಮಾಡಬಹುದಾಗಿದೆ. "ಭಾರಿಮೋಜುಗಳು" (NKJV) ಮತ್ತು "ಕಾಮಕೇಳಿಗಳು" (NIV) ಎಂಬ ಅನುವಾದಗಳಿಂದ ಬಹುವಚನ ಸ್ಪಷ್ಟಗೊಳಿಸಲ್ಪಟ್ಟಿರುತ್ತದೆ. ಈ ಪದವು ಹೊಸ ಒಡಂಬಡಿಕೆಯಲ್ಲಿ ಇನ್ನು ಎರಡು ಸಾರಿ ಕಾಣಿಸಿಕೊಳ್ಳುತ್ತದೆ, ರೋಮಾ 13:13 ಮತ್ತು 1 ಪೇತ್ರ 4:3ರಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಸಹ ಅದು "ಕುಡಿಕತನ" ಮತ್ತು "ಮದ್ಯಪಾನಗೋಷ್ಠಿ" ಎಂಬುದಕ್ಕೆ ಸಂಬಂಧ ಪಟ್ಟಿರುತ್ತದೆ.

*ಕೋಮೊಸ* ಎಂಬ ಪದವು ಮೂಲತಃ ಕುಡಿದಿರದೆ ಇದ್ದ ಅಥವಾ ಸ್ವೇಚ್ಛಾಚಾರವಿಲ್ಲದ ಒಂದು ಉತ್ಸವದ ಗುಂಪಿನ್ನು ಸೂಚಿಸಿರಬಹುದಾಗಿದೆ. Bauerನ ಶಬ್ದಕೋಶವು ಹೇಳುವದೇನೆಂದರೆ ಈ ಪದವು "ಡಿಯೊನೀಸಸ್ ಗೌರವಾರ್ಥವಾಗಿದ್ದ ಉತ್ಸವದ ಮೆರವಣಿಗೆ"ಯನ್ನು ಮತ್ತು ಬಳಿಕ "ಒಂದು ಸಂಭ್ರಮದ ಊಟ ಅಥವಾ ಔತಣ"ವನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು.[74] ಹೇಗೂ, ಸಾಯಂಕಾಲವು ಮುಂದುವರೆದಂತೆ, ಅಂಥ ಉತ್ಸವಗಳು ಕೀಳುಮಟ್ಟಕ್ಕೆ ತಿರುಗಿ ಕುಡಿಕತನ ಹಾಗೂ ಭಾರಿಮೋಜು ತುಂಬಿದ ಉತ್ಸವಗಳಾಗುತ್ತಿದ್ದವು. ತಡರಾತ್ರಿಯ ವೇಳೆ, ಅಮಲೇರಿರುವ ಜನರು, "ತಮ್ಮ ತಲೆಗಳ ಮೇಲೆ ಮಾಲೆಗಳನ್ನಿಟ್ಟುಕೊಂಡು, ಮತ್ತು ಕೈಗಳಲ್ಲಿ ದೀಪಗಳನ್ನು ಹಿಡಿದುಕೊಂಡವರಾಗಿ, ಕೂಗುತ್ತಾ ಮತ್ತು ಹಾಡು ಹಾಡುತ್ತಾ . . . ಜಾರಸ್ತ್ರೀಯರ ಮನೆಗಳಿಗೆ ಸಾಗುತ್ತಿದ್ದರು, ಅಥವಾ ಬೀದಿಗಳಲ್ಲೆಲ್ಲಾ ಅಲೆದಾಡುತ್ತಾ, ತಮಗೆ [ಎದುರಾಗುವ] ಯಾರೇ ಆಗಲಿ ಅವರನ್ನು ಅಪಹಾಸ್ಯ ಮಾಡುತ್ತಿದ್ದರು ಮತ್ತು ಅಸಭ್ಯವಾಗಿ ನಡೆದುಕೊಳ್ಳುತ್ತಿದ್ದರು."[75] William M. Ramsayನು ಹೀಗೆ ಹೇಳಿದನು, ಏನೆಂದರೆ ಗ್ರೀಕರೊಳಗೆ, "ಕೋಮೊಸ, ಭಾರಿಮೋಜನ್ನು ದೇವರನ್ನಾಗಿ

ಮಾಡಲಾಗಿತ್ತು, ಮತ್ತು ಅವನ ಧಾರ್ಮಿಕ ವಿಧಿಗಳನ್ನು ಬಹಳ ವ್ಯವಸ್ಥಿತವಾಗಿ ನಡಿಸಲಾಗುತ್ತಿತ್ತು, ಮತ್ತು ಗ್ರೀಕರಿಗೆ ಕಲ್ಪನಾ ಚಾತುರ್ಯ ಮತ್ತು ಆವಿಷ್ಕಾರಿಕ ಬುದ್ಧಿಯಿದ್ದದರಿಂದ, ಭಾರಿಮೋಜುಗಳಿಗೆ ಉದಾತ್ತತೆಯನ್ನು ಮತ್ತು ವೈವಿಧ್ಯತೆಯನ್ನು ಒದಗಿಸಿತ್ತು."[76]

ಒಂದು ಸಾರಾಂಶಗೊಳಿಸುವಿಕೆ ಮತ್ತು ಒಂದು ಎಚ್ಚರಿಕೆ (5:21)

ಈ ವಿವರಣಾಪಟ್ಟಿಯು ಪಾಪದ ವ್ಯಾಪ್ತಿಯು ಎಷ್ಟೆಂಬುದನ್ನು ಪ್ರತಿನಿಧಿಸುತ್ತದಷ್ಟೇ. ಪೌಲನು ಕೊನೆಯಲ್ಲಿ **ಇಂಥವುಗಳೇ** ಎಂದು ಹೇಳುವ ಮೂಲಕ ಈ ಪಟ್ಟಿಯನ್ನು ಮುಕ್ತಾಯಗೊಳಿಸುವ ಮೂಲಕ ಇದನ್ನು ಸ್ಪಷ್ಟಪಡಿಸುತ್ತಾನೆ. ಶರೀರಭಾವದ ವಿವಿಧ ಕೃತ್ಯಗಳು ಹೊಸ ಒಡಂಬಡಿಕೆಯೊಳಗೆ, ಪೌಲನ ಪತ್ರಿಕೆಗಳಲ್ಲಿಯೂ[77] ಮತ್ತು ಇತರ ಪ್ರೇರಿತ ಲೇಖಕರ ಬರಹಗಳಲ್ಲಿಯೂ[78] ಪ್ರಸ್ತಾಪಿಸಲ್ಪಟ್ಟಿವೆ.

ಅಂಥ ಸಂಗತಿಗಳು ಹೊಸ ಒಡಂಬಡಿಕೆಗೆ ಮಾತ್ರವೇ ವೈಶಿಷ್ಟ್ಯವಾಗಿರುವದಿಲ್ಲ. ಅವುಗಳು ನೈತಿಕವಾಗಿ ಭ್ರಷ್ಟಗೊಂಡಿರುವ ಒಂದು ಜಗತ್ತಿನಲ್ಲಿ ಸದ್ಗುಣಕ್ಕಾಗಿ ಪ್ರಯಾಸ ಪಡುತ್ತಿದ್ದಂಥ ಯೆಹೂದ್ಯರು ಹಾಗೂ ಅನ್ಯಧರ್ಮಿಯ ನೈತಿಕವಾದಿಗಳ ಮಧ್ಯದಲ್ಲಿ ಸರ್ವಸಾಮಾನ್ಯವಾಗಿದ್ದವು. 5:19–21ರಲ್ಲಿ ಪೌಲನು ಮಾಡಿರುವ ಪಟ್ಟಿಯು, ಗಲಾತ್ಯದಲ್ಲಿನ ಸಹೋದರರ ನಿರ್ದಿಷ್ಟವಾದ ಅಗತ್ಯತೆಗಳನ್ನು ಸಂಬೋಧಿಸುವವುಗಳಾಗಿ ಕ್ರೈಸ್ತರಿಗೋಸ್ಕರ ಸಂಕಲಿಸಲ್ಪಟ್ಟವುಗಳಾಗಿವೆ.[79]

ಪೌಲನು ತನ್ನ ಮುಂದಿನ ಹೇಳಿಕೆಗೆ ಮುನ್ನುಡಿಯಾಗಿ **ಇವುಗಳ ವಿಷಯದಲ್ಲಿ . . . ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ** ಎಂಬ ಪದಗುಚ್ಛವನ್ನು ಸೇರಿಸುತ್ತಾನೆ. "ಈ ಹಿಂದೆ ಹೇಳಿದಂತೆಯೇ" ಎಂಬುದು προλέγω (*prolegō*) ಎಂಬ ಪದದಿಂದ ಬಂದದ್ದಾಗಿದ್ದು, ಅದರರ್ಥವು "ಮುಂದಾಗಿ ಎಚ್ಚರಿಸುವದು" ಅಥವಾ "ಮುಂಚಿತವಾಗಿಯೇ ಹೇಳುವದು" ಎಂದಾಗಿದೆ. ಎರಡೂ ಸನ್ನಿವೇಶಗಳಲ್ಲಿ, ಆತನ ಸಂದೇಶವು ಒಂದು ಘೋರವಾದ ಎಚ್ಚರಿಕೆಯನ್ನೊಳಗೊಂಡಿದೆ. ಈಗ ಸದ್ಯದಲ್ಲಿ ಆತನು ಅವರನ್ನು (ತನ್ನ ಪತ್ರಿಕೆಯ ಮೂಲಕವಾಗಿ) ಶರೀರಭಾವದ ಕರ್ಮಗಳಿಂದ ದೂರವಾಗಿರಿ ಎಂಬುದಾಗಿ, ಆತನು ಈ ಹಿಂದೆ (ಆತನು ಅವರ ನಡುವೆ ಇದ್ದ ವೇಳೆಯಲ್ಲಿ) ಉಪದೇಶಿಸಿದ್ದ ಪ್ರಕಾರವೇ, ಈಗಲೂ ಬುದ್ಧಿಹೇಳುತ್ತಿದ್ದಾನೆ.

ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳು ಪೌಲನ ಸಂದೇಶದ ತಿರುಳು ಆಗಿತ್ತಾದರೂ (1 ಕೊರಿಂಥ 15:3, 4), ಅಪೊಸ್ತಲನು ಅವರನ್ನು ಪಶ್ಚಾತ್ತಾಪಕ್ಕೆ ನಡಿಸುವದಕ್ಕೋಸ್ಕರವಾಗಿ ಗಲಾತ್ಯದವರಿಗೆ ಮೂಲಭೂತವಾದ ನೈತಿಕತೆಯ ಕುರಿತು ಸಹ ಖಂಡಿತವಾಗಿಯೂ ಉಪದೇಶ ಮಾಡಿದ್ದನು. ಅಷ್ಟುಮಾತ್ರವಲ್ಲದೆ, ಆತನು ಹಾಗೂ ಬಾರ್ನಬರು ಸಿರಿಯದ ಅಂತಿಯೋಕ್ಯಕ್ಕೆ ಹಿಂದಿರುಗಿ ಪ್ರಯಾಣಿಸುವ ಮಾರ್ಗದಲ್ಲಿ ಈ ಸಭೆಗಳಿಗೆ ಪುನಃ ಭೇಟಿಯನ್ನು ನೀಡಿದ್ದರು. ಪ್ರತಿಯೊಂದು ಸ್ಥಳದಲ್ಲಿ, ಅವರು "ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತನಂಬಿಕೆಯಲ್ಲಿ ಸ್ಥಿರವಾಗಿರ್ರಿ ಎಂದು ಅವರನ್ನು ಧೈರ್ಯಗೊಳಿಸಿದರು" (ಅಪೊಸ್ತಲರ ಕೃತ್ಯಗಳು 14:22). ಪೌಲನು ಅಗತ್ಯವಿದ್ದ ಪ್ರಕಾರವಾಗಿ ಅಂಥ ನೈತಿಕ ಉಪದೇಶವನ್ನು ನೀಡಿದನು, ಏನನ್ನು ಎದುರುನೋಡತಕ್ಕದ್ದೆಂಬುದರ ಕುರಿತು ಅವರಿಗೆ ಮುಂಚಿತವಾಗಿ ತಿಳಿಸಿದನು - ಹಿಂಸೆಯ ಕುರಿತು ಮತ್ತು ಶಿಷ್ಯತ್ವಕ್ಕೆ ತೆತ್ತಬೇಕಾದ ಬೆಲೆಯ ಬಗ್ಗೆ ಮಾತ್ರವೇ ಅಲ್ಲ, ಆದರೆ ದೇವರ ಮಕ್ಕಳಾಗಿ ಹೇಗೆ ನಡೆದುಕೊಳ್ಳಬೇಕೆಂದು ಸಹ ಕಲಿಸಿದ್ದನು. ಆ ರೀತಿಯಾಗಿ ಮಾಡುವ

ಮೂಲಕ, ಆತನು ಅವರಿಗೆ ಅವಿಧೇಯತೆ ಹಾಗೂ ಅಪನಂಬಿಗಸ್ತರಾಗಿರುವದರಿಂದ ಉಂಟಾಗುವ ಭಯಂಕರವಾದ ಪರಿಣಾಮಗಳನ್ನು ಕುರಿತು ಹೇಳಿದನು.

ಪೌಲನ ಪುನರಾವರ್ತಿಸಲ್ಪಟ್ಟ ಸಂದೇಶವು **ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ.** ಅಪನಂಬಿಗಸ್ತರ ಮೇಲೆ ಬರಲಿದ್ದ ಎಲ್ಲಾ ಪರಿಣಾಮಗಳಲ್ಲಿಯೂ, ಇದು ನಿಶ್ಚಯವಾಗಿಯೂ ಘೋರವಾದದ್ದಾಗಿತ್ತು. ಪಶ್ಚಾತ್ತಾಪ ಪಡದ ಪಾಪಿಗಳು ಪರಲೋಕದ ಸಕಲ ಮಹಿಮೆ ಮತ್ತು ಕರ್ತನ ಹಾಗೂ ಆತನಿಂದ ವಿಮೋಚಿಸಲ್ಪಟ್ಟವರ ಸಮ್ಮುಖದಲ್ಲಿ ಕಳೆಯುವ ನಿತ್ಯಜೀವವನ್ನು ನಷ್ಟಪಡಿಸಿಕೊಳ್ಳುವರು.

### "ದೇವರಾತ್ಮನಿಂದ ಉಂಟಾಗುವ ಫಲ" (5:22, 23)

**[22]ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನಂದರೆ - ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ. [23]ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ.**

ಗಲಾತ್ಯದವರಿಗೆ ಬರೆದ ಪತ್ರಿಕೆಯ ಪ್ರಮುಖ ಚರ್ಚೆಯಾಂಶವು ಪವಿತ್ರಾತ್ಮನಲ್ಲಿ ಕ್ರೈಸ್ತನ ನಡೆಯ ಕುರಿತಾಗಿ ಇರುತ್ತದಾದ್ದರಿಂದ, ದೇವರಾತ್ಮನಿಂದ ಉಂಟಾಗುವ ಫಲಗಳ ಕುರಿತು ಒಂದು ವಿವರವಾದ ಬಣ್ಣನೆಯನ್ನು ನೀಡುವದು 5ನೇ ಅಧ್ಯಾಯಕ್ಕೆ ಒಂದು ಸೂಕ್ತವಾದ ಮುಕ್ತಾಯವಾಗಿರುತ್ತದೆ.

**ವಚನಗಳು 22, 23. ಆದರೆ** (δέ, *de*) ಎಂಬುದು ವಿರುದ್ಧಾರ್ಥ ಸೂಚಕವಾಗಿರುತ್ತದೆ ಮತ್ತು ಈ ಹಿಂದೆ ಹೇಳಿರುವದನ್ನು ಹಾಗೂ ಮುಂದೆ ಹೇಳಲಿರುವದನ್ನು ವಿರುದ್ಧ ಹೋಲಿಕೆ ಮಾಡುತ್ತದೆ. ಕೆಲವು ಸಂದರ್ಭಗಳಲ್ಲಿ, *ಡೆ* ಸ್ವಲ್ಪ ಮಟ್ಟಿಗೆ ವಿರುದ್ಧ ಹೋಲಿಕೆಯನ್ನು ತೋರಿಸುತ್ತದೆ ಅಥವಾ ಯಾವ ವಿರುದ್ಧ ಹೋಲಿಕೆಯನ್ನೂ ತೋರಿಸುವದಿಲ್ಲ ಮತ್ತು ಅದು "ಮತ್ತು" ಎಂಬ ಸಂಬಂಧವ್ಯಯದ ಮೂಲಕ ಅನುವಾದಿಸಲ್ಪಡುತ್ತದೆ. ಇಲ್ಲಿ ಒಂದು ಮಹತ್ವಪೂರ್ಣವಾದ ವಿರುದ್ಧಹೋಲಿಕೆಯು ಕಾಣಿಸಿಕೊಳ್ಳತ್ತದಾದ್ದರಿಂದ, "ಆದರೆ" ಎಂಬುದು ಒಂದು ಸೂಕ್ತವಾದ ಅನುವಾದವಾಗಿರುತ್ತದೆ. ಪೌಲನು "ಶರೀರಭಾವದ ಕರ್ಮಗಳ" (5:19) ಕುರಿತು ಎಚ್ಚರಿಸುವದನ್ನು ಬಿಟ್ಟು **ದೇವರಾತ್ಮನಿಂದ ಉಂಟಾಗುವ ಫಲ** (ὁ καρπὸς τοῦ πνεύματος, *ho karpos tou pneumatos*) ಕಡೆಗೆ ತಿರುಗಿಕೊಳ್ಳುತ್ತಾನೆ. ದುರ್ಗುಣಗಳ ಬದಲಾಗಿ, ಆತನು ಸದ್ಗುಣಗಳ ಕುರಿತು ಚರ್ಚಿಸಲಾರಂಭಿಸುತ್ತಾನೆ.

ಒಂದು ಮರವು ಅದರ ಜಾತಿಯ ಪ್ರಕಾರವಾಗಿ ಫಲಗಳನ್ನು ಕೊಡುತ್ತದೆ.[80] ಆದಾಮ ಮತ್ತು ಹವ್ವಳ ಬೀಳುವಿಕೆಯ ಕಾಲದಿಂದ, ಮನುಷ್ಯನು ಪ್ರಾಕೃತ ಹಾಗೂ ಆತ್ಮೀಕವಲ್ಲದ "ಶರೀರಭಾವದ ಕರ್ಮಗಳನ್ನು" ನಡಿಸುತ್ತಲೇ ಇದ್ದಾನೆ. ಬೈಬಲ್ ಇತಿಹಾಸದ ಆರಂಭದ ಹತ್ತಿರದಲ್ಲಿ, ದೇವರು ಮನುಷ್ಯನ ಸಕಲ ಕೆಟ್ಟತನವನ್ನು ಗಮನಿಸಿದನು ಮತ್ತು ಅವನು "ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವದನ್ನು" ಕಂಡನು. ಅಲ್ಲದೆ ತಾನು ಭೂಮಿಯ ಮೇಲೆ ಮನುಷ್ಯನನ್ನು ಉಂಟು ಮಾಡಿದ್ದಕ್ಕಾಗಿ ವಿಷಾದಿಸಿದನು, ಮತ್ತು "ತನ್ನ ಹೃದಯದಲ್ಲಿ ನೊಂದುಕೊಂಡನು" (ಆದಿಕಾಂಡ 6:5, 6). ದೇವರು ಹೀಗೆ ಹೇಳಿದನು, "ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವದಿಲ್ಲ; ಅವರು ಭ್ರಷ್ಟರಾದದರಿಂದ ಮರ್ತ್ಯರೇ" (ಆದಿಕಾಂಡ 6:3).

ದೇವರ ಪವಿತ್ರಾತ್ಮನು ಆತನ ಸೃಷ್ಟಿಯ ಮಹಿಮೆಯ ಮುಕುಟವಾಗಿದ್ದವನು, ಆತನ ಸ್ವಂತ

ಸ್ವರೂಪದಲ್ಲಿ ರೂಪಿಸಲ್ಪಟ್ಟಿದ್ದವನು, ಕೀಳುಮಟ್ಟಕ್ಕೆ ಉರುಳುವದನ್ನು, ಪಾಪದ ಪಾತಾಳದಲ್ಲಿ ಆಳದಿಂದ ಆಳಕ್ಕೆ ಇಳಿಯುವದನ್ನು ನೋಡುವದಕ್ಕೂ ಆಗಲಿಲ್ಲ. ಮನುಷ್ಯನು ನಿರಂತರವಾಗಿ ತನ್ನ ಭ್ರಷ್ಟ ಇಚ್ಛೆಗಳಿಗೆ ಒಳಗಾಗುವದನ್ನು ಮತ್ತು ದೇವರು ಇಂಗಿತ ಹೊಂದಿದ್ದ ಸ್ಥಾನವನ್ನು - ಯಾವ ಮಹಿಮೆಗಾಗಿ ಆತನು ಮೂಲತಃ ರೂಪಿಸಲ್ಪಟ್ಟಿದ್ದನೋ ಅದನ್ನು[81] - ತೊರೆದು ಬಿಟ್ಟದ್ದನ್ನು ನೋಡಿ ನೊಂದುಕೊಂಡನು. ಆದಿಕಾಂಡ 6:3ರಲ್ಲಿ, ನಾವು "ಶರೀರಭಾಗ" (בָּשָׂר, *baśar*; σάρξ, *sarx*) ಹಾಗೂ "ಪವಿತ್ರಾತ್ಮನ" (רוּחַ, *ruach*; πνεῦμα, *pneuma*) ನಡುವಿನ ಇದ್ದ ವೈರತ್ವದ ಕುರಿತಾದ ಮೊದಲ ಹೇಳಿಕೆಯನ್ನು ಶಾಸ್ತ್ರಗಳಲ್ಲಿ ಕಾಣುತ್ತೇವೆ.

ಈ ಘರ್ಷಣೆಯನ್ನು ಗಲಾತ್ಯ 5ನೇ ಅಧ್ಯಾಯದಲ್ಲಿ ವಿವೇಚಿಸಬಹುದಾಗಿದೆ. ಇದು ಪೌಲನ "ಶರೀರಭಾವದ ಕರ್ಮಗಳನ್ನು" "ದೇವರಾತ್ಮನಿಂದ ಉಂಟಾಗುವ ಫಲ"ದ (5:19–23) ಕಡೆಗಿರುವ ಉಪನಿವೇಶನದಲ್ಲಿ ಮಾತ್ರವೇ ಅಲ್ಲ, ಆದರೆ ಆತನು ಇದಕ್ಕೆ ಮುನ್ನ 5:17ರಲ್ಲಿ ನೀಡಿದ ಹೇಳಿಕೆಯಲ್ಲಿ ಸಹ ಇರುತ್ತದೆ: "ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ."

"ದೇವರಾತ್ಮನಿಂದ ಉಂಟಾಗುವ ಫಲ" ಎಂಬುದು ಸುವಾರ್ತೆಗೆ ವಿಧೇಯರಾಗುವವರಿಗೆ ದೇವರು ಅನುಗ್ರಹಿಸಿರುವ ಗುಣಗಳನ್ನು ಸೂಚಿಸುತ್ತದೆ. ಜನರು ಯೇಸುವಿನ ಶುಭವಾರ್ತೆಯನ್ನು ಆಲಿಸುವಾಗ, ಅವರು ತಮ್ಮ ಪಾಪದ ಆಳ ಮತ್ತು ದೇವರ ಪ್ರೀತಿಯ ಆಗಾಧತೆ ಇವೆರಡನ್ನೂ ಗ್ರಹಿಸಿಕೊಳ್ಳುವರು. ಆತನು ತನ್ನ ಸ್ವಂತ ಮಗನನ್ನು ಪಾಪದ ಮೂರ್ತರೂಪನಾಗುವಂತೆ ಶಿಲುಬೆಯೊಂದರ ಮೇಲೆ ಯಜ್ಞವಾಗುವಂತೆ ಕಳುಹಿಸುವ ಮೂಲಕ ತನ್ನ ಈ ಪ್ರೀತಿಯನ್ನು ತೋರ್ಪಡಿಸಿದನು, ಹೀಗೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವವರು "ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ" ಮಾಡಿದನು (2 ಕೊರಿಂಥ 5:21). ಆ ದಿನದಲ್ಲಿ, ಎಲ್ಲಾ ಮಾನವ ಇತಿಹಾಸದ ಪರಾಕಾಷ್ಠೆಯು ತಲುಪಿದ ವೇಳೆ ಏನು ಸಂಭವಿಸಿತೆಂಬುದನ್ನು ಗ್ರಹಿಸಿಕೊಳ್ಳುವ ಮೂಲಕ, ಸುವಾರ್ತೆಯನ್ನು ಕೇಳಿಸಿಕೊಳ್ಳುವವರು ನಂಬಿಕೆಯಿಡುವಂತೆ ಪ್ರೇರಿಸಲ್ಪಡುವರು. ಬಳಿಕ ಅವರು ಪಂಚಾಶತ್ತಮ ದಿನದಂದು ತನ್ನ ನಂಬಿಕೆಯಿಟ್ಟ ಯೆಹೂದ್ಯರಿಗೆ ಪೇತ್ರನು ಏನು ಆಜ್ಞೆಯನ್ನು ಕೊಟ್ಟನೋ ಆ ಆಜ್ಞೆಗೆ ಇವರೂ ಶರಣಾಗುವರು: "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38). "ಪಶ್ಚಾತ್ತಾಪ" ಎಂದರೆ "ಒಬ್ಬನು ತನ್ನ ಜೀವನದ ದಿಕ್ಕನ್ನು ಬದಲಾಯಿಸಿಕೊಳ್ಳುವದು" ಎಂದಾಗಿದೆ ಒಬ್ಬನು ಯೇಸುವನ್ನು ತನ್ನ ಜೀವಿತದ ಕರ್ತನೆಂದು ಅಂಗೀಕರಿಸಿಕೊಳ್ಳುವವನಾಗಿ ತನ್ನನ್ನು ದೇವರ ಚಿತ್ತಕ್ಕೆ ಸಮರ್ಪಿಸಿಕೊಳ್ಳತಕ್ಕದ್ದು. "ದೀಕ್ಷಾಸ್ನಾನಮಾಡಿಸಿಕೊಳ್ಳಿರಿ" ಎಂಬದಕ್ಕಿರುವ ಪದವು (βαπτίζω, *baptizō*) ಅಕ್ಷರಶಃ "ಮುಳುಗಿಸಲ್ಪಡು" ಎಂಬ ಅರ್ಥವನ್ನು ಹೊಂದಿರುತ್ತದೆ. ದೀಕ್ಷಾಸ್ನಾನವೆಂದರೆ ನೀರಿನಲ್ಲಿ ಹೂಣಲ್ಪಡುವಿಕೆಯಾಗಿದ್ದು ಆ ಮೂಲಕ ವಿಶ್ವಾಸಿಯು ಕ್ರಿಸ್ತನ ರಕ್ಷಿಸುವಂಥ ರಕ್ತದ ಮೂಲಕವಾಗಿ ತನ್ನ ಪಾಪಗಳನ್ನು ತೊಳೆದುಕೊಳ್ಳುವವನಾಗಿದ್ದಾನೆ.[82]

ಪಾಪಗಳ ಕ್ಷಮಾಪಣೆಯ ಜೊತೆಯಲ್ಲಿ, ಸುವಾರ್ತೆಗೆ ವಿಧೇಯರಾಗುವವರಿಗೆ ಅವರೊಳಗೆ ಸ್ವತಃ ಪವಿತ್ರಾತ್ಮನು ವಾಸಿಸುವನೆಂಬ ವರವು ವಾಗ್ದಾನ ಮಾಡಲ್ಪಡುತ್ತದೆ. ಅಪೊಸ್ತಲರ ಕೃತ್ಯಗಳು 2:39ರ ಪ್ರಕಾರ, ಅದನ್ನು ಮುಂದೆ ಸ್ವೀಕರಿಸಿಕೊಳ್ಳುವವರೊಳಗೆ ಕೇವಲ ಯೆಹೂದ್ಯರು ಮತ್ತು ಪಂಚಾಶತ್ತಮ ದಿನದಂದು ಉಪಸ್ಥಿತರಿದ್ದ "ಸದ್ಭಕ್ತರು" (ಅಪೊಸ್ತಲರ ಕೃತ್ಯಗಳು 2:5) ಮಾತ್ರವೇ ಸಿಮೀತರಾಗಿರಲಿಲ್ಲ, ಆದರೆ ಅವರ "ಮಕ್ಕಳು" ಮತ್ತು

"ದೂರದಲ್ಲಿರುವವರೆಲ್ಲರೂ" ಸೇರಿದ್ದರು. ಪವಿತ್ರಾತ್ಮನು ನಮ್ಮೊಳಗೆ ವಾಸಿಸುವನೆಂಬುದು ಸುವಾರ್ತೆಗೆ ವಿಧೇಯರಾಗುವವರಿಗೆಲ್ಲಾ ಕೊಡಲ್ಪಟ್ಟಿದೆ, ಅವರು ಯೆಹೂದ್ಯರಾಗಿರಲಿ ಅಥವಾ ಅನ್ಯಜನರಾಗಿರಲಿ.[83]

ಕೇವಲ ಮಣ್ಣಿನ ಪಾತ್ರೆಗಳಾಗಿದ್ದು, ನಾವು ದೇವರಾತ್ಮನ ಮರ್ಮಗಳನ್ನು ಮತ್ತು ಆತನು ಹೇಗೆ ಕೆಲಸ ಮಾಡುತ್ತಾನೆಂಬುದನ್ನು ಅರಿತುಕೊಳ್ಳಲು ಸಾಧ್ಯವಿಲ್ಲ. ಶಾಸ್ತ್ರಗಳು ಕಲಿಸುವದು (ನಾವು ಅದನ್ನು ಅರ್ಥಮಾಡಿಕೊಂಡರೂ ಸರಿಯೇ ಅಥವಾ ಮಾಡಿಕೊಳ್ಳದಿದ್ದರೂ ಸರಿಯೇ) ಸತ್ಯವಾಗಿದೆ: ನಮ್ಮ ದೇವರ ಪವಿತ್ರಾತ್ಮನು ದೇವರಿಂದ ಅನುಗ್ರಹಿಸಲ್ಪಟ್ಟಿರುವ ಒಂದು ವರವಾಗಿ ಕ್ರೈಸ್ತನ ದೇಹದೊಳಗೆ ನೆಲೆಸುತ್ತಾನೆ. ಅಷ್ಟುಮಾತ್ರವಲ್ಲದೆ, ದೇವರನ್ನು ನಂಬುವ ಮತ್ತು ವಿಧೇಯನಾಗುವ ಯಾರೇ ಆಗಲಿ, ತನ್ನ ಚಿತ್ತವನ್ನು ತಂದೆಯ ಚಿತ್ತಕ್ಕೆ ಒಪ್ಪಿಸಿ ಕೊಡುವವನಾಗುವಾಗ, ದೇವರ ಒಬ್ಬ ಮಗುವಾಗಿರುವದರ ಫಲಿತವಾದ ರೂಪಾಂತರವನ್ನು ಅನುಭವಿಸುವನು (3:26–29). ಆತನು ದೇವರ ಮಗನಾದ ಯೇಸು ಕ್ರಿಸ್ತನ ಸಾರೂಪ್ಯದಲ್ಲಿ ಅಧಿಕಾಧಿಕವಾಗಿ ಬೆಳೆಯುವನು. ಈ ವಿಧದಲ್ಲಿ, ಆತನು ಪೌಲನಿಂದ "ದೇವರಾತ್ಮನಿಂದ ಉಂಟಾಗುವ ಫಲ" ಎಂದು ಕರೆಯಲ್ಪಟ್ಟ ಗುಣಗಳನ್ನು ತೋರ್ಪಡಿಸುವನು: ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ.

1. **ಪ್ರೀತಿ** (ἀγάπη, *agapē*)ಯು ಈ ಸದ್ಗುಣಗಳ ಹೆಸರಾಂತ ಪಟ್ಟಿಯ[84] ಆರಂಭದಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಗ್ರೀಕ್ ಭಾಷೆಯಲ್ಲಿ ಗುರುತಿಸಲಾಗಿರುವ ನಾಲ್ಕು ವಿಧವಾದ ಪ್ರೀತಿಗಳೊಳಗೆ ಮೊದಲನೆಯದಾಗಿದೆ. ವಾಸ್ತವಿಕದಲ್ಲಿ, *ಅಗಾಫೆ* ಅತ್ಯುನ್ನತ ವಿಧವಾದ ಪ್ರೀತಿಯಾಗಿದ್ದು, ಸ್ವತಃ ದೇವರಿಂದ ಹೊರಹೊಮ್ಮುವದಾಗಿದೆ. ಯೋಹಾನನು ಈ ನಾಮಪದವನ್ನು, ಅದಕ್ಕೆ ಸಂಬಂಧಿಸಿದ ಕ್ರಿಯಾಪದವಾದ ἀγαπάω (*agapaō*) ಎಂಬುದರ ಜೊತೆಯಲ್ಲಿ ಹಲವಾರು ಸಾರಿ ಬಳಸುವನಾಗಿ, ಆತನು ಹೀಗೆ ಬರೆಯುತ್ತಾನೆ, "ದೇವರು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ನಾವು ತಿಳಿದುಕೊಂಡಿದ್ದೇವೆ ಅದನ್ನು ನಂಬಿದ್ದೇವೆ. ದೇವರು ಪ್ರೀತಿಸ್ವರೂಪಿ; ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ . . . ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ (1 ಯೋಹಾನ 4:16–19).

*Agapē*ಯು ಪ್ರಿಯರ ಕಡೆಗೆ ಕೇವಲ ಮಮತೆ ಹೊಂದಿರುವದನ್ನು ಮೀರಿದ್ದಾಗಿರತಕ್ಕದ್ದು. ಅದು ಮತ್ತೊಬ್ಬರ, ಅತ್ಯುತ್ತಮ ಹಿತಾಸಕ್ತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ವೈರಿಗಳಾಗಿದ್ದರೂ ಸರಿಯೇ, ಅವರ ಹಿತಾಸಕ್ತಿಗಳಿಗಾಗಿ ಕೆಲಸ ಮಾಡುತ್ತದೆ. ಯೇಸುವು ತನ್ನ ಶಿಷ್ಯರಿಗೆ ಹೀಗೆ ಬೋಧಿಸಿದನು,

> ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆಮಾಡಬೇಕೆಂದು ಹೇಳಿಯದೆ ಎಂಬದಾಗಿ ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ - ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ. ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು? ಭ್ರಷ್ಟರೂ ಹಾಗೆ ಮಾಡುವದಿಲ್ಲವೇ. ನಿಮ್ಮ ಸಹೋದರರಿಗೆ ಮಾತ್ರ ನೀವು ಮರ್ಯಾದೆಕೊಟ್ಟರೆ ಏನು ಹೆಚ್ಚು ಮಾಡಿದ ಹಾಗಾಯಿತು? ಅನ್ಯಜನಗಳು ಸಹ ಹಾಗೆ ಮಾಡುವದಿಲ್ಲವೇ. ಆದದರಿಂದ

> ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ (ಮತ್ತಾಯ 5:43-48).

ದೇವರು ಪ್ರತಿಯೊಬ್ಬರಿಗಾಗಿಯೂ, ತನ್ನ ವೈರಿಗಳ ಪ್ರಯೋಜನಾರ್ಥವಾಗಿ ಸಹ ಕಾರ್ಯಮಾಡುವನು ("ಅನೀತಿವಂತರು"). ಆತನ ಮಕ್ಕಳು ಹಾಗೆಯೇ ಮಾಡಬೇಕೆಂದು ಕರೆ ಕೊಡಲ್ಪಟ್ಟಿದ್ದಾರೆ.

ಭಿನ್ನಾಭಿಪ್ರಾಯಗಳನ್ನು ಹೊಂದಿದ್ದ ಸಭೆಯಲ್ಲಿ ಒಗ್ಗಟ್ಟನ್ನು ತರುವ ಉದ್ದೇಶದಿಂದ, ಪೌಲನು ಕೊರಿಂಥದವರಿಗೆ *agapē* ಪ್ರೀತಿಯ ಸ್ವಾರ್ಥರಹಿತ ಸ್ವಭಾವವನ್ನು ಬಣ್ಣಿಸುತ್ತಾನೆ:

> ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚುಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲ; ಮರ್ಯಾದೆಗೆಟ್ಟು ನಡೆಯುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ; ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ; ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದುಹೋಗುವದಿಲ್ಲ (1 ಕೊರಿಂಥ 13:4-8a).

ಅಷ್ಟುಮಾತ್ರವಲ್ಲದೆ, *agapē* ಪ್ರಯೋಜನಕರವಾದದ್ದು ಮತ್ತು ಕನಿಕರವುಳ್ಳದ್ದಾಗಿದೆ. ಪ್ರೀತಿಯ ಈ ಗುಣಸ್ವಭಾವಗಳಿಗೆ ನಮ್ಮ ಕರ್ತನಾದ ಯೇಸುವು ಮಾದರಿಯನ್ನು ತೋರಿಸಿದನು, ಆತನು ಬೇರೆಯವರ ಸೇವೆಯನ್ನು ಮಾಡುವ ವೇಳೆ ಕನಿಕರ ಪಟ್ಟನು (ಮತ್ತಾಯ 9:36; 14:14; 15:32; 20:34). ಅಷ್ಟೇ ಅಲ್ಲದೆ, *agapē* ಯಾವಾಗಲೂ ನಿರ್ಮಲವಾಗಿರತಕ್ಕದ್ದು, ಅದರ ಬಗ್ಗೆಯೇ ಪೇತ್ರನು ತನ್ನ ವಾಚಕರಿಗೆ ಬುದ್ಧಿವಾದ ಹೇಳುತ್ತಾನೆ,

> ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡದ್ದರಿಂದ ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು. ಹೀಗಿರಲಾಗಿ ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಿರಿ. ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು (1 ಪೇತ್ರ 1:22, 23).

ಈ ಪ್ರೀತಿಯು ನೂತನ ಜನ್ಮದ ಒಂದು ಉತ್ಪನ್ನವಾಗಿರುತ್ತದೆ, ಅಥವಾ ಪೌಲನ ಭಾಷೆಯಲ್ಲಿ ಹೇಳುವದಾದರೆ ಅದು "ದೇವರಾತ್ಮನಿಂದ ಉಂಟಾಗುವ ಫಲ." ವಾಸ್ತವಿಕದಲ್ಲಿ, ದೇವರು ತನ್ನ ಮಕ್ಕಳಿಗೆ ದೊರಕುವಂತೆ ಮಾಡಿರುವ ಸಕಲ ಆತ್ಮೀಕ ಗುಣಗಳಲ್ಲಿಯೂ ಇದು ಅತ್ಯಂಥ ಶ್ರೇಷ್ಠವಾದ ಮತ್ತು ಅತ್ಯಂಥ ಘನವಾದ ಸಂಗತಿಯಾಗಿದೆ. ಇದು ಕೊರಿಂಥದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನು ಚರ್ಚಿಸಿದ ಆತ್ಮನಿಂದುಂಟಾಗುವ ತಾತ್ಕಾಲಿಕ ವರಗಳಿಗಿಂತಲೂ ಹೋಲಿಸಲಾಗದಷ್ಟು ಶ್ರೇಷ್ಠವಾದದ್ದು. ಅಲ್ಲದೆ ಇದು ನಂಬಿಕೆ ಮತ್ತು ನಿರೀಕ್ಷೆಗಳಿಗಿಂತಲೂ ಸರ್ವೋಚ್ಛವಾದದ್ದು (1 ಕೊರಿಂಥ 13:13).

2. ದೇವರಾತ್ಮನಿಂದ ಉಂಟಾಗುವ ಫಲಗಳೊಳಗೆ ನಂತರದ್ದು **ಸಂತೋಷ** (*χαρά*, *chara*). ಕ್ರೈಸ್ತ ಪರಿಪಕ್ವತೆಗೆ ಅತ್ಯಂಥ ಸಾರಭೂತವಾದ ಗುಣವಾದ ಸಂತೋಷದ ಭಾವನೆಯನ್ನು ಅನೇಕ ಸಾರಿ ಅಸಡ್ಡೆ ಮಾಡಲಾಗಿರುತ್ತದೆಂದು ಹೇಳಬಹುದು. ಹಳೆಯ

ಒಡಂಬಡಿಕೆಯಲ್ಲಿ ಸಹ, ಸಂತೋಷವು ದೇವರ ಜನರಲ್ಲಿರುತ್ತಿದ್ದ ಪ್ರಬಲವಾದ ಗುಣಸ್ವಭಾವವಾಗಿತ್ತು. ಹಾಗಾದರೆ, ಕ್ರಿಸ್ತನಲ್ಲಿ ದೊರಕುವ ವಿಮೋಚನೆಯನ್ನು ಪಡೆದುಕೊಂಡವರಾಗಿ ಹೊಸ ಒಡಂಬಡಿಕೆಯ ಜನರು ಇನ್ನೂ ಎಷ್ಟೂ ಹೆಚ್ಚು ಸಂತೋಷವನ್ನು ಅನುಭವಿಸಬೇಕಲ್ಲವೇ!

*Chara* ಎಂಬುದು ಹರ್ಷ, ಸಂಭ್ರಮ, ಅಥವಾ ಸುಖದ ಯೋಚನೆಯನ್ನು ವ್ಯಕ್ತಪಡಿಸುವ ಒಂದು ನಾಮಪದವಾಗಿದೆ. ಇದಕ್ಕೆ ಸಂಬಂಧಪಟ್ಟ ಕ್ರಿಯಾಪದ ರೂಪವು χαίρω (*chairō*) ಎಂಬುದು, "ಸಂತೋಷಿಸು" ಅಥವಾ "ಹರ್ಷಗೊಳ್ಳು" ಎಂದು ಅದರರ್ಥವಾಗಿದೆ. LXX ಮತ್ತು ಹೊಸ ಒಡಂಬಡಿಕೆ ಇವೆರಡಲ್ಲಿಯೂ ಸಂತೋಷದ ಭಾವಗಳನ್ನು ವ್ಯಕ್ತಪಡಿಸುವ ಇನ್ನೂ ಮೂರು ಪ್ರಧಾನವಾದ ಗ್ರೀಕ್ ಪದಗಳೆಂದರೆ ἀγαλλίασις (*agalliasis*), ಅಂದರೆ "ಉತ್ಕಟ ಸಂತೋಷ ಅಥವಾ ಸುಖ"; μακαρισμός (*makarismos*), ಅಂದರೆ "ಸುಖ" ಅಥವಾ "ಆಶೀರ್ವಾದ"; εὐφροσύνη (*euphrosunē*), ಅಂದರೆ "ಸಂತೋಷ" ಅಥವಾ "ಹರ್ಷ." ಈ ವಿಚಾರಗಳನ್ನು ಅಥವಾ ಭಾವಗಳನ್ನು ವ್ಯಕ್ತಪಡಿಸುವ ಇಬ್ರಿಯ ಪದಗಳು ಸವಿಸ್ತಾರವಾದವುಗಳಾಗಿವೆ. ವಾಸ್ತವಿಕದಲ್ಲಿ, ಹಲವಾರು ಇಬ್ರಿಯ ಪದಗಳು LXXನಲ್ಲಿ ಒಂದೇ ವಿಧವಾದ ಗ್ರೀಕ್ ಪದದಿಂದ ಅನುವಾದಿಸಲ್ಪಡಬಹುದಾಗಿದೆ.

ಸಂತೋಷವು ಕ್ರೈಸ್ತನ ಸ್ವಭಾವಜನ್ಯ ಗುಣಸ್ವಭಾವವಾಗಿರತಕ್ಕದ್ದು, ಆತನು ದೇವರ ರಾಜ್ಯದ ಪ್ರಜೆಯಾಗಿರುತ್ತಾನಷ್ಟೆ. ರೋಮಾಪುರದಲ್ಲಿ ಪೌಲನ ಕೆಲವು ಸಹೋದರರು ಶುದ್ಧ/ಅಶುದ್ಧ ಆಹಾರದ ಮತ್ತು ವಿಶೇಷವಾದ ಪವಿತ್ರ ದಿನಗಳ ವಿಷಯದಲ್ಲಿ ವ್ಯಾಜ್ಯಗಳನ್ನು ಹೊಂದಿದ್ದ ವೇಳೆ, ಆತನು ಅವರಿಗೆ ಕಲಿಸಿದ್ದೇನೆಂದರೆ "ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ" (ರೋಮಾ 14:17; NIV). ಆತನು ಅನಂತರದಲ್ಲಿ ಫಿಲಿಪ್ಪಿಯದಲ್ಲಿರುವ ತನ್ನ ಪ್ರಿಯರಿಗೆ, "ಸಂತೋಷ" ಕುರಿತು ಒತ್ತಿ ಹೇಳುವವನಾಗಿ ಬರೆಯುತ್ತಾನೆ. ಆತನು ಅವರಿಗೆ ಸತತವಾಗಿ "ಕರ್ತನಲ್ಲಿ ಸಂತೋಷಿಸಿರಿ" ಎಂದು ಬುದ್ಧಿಮಾತು ಹೇಳಿದನು ಮತ್ತು ಮಮತೆಯಿಂದ ಅವರನ್ನು ತನಗೆ "ಸಂತೋಷವೂ ಜಯಮಾಲೆಯೂ ಆಗಿರುವವರೇ" ಎಂದು ಕರೆದನು (ಫಿಲಿಪ್ಪಿ 3:1; 4:1, 4). ಪೌಲನು "ಸಂತೋಷ" ಎಂಬದಕ್ಕಾಗಿ ಒಂದು ನಿರ್ದಿಷ್ಟವಾದ ಪದವನ್ನು ಬಳಸಲಿಲ್ಲವಾದರೂ, ಆತನ ಬರಹಗಳಲ್ಲಿ ಕೆಲವು ಸಾರಿ ಏಕಾಏಕಿ ಸಂಭ್ರಮದಿಂದ ಹರ್ಷಗೊಳ್ಳಲಾರಂಭಿಸುತ್ತಾನೆ. ಉದಾಹರಣೆಗೆ, ದೇವರ ದೈವಿಕ ಸ್ವಭಾವ ಹಾಗೂ ಆತನ ರಕ್ಷಣೆಯುಂಟು ಮಾಡುವ ಕೃಪೆಯ ಕುರಿತು ಆಲೋಚಿಸುವ ವೇಳೆ, ಅಪೊಸ್ತಲನು ಹೀಗೆ ಹರ್ಷೋದ್ಗಾರದಿಂದ ನುಡಿಯುತ್ತಾನೆ, "ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ!" (ರೋಮಾ 11:33).

ಯೇಸುವನ್ನು ಹೃದಯಪೂರ್ವಕವಾಗಿ ತನ್ನ ವಿಮೋಚಕನೆಂದು ಕರೆದಿರುವ ಮತ್ತು ಪವಿತ್ರಾತ್ಮನ ವರದಾನದಿಂದ ಆಶೀರ್ವದಿಸಲ್ಪಟ್ಟಿರುವ ದೇವರ ಮಗುವಿಗೆ ಕರ್ತನಲ್ಲಿ ಆ ವಿಧವಾಗಿ ಸಂತೋಷಿಸುವದು ಸ್ವಾಭಾವಿಕವಾದ ಪ್ರತಿಕ್ರಿಯೆಯಾಗಿರುತ್ತದೆ. ಘೋರವಾದ ಪರಿಸ್ಥಿತಿಗಳ ನಡುವೆಯೂ ಒಬ್ಬ ಕ್ರೈಸ್ತನು ಸಂತೋಷವನ್ನು ಕಾಪಾಡಿಕೊಂಡು ಹೋಗಬಹುದಾಗಿದೆ. ಈ ತತ್ವಕ್ಕೆ ಎರಡನೆಯ ಸುವಾರ್ತಾ ಪ್ರಯಾಣದ ವೇಳೆಯಲ್ಲಿ ಪೌಲ ಮತ್ತು ಸೀಲರು ದೃಷ್ಟಾಂತವನ್ನು ಒದಗಿಸುತ್ತಾರೆ. ಅವರಿಗೆ ಬೆತ್ತಗಳಿಂದ ಹೊಡೆದ ಬಳಿಕ, ಕ್ರಿಸ್ತನ ಇಬ್ಬರು ರಾಯಭಾರಿಗಳು ಫಿಲಿಪ್ಪಿಯದ ಸೆರೆಮನೆಗಳಲ್ಲಿ ಹಾಕಲ್ಪಟ್ಟಿದ್ದರು. ಅವರ ಕಾಲುಗಳಿಗೆ

ಸಂಕೋಲೆಗಳಿಂದ ಕಂಬಕ್ಕೆ ಕಟ್ಟಿ ಹಾಕಲ್ಪಟ್ಟಿದ್ದರೂ, ಅವರ ಬೆನ್ನುಗಳು ಕೆಲವು ತಾಸುಗಳ ಹಿಂದೆ ಪಡೆದುಕೊಂಡ ಏಟುಗಳಿಂದಾಗಿ ನೋವಿನಿಂದ ತುಂಬಿದ್ದರೂ, ಈ ವ್ಯಕ್ತಿಗಳು ಮಧ್ಯರಾತ್ರಿಯಲ್ಲಿ "ದೇವರಿಗೆ ಸ್ತುತಿಪದಗಳನ್ನು ಹಾಡುತ್ತಿದ್ದರು" (ಅಪೊಸ್ತಲರ ಕೃತ್ಯಗಳು 16:22-25). ಅವರಿಗೆ ದೈಹಿಕ ನೋವು ಸಾಕಷ್ಟು ಪ್ರಮಾಣದಲ್ಲಿತ್ತು, ಆದರೆ ಅವರ ಹೃದಯಗಳೊಳಗಿಂದ ಸಂತೋಷವನ್ನು ಓಡಿಸುವದಕ್ಕೆ ಸಾಧ್ಯವಾಗಿರಲಿಲ್ಲ. ತಾವು ಯಾವ ಉದ್ದೇಶಕ್ಕಾಗಿ ದೈವಿಕವಾಗಿ ಕರೆಯಲ್ಪಟ್ಟಿದ್ದರೋ, ಆ ಯೇಸು ಕ್ರಿಸ್ತನ ಚಿತ್ತವನ್ನು ನೆರವೇರಿಸುವದಕ್ಕೆ ನಂಬಿಗಸ್ತಿಕೆಯಿಂದ ನಿಷ್ಠೆಯನ್ನು ಹೊಂದಿದ್ದರು.

ಪೌಲ ಮತ್ತು ಸೀಲರು ನಮ್ಮೆಲ್ಲರಿಗೂ ಪ್ರಶಂಸನೀಯವಾದ ಮಾದರಿಯಾಗಿರುತ್ತಾರೆ. ಕ್ರಿಸ್ತನ ಈ ರಾಯಭಾರಿಗಳ ಹೃದಯಗಳಲ್ಲಿ ಅಚಲತೆಯು ತುಂಬಿತ್ತು. ಇದು ನಿಶ್ಚಯವಾಗಿಯೂ ಅಂತಹ ಸಂತೋಷದ ಮೂಲವಾಗಿತ್ತು, ಅವರು ನೋವು ಮತ್ತು ಶ್ರಮೆಯನ್ನು ಅನುಭವಿಸುತ್ತಿದ್ದರೂ ಸಂತೋಷವಾಗಿದ್ದರು. ಅನೇಕ ಸುವಾರ್ತಿಕರು ಅನುಭವದಿಂದ ಕಲಿತುಕೊಂಡಿರುವ ಪ್ರಕಾರವಾಗಿ, ಒಂದೇ ಒಂದು ಅಮೂಲ್ಯವಾದ ಆತ್ಮವನ್ನು ಕ್ರಿಸ್ತನ ಮೂಲಕವಾದ ರಕ್ಷಣೆಯನ್ನು ತಿಳಿದುಕೊಳ್ಳುವಂತೆ ಕರೆದುಕೊಂಡು ಬರುವದರಲ್ಲಿ ಕ್ರಿಸ್ತನ ದೀನವಾದ ಸಾಧನವಾಗಿ ಸೇವೆ ಮಾಡುವದಕ್ಕಿಂತ ದೊಡ್ಡದಾದ ಸಂತೋಷವು ಬೇರೊಂದು ಇರುವದಿಲ್ಲ ಎಂಬುದೆ. ವಾಸ್ತವಿಕದಲ್ಲಿ, ಅದು ಸ್ವತಃ ಯೇಸುವಿನ ಸಂತೋಷವೇ ಆಗಿರುತ್ತದೆ, ". . . ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ" (ಇಬ್ರಿಯ 12:2; NRSV).

3. "ಪ್ರೀತಿ" ಮತ್ತು "ಸಂತೋಷ" ಇವುಗಳ ಬಳಿಕ **ಸಮಾಧಾನ** (εἰρήνη, *eirēnē*) ಇರುತ್ತದೆ. ಹಳೆಯ ಒಡಂಬಡಿಕೆಯಲ್ಲಿ ಪ್ರವಾದಿಸಿದ ಪ್ರಕಾರ, ದೇವರ ರಾಜ್ಯದ ವೈಶಿಷ್ಟ್ಯತೆಯು "ಸಮಾಧಾನ" ಆಗಿರಬೇಕಾಗಿತ್ತು. ಯೆಶಾಯ 52:7ರಲ್ಲಿ ಶುಭವಾರ್ತೆ, ಸಮಾಧಾನ, ಮತ್ತು ರಕ್ಷಣೆಗಳು ಒಟ್ಟಾಗಿ ಹೆಣೆಯಲ್ಪಟ್ಟಿರುತ್ತವೆ:

> ಪರ್ವತಗಳ ಮೇಲೆ ತ್ವರೆಪಡುತ್ತಾ ಶುಭಸಮಾಚಾರವನ್ನು ತಂದು ಸಮಾಧಾನವನ್ನು ಸಾರುವ ದೂತನ ಪಾದಗಳು ಎಷ್ಟೋ ಅಂದವಾಗಿವೆ! ಒಳ್ಳೆಯ ಶುಭವರ್ತಮಾನವನ್ನು, ಶುಭದ ಸುವಾರ್ತೆಯನ್ನು ತಂದು ರಕ್ಷಣೆಯನ್ನು ಪ್ರಕಟಿಸುತ್ತಾ - ನಿನ್ನ ದೇವರು ರಾಜ್ಯಭಾರವನ್ನು ವಹಿಸಿದ್ದಾನೆ ಎಂದು ಚೀಯೋನಿಗೆ ತಿಳಿಸುವವನಾಗಿದ್ದಾನೆ.

ಯೆಶಾಯನು ಬರಲಿದ್ದ ಮೆಸ್ಸೀಯನನ್ನು "ಸಮಾಧಾನದ ಪ್ರಭು" ಎಂದು ಕರೆದನು (ಯೆಶಾಯ 9:6).

ರಕ್ಷಕನು ಹುಟ್ಟಿದಾಗ, ದೇವರ ದೂತರು ರಾತ್ರಿಯಲ್ಲಿ ತಮ್ಮ ಕುರಿಗಳನ್ನು ಕಾಯುತ್ತಿದ್ದ ಕೆಲವು ಕುರುಬರಿಗೆ ಸಂತೋಷಕರವಾದ ಸಮಾಚಾರವನ್ನು ತಿಳಿಸಿದರು. ಪರಲೋಕದ ಒಂದು ದೊಡ್ಡ ಗುಂಪು ಕಾಣಿಸಿಕೊಂಡು, "ಮೇಲಣಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ ದೇವರು ಅವರಿಗೆ ಒಲಿಯುತ್ತಾನೆ ಎಂದು ದೇವರನ್ನು ಕೊಂಡಾಡುತ್ತಾ ಹೇಳಿದರು" (ಲೂಕ 2:13, 14). ಗ್ರೀಕ್ ವಾಕ್ಯವು ಅಕ್ಷರಶಃ ಹೇಳುವದೇನೆಂದರೆ "ಸುಚಿತ್ತದ ಮನುಷ್ಯರೊಳಗೆ" (ἐν ἀνθρώποις εὐδοκίας, *en anthrōpois eudokias*) ಎಂದಿರುತ್ತದೆ. ಸುಚಿತ್ತದ ಮನುಷ್ಯರಿಗಾದರೋ, ಅದಕ್ಕಿಂತ ದೊಡ್ಡ ಸಂತೋಷ ಅಥವಾ ಸಮಾಧಾನ ಇನ್ನಾವದೂ ಇದ್ದಿರಲಿಕ್ಕೆ ಸಾಧ್ಯವಿರಲಿಲ್ಲ. ಹೇಗೂ, ದುಷ್ಟ ಮನುಷ್ಯರು ಈ

ವರದಾನದ ಕಡೆಗೆ ಹಗೆತನ, ತಿರಸ್ಕಾರ, ಮತ್ತು ದ್ವೇಷಗಳಿಂದಷ್ಟೇ ಪ್ರತಿಕ್ರಿಯಿಸಬಹುದಿತ್ತು. ಕ್ರಿಸ್ತನ ಕಡೆಗಿದ್ದ ಈ ಬೇರೆ ಬೇರೆಯಾದ ಪ್ರತಿಕ್ರಿಯೆಗಳೇ ಮತ್ತಾಯ 10:34-36ರಲ್ಲಿನ ಆತನ ಹೇಳಿಕೆಗೆ ಹಿನ್ನಲೆಯಾಗಿರುತ್ತವೆ:

> ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು. ಹೇಗಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸುವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು.

ನಂಬಿಗಸ್ತರಾದ ಕ್ರೈಸ್ತರಿಗಾದರೋ, ಕ್ರಿಸ್ತನು ಆಂತರೀಕ ಸಮಾಧಾನವನ್ನು ತರುತ್ತಾನೆ. ತಾನು ಸ್ವಲ್ಪ ಹೊತ್ತಿನಲ್ಲಿ ಅವರನ್ನು ತೊರೆದು ತನ್ನ ತಂದೆಯ ಬಳಿಗೆ ಹಿಂದಿರುಗಿ ಹೋಗಲಿದ್ದಾನೆಂಬ ವಾಸ್ತವಾಂಶಕ್ಕೋಸ್ಕರ ಯೇಸುವು ತನ್ನ ಶಿಷ್ಯರನ್ನು ಸಿದ್ಧಪಡಿಸುತ್ತಿದ್ದ ಸಂದರ್ಭದಲ್ಲಿ, ಅವರನ್ನು ಅನಾಥರಾಗಿ ಬಿಡುವದಿಲ್ಲ ಎಂಬ ಭರವಸವನ್ನು ಅವರಿಗೆ ನೀಡಿದನು; ದೇವರು ಅವರಿಗೋಸ್ಕರ ಮತ್ತೊಬ್ಬಸಹಾಯಕ ಅಥವಾ ಆದರಿಕನನ್ನು ಒದಗಿಸುವನು ಎಂದು ತಿಳಿಸಿದನು. ಅಲ್ಲದೆ ಆತನು ಅವರಿಗೆ ಅನುಗ್ರಹಿಸಲಿದ್ದ ಸಮಾಧಾನ ಹೇಗಿರುತ್ತದೆಂಬುದರ ಕುರಿತು ಸಹ ತಿಳಿಸಿದನು: "ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ" (ಯೋಹಾನ 14:27). ಯೇಸುವು ಕೊಡುವಂತ ಸಮಾಧಾನವು ಆತನಲ್ಲಿ ಮತ್ತು ಆತನ ವಾಕ್ಯದಲ್ಲಿ ವಿಶ್ವಾಸವನ್ನಿಡುವದರ ಮೇಲೆ ಆಧಾರವಾಗಿರುತ್ತದೆ. ಅದು ಆತ್ಮಕ್ಕಾಗಿ ಇರುವಂಥ ವಿಶ್ರಾಂತಿಯಾಗಿದೆ (ಮತ್ತಾಯ 11:28-30).

ಪೇತ್ರನು ಕೊರ್ನೇಲ್ಯನ ಮನೆಯವರಿಗೆ ದೇವರು ಹೇಗೆ "ಯೇಸು ಕ್ರಿಸ್ತನ ಮೂಲಕ ದೇವರು ಸಮಾಧಾನದ ಶುಭಸಮಾಚಾರವನ್ನು ಪ್ರಕಟಿಸುತ್ತಾ ಇಸ್ರಾಯೇಲ್ ಜನರಿಗೆ" ತನ್ನ ವಾಕ್ಯವನ್ನು ಕಳುಹಿಸಿದನೆಂಬುದನ್ನು ತಿಳಿಸಿದನು (ಅಪೊಸ್ತಲರ ಕೃತ್ಯಗಳು 10:36). ಬಳಿಕ ಆತನು ಈ ಅನ್ಯಜನರಿಗೆ ಸಹ ದೇವರೊಂದಿಗೆ ಸಮಾಧಾನ ಹೊಂದಿಕೊಳ್ಳುವಂತಾಗುವ ಹಾಗೆ ಅವರಿಗೆ ಸುವಾರ್ತೆಯನ್ನು ಸಾರಿದನು (ಅಪೊಸ್ತಲರ ಕೃತ್ಯಗಳು 10:37-48). ಕ್ರಿಸ್ತನ ಮೇಲೆ ನಂಬಿಕೆಯಿಟ್ಟವರು ಮತ್ತು ಆತನೊಂದಿಗೆ ದೀಕ್ಷಾಸ್ನಾನದಲ್ಲಿ ಐಕ್ಯವಾಗಿರುವವರು - ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ - ದೇವರೊಂದಿಗೆ ಹಾಗೂ ಒಬ್ಬರೊಂದಿಗೊಬ್ಬರು ಸಮಾಧಾನ ಹೊಂದಿರುತ್ತಾರೆ (ಗಲಾತ್ಯ 3:26-29). ಪೌಲನು ಇದನ್ನು ಎಫೆಸ 2:14-19ರಲ್ಲಿ ಸಹ ವಿವರಿಸುತ್ತಾನೆ. ಕ್ರೈಸ್ತೀಯ "ಸಮಾಧಾನ"ದ ಭಾವನೆಯು ಎಷ್ಟೊಂದು ಪ್ರಾಮುಖ್ಯವಾಗಿತ್ತೆಂದರೆ ಅದು ಪೌಲನ ಪತ್ರಿಕೆಗಳಲ್ಲಿನ ಮಾತುಗಳಿಗೆ ಪ್ರೇರಣೆಯನ್ನು ಒದಗಿಸಿತ್ತು (ನೋಡಿರಿ ಗಲಾತ್ಯ 1:3). ನಾವು ಒಬ್ಬರಿಗೊಬ್ಬರು ಹೇಳಿಕೊಳ್ಳಬಹುದಾದ ವಂದನೆಗಳೊಳಗೆ "ಸಮಾಧಾನವಾಗಲಿ" ಎಂದು ಎಲ್ಲಕ್ಕಿಂತ ಶ್ರೇಷ್ಠವಾಗಿರಬಲ್ಲದು.

ಶರೀರಭಾವದ ಕರ್ಮಗಳ ವಿರುದ್ಧವಾಗಿ ಮಾತಾಡಿದ ಬಳಿಕ (5:16-21), ಪೌಲನು ತಕ್ಷಣವೇ ಪವಿತ್ರಾತ್ಮನ ಮಾರ್ಗದರ್ಶನದ ಅಡಿಯಲ್ಲಿ ಕ್ರೈಸ್ತರು ತಮ್ಮ ಜೀವಿತಗಳಲ್ಲಿ ಬೆಳೆಸಿಕೊಳ್ಳಬೇಕಾಗಿರುವ ಸಕಾರಾತ್ಮಕ ಗುಣಗಳ ಕಡೆಗೆ ತಿರುಗಿಕೊಳ್ಳುತ್ತಾನೆ. ಪ್ರೀತಿ, ಸಂತೋಷ, ಮತ್ತು ಸಮಾಧಾನ ಎಂಬ ಸದ್ಗುಣಗಳನ್ನು ಪ್ರಸ್ತಾಪಿಸಿದ ಬಳಿಕ, ಆತನು

ಪಟ್ಟಿಯನ್ನು ಮುಂದುವರೆಸುತ್ತಾನೆ.

4. ದೇವರಾತ್ಮನಿಂದ ಉಂಟಾಗುವ ಫಲದಲ್ಲಿ **ದೀರ್ಘಶಾಂತಿ** (μακροθυμία, *makrothumia*) ಸಹ ಸೇರಿರುತ್ತದೆ. ಈ ಸಂಯುಕ್ತ ಪದದ ಮೊದಲ ಭಾಗವು μακρός (*makros*), ಇದು "ಹೆಚ್ಚುಕಡಿಮೆ ಸುದೀರ್ಘ ಕಾಲ" ಅಥವಾ "ಹೆಚ್ಚುಕಡಿಮೆ ಅಂತರವಿರುವ, ದೂರದಲ್ಲಿರುವದು" ಎಂದು ಸೂಚಿಸಬಲ್ಲದು.[85] ಎರಡನೆಯ ಭಾಗವು θυμός (*thumos*) ಎಂಬ ನಾಮಪದದಿಂದ ಬರುತ್ತದೆ, ಅದಕ್ಕೆ "ತೀವ್ರಾಸಕ್ತಿ" ಅಥವಾ "ಭಾವೋದ್ರಿಕ್ತವಾಗಿ ಹಂಬಲಿಸುವದು" ಎಂಬುದರಿಂದ ಹಿಡಿದು "ಕೋಪ," "ರೌದ್ರ," ಮತ್ತು "ಸಿಟ್ಟು" ಎಂದು ಸಹ ವಿವಿಧ ಅರ್ಥಗಳು ಇರಬಹುದಾಗಿದೆ.[86] ಅದು ಮನಸ್ಸಿನ ಒಂದು ಸ್ಥಿತಿ ಅಥವಾ ಪ್ರಕೃತಿಯನ್ನು ವ್ಯಕ್ತಪಡಿಸುತ್ತದೆ. ಎರಡು ಪದಗಳನ್ನು ಮೂಲತಃ ಒಂದುಗೂಡಿಸಿದ ವೇಳೆ, ಅವುಗಳು ಬಹುಶಃ "ಕೋಪಿಸಿಕೊಳ್ಳುವದರಲ್ಲಿ ನಿಧಾನತೆ" ಎಂಬ ಅರ್ಥವನ್ನು ಕೊಟ್ಟಿರಬಹುದಾಗಿದೆ (ನೋಡಿರಿ ವಿಮೋಚನಕಾಂಡ 34:6; ಜ್ಞಾನೋಕ್ತಿ 19:11; LXX). ಕಾಲವು ಗತಿಸಿದ ಹಾಗೆ, ಈ ಪದಗಳು ವಿವಿಧ ಅರ್ಥದ ಛಾಯೆಗಳನ್ನು ವಹಿಸಿಕೊಳ್ಳಲು ಒಲವು ತೋರಿತ್ತು. Bauerನ ಶಬ್ದಕೋಶವು *makrothumia* ಎಂಬುದನ್ನು "ಸಹಿಸಿಕೊಳ್ಳುವಿಕೆ, ತಾಳ್ಮೆ" ಎಂದೋ ಅಥವಾ "ಸ್ಥಿರತೆ, ಸಹನೆ" ಎಂದೋ ಅರ್ಥನಿರೂಪಣೆ ಮಾಡುತ್ತದೆ.[87] ಈ ಪದವು ದೀರ್ಘಕಾಲ ಕಾಯುವಂಥ, ಕಾಯುವದು ಕಠಿಣವಾಗಿರುವ ವೇಳೆ ಮತ್ತು ಒಬ್ಬನ ತಾಳ್ಮೆಯನ್ನು ಪರೀಕ್ಷಿಸುವ ವೇಳೆ ದೃಢನಿಷ್ಠೆಯಿಂದಿರುವದಕ್ಕೆ ಇರುವಂತಹ ಒಂದು ಸಾಮರ್ಥ್ಯವನ್ನು ಸೂಚಿಸುತ್ತದೆ. KJVಯಲ್ಲಿ "ದೀರ್ಘಶಾಂತಿ" ಎಂದಿರುತ್ತದೆ, ಅದು ಗ್ರೀಕ್ ಪದದಲ್ಲಿರುವ ಸಮಯದ ಅಂಶವನ್ನು ಸಂರಕ್ಷಿಸಿಕೊಂಡಿರುತ್ತದೆ. ತಾಳ್ಮೆಯು ಆತ್ಮೀಕ ಫಲವಾಗಿದ್ದು, ಅದು ದೇವರನ್ನು ಮೆಚ್ಚಿಸುವಂತದ್ದೂ ಆಗಿದೆ ಮತ್ತು ಬೇರೆಯವರಿಗೆ ಆಶೀರ್ವಾದವನ್ನುಂಟು ಮಾಡುವದೂ ಆಗಿದೆ.[88] ಅಲ್ಲದೆ ಅದು ಪವಿತ್ರಾತ್ಮನ, ಸ್ವತಃ ದೇವರ, ಮತ್ತು ಆತನ ಮಗನಾದ ಯೇಸು ಕ್ರಿಸ್ತನ ಒಂದು ಗುಣಸ್ವಭಾವವೂ ಆಗಿರುತ್ತದೆ.[89]

ಅದಕ್ಕೆ ಸಂಬಂಧಿಸಿದ ಕ್ರಿಯಾಪದವಾದ μακροθυμέω (*makrothumeō*) ಎಂಬುದು "ದೀರ್ಘ-ಮನಸ್ಸುಳ್ಳವರಾಗಿ" ಅಥವಾ "ದೀರ್ಘ-ಸ್ವಭಾವದವನಾಗಿರು" ಎಂಬ ವಿಚಾರವನ್ನು ತಿಳಿಸುತ್ತದೆ. ಅದು ಪ್ರಶಾಂತತೆ ಮತ್ತು ಸ್ವ-ನಿಯಂತ್ರಣಗಳಿಂದ ಕೂಡಿದ, ಒತ್ತಡ ಅಥವಾ ಉದ್ವೇಗವನ್ನೊಳಗೊಂಡ ಸಂಗತಿಯೊಂದಕ್ಕಾಗಿ ಕಾಯುತ್ತಿರುವಾಗಲೂ ಅಂತಹ ಮನಃಸ್ಥಿತಿಯನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವನ್ನು ಸೂಚಿಸುತ್ತದೆ. ಉದ್ವೇಗವು - ಒಂದು ಬೆದರಿಕೆ, ಒಂದು ಅಪಾಯ, ಅಥವಾ ಒಂದು ಆಳವಾದ ಚಿಂತೆಯೇ ಆಗಿರಬಹುದು - ಆತನ ಸಾಮರ್ಥ್ಯವನ್ನು ಪರೀಕ್ಷೆಗೆ ಒಳಪಡಿಸುತ್ತದೆ. *Makrothumia* ಹೊಂದಿರುವ ವ್ಯಕ್ತಿಯು ಸಾಮಾನ್ಯಕ್ಕಿಂತಲೂ ಅಧಿಕ ಪ್ರಮಾಣದ್ದನ್ನು ಸಹಿಸಿಕೊಳ್ಳುವ ಭಾವನಾತ್ಮಕವಾದ ಬಲವನ್ನು ಮತ್ತು ಸ್ಥಿರತೆಯನ್ನು ಹೊಂದಿರುತ್ತಾನೆ (ನೋಡಿರಿ ಇಬ್ರಿಯ 6:13-15; ಯಾಕೋಬ 5:7, 8).

ಹೊಸ ಒಡಂಬಡಿಕೆಯೊಳಗೆ "ದೀರ್ಘಶಾಂತಿ" ಎಂಬುದಕ್ಕಾಗಿರುವ ಇನ್ನು ಎರಡು ಪದ ಗುಂಪುಗಳು ಸಿಕ್ಕುತ್ತವೆ. ಅದರೊಳಗೆ ಒಂದು ἀνοχή (*anochē*) ಎಂಬುದು, ಅದು "ಸಹನಶೀಲತೆ," "ಕ್ಷಮಾಶೀಲತೆ," ಅಥವಾ "ಸಹಿಷ್ಣುತೆ" ಎಂಬ ಭಾವನೆಯನ್ನು ಒಳಗೊಂಡಿರುತ್ತದೆ. ಅದು ಹೊಸ ಒಡಂಬಡಿಕೆಯೊಳಗೆ ಎರಡು ಸಾರಿ ಮಾತ್ರವೇ, ರೋಮಾ 2:4 ಮತ್ತು 3:25ಲ್ಲಿ ಕಾಣಿಸಿಕೊಳ್ಳುತ್ತದೆ. ಆ ಪದವು ಕಾಣಿಸಿಕೊಳ್ಳುವ ಎರಡೂ ಸಂದರ್ಭಗಳಲ್ಲಿ ದೇವರ ಸ್ವಭಾವವನ್ನು ಬಣ್ಣಿಸುತ್ತದೆ. ಹೇಗೂ, ಅದರ ಕ್ರಿಯಾಪದ ರೂಪವಾದ ἀνέχω (*anechō*) ಎಂಬುದು, ಇದು ಹೊಸ ಒಡಂಬಡಿಕೆಯಲ್ಲಿ ಹದಿನೈದು ಸಾರಿ ಕಾಣಿಸಿಕೊಳ್ಳುತ್ತದೆ,

ಅವುಗಳಲ್ಲಿ ಬಹಳಷ್ಟು ಕ್ರೈಸ್ತರಿಗೆ ಸಂಬಂಧಿಸಿರುತ್ತವೆ. ಅದರರ್ಥವು "ಅನುಭವಿಸು," "ತಾಳ್ಮೆಯಿಂದಿರು," "ತಾಳಿಕೋ," "ಸಹಿಸಿಕೋ," ಅಥವಾ "ತಾಳಿಕೊಳ್ಳು" ಎಂದಾಗಿರುತ್ತದೆ.[90]

ಇನ್ನೊಂದು ಪದ ಗುಂಪು ὑπομονή (*hupomonē*) ಎಂಬ ನಾಮಪದವನ್ನೊಳಗೊಂಡಿದೆ. ಅದು ಎರಡು ಗ್ರೀಕ್ ಪದಗಳಿಂದ ಕೂಡಿದೆ: ὑπό (*hupo*, "ಕೆಳಗೆ," "ಅಡಿ," ಅಥವಾ "ತಳದಲ್ಲಿ") ಎಂಬ ಉಪಸರ್ಗ ಮತ್ತು μένω (*menō*, "ನೆಲೆಗೊಳ್ಳು" ಅಥವಾ "ಉಳಿದುಕೋ") ಎಂಬ ಕ್ರಿಯಾಪದ. ಅದರ ಫಲಿತವಾದ ಆಲೋಚನೆಯು ಕಠಿಣ ಪರಿಸ್ಥಿತಿಗಳ "ಕೆಳಗೆ ಸ್ಥಿರವಾಗಿ ಉಳಿದುಕೊಳ್ಳುವದು" ಎಂಬುದೆ. ಈ ಪದವು ಒಂದು ಅತಿಯಾದ ಭಾರದ ಒತ್ತಡದಲ್ಲಿರುವ ವೇಳೆ ಪಟ್ಟು ಬಿಡದೆ, ನಿರಂತರವಾಗಿ ಹಿಡಿದುಕೊಂಡಿರುವ - ಉದಾಹರಣೆಗೆ ಲೋಕದ ಬೃಹತ್ ಭಾರವನ್ನು ತನ್ನ ಬಾಹುಗಳ ಮೇಲೆ ಹೊತ್ತುಕೊಂಡಿರುವ ಪ್ರಾಚೀನ ಪುರಾಣ ಕಥೆಗಳ ಅಟ್ಲಾಸ್ ಎಂಬವನಂತೆ - ಚಿತ್ರವನ್ನು ನೆನಪಿಗೆ ತರುತ್ತದೆ. ಅದಕ್ಕೆ ಸಂಬಂಧಪಟ್ಟ ಕ್ರಿಯಾಪದವಾದ ὑπομένω (*hupomenō*) ಎಂಬುದು "ಒಬ್ಬನು ಗಟ್ಟಿಯಾಗಿ ನಿಲ್ಲುವದು," "ಪಟ್ಟು ಬಿಡದಿರು," "ಸಹಿಸಿಕೊಂಡಿರು" ಎಂದರ್ಥವನ್ನು ಕೊಡುತ್ತದೆ.[91]

ಕ್ರೈಸ್ತೀಯ ತಾಳ್ಮೆಗೆ ಪ್ರೀತಿ (1 ಕೊರಿಂಥ 13:4) ಮತ್ತು ಕ್ರಿಸ್ತನ ಎರಡನೆಯ ಬರೋಣವು (1 ಥೆಸಲೋನಿಕ 1:2, 3) ಪ್ರೇರಣೆಯಾಗಿರುತ್ತದೆ. ಅದು ಯೇಸುವಿನ ಮಾದರಿ ಮೇಲೆ ಆಧಾರವಾಗಿರುತ್ತದೆ, ಆತನು ಉನ್ನತಕ್ಕೇರಿಸಲ್ಪಟ್ಟು "ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗುವದಕ್ಕೆ" ಮುನ್ನ ನಮಗೋಸ್ಕರವಾಗಿ "ಶಿಲುಬೆಯ ಮರಣವನ್ನು" ಮತ್ತು ಅದರ "ಅವಮಾನವನ್ನು" ಸಹಿಸಿಕೊಂಡನು (ಇಬ್ರಿಯ 12:2). ಇಬ್ರಿಯರಿಗೆ ಪತ್ರಿಕೆಯ ಲೇಖಕನು ತನ್ನ ವಾಚಕರಿಗೆ ಈ ವಿಧವಾಗಿ ಬುದ್ಧಿವಾದ ಹೇಳಿದನು, "ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು" (ಇಬ್ರಿಯ 12:3). ಪೌಲನು ಈ ಭರವಸವನ್ನು ನೀಡುತ್ತಾನೆ: "ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು" (2 ತಿಮೊಥೆ 2:12).

5. ಸದ್ಗುಣಗಳ ಪಟ್ಟಿಯಲ್ಲಿ ಮುಂದೆ ಇರುವಂತದ್ದು **ದಯೆ** (χρηστότης, *chrēstotēs*), ಅದನ್ನು "ಸತ್ಯವಂತಿಕೆ," "ಒಳ್ಳೇತನ," ಮತ್ತು "ಔದಾರ್ಯತೆ" ಎಂದು ಸಹ ಅರ್ಥನಿರೂಪಣೆ ಮಾಡಬಹುದಾಗಿದೆ.[92] ಈ ನಾಮಪದವು ಹೊಸ ಒಡಂಬಡಿಕೆಯಲ್ಲಿ ಕೇವಲ ಎಂಟು ಸಾರಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಮತ್ತು ಆ ಎಲ್ಲಾ ಕಾಣಿಸಿಕೊಳ್ಳುವಿಕೆಗಳು ಸಹ ಪೌಲನ ಪತ್ರಿಕೆಗಳಲ್ಲಿಯೇ ಇರುತ್ತವೆ. ಅವುಗಳಲ್ಲಿ ನಾಲ್ಕು ದೇವರ "ದಯೆ"ಗೆ ಸಂಬಂಧಿಸಿರುತ್ತವೆ, ಅದು ಮನುಷ್ಯರಿಗೋಸ್ಕರ ಪಶ್ಚಾತ್ತಾಪ ಮತ್ತು ರಕ್ಷಣೆಯ ಬಾಗಿಲನ್ನು ತೆರೆದಿರುತ್ತದೆ.[93] ಇನ್ನು ನಾಲ್ಕು ಸಂದರ್ಭಗಳು ಎಲ್ಲಾ ಕ್ರೈಸ್ತರು, ದೇವರನ್ನು ಅನುಸರಿಸುವವರಾಗಿ ಹೊಂದಿರತಕ್ಕ ಗುಣ ಸ್ವಭಾವವೊಂದನ್ನು ಹೆಸರಿಸುತ್ತವೆ.[94]

*Chrēstotēs* ಮತ್ತು ಅದರ ಸಜಾತೀಯ ಪದಗಳು ಬೇರೆಯವರ ಕಡೆಗೆ ಕರುಣೆಯುಳ್ಳಂಥ ಒಂದು ಮೃದು ಪ್ರವೃತ್ತಿಯನ್ನು ಸೂಚಿಸುತ್ತದೆ. ಒಳ್ಳೇ ಹೃದಯಗಳನ್ನು ಹೊಂದಿದವರಾಗಿ, ಕ್ರೈಸ್ತರು ಕಷ್ಟದಲ್ಲಿರುವವರ ಕಡೆಗೆ ಉದಾರಿಗಳಾಗಿದ್ದು ಸಹಾಯ ಮಾಡುವದಕ್ಕೆ ಬಯಸುತ್ತಾರೆ. Ceslas Spicqನು ಹೀಗೆ ಬರೆದನು, "ಕ್ರೈಸ್ತರನು ಸಹೋದರರ ಸಂಬಂಧಗಳಲ್ಲಿ ನಾಜೂಕು ಮತ್ತು ದಾರಾಳಿ ಎರಡೂ ಆಗಿದ್ದು, ಒಂದು ಮುಗುಳ್ನಗುವಿನೊಂದಿಗೆ ಸಹ ಯಾವಾಗಲೂ ಒಪ್ಪಿಗೆಯಾಗುವಂತಹ ವಿಧದಲ್ಲಿ ಪ್ರಯೋಜನಕರ, ಕಳಕಳಿ, ಸಹಾಯಕರ, ಉಪಯುಕ್ತನಾಗಿರುವದಕ್ಕೆ ಅಪೇಕ್ಷಿಸುತ್ತಾನೆ."[95]

ತಾಳ್ಮೆಯ ಜೊತೆಯಲ್ಲಿ, ದಯೆಯು 1 ಕೊರಿಂಥ 13:4ರಲ್ಲಿ ಪೌಲನು "ಪ್ರೀತಿ" ಕುರಿತು

ನೀಡುವ ಅರ್ಥನಿರೂಪಣೆಯಲ್ಲಿ ಸೇರಿರುತ್ತದೆ. ಬೇರೊಂದು ಕಡೆಯಲ್ಲಿ, ಆತನು ಹೀಗೆ ಬರೆಯುತ್ತಾನೆ, "ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವದರಿಂದ ಕನಿಕರ ದಯೆ ದೀನಭಾವ ಸಾತ್ವಿಕತ್ವ ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ" (ಕೊಲೊಸ್ಸೆ 3:12).

6. "ದಯೆ" *chrēstotēs* ಬಳಿಕ **ಉಪಕಾರ** (ἀγαθωσύνη, *agathōsunē*) ಇರುತ್ತದೆ. ಈ ಎರಡು ಪದಗಳ ನಡುವಿನ ವ್ಯತ್ಯಾಸವೇನು? ಈ ಪ್ರಶ್ನೆಗೆ ಉತ್ತರಿಸುವದು ಕಷ್ಟಕರವಾಗಿರುತ್ತದೆ ಯಾಕೆಂದರೆ *ಅಗಾಥೋಸುನೇ* ಗ್ರೀಸ್ ಶಾಸ್ತ್ರೀಯ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವದಿಲ್ಲ, ಪದಗಳ ಅರ್ಥವನ್ನು ಸಾಭಿತುಪಡಿಸುವದಕ್ಕೆ ಅನೇಕ ಸಾರಿ ಈ ಸಾಹಿತ್ಯವನ್ನು ಬಳಸಲಾಗುತ್ತದೆ.[96]

*Agathōsunē* ಹೊಸ ಒಡಂಬಡಿಕೆಯಲ್ಲಿ ನಾಲ್ಕು ಸಾರಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಮತ್ತು ಇವೆಲ್ಲವೂ ಪೌಲನ ಬರಹಗಳಲ್ಲಿ ಸಿಕ್ಕುತ್ತವೆ. ಮೊದಲನೆಯದಾಗಿ, ಇದು ಇಲ್ಲಿ ದೇವರಾತ್ಮನಿಂದ ಉಂಟಾಗುವ ಫಲದ ಭಾಗವಾಗಿ ಕಾಣಿಸಿಕೊಳ್ಳುತ್ತದೆ. ಅಪೊಸ್ತಲನು ಗಮನಿಸಿದ್ದೇನೆಂದರೆ ರೋಮಾಪುರದಲ್ಲಿರುವ ಸಹೋದರರು "ನೀವಂತೂ ಒಳ್ಳೇತನದಿಂದ ಭರಿತರಾಗಿಯೂ ಸಕಲ ಜ್ಞಾನದಿಂದ ತುಂಬಿದವರಾಗಿಯೂ ಒಬ್ಬರಿಗೊಬ್ಬರು ಬುದ್ಧಿ ಹೇಳುವದಕ್ಕೆ ಶಕ್ತರಾಗಿಯೂ ಇದ್ದೀರೆಂದು" ಬಲ್ಲೆನು ಎಂಬುದೆ (ರೋಮಾ 15:14). ಎಫೆಸ 5:9ರಲ್ಲಿ, "ಉಪಕಾರ"ವನ್ನು "ಬೆಳಕಿನ ಫಲ"ವೆಂದು ಪಟ್ಟಿ ಮಾಡಲಾಗಿದೆ. 2 ಥೆಸಲೋನಿಕ 1:11ರಲ್ಲಿ ಪೌಲನ ಪ್ರಾರ್ಥನೆಯು ದೇವರು ಸಹೋದರರನ್ನು ಅವರ ಕರೆಗೆ ಯೋಗ್ಯರನ್ನಾಗಿ ಮಾಡಬೇಕೆಂದು ಮತ್ತು "ಸತ್ಕ್ರಿಯೆಗಳಲ್ಲಿ ಸಂತೋಷಿಸುವ ನಿಮ್ಮ ಸಕಲ ಆಲೋಚನೆಯನ್ನೂ ನಂಬಿಕೆಯ ಫಲವಾದ ನಿಮ್ಮ ಕೆಲಸವನ್ನೂ ಶಕ್ತಿಪೂರ್ವಕವಾಗಿ ಸಿದ್ಧಿಗೆ ತರಬೇಕೆಂತಲೂ" ಆಗಿತ್ತು.

ಈ ಪದವು ಹೊಸ ಒಡಂಬಡಿಕೆಯಲ್ಲಿ ವಿರಳವಾಗಿದೆಯಾದರೂ, *agathōsunē* ಎಂಬುದು LXXನಲ್ಲಿ ಹಲವಾರು ಸಾರಿ ಬಳಸಲ್ಪಟ್ಟಿದೆ, ಅಲ್ಲಿ ಅದು ಇಬ್ರಿಯ ಭಾಷೆಯ טוֹב (*tob*) ಮತ್ತು ಅದರ ಸಜಾತೀಯ ಪದಗಳನ್ನು ಅನುವಾದಿಸುತ್ತದೆ. ಈ ಪದಗಳು ಯಾವದು "ಒಳ್ಳೇ," "ಮೆಚ್ಚಿಗೆಯಾದದ್ದು," ಅಥವಾ "ಇಷ್ಟವಾಗುವಂತದ್ದು" ಆಗಿದೆಯೋ ಅದನ್ನು ಸೂಚಿಸುತ್ತದೆ.[97] ಅದಕ್ಕೆ ಸಂಬಂಧಿತ ಗುಣವಾಚಕವಾದ ἀγαθός (*agathos,* "ಒಳ್ಳೆಯ") ಎಂಬುದು ಹೊಸ ಒಡಂಬಡಿಕೆ ಮತ್ತು LXX ಎರಡರಲ್ಲೂ ಪದೇ ಪದೇ ಕಾಣಿಸಿಕೊಳ್ಳುತ್ತದೆ.

ಉಪಕಾರದ ವಿಶಿಷ್ಟ ಗುಣವನ್ನು ವಿವರಿಸುವ ಪ್ರಯತ್ನದಲ್ಲಿ, Lightfootನು ಹೇಳಿದ್ದೇನೆಂದರೆ *chrēstotēs* "ಒಂದು ದಯೆಯುಳ್ಳ ಪ್ರವೃತ್ತಿ," ಆದರೆ *agathōsunē* ಎಂಬುದು "ಒಂದು ಶಕ್ತಿಯುತ ತತ್ವ" ಎಂದಾಗಿರುತ್ತದೆ.[98] ಸರಳವಾಗಿ ಹೇಳುವದಾದರೆ, "ದಯಾಪರತೆ"ಯು *ಆಂತರ್ಯದಲ್ಲಿರುವ ಉಪಕಾರದೃಷ್ಟಿಯುಳ್ಳ ಗುಣ* ಆಗಿದ್ದು ಅದು ಒಬ್ಬನ ನೆರೆಯವನಿಗೆ ಯಾವದು ಒಳ್ಳೇದೋ ಅದನ್ನು ಚಿತ್ತೈಸುವದಾಗಿದ್ದರೆ, "ಉಪಕಾರ"ವು ಒಬ್ಬನ ನೆರೆಯವನಿಗೆ ಅಂತಿಮವಾಗಿ ಯಾವದು ಅತ್ಯುತ್ತಮವೋ ಅದರ *ಬಾಹ್ಯ ವ್ಯಕ್ತಪಡಿಸುವಿಕೆ* ಆಗಿರುತ್ತದೆ (ಅದು ಉಪಕಾರದಂತೆ ಕಾಣಿಸಬಹುದು ಅಥವಾ ಕಾಣಿಸದೆಯೂ ಇರಬಹುದು). ಒಬ್ಬನು ಈ ವಿಧವಾದ ಭಿನ್ನತೆಯನ್ನು ಪ್ರಶ್ನಿಸಬಹುದಾದರೂ, Trenchನು ಅದನ್ನು ಚೆನ್ನಾಗಿ ದೃಷ್ಟಾಂತಗೊಳಿಸುತ್ತಾನೆ, ಆತನು ಹೀಗೆ ಬರೆದನು, "ಒಬ್ಬ ಮನುಷ್ಯನು ಒಳ್ಳೇತನ ಮತ್ತು ಸತ್ಯಕ್ಕಾಗಿರುವ ತನ್ನ [*agathōsunē*], ತನ್ನ ಆಸಕ್ತಿಯನ್ನು, ಗದರಿಸುವದರ, ತಿದ್ದುವದರ, ಮತ್ತು ಶಿಕ್ಷಿಸುವದರ ಮೂಲಕವಾಗಿ ತೋರ್ಪಡಿಸಬಹುದು." ಆತನು ದೇವಾಲಯದೊಳಗಿಂದ ವ್ಯಾಪಾರಿಗಳನ್ನು ಕ್ರಿಸ್ತನು ಹೊಡೆದು ಓಡಿಸುವದನ್ನು (ಮತ್ತಾಯ 21:12, 13) ಮತ್ತು ಶಾಸ್ತ್ರಿಗಳನ್ನು ಹಾಗೂ ಫರಿಸಾಯರನ್ನು ಬಹಿರಂಗವಾಗಿ ಖಂಡಿಸುವದನ್ನು ಉಲ್ಲೇಖಿಸುತ್ತಾನೆ (ಮತ್ತಾಯ 23). ಹೇಗೂ,

ನೀತಿಯುಳ್ಳ ಸಿಟ್ಟಿನ ಈ ಕೃತ್ಯಗಳನ್ನು *chrēstotēs* ಎಂಬುದಾಗಿ ಬಣ್ಣಿಸುವದಕ್ಕಾಗುವದಿಲ್ಲ. ಬದಲಾಗಿ, ಆ ಸದ್ಗುಣವು ಪಶ್ಚಾತ್ತಾಪ ಪಟ್ಟ ಸ್ತ್ರೀಯನ್ನು ಯೇಸುವು ದಯೆಯಿಂದ ಸ್ವೀಕರಿಸಿಕೊಳ್ಳುವದರಲ್ಲಿ ತೋರಿ ಬಂದಿತು (ಲೂಕ 7:37-50).[99] Trenchನು ಯಾವ ವಿಧದಲ್ಲಿಯೂ "ಮೊನಚಾದ, ಹರಿತವಿಲ್ಲದ, ಪಾಪದ ವಿರುದ್ಧವಾಗಿ ನೀತಿಯುಳ್ಳ ಸಿಟ್ಟನ್ನು ಹೊಂದಿರದ, ಅದನ್ನು ದಂಡಿಸುವದಕ್ಕೆ ಮನಸ್ಸನ್ನೂ ಹೊಂದಿರದಂಥ ಒಂದು ಉಪಕಾರ ಮನೋಭಾವವನ್ನು" ಅನುಮತಿಸಲಿಲ್ಲ.[100] ದೇವರು ಯಾವದನ್ನು ಒಳ್ಳೇದೆಂದು ಕಾಣುತ್ತಾನೆಂಬುದರ ಮೇಲೆಯೇ "ಉಪಕಾರ"ವು ಅಂತಿಮವಾಗಿ ಆಧಾರವಾಗಿರುತ್ತದೆ.

7. ದೇವರಾತ್ಮನಿಂದ ಉಂಟಾಗುವ ಫಲದಲ್ಲಿ ಮುಂದೆ ಇರುವದು **ನಂಬಿಗಸ್ತಿಕೆ** (πίστις, *pistis*). ಹೊಸ ಒಡಂಬಡಿಕೆಯಲ್ಲಿನ ಅದರ ಅತ್ಯಂಥ ಸರ್ವಸಾಧಾರಣ ಬಳಕೆಯಲ್ಲಿ, ಈ ಪದದ ಅರ್ಥವು ಕೇವಲ "ನಂಬಿಕೆ," "ವಿಶ್ವಾಸ" ಎಂದಾಗಿರುತ್ತದೆ. ಹೇಗೂ, ಅನೇಕ ಸಂದರ್ಭಗಳಲ್ಲಿ, ಅದು ವಿಶ್ವಾಸವನ್ನು ಪ್ರೇರಿಸುವ - ಅಂದರೆ, "ವಿಶ್ವಾಸರ್ಹತೆ" ಮತ್ತು "ಭರವಸಯೋಗ್ಯತೆ" - ಅರ್ಥದಲ್ಲಿ ಕಾಣಿಸಿಕೊಳ್ಳುತ್ತದೆ. LXXನ ಪ್ರಭಾವದಿಂದಾಗಿ ಈ ಅರ್ಥವು ಬಂದಿರುತ್ತದೆ, ಅದು ಇಬ್ರಿಯ ಭಾಷೆಯ אֱמוּנָה (*'emunah*) ಎಂಬುದನ್ನು ಅನುವಾದಿಸುವದಕ್ಕೆ *ಪಿಸ್ಟಿಸನ್ನು* ಬಳಸುತ್ತದೆ. ಕೀರ್ತನೆ 36:5ರಲ್ಲಿ ಹೀಗೆಯೇ ಇರುತ್ತದೆ, ಅದು ದೇವರ ವಿಷಯದಲ್ಲಿ ಹೀಗೆ ಹೇಳುತ್ತದೆ, "ನಿನ್ನ ನಂಬಿಗಸ್ತಿಕೆಯು ಮೇಘಮಾರ್ಗವನ್ನು ಮುಟ್ಟುತ್ತದೆ." ಅದೇ ರೀತಿಯಲ್ಲಿಯೇ, ಜ್ಞಾನೋಕ್ತಿ 12:22 ಹೀಗೆ ಹೇಳುತ್ತದೆ, "ಸುಳ್ಳಾಡುವ ತುಟಿಗಳು ಕರ್ತನಿಗೆ ಅಸಹ್ಯವಾಗಿವೆ. ಸತ್ಯದಿಂದ ನಡೆದುಕೊಳ್ಳುವವರು ಆತನ ಆನಂದವಾಗಿದ್ದಾರೆ" (NRSV).

ಕೀರ್ತನೆ 36:5, ಇನ್ನು ಅನೇಕ ವಾಕ್ಯಭಾಗಗಳ ಜೊತೆಯಲ್ಲಿ, ನಾವು ದೇವರ ಮೇಲೆ ಯಾವಾಗಲೂ ಭರವಸವನ್ನಿಡಬಹುದು ಎಂಬುದನ್ನು ಒತ್ತಿ ಹೇಳುತ್ತದೆ. ಆತನು "ಸುಳ್ಳಾಡದ"ವನು (ತೀತನಿಗೆ 1:2). ಆತನ ವಾಕ್ಯವು ಸಂಪೂರ್ಣ ವಿಶ್ವಾಸರ್ಹ; ಆತನು ಹೇಳಿರುವ ಯಾವದನ್ನೇ ಆಗಲಿ ವಿಶ್ವಾಸಿಸಬಹುದಾಗಿದೆ. ದೇವರು ಸುಳ್ಳುಗಳನ್ನಾಡುವದನ್ನು ಹೇಸುತ್ತಾನೆ, ಆದರೆ ಸತ್ಯಕ್ಕೆ ನಿಷ್ಠೆಯುಳ್ಳವರಲ್ಲಿ ಮತ್ತು ಯಾರ ಮಾತುಗಳು ವಿಶ್ವಾಸರ್ಹವೂ ಅವರಲ್ಲಿ ಆತನು ಸಂತೋಷಿಸುತ್ತಾನೆ. ಜ್ಞಾನೋಕ್ತಿ 12:22ರಲ್ಲಿ, ಎಲ್ಲಾ ಸುಳ್ಳುಗಾರರು ಪಶ್ಚಾತ್ತಾಪ ಪಡುವ ಹೊರತು ಅವರು ಖಂಡಿತವಾಗಿರುವ ಮತ್ತು ಸನ್ನಿಹಿತವಾಗಿರುವ ನ್ಯಾಯತೀರ್ಪಿನಡಿಯಲ್ಲಿ ಇರುತ್ತಾರೆಂದು ಎಚ್ಚರಿಸಲಾಗಿದೆ, ಪ್ರಾಮಾಣಿಕರು ಮತ್ತು ನಂಬಿಗಸ್ತರಾದರೋ ದೇವರು ಅವರನ್ನು ನೋಡಿ ಸಂತೋಷದಿಂದ ಮುಗುಳ್ನಗುತ್ತಾನೆಂಬುದರಲ್ಲಿ ಆದರಣೆಯನ್ನು ತಂದುಕೊಳ್ಳಬಹುದು.

*Pistis* ಎಂಬ ಪದಕ್ಕೆ ವಿವಿಧ ರೀತಿಯ ಅರ್ಥವಿರುತ್ತದೆ, ಗ್ರೀಕ್ ಶಬ್ದಕೋಶ ಮತ್ತು ಶಾಸ್ತ್ರಗಳ ಆಂಗ್ಲ ಆವೃತ್ತಿಗಳಲ್ಲಿ ಅದನ್ನು ಕಾಣಬಹುದಾಗಿದೆ. ಈ ಅರ್ಥನಿರೂಪಣೆಗಳೊಳಗೆ "ನಂಬಿಕೆ," "ಮನವರಿಕೆ," "ನಿಷ್ಠೆ," "ನಂಬಿಕೆ ಅಥವಾ ವಿಶ್ವಾಸದ ಒಂದು ಬೋಧನೆ (ಸುವಾರ್ತೆ)," "ಸಿದ್ಧಾಂತ," "ಭರವಸ," "ಪುರಾವೆ," "ನಿಶ್ಚಯತೆ," "ಶ್ರದ್ಧೆ," ಮತ್ತು "ನಿಷ್ಠೆಯಿಂದಿರುವದಕ್ಕೆ ಒಂದು ಪ್ರತಿಜ್ಞೆ" ಎಂಬವುಗಳು ಸೇರಿರುತ್ತವೆ. ಅನೇಕ ಸಂಭಾವ್ಯ ಅರ್ಥಗಳ ಹೊರತಾಗಿಯೂ, 5:22ರಲ್ಲಿ ಪೌಲನ ಸದ್ಗುಣಗಳ ಪಟ್ಟಿಯಲ್ಲಿ ಸರಿಯಾಗಿ ಹೊಂದಿಕೊಳ್ಳುವ ಏಕೈಕ ಅರ್ಥವು "ನಂಬಿಗಸ್ತಿಕೆ" ಎಂಬುದೇ.

*Pistis* ಎಂಬುದನ್ನು ಕ್ರೈಸ್ತನ ಗುಣನಡತೆಯ ಒಂದು ನೀತಿಶೀಲ ಅಥವಾ ನೈತಿಕ ಅಂಶವೆಂಬುದಾಗಿ ಅರ್ಥಮಾಡಿಕೊಳ್ಳತಕ್ಕದ್ದು. ಆತನು ತನ್ನನ್ನು ನಂಬಿಕೆ ಮತ್ತು ವಿಧೇಯತೆಯಲ್ಲಿ ದೇವರಿಗೆ ಒಪ್ಪಿಸಿಕೊಡುವವನು ಆಗಿರುವದರ ನಿಮಿತ್ತವಾಗಿ, ದೇವರು

ವಿಶ್ವಾಸಿಗೆ ವಾಗ್ದಾನ ಮಾಡಿರುವಂಥ ಪರಿಶುದ್ಧತೆಯ ಆತ್ಮನು ಆತನಲ್ಲಿ ನೆಲೆಗೊಂಡಿರುವ ಆಶೀರ್ವಾದವನ್ನು ಹೊಂದಿರುವದರ ನಿಮಿತ್ತವಾಗಿ ಅದು ಆತನ ಗುಣಸ್ವಭಾವದ ಭಾಗವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 2:38, 39; 5:30-32). ದೇವರಾತ್ಮನಿಂದ ಉಂಟಾಗುವ ಫಲದಲ್ಲಿ ಪಟ್ಟಿ ಮಾಡಲಾಗಿರುವ ಮಿಕ್ಕ ಎಲ್ಲಾ ಪದಗಳಂತೆಯೇ, "ನಂಬಿಗಸ್ತಿಕೆ" ಎಂಬುದು ದೇವರಿಂದ ಅನುಗ್ರಹಿಸಲ್ಪಟ್ಟಿರುವ ಸ್ವತಃ ಪವಿತ್ರಾತ್ಮನ ಗುಣವಾಗಿರುತ್ತದೆ. ಒಂದು ಸದ್ಗುಣವಾಗಿ, *ಪಿಸ್ತಿಸ* ಅನೇಕ ಸಾರಿ ಅದೇ ಸ್ವಭಾವದ ಬೇರೆ ಪದಗಳೊಂದಿಗೆ,[101] ವಿಶೇಷವಾಗಿ ಅಗಾಪೆ[102] ಪದದೊಂದಿಗೆ ಸಂಬಂಧವನ್ನು ಹೊಂದಿರುತ್ತದೆ.

8. "ನಂಬಿಗಸ್ತಿಕೆ" ನಂತರ, ಮುಂದಿನ ಸದ್ಗುಣವು **ಸಾಧುತ್ವ** (5:23; πραΰτης, *prautēs*). ಬಹುಪಾಲು ಆಂಗ್ಲ ಆವೃತ್ತಿಗಳಲ್ಲಿ "ಸಾಧುತ್ವ" ಎಂದಿರುತ್ತದಾದರೂ, ಇತರ ಸಂಭಾವ್ಯ ಅನುವಾದಗಳೊಳಗೆ "ದೀನತೆ" (GNT) ಮತ್ತು "ಸಾತ್ವಿಕತ್ವ" (KJV; ASV) ಸೇರಿರುತ್ತವೆ. ಈ ಪದಗಳು *prautēs* ಕೆಲವು ಅಂಶಗಳನ್ನು ಪ್ರತಿಫಲಿಸುತ್ತವಾದರೂ, ಹೆಚ್ಚು ಸೂಕ್ತವಾದದ್ದೆಂದರೆ "ಸಾತ್ವಿಕತ್ವ" ಎಂಬ ಪದವೇ - ಅದರ ಹಳೆಯದಾದ, ಹೆಚ್ಚು ಅನುಕೂಲವಾದ ಸೂಚ್ಯಾರ್ಥದೊಂದಿಗೆ.

ಭಾಷೆಗಳು ಕಾಲವು ಗತಿಸಿದಂತೆ ವಿಕಾಸಗೊಳ್ಳುತ್ತವೆ, ಮತ್ತು ವ್ಯಕ್ತಿಗತ ಪದಗಳು ಬದಲಾಗುತ್ತವೆ ಮತ್ತು ಅವುಗಳ ಹಿಂದಿನ ಅರ್ಥಗಳಲ್ಲಿ ಕೆಲವೊಂದು ಅಂಶಗಳನ್ನು ಕಳೆದುಕೊಳ್ಳುತ್ತವೆ. ವಿಷಾದಕರವಾಗಿ, "ಸಾತ್ವಿಕತ್ವ" ಎಂಬುದು ಕ್ರಮೇಣದಲ್ಲಿ "ಸತ್ವಸೂನ್ಯತೆ" ಎಂಬ ಭಾವನೆಯೊಂದಿಗೆ ಸಂಬಂಧಗೊಳಿಸಲ್ಪಟ್ಟಿತು. ಇದು *prautēs* ಎಂಬುದರ ಅರ್ಥಕ್ಕೆ ಸಂಪೂರ್ಣ ಅಪರಿಚಿತವಾದ ವಿಚಾರವಾಗಿರುತ್ತದೆ. ಇಂದು, ಲೋಕದ ಜನರು ಒಬ್ಬರನ್ನು "ಸಾತ್ವಿಕ" ಎಂಬುದಾಗಿ ಬಣ್ಣಿಸುವದನ್ನು ಕೇಳಿಸಿಕೊಳ್ಳುವಾಗ, ಅವರು ಒಬ್ಬ ಅಂಜುಬುರುಕ, ಸಂಕೋಚ ಸ್ವಭಾವದ, ಹೇಡಿತನದ ವ್ಯಕ್ತಿಯನ್ನು ಕುರಿತು ಯೋಚಿಸುತ್ತಾರೆ. ಆದದರಿಂದ, ಆಧುನಿಕ ಬೈಬಲ್ ಅನುವಾದಕರು ಏಕೆ ಆ ಪದವನ್ನು ಬಳಸದಿರುವದಕ್ಕೆ ನಿರ್ಧಿಸಿದರೆಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. KJVಯನ್ನು ಓದುತ್ತಾ ಬೆಳೆದವರಿಗೆ "ಸಾತ್ವಿಕತ್ವ" ಎಂಬ ಪದದ ಪರಿಚಯವಿರುತ್ತದೆ, ಅದು ಮೂಲ ಗ್ರೀಕ್ ಭಾಷೆಯ *prautēs* ಎಂಬ ಪದದಲ್ಲಿರುವ ಕೇಂದ್ರ ವಿಚಾರವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವದಾಗಿದೆ. ಪದದ ಭಿನ್ನವಾದ ಮಹತ್ವವು ಕೇವಲ ದೀನತೆ ಎಂಬುದಲ್ಲ, ಆದರೆ ವಿರೋಧ ಅಥವಾ ಒತ್ತಡದ ನಡುವೆಯೂ ದೀನತೆಯಿಂದಿರುವದು ಎಂದಾಗಿದೆ.

ಈ ಸದ್ಗುಣಕ್ಕೆ ಮೋಶೆಯು ಒಂದು ಅತ್ಯುತ್ತಮ ದೃಷ್ಟಾಂತವಾಗುತ್ತಾನೆ, ಯಾಕೆಂದರೆ ಆತನು "ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ ಬಹುಸಾತ್ವಿಕನು ['ಶಾಂತನು'; KJV; ASV]" ಎಂದು ಬಣ್ಣಿಸಲ್ಪಟ್ಟಿದ್ದಾನೆ (ಅರಣ್ಯಕಾಂಡ 12:3). ಈ ಬಣ್ಣನೆಯ ಪೂರ್ಣವಾದ ಅರ್ಥವನ್ನು ಗ್ರಹಿಸಿಕೊಳ್ಳಬೇಕಾದರೆ, ನಾವು ಸನ್ನಿವೇಶವನ್ನು ಕುರಿತು ಆಲೋಚಿಸುವ ಅಗತ್ಯವಿದೆ. ಮೋಶೆಯ ಅಕ್ಕಳಾದ ಮಿರ್ಯಾಮಳು, ಮತ್ತು ಆತನ ಅಣ್ಣನಾದ ಆರೋನನು ಆತನಿಗೆ ವಿರುದ್ಧವಾಗಿ ಎದ್ದರು ಮತ್ತು ಆತನು ಅನೇಕ ವರ್ಷಗಳ ಹಿಂದೆ ಮದುವೆ ಮಾಡಿಕೊಂಡಿದ್ದ "ಕೂಷ್ ದೇಶದ ಸ್ತ್ರೀಯ" ವಿಷಯದಲ್ಲಿ ಆತನನ್ನು ಟೀಕಿಸಿದರು. ಅದರ ಜೊತೆಗೆ, ದೇವರು ಅವರ ಮೂಲಕವೂ ಮಾತಾಡಿದ್ದನಾದ್ದರಿಂದ, ತಾವು ಆತನಿಗೆ ಸಮಾನರಾಗಿದ್ದರೆಂದು ಮತ್ತು ಆತನು ತನ್ನನ್ನು ಅವರಿಗಿಂತ ಹೆಚ್ಚಾಗಿ ಭಾವಿಸಿಕೊಂಡು ತಪ್ಪು ಮಾಡಿರುವನೆಂದು ಮಿರ್ಯಾಮ ಹಾಗೂ ಆರೋನನು ಹೇಳುತ್ತಿದ್ದರು (ನೋಡಿರಿ ಅರಣ್ಯಕಾಂಡ 12:1, 2). ಮೋಶೆಯು ತನ್ನನ್ನು ಸಮರ್ಥಿಸಿಕೊಳ್ಳುವದಕ್ಕಾಗಿ ಪ್ರತ್ಯುತ್ತರ ನೀಡಿದ್ದರ ಕುರಿತು

ಶಾಸ್ತ್ರಗಳಲ್ಲಿ ಏನನ್ನೂ ಹೇಳಲಾಗಿಲ್ಲ, ಆದರೆ ದೇವರು ಸ್ವತಃ ಆ ಘನಗಂಭೀರವಾದ ಮೇಘಸ್ತಂಭದಲ್ಲಿ (ಆತನ ಪ್ರಸನ್ನತೆಯ “ಶೆಕಿನಾ ಮಹಿಮೆ”) ಇಳಿದು ಬಂದನು ಮತ್ತು ವೈಯಕ್ತಿಕವಾಗಿಯೇ ಮೋಶೆಯ ಪರವಾಗಿ ವಾದಿಸುವವನಾಗಿ ಮಿರ್ಯಾಮಳಿಗೆ ಕುಷ್ಠರೋಗವು ಬರುವಂತೆ ಮಾಡಿದನು (ಅರಣ್ಯಕಾಂಡ 12:4-10). ಇದಾದ ಬಳಿಕ, ಆತನ ಸಾತ್ವಿಕತೆಗೆ ಇನ್ನುಷ್ಟಯ ಪುರಾವೆಯ ರೂಪದಲ್ಲಿ, ತಮ್ಮ ಸಹೋದರಿಯ ವಿಷಯದಲ್ಲಿ ಆರೋನನು ಮಾಡಿದ ಮನವಿಗಳನ್ನು ಆಲಿಸಿದನು ಮತ್ತು ಆಕೆಯನ್ನು ಕ್ಷಮಿಸಿ ಗುಣಪಡಿಸುವಂತೆ ದೇವರ ಮುಂದೆ ಮೊರೆಯಿಟ್ಟನು. ಆಕೆಗೆ ಎಲ್ಲರ ಮುಂದೆ ಅವಮಾನ ಪಡಿಸಿದ ಬಳಿಕ, ದೇವರು ಮೋಶೆಯ ವಿನಂತಿಗಳಿಗೆ ಕೃಪೆಯಿಂದ ಪ್ರತಿಕ್ರಿಯಿಸಿದನು (ಅರಣ್ಯಕಾಂಡ 12:11-15).

ಬೇರೆ ಸಂದರ್ಭಗಳಲ್ಲಿ ಸಾತ್ವಿಕತೆಯ ಸದ್ಗುಣವನ್ನು ಮೋಶೆಯು ತೋರ್ಪಡಿಸಿದ್ದನು. ಉದಾಹರಣೆಗೆ, ಇಸ್ರಾಯೇಲ್ಯರ ಅವಿಧೇಯತೆ ಹಾಗೂ ಅಪನಂಬಿಗಸ್ತಿಕೆಯ ನಿಮಿತ್ತವಾಗಿ ದೇವರು ಕೋಪಗೊಂಡ ವೇಳೆಯಲ್ಲಿ, ಆತನು ಅವರನ್ನೆಲ್ಲಾ ನಾಶಗೊಳಿಸಿ ಮೋಶೆಯ ಮೂಲಕವಾಗಿ ಒಂದು ದೊಡ್ಡ ಜನಾಂಗವನ್ನು ಉಂಟು ಮಾಡುವೆನೆಂದು ಪ್ರಸ್ತಾಪವನ್ನಿಟ್ಟನು. ಮೋಶೆಯು ಸ್ವತಃ ಮತ್ತೊಂದಾವರ್ತಿ ಆಕ್ರಮಣಕ್ಕೊಳಗಾಗಿದ್ದಾಗ್ಯೂ, ಕರುಣೆಯನ್ನು ತೋರಿಸಬೇಕೆಂದು ದೇವರಿಗೆ ಮೊರೆಯಿಟ್ಟನು. ಅಲ್ಲದೆ ದಾರಿ ತಪ್ಪಿದ ಜನರಿಗೋಸ್ಕರ ಸ್ವತಃ ತನ್ನ ಜೀವವನ್ನೇ ಕೊಡುವದಕ್ಕೆ ಸಿದ್ಧನಾಗಿದ್ದನು. ಬಹುಶಃ ಇಲ್ಲಿಯೇ ಮೋಶೆಯು ತನ್ನ ಸಹೋದರರಿಗೋಸ್ಕರ ಸ್ವಪ್ರಾಣವನ್ನು ಅರ್ಪಿಸಿಕೊಳ್ಳುವದಕ್ಕೆ ಸಿದ್ಧನಾಗಿದ್ದರಲ್ಲಿ ಯೇಸುವಿಗೆ ಅತ್ಯಂಥ ವಿಶಿಷ್ಟ ಪೂರ್ವಛಾಯೆಯಾಗಿ ಕಂಡು ಬರುತ್ತಾನೆ (ವಿಮೋಚನಕಾಂಡ 32:6-14, 31, 32; ನೋಡಿರಿ ಧರ್ಮೋಪದೇಶಕಾಂಡ 18:15-19).

ಅದಕ್ಕೆ ಸಂಬಂಧಿಸಿದ ಪದ “ಶಾಂತ” (πραΰς, *praus*) ಎಂಬುದು ಹೊಸ ಒಡಂಬಡಿಕೆಯೊಳಗೆ ಯೇಸುವಿನ ವಿಷಯದಲ್ಲಿ ಬಳಸಲ್ಪಟ್ಟಿದೆ. ಆತನು ಪರ್ವತದ ಮೇಲಿನ ಪ್ರಸಂಗವನ್ನು ಮಾಡುತ್ತಿರುವ ವೇಳೆ, ಆತನು ಹೀಗೆ ನುಡಿದನು, “ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು” (ಮತ್ತಾಯ 5:5; KJV; NKJV; ASV). ಆತನು ನೀಡಿದ ಶ್ರೇಷ್ಠ ಆಮಂತ್ರಣದಲ್ಲಿ, ಯೇಸುವು ತನ್ನನ್ನು “ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ” ಎಂದು ಬಣ್ಣಿಸಿಕೊಂಡನು (ಮತ್ತಾಯ 11:29; KJV; ASV). ಶಾಂತಸ್ವಭಾವದ ಜೊತೆಯಲ್ಲಿ, ಈ ಪದವು ನಿಯಂತ್ರಣದಲ್ಲಿಟ್ಟುಕೊಂಡಿರುವ ಶಕ್ತಿ ಎಂಬ ವಿಚಾರವನ್ನು ಸಹ ವ್ಯಕ್ತಪಡಿಸುತ್ತದೆ. ಮುಖ್ಯವಾಗಿ ಜೆಕರ್ಯ 9:9ರಿಂದ ಉಲ್ಲೇಖಿಸುತ್ತಾ, ಮತ್ತಾಯನು ಜಯೋತ್ಸಾಹದ ಪ್ರವೇಶದ ಕುರಿತಾಗಿ ಈ ಪದಗಳಲ್ಲಿ ಬಣ್ಣಿಸುತ್ತಾನೆ:

> ಚೀಯೋನ್ ನಗರಿಗೆ -
> ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ;
> ಆತನು ಶಾಂತಗುಣವುಳ್ಳವನಾಗಿಯೂ [“ಸೌಮ್ಯ”; KJV; ASV]
> ಕತ್ತೆಯನ್ನು, ಹೌದು ಪ್ರಾಯದ ಕತ್ತೆಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆಂದು ಹೇಳಿರಿ ಎಂಬದು (ಮತ್ತಾಯ 21:5).

ಶಕ್ತಿಶಾಲಿ ಮೆಸ್ಸೀಯನಾದ ಯೇಸುವು, ಶ್ರಮೆಯನ್ನನುಭವಿಸುವ ದಾಸನಾಗಿ ಶಿಲುಬೆಯ ಮೇಲೆ ಮರಣಿಸುವದಕ್ಕೆ ಸಿದ್ಧಗೊಂಡವನಾಗಿ ಯೆರೂಸಲೇಮಿನೊಳಗೆ ಸಾಗಿದನು.

“ಸಾತ್ವಿಕತೆ” ಯು (*prautēs*) ಎದುರಿಸುವ ವಿರೋಧ ಅಥವಾ ಹಗೆತನದಲ್ಲಿನ ಉದ್ವೇಗ ಅಥವಾ ಒತ್ತಡವು ಯಾವಾಗಲೂ ಕಂಡು ಬರುವದಿಲ್ಲ, ಆದರೆ ಕೆಲವು ಸಾರಿ ಅದು

ಉಪಸ್ಥಿತವಿರುತ್ತದೆ. ಪೇತ್ರನು ತಮ್ಮ ಗಂಡಂದಿರು "ವಾಕ್ಯಕ್ಕೆ ಅವಿಧೇಯರಾಗಿದ್ದರೂ" ಅವರ ಕಡೆಗೆ "ಸಾತ್ವಿಕವಾದ ಶಾಂತ ಮನಸ್ಸಿನಿಂದ" ನಡೆದುಕೊಳ್ಳಬೇಕೆಂದು ಕ್ರೈಸ್ತ ಹೆಂಡತಿಯರಿಗೆ ಬೇಡಿಕೊಳ್ಳುತ್ತಾನೆ (1 ಪೇತ್ರ 3:1, 4; KJV; ASV). ಅಷ್ಟುಮಾತ್ರವಲ್ಲದೆ, ಕೊರಿಂಥದ ಸಭೆಯಲ್ಲಿ ಅಹಂಕಾರದಿಂದ ವರ್ತಿಸುತ್ತಿದ್ದ ಕೆಲವರನ್ನು ಗದರಿಸುತ್ತಾನೆ, ತಾನು ಅವರ ಬಳಿಗೆ "ಬೆತ್ತತೆಗೆದುಕೊಂಡು ನಿಮ್ಮ ಬಳಿಗೆ ಬರಲೋ? ಪ್ರೀತಿಯಿಂದಲೂ ಸೌಮ್ಯ ಭಾವದಿಂದಲೂ ಕೂಡಿದವನಾಗಿ ಬರಲೋ?" ಎಂದು ಆವರನ್ನು ಕೇಳುತ್ತಾನೆ (1 ಕೊರಿಂಥ 4:21; KJV). ವಿರೋಧಿಸುವವರನ್ನು ಮನಸ್ಸಿನಲ್ಲಿಟ್ಟುಕೊಂಡು, ಅಪೊಸ್ತಲನು ತಿಮೊಥೆಯನಿಗೆ "ಕರ್ತನ ದಾಸನು ಜಗಳವಾಡದೆ ಎಲ್ಲರ ವಿಷಯದಲ್ಲಿ ಸಾಧುವೂ ಬೋಧಿಸುವದರಲ್ಲಿ ಪ್ರವೀಣನೂ ಕೇಡನ್ನು ಸಹಿಸಿಕೊಳ್ಳುವವನೂ ಎದುರಿಸುವವರನ್ನು ನಿಧಾನದಿಂದ ತಿದ್ದುವವನೂ ಆಗಿರಬೇಕು" ಎಂದು ಬೇಡಿಕೊಳ್ಳುತ್ತಾನೆ (2 ತಿಮೊಥೆ 2:24, 25; ASV).

9. ದೇವರಾತ್ಮನಿಂದ ಉಂಟಾಗುವ ಫಲದಲ್ಲಿ ಕೊನೆಯದಾಗಿ ಇರುವದು **ಶಮೆದಮೆ** (ἐγκράτεια, *enkrateia*). ಈ ಪದವು κράτος (*kratos*) ಎಂಬ ಗ್ರೀಕ್ ಧಾತುವಿನಿಂದ ರೂಪಿತಗೊಂಡಿರುತ್ತದೆ, ಅದರರ್ಥವು "ಶಕ್ತಿ," "ಬಲ," ಅಥವಾ "ಪ್ರಭುತ್ವ" ಎಂದಾಗಿದೆ. ಅದು ಆಂಗ್ಲದ "ಡೆಮೋಕ್ರಸಿ," "ಆವುಟೊಕ್ರಸಿ," ಮತ್ತು "ಥಿಯೋಕ್ರಸಿ" ಎಂಬ ಪದಗಳಲ್ಲಿ ಪ್ರತಿನಿಧಿಸಲ್ಪಡುತ್ತದೆ. ಒಂದು ಉಪಸರ್ಗವು ಜೋಡಿಸಲ್ಪಟ್ಟದ್ದಾಗಿ, *enkrateia* "ಸ್ವ-ನಿಯಂತ್ರಣ"ವನ್ನು ಸೂಚಿಸುತ್ತದೆ. ದಮೆಯು ನಿಜಕ್ಕೂ, ನಮ್ಮೊಳಗಿನ (ἐν, *en*) ಒಂದು ಶಕ್ತಿ (*kratos*) ಆಗಿದೆ.

*Enkrateia* ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ವಿರಳವಾಗಿ ಬಳಸಲ್ಪಟ್ಟಿರುತ್ತದೆ. 5:23ರಲ್ಲಿ ಕಾಣಿಸಿಕೊಂಡಿದ್ದನ್ನು ಹೊರತು ಪಡಿಸಿದರೆ, ನಾಮಪದ ರೂಪವು ಇನ್ನು ಎರಡು ವಾಕ್ಯಭಾಗಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಪೊಸ್ತಲರ ಕೃತ್ಯಗಳು 24:25ರಲ್ಲಿ, ಪೌಲನು ಫೇಲಿಕ್ಸನೊಂದಿಗೆ "ಸುನೀತಿ ದಯೆ ಮುಂದಣ ನ್ಯಾಯವಿಚಾರಣೆ ಇವುಗಳ ವಿಷಯವಾಗಿ" ಮಾತಾಡಿದನು, ಅದು ದೇಶಾಧಿಪತಿಯನ್ನು "ಭಯಗ್ರಸ್ತ"ನಾಗುವಂತೆ ಮಾಡಿತ್ತು. ಪೌಲನು ಈ ಸಂಗತಿಗಳನ್ನು ಕೇವಲ ಪ್ರಸ್ತಾಪ ಮಾತ್ರವೇ ಮಾಡಲಿಲ್ಲ; ಆತನು ಅವುಗಳ ಕುರಿತು ಚರ್ಚಿಸಿದನು. ಸ್ವತಃ ಕೈಸರನ - ಈ ಪ್ರಕರಣದಲ್ಲಿ scandalous Neroನು ಕೈಸರನಾಗಿದ್ದನು - ಅಂತಹ ಶಕ್ತಿಶಾಲಿ ಪ್ರತಿನಿಧಿಗಳ ಜೀವನ ಶೈಲಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವಾಗ, ಈ ವಿಷಯಗಳ ಬಗ್ಗೆ ಮಾತಾಡುವದಕ್ಕೆ ಪೌಲನ ಬಳಿಯಲ್ಲಿ ಸಾಕಷ್ಟು ಮಾತುಗಳಿದ್ದವೆಂಬುದರಲ್ಲಿ ಸಂಶಯವೇ ಇರುವದಿಲ್ಲ. ಆತನು ಈ ಸ್ವೇಚ್ಛಾವೃತ್ತಿಯ ಅನ್ಯಧರ್ಮಿಯ ಮನಸಾಕ್ಷಿಯನ್ನು ಘಾಸಿಕೊಳಿಸದೆ ಬಿಟ್ಟಿರಲಿಲ್ಲ ಎಂದು ತೋರುತ್ತದೆ. ರೋಮನ್ ಸರ್ಕಾರದ ಅತ್ಯುನ್ನತ ಅಧಿಕಾರಿಗಳಲ್ಲಿ ಇರುತ್ತಿದ್ದ ಪ್ರಧಾನ ಸದ್ಗುಣಗಳೊಳಗೆ ಸಾಮಾನ್ಯವಾಗಿ ದಮೆಯು ಸೇರಿರುತ್ತಿರಲಿಲ್ಲ. "ಫೇಲಿಕ್ಸ" ಎಂಬ ಹೆಸರಿನ ಅರ್ಥವು "ಸಂತೋಷ" ಎಂದಾಗಿದೆಯಾದರೂ, ಇದು ದೇಶಾಧಿಪತಿಯ ಜೀವನದಲ್ಲಿ ಅತ್ಯಂಥ ಅಸಂತೋಷದ ದಿನಗಳಲ್ಲಿ ಒಂದಾಗಿದ್ದ ಸಾಧ್ಯತೆಯಿದೆ.

ಅಲ್ಲದೆ, 2 ಪೇತ್ರ 1:5-7ರಲ್ಲಿ, ಪೇತ್ರನು ಆತ್ಮೀಕ ಬೆಳವಣಿಗೆಯ ಕಡೆಗೆ ಸಾಗುತ್ತಾ, "ನಂಬಿಕೆ" ಎಂಬ ಅಸ್ತಿವಾರಕ್ಕೆ ಸದ್ಗುಣಗಳನ್ನು ಕೂಡಿಸಿಕೊಳ್ಳುತ್ತಾ ಹೋಗಬೇಕೆಂದು ಕ್ರೈಸ್ತರನ್ನು ಬೇಡಿಕೊಳ್ಳುತ್ತಾನೆ. ಇವುಗಳೊಳಗೆ "ಸದ್ಗುಣ," "ಜ್ಞಾನ," "ದಮೆ," "ತಾಳ್ಮೆ," "ಭಕ್ತಿ," "ಸಹೋದರಸ್ನೇಹ," "ಪ್ರೀತಿ" ಸೇರಿರುತ್ತವೆ. ಪೇತ್ರನು ದುರ್ಗುಣಗಳ ಒಂದು ವಿವರವಾದ ಪಟ್ಟಿಯನ್ನು ನೀಡಲಿಲ್ಲವಾದರೂ, ಆತನು ಈ ಪಟ್ಟಿಯನ್ನು ನೀಡುವ ಮುಂಚೆ ಮಾನವ

ಜನಾಂಗಕ್ಕೆ ಇದುವರೆಗೂ ಕೊಡಲ್ಪಟ್ಟಿರುವ ಅತ್ಯಂಥ ಅದ್ಭುತವಾದ ರೂಪಾಂತರದ ಕುರಿತು ಸೂಚ್ಯಾರ್ಥವಾಗಿ ತಿಳಿಸಿದನು. "ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು" ದೇವರು ದಯಪಾಲಿಸಿದ್ದಾನೆ (2 ಪೇತ್ರ 1:4). ಈ ತಪ್ಪಿಸಿಕೊಳ್ಳುವಿಕೆಯು ಕೇವಲ ಎರಡು ಶಿಲುಬೆಗಳ ಮೂಲಕ ಮಾತ್ರವೇ ಸಾಧ್ಯವಿರುತ್ತದೆ: (1) ಯೇಸುವಿನ ಶಿಲುಬೆ, ಆತನು ಮನುಷ್ಯನನ್ನು ವಿಮೋಚಿಸುತ್ತಾನೆ ಮತ್ತು ಆತನ ಚಿತ್ತವನ್ನು ಬದಲಾಯಿಸುತ್ತಾನೆ, ಹೀಗೆ ಆತನು ಅದಕ್ಕೆ ಪ್ರತಿಕ್ರಿಯಿಸುವವನಾಗಿ (2) ತನ್ನ ಸ್ವಂತ ಶಿಲುಬೆಯನ್ನು ಹೊತ್ತುಕೊಳ್ಳುವನು, ತಾನು ಯೇಸು ಕ್ರಿಸ್ತನನ್ನು ಅರಿತುಕೊಳ್ಳುವದಕ್ಕೆ ಮುನ್ನ ಜೀವಿಸಿದ್ದ "ಶರೀರಭಾವದ ಕರ್ಮಗಳ" ಪಾಲಿಗೆ ಸಾಯುತ್ತಾನೆ.[103]

*Enkrateia* ಎಂಬ ಪದವು ಲೈಂಗಿಕತೆಯ ಮಂಡಲದಲ್ಲಿನ ದಮೆಗೆ ಸಂಬಂಧಿಸುವ ಒಲವು ಹೊಂದಿರುತ್ತದೆ. ನಾವು ಈ ನಾಮಪದವು ಹೊಸ ಒಡಂಬಡಿಕೆಯಲ್ಲಿ ಕಾಣಿಸಿಕೊಂಡ ಸಂದರ್ಭಗಳನ್ನೆಲ್ಲಾ ಚರ್ಚಿಸಿ ಮುಗಿಸಿದ್ದೇವಾದರೂ, ಪೌಲನು ಇದಕ್ಕೆ ಸಂಬಂಧಿಸಿದ ಕ್ರಿಯಾಪದ ಹಾಗೂ ಗುಣವಾಚಕಗಳನ್ನು ಸಹ ಬಳಸುತ್ತಾನೆ. ಕ್ರಿಯಾಪದ ἐγκρατεύομαι (*enkrateuomai,* "ದಮೆಯನ್ನು ಅಭ್ಯಾಸಿಸು") ಎಂಬುದು ಎರಡು ಸಾರಿ ಕಾಣಿಸಿಕೊಳ್ಳುತ್ತದೆ. 1 ಕೊರಿಂಥ 7:8, 9ರಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಪೌಲನು ವಿವಾಹ ಮತ್ತು ವಿಚ್ಛೇದನ ಕುರಿತು ಚರ್ಚಿಸುತ್ತಾನೆ, ಆತನು ಹೀಗೆ ಬರೆದನು, "ಮದುವೆಯಿಲ್ಲದವರನ್ನೂ ವಿಧವೆಯರನ್ನೂ ಕುರಿತು ನಾನು ಹೇಳುವದೇನಂದರೆ - ನಾನಿರುವಂತೆಯೇ ಇರುವದು ಅವರಿಗೆ ಒಳ್ಳೇದು; ಅವರು ದಮೆಯಿಲ್ಲದವರಾದರೆ [*enkrateuomai*] ಮದುವೆಮಾಡಿಕೊಳ್ಳಲಿ; ಕಾಮತಾಪ ಪಡುವದಕ್ಕಿಂತ ಮದುವೆಮಾಡಿಕೊಳ್ಳುವದು ಉತ್ತಮವಷ್ಟೆ."[104] ಇಲ್ಲಿ ಪೌಲನು ಕಾಮತಾಪಕ್ಕೆ ಸಂಬಂಧಿಸಿದಂತೆ "ದಮೆ"ಯನ್ನು ಬಳಸುತ್ತಿದ್ದಾನೆ.

ಈ ಕ್ರಿಯಾಪದವು ಕಾಣಿಸಿಕೊಳ್ಳುವ ಇನ್ನೊಂದು ಸ್ಥಳವೆಂದರೆ 1 ಕೊರಿಂಥ 9:25, ಇಲ್ಲಿ ಪೌಲನು ಕ್ರೀಡಾ ಸ್ಪರ್ಧೆಗಾಗಿ ತರಬೇತಿಗೊಳಿಸಿಕೊಳ್ಳುವದರಲ್ಲಿನ ದಮೆಯ ಕುರಿತು ಸೂಚಿಸುತ್ತಾನೆ. ಆತನು ಹೀಗೆ ಬರೆದನು, "ಅದರಲ್ಲಿ ಹೋರಾಡುವವರೆಲ್ಲರು ಎಲ್ಲಾ ವಿಷಯಗಳಲ್ಲಿ ಮಿತವಾಗಿರುತ್ತಾರೆ [*enkrateuomai*]. ಅವರು ಬಾಡಿಹೋಗುವ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆಮಾಡುತ್ತಾರೆ; ನಾವಾದರೋ ಬಾಡಿಹೋಗದ ಜಯಮಾಲಿಕೆಯನ್ನು ಹೊಂದುವದಕ್ಕೆ ಸಾಧನೆ ಮಾಡುವವರಾಗಿದ್ದೇವೆ." ಕೊರಿಂಥ ಪಟ್ಟಣವು ಇಸ್ಥಮಿಯದ ಕ್ರೀಡೆಗಳನ್ನು ನಡಿಸಿ ಕೊಡುವಂಥ ಮತ್ತು ಖರ್ಚುಗಳನ್ನು ಭರಿಸುತ್ತಿದ್ದ ಪಟ್ಟಣವಾಗಿತ್ತೆಂಬುದನ್ನು ನಾವು ಗ್ರಹಿಸಿಕೊಳ್ಳುವಾಗ, ಈ ದೃಷ್ಟಾಂತವು ಇನ್ನಷ್ಟು ವಿಶೇಷವಾದ ಮಹತ್ವವನ್ನು ಪಡೆದುಕೊಳ್ಳುತ್ತದೆ. ಇದು ಅಖಿಲ ಗ್ರೀಕ್ ಸ್ಪರ್ಧೆಗಳನ್ನು ನಡಿಸಿ ಕೊಡುತ್ತಿದ್ದ ಓಲಂಪಿಯಾ, ಡೆಲ್ಫಿ, ಮತ್ತು ನೆಮೆಯಗಳಂತಹ ಮಹಾನ್ ಕೇಂದ್ರಗಳಲ್ಲೊಂದಾಗಿತ್ತು, ಈ ಸ್ಥಳಗಳಿಗೆ ಈ ದಿನವೂ ಭೇಟಿ ಕೊಡಬಹುದಾಗಿದೆ. ಪೌಲನು ಇಲ್ಲಿ ಸ್ವತಃ ಸ್ಪರ್ಧೆಯ ಬಗ್ಗೆಯೇ ಮಾತಾಡುತ್ತಿಲ್ಲ. ಹೆಚ್ಚು ನಿರ್ದಿಷ್ಟವಾಗಿ, ತಮ್ಮ ಕಾರ್ಯಕ್ರಮಗಳಿಗಾಗಿ ಸಿದ್ಧಪಡಿಸಿಕೊಳ್ಳುವದರಲ್ಲಿ ಕ್ರೀಡಾಪಟುಗಳು ಮಾಡಿಕೊಳ್ಳುತ್ತಿದ್ದ ತರಬೇತಿಯ ಬಗ್ಗೆ ಮಾತಾಡುತ್ತಿದ್ದಾನೆ. ಓಲಂಪಿಕ್ ಕ್ರೀಡೆಗಳ ವಿಷಯದಲ್ಲಿ ನೋಡುವದಾದರೆ, ಕ್ರೀಡಾಪಟುಗಳ ಪ್ರದರ್ಶನವು ಇನ್ನಷ್ಟು ಹೆಚ್ಚು ಗಮನಾರ್ಹವಾಗುವ ಹಾಗೆ ಅವರು, ವಿಶೇಷ ತರಬೇತಿ ಹಾಗೂ ಸ್ಪರ್ಧಿಸುವ ನಿಯಮಗಳಲ್ಲಿ ಉಪದೇಶವನ್ನು ಪಡೆದುಕೊಳ್ಳಲು ಎಲೀಸ (ಪೆಲೊಪೊನ್ನೆಸಸ್ಸನ

ವಾಯುವ್ಯ ದಿಕ್ಕಿನಲ್ಲಿರುವ ಅವರ ರಾಜ್ಯದ ರಾಜಧಾನಿ) ಎಂಬಲ್ಲಿ ಕೂಡಿ ಬರುತ್ತಿದ್ದರು.

ಈ ಪ್ರದರ್ಶನಗಳು ಕೇವಲ ಕ್ರೀಡಾತ್ಮಕ ಸ್ಪರ್ಧೆಗಳಿಗಿಂತಲೂ ಎಷ್ಟೋ ಅತ್ಯಧಿಕವಾಗಿದ್ದವು. ಅವುಗಳನ್ನು ಯಾವ ದೇವರ ಗೌರವಾರ್ಥವಾಗಿ ಕ್ರೀಡೆಗಳು ನಡಿಸಲ್ಪಡುತ್ತಿದ್ದವೋ ಆ ದೇವರಿಗೆ ಕ್ರೀಡಾಪಟುಗಳ ಕಾಣಿಕೆಗಳಂತೆ ಅರ್ಪಿಸಲ್ಪಡುತ್ತಿದ್ದವು. ಒಂದು ಎತ್ತರವಾದ, ಮರಗಳಿಂದ ತುಂಬಿದ್ದ ಕ್ರೊನಿಯೊನ ಪರ್ವತದ ಮೇಲಿದ್ದ ಓಲಂಪಿಯಾದಲ್ಲಿ, ಕ್ರೀಡಾಂಗಣದ ಉತ್ತರದ ಕಡೆಯಲ್ಲಿ ಎದ್ದೇಳುವದಾಗಿದ್ದು, ಅಲ್ಲಿ ತಂದೆ ದೇವರಾದ ದೌಸ್ಯನು ಕೂತಿರುತ್ತಾನೆಂದು ಅವರು ನಂಬಿದ್ದರು, ಆತನ ಗೌರವಾರ್ಥವಾಗಿಯೇ ಕ್ರೀಡೆಗಳನ್ನು ಆರಾಧನೆಯ ರೂಪದಲ್ಲಿ ಅರ್ಪಿಸಲಾಗುತ್ತಿತ್ತು. ಪೌಲನು ಈ ಭಾವನೆಯನ್ನು ಕ್ರೈಸ್ತನ ಜೀವಿತಕ್ಕೆ ಅನ್ವಯಿಸಿದನು, ಕ್ರೈಸ್ತನು ತನ್ನದೆಲ್ಲವನ್ನೂ ಸತ್ಯ ದೇವರಿಗೆ ಅರ್ಪಿಸುವ ವೇಳೆ ಈ ಜೀವಿತಕ್ಕೆ ದಮೆ ಮತ್ತು ಶಿಸ್ತು ಅತ್ಯಾವಶ್ಯಕವಾಗಿರುತ್ತವೆ.

ಉಳಿದ ಗುಣವಾಚಕವಾದ ἐγκρατής (*enkratēs*) ಎಂಬುದರ ಅರ್ಥವು "ದಮೆಯುಳ್ಳ" ಎಂದಾಗಿದ್ದು, ಇದು ತೀತನಿಗೆ 1:8ರಲ್ಲಿ ಕಾಣಿಸಿಕೊಳ್ಳುತ್ತದೆ.[105] ಒಬ್ಬ ಸಭಾಧ್ಯಕ್ಷನು (ಹಿರಿಯನು) "ಅತಿಥಿಸತ್ಕಾರಮಾಡುವವನೂ ಒಳ್ಳೇದನ್ನು ಪ್ರೀತಿಸುವವನೂ ಸ್ವಸ್ಥಚಿತ್ತನೂ ನ್ಯಾಯವಂತನೂ ದೇವಭಕ್ತನೂ ಜಿತೇಂದ್ರಿಯನೂ [*enkratēs*]" ಆಗಿರಬೇಕು.[106] ಬೇರೆಯವರು ಅನುಸರಿಸುವಂತೆ ಮಾದರಿಯನ್ನು ತೋರಬೇಕಾದರೆ, ಮಾತ್ರವಲ್ಲದೆ ಸ್ಥಳೀಯ ಸಭೆಯಲ್ಲಿನ ಭಿನ್ನಾಭಿಪ್ರಾಯಗಳನ್ನು ನಿಭಾಯಿಸಬೇಕಾದರೆ ಅಂತಹ ಆಂತರೀಕ ಬಲವು ಅಗತ್ಯವಾಗಿರುತ್ತದೆ.

ಪೌಲನು **ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ** ಎಂದು ಹೇಳಿದಾಗ, ಆತನು ಸದ್ಗುಣಗಳ ಪಟ್ಟಿಯನ್ನು, "ದೇವರಾತ್ಮನಿಂದ ಉಂಟಾಗುವ ಫಲ"ವನ್ನು ಸೂಚಿಸಿದನು. ಈ ಕ್ಲುಪ್ತವಾದ ಹೇಳಿಕೆಯ ತಾತ್ಪರ್ಯವೇನು? F. F. Bruceನು ಯೋಚಿಸಿದ್ದೇನೆಂದರೆ ಈ ಸದ್ಗುಣಗಳು "ಧರ್ಮಶಾಸ್ತ್ರಕ್ಕೆ ಏನೂ ಮಾಡುವದಕ್ಕಾಗದಂತಹ ವ್ಯಾಪ್ತಿಯೊಳಗೆ ಇರುತ್ತವೆ. ಧರ್ಮಶಾಸ್ತ್ರವು ನಡವಳಿಯ ಕೆಲವೊಂದು ವಿಧಗಳನ್ನು ಅನುಸರಿಸಬೇಕೆಂದು ಹೇಳಬಹುದು ಮತ್ತು ಕೆಲವೊಂದನ್ನು ನಿಷೇಧಿಸಬಹುದು, ಆದರೆ ಪ್ರೀತಿ, ಸಂತೋಷ, ಸಮಾಧಾನ ಮತ್ತು ಮಿಕ್ಕವುಗಳನ್ನು ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾಗಿದೆ."[107] ಆತನು ಮುಂದುವರೆದು S. H. Hookeನ ಮಾತುಗಳನ್ನು ಉಲ್ಲೇಖಿಸುತ್ತಾನೆ, ಆತನು ಬರೆದದ್ದೇನೆಂದರೆ,

> ಒಂದು ದ್ರಾಕ್ಷೇಬಳ್ಳಿಯು ಸಂಸದದ ಶಾಸನದ ಮೂಲಕವಾಗಿ ದ್ರಾಕ್ಷೆ ಹಣ್ಣುಗಳನ್ನು ಉತ್ಪಾದಿಸುವದಿಲ್ಲ; ಅವುಗಳು ಸ್ವತಃ ದ್ರಾಕ್ಷೇಬಳ್ಳಿಯ ಜೀವನದ ಫಲವಾಗಿರುತ್ತವೆ; ಅದೇ ವಿಧದಲ್ಲಿ ರಾಜ್ಯಕ್ಕನುಗುಣವಾಗಿರುವ ನಡವಳಿಕೆಯು ಯಾವದೇ ಬೇಡಿಕೆಯಿಂದ, ದೇವರ ಬೇಡಿಕೆಯಿಂದ ಸಹ ಉಂಟಾಗುವದುಲ್ಲ, ಆದರೆ ಅದು ಕ್ರಿಸ್ತನಲ್ಲಿ ಮತ್ತು ಮೂಲಕ ದೇವರು ಮಾಡಿರುವಂಥ ಕಾರ್ಯದ ಫಲಿತವಾಗಿ ಆತನು ನಮಗೆ ಅನುಗ್ರಹಿಸುವ ದೈವಿಕ ಸ್ವಭಾವದ ಫಲವಾಗಿರುತ್ತದೆ.[108]

ಆತನು ನೀಡಿದ ಈ ದ್ರಾಕ್ಷೇಬಳ್ಳಿಯ ದೃಷ್ಟಾಂತವು ಪೌಲನು ಹೇಳುತ್ತಿದ್ದದರ ಹೃದಯಭಾಗವನ್ನು ತಲುಪುವದಾಗಿದೆ. ದೇವರಾತ್ಮನ ಫಲವನ್ನು ಶಾಸನಬದ್ಧಗೊಳಿಸಲಾಗುವದಿಲ್ಲ, ಆತನು ಹೇಳಿದ ಹಾಗೆ "ಯಾವದೇ ಬೇಡಿಕೆಯಿಂದ, ದೇವರ ಬೇಡಿಕೆಯಿಂದ ಸಹ ಆಗುವದಿಲ್ಲ." ಮೊದಲ ನೋಟದಲ್ಲಿ ಇದೊಂದು ದೈವದೂಷಣಾತ್ಮಕವಾಗಿ ಕಾಣಿಸಬಹುದು, ಆದರೆ ಅದು ಸ್ಪಷ್ಟ ಗೋಚರವಾದ ಸತ್ಯವಾಗಿರುತ್ತದೆ. ಇದು ಗಲಾತ್ಯದವರಿಗೆ ಬರೆದ ಪತ್ರದ ಸನ್ನಿವೇಶದಿಂದ

ಸಾಭಿತುಗೊಳ್ಳುತ್ತದೆ, ಅದು ಮೋಶೆಯ ಧರ್ಮಶಾಸ್ತ್ರವನ್ನು ಕ್ರಿಸ್ತನ ಸುವಾರ್ತೆಯೊಂದಿಗೆ ವಿರುದ್ಧ ಹೋಲಿಕೆ ಮಾಡುತ್ತದೆ. ಪಂಚಾಶತ್ತಮ ದಿನದಂದು, ಒಂದು ನೂತನ ಯುಗವು ಉದಯವಾಗಿತ್ತು, ಮತ್ತು ಪವಿತ್ರಾತ್ಮನ ಕ್ರಿಯೆಯು ಒಂದು ಸಂಪೂರ್ಣ ವ್ಯತ್ಯಾಸವಾದ ರೀತಿಯಲ್ಲಿ ಕಾಣಿಸಿಕೊಂಡಿತ್ತು. ಸುವಾರ್ತೆಯನ್ನು ನಂಬಿದವರು, ತಮ್ಮ ಪಾಪದಿಂದ ವಿಮುಖರಾಗಿ ಕ್ರಿಸ್ತನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಂಡವರು ತಮ್ಮೊಳಗೆ ವಾಸಿಸುವಂತೆ ಪವಿತ್ರಾತ್ಮನನ್ನು ಪಡೆದುಕೊಂಡರು (ಅಪೊಸ್ತಲರ ಕೃತ್ಯಗಳು 2:37, 38). ಇವರಿಗೆ ಹಿಂದೆಂದೂ ಧರ್ಮಶಾಸ್ತ್ರಾಧೀನರಾಗಿದ್ದವರಿಗೆ ಕೊಡಲ್ಪಡದೆ ಇದ್ದಂಥ ರೀತಿಯಲ್ಲಿ ಪಾಪವನ್ನು ಜಯಿಸುವ ಶಕ್ತಿಯೊಂದು ಅನುಗ್ರಹಿಸಲ್ಪಟ್ಟಿತ್ತು (ರೋಮಾ 8:1-4, 12, 13; ನೋಡಿರಿ ಯೋಹಾನ 7:37-39).[109]

ಅದೇ ಧಾಟಿಯಲ್ಲಿಯೇ, R. Alan Coleನು ನಂಬಿದ್ದೇನೆಂದರೆ "ಫಲ" ಎಂಬುದರ ಬಳಕೆಯು "ಈ ಎಲ್ಲಾ ಆತ್ಮೀಕ ಗುಣಗಳು, ಮತ್ತು ಇನ್ನೂ ಅನೇಕ ಗುಣಗಳು, ಕ್ರೈಸ್ತನ ಹೃದಯದೊಳಗಿರುವ ಕ್ರಿಸ್ತನ ಆತ್ಮನಿರುವದರಿಂದ ಉಂಟಾಗುವ ಸ್ವಯಂಪ್ರೇರಿತ ಸಂಗತಿಗಳಾಗಿವೆ."[110] ಫಲ ಕೊಡುವದರ ಕುರಿತಾದ ರೂಪಕೋಕ್ತಿಯು ಒಂದು ಪ್ರಾಚೀನ ಬಳಕೆಯಾಗಿದ್ದು, ಕೃಷಿಕರಾದ ಇಸ್ರಾಯೇಲ್ಯರಂತಹ ಜನರಿಗೆ ಸೂಕ್ತವಾಗಿ ಸರಿಹೊಂದುವದಾಗಿದೆ. "ಫಲ" ಎಂಬುದಕ್ಕೆ ಗ್ರೀಕ್ ಪದವು (*karpos*) ಎಂಬುದು ಯಾವದೇ ವಿಧವಾದ ಫಲವನ್ನು ಸೂಚಿಸಬಲ್ಲದು, ಇದು ಶಾಸ್ತ್ರಗಳಲ್ಲಿ ಅತ್ಯಂಥ ಸಾಮಾನ್ಯವಾಗಿ ದ್ರಾಕ್ಷೇಬಳ್ಳಿಯ ಉತ್ಪನ್ನಗಳನ್ನು ಮತ್ತು ಹಣ್ಣಿನ ಮರಗಳ ಉತ್ಪನ್ನಗಳನ್ನು ಸೂಚಿಸಲು ಬಳಸಲಾಗಿದೆ. ಸ್ವತಃ ಯೇಸುವು ಒಂದು ದ್ರಾಕ್ಷೇಬಳ್ಳಿ ಅಥವಾ ಮರವನ್ನು (ಒಬ್ಬ ವ್ಯಕ್ತಿಯನ್ನು) ಅದು ನೀಡುವ ಫಲಗಳಿಂದಲೇ (ಕ್ರಿಯೆಗಳಿಂದ) ತಿಳಿದುಕೊಳ್ಳಬಹುದೆಂದು ಹೇಳಿದನು (ಮತ್ತಾಯ 7:16-18).[111]

ಗಲಾತ್ಯದ ಕ್ರೈಸ್ತರ ಜೀವಿತಗಳಲ್ಲಿರುವ ದೇವರಾತ್ಮನ ಫಲವು ಅವರ ಆತ್ಮೀಕ ಜೀವಶಕ್ತಿಗೆ ಒಂದು ಪುರಾವೆಯಾಗಿತ್ತದೆ. ಅವರ ಆತ್ಮೀಕ ಪರಿಪಕ್ವತೆಗೆ ಒಂದು ಸೂಚನೆಯಾಗಿ ಪವಿತ್ರಾತ್ಮನಿಂದಾಗುವ ಅದ್ಭುತಕರವಾದ ವರಗಳನ್ನು ಎತ್ತಿ ಹಿಡಿಯಲಿಲ್ಲ ಎಂಬುದು ಮಹತ್ವಪೂರ್ಣವಾಗಿರುತ್ತದೆ, ಈ ವರಗಳು ಗಲಾತ್ಯದ ಸಭೆಗಳೆಲ್ಲೆಲ್ಲಾ ಅಸ್ತಿತ್ವದಲ್ಲಿದ್ದಾಗ್ಯೂ ಅವುಗಳನ್ನು ಎತ್ತಿ ಹಿಡಿಯಲಿಲ್ಲ.[112]

## ಶರೀರಭಾವದ ಮೇಲೆ ಪವಿತ್ರಾತ್ಮನ ಜಯ (5:24, 25)

**[24]ಕ್ರಿಸ್ತ ಯೇಸುವಿನವರು ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು. [25]ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನನುಸರಿಸಿ ನಡೆಯೋಣ.**

**ವಚನ 24.** ಕ್ರೈಸ್ತನ ಜೀವಿತದಲ್ಲಿ ಕಾಣಿಸಬೇಕಾದ ಸದ್ಗುಣಗಳ ಪಟ್ಟಿಯನ್ನು ಪೂರ್ತಿಗೊಳಿಸಿದ ಬಳಿಕ, ಪೌಲನು ಹೇಗೆ ಒಬ್ಬನು ಪಾಪವನ್ನು ಬಿಟ್ಟು ದೇವರಿಗೆ ಮೆಚ್ಚಿಕೆಯಾಗಿರುವ ಒಂದು ದಾರಿಯಲ್ಲಿ ನಡೆಯಬಲ್ಲನು (ಜೀವಿಸಬಲ್ಲ)ನು ಎಂಬುದನ್ನು ವ್ಯಕ್ತಪಡಿಸುತ್ತಾನೆ. ಆತನು **ಕ್ರಿಸ್ತ ಯೇಸುವಿನಲ್ಲಿರುವವರು ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು** ಎಂದು ಹೇಳಿದನು. ಖಂಡಿತವಾಗಿಯೂ, ಇದು ಮಾನವ ಶಕ್ತಿಯಿಂದ ಸಾಧಿಸಲ್ಪಡುವಂಥದ್ದಲ್ಲ.

"ಶರೀರಭಾವ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು (*sarx*) ಎಂದಾಗಿದ್ದು ಇದು ಅನೇಕ ಅರ್ಥಗಳನ್ನೊಳಗೊಂಡಿರುವ ಪದವಾಗಿದೆ,[113] ಆದರೆ ಇದು ಮೂಲತಃ ಬಿದ್ದುಹೋಗಿರುವ ಸ್ಥಿತಿಯಲ್ಲಿರುವ ಮಾನವ ಸ್ವಭಾವವನ್ನು ಸೂಚಿಸುತ್ತದೆ. *ಸಾರ್ಕ್ಸ್* ಎಂದರೆ "ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ"ಗಳನ್ನು ಹೊಂದಿರುವ ಮನುಷ್ಯನು. ಅದೇನೆಂದರೆ, ದೇವರ ಸ್ವರೂಪದಲ್ಲಿ ರೂಪಿಸಲ್ಪಟ್ಟ ಮತ್ತು ಈಗಲೂ ತನ್ನೊಳಗೆ ದೈವಿಕ "ಕಿಡಿ"ಯನ್ನು ಹೊಂದಿರುವ, ಆದರೆ ಈಗಿನ ಕೆಟ್ಟ ಲೋಕದಲ್ಲಿ ಗೊಂದಲಕ್ಕೀಡಾದವನು, ಕುರುಡನಾಗಿರುವವನು, ಮತ್ತು ಹತಾಶೆಗೊಂಡ ಮನುಷ್ಯನಾಗಿದ್ದಾನೆ. ಜನರು ಏನನ್ನಾದರೂ ಹಿಡಿದುಕೊಳ್ಳಲು ಸವಾಲನ್ನು ಎದುರಿಸುವವರು ಮತ್ತು ಕುರುಡರ ರೀತಿಯಲ್ಲಿ ಆತುಕೊಳ್ಳುವದಕ್ಕೆ ಅಥವಾ ತಡೆಗಳನ್ನಾದರು "ತಡಕಾಡುವವರು" ಆಗಿರುತ್ತಾರೆ; ಆದರೆ ನಾವು ದೇವರನ್ನು ಹುಡುಕಿ ಆತನೆಡೆಗೆ ಹೋಗಬೇಕಾಗಿರುತ್ತದೆ. ಪೌಲನು ಅಥೇನೆಯವರಿಗೆ ಮಾಡಿದ ಪ್ರಸಂಗದಲ್ಲಿ, "ಒಂದು ವೇಳೆ ಅವರು ತಡವಾಡಿ ಕಂಡುಕೊಂಡಾರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು. ಆತನು ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ. ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" ಎಂಬುದು ದೇವರ ಬಯಕೆಯಾಗಿದೆ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 17:27, 28).[114]

ಪೌಲನು 5:24ರಲ್ಲಿ ಶರೀರಭಾವದ ಕುರಿತು ಮಾತಾಡಿದಾಗ, ಆತನು 5:19-21ರಲ್ಲಿ ನಮೂದಿಸಿದ "ಶರೀರಭಾವದ ಕರ್ಮಗಳ" ಇಡೀ ಪಟ್ಟಿಯನ್ನು ಸೂಚಿಸುವವನಾಗಿದ್ದನು. ಈ ಮುಂಚೆ ಶರೀರಭಾವದ ಕುರಿತಾದ ಉಲ್ಲೇಖಗಳು ಈ ಅಧ್ಯಾಯದಲ್ಲಿ ಹಲವಾರು ಸಾರಿ ಕಾಣಿಸಿಕೊಂಡಿರುತ್ತವೆ:

> ಸಹೋದರರೇ, ನೀವು ಸ್ವತಂತ್ರರಾಗಿರಬೇಕೆಂದು ದೇವರು ನಿಮ್ಮನ್ನು ಕರೆದನು. ಆದರೆ ನಿಮಗಿರುವ ಸ್ವಾತಂತ್ರ್ಯವನ್ನು *ಶರೀರಾಧೀನಸ್ವಭಾವಕ್ಕೆ* ಆಸ್ಪದವಾಗಿ ಬಳಸದೆ ಪ್ರೀತಿಯಿಂದ ಒಬ್ಬರಿಗೊಬ್ಬರು ಸೇವೆ ಮಾಡಿರಿ (5:13; ಒತ್ತಿ ಹೇಳಿದ್ದು ನನ್ನದು).

> ನಾನು ಹೇಳುವದೇನಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು *ಶರೀರಭಾವದ* ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ. ಯಾಕಂದರೆ *ಶರೀರಭಾವವು* ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು *ಶರೀರಭಾವಕ್ಕೆ* ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ (5:16, 17; ಒತ್ತಿ ಹೇಳಿದ್ದು ನನ್ನದು).

ಪೌಲನು ಗಲಾತ್ಯದವರಿಗೆ ಶರೀರಭಾವದ ಇಚ್ಛೆಗಳಿಗೆ ಒಪ್ಪಿಸಿ ಕೊಡುವದಾದರೆ ಅವರು ದೇವರ ರಾಜ್ಯದಲ್ಲಿನ ತನ್ನ ಬಾಧ್ಯತೆಯನ್ನು ಕಳೆದುಕೊಳ್ಳಬೇಕಾಗುವದೆಂದು ಒಂದಕ್ಕಿಂತ ಅಧಿಕ ಸಾರಿ ಎಚ್ಚರಿಸಿದ್ದನು (5:21).

ಹಾಗಾದರೆ, 24ನೇ ವಚನವು ಈ ಸಭೆಗಳಿಗೆ ಪೌಲನು ಏನು ಬೋಧಿಸಿದ್ದನೆಂಬುದನ್ನು ಜ್ಞಾಪಿಸುವದಾಗಿದೆ. ಆತನು ಎಲ್ಲೆಲ್ಲಿ ಬೋಧನೆಯನ್ನು ಮಾಡಿದರೂ ಆತನ ಸಂದೇಶದ ಹೃದಯ ಭಾಗವು ಶಿಲುಬೆಯ ಪ್ರಾಧಾನ್ಯತೆಯೇ ಆಗಿತ್ತು (1 ಕೊರಿಂಥ 1:18, 22, 23; 2:2). "ಶಿಲುಬೆಯ ವಾಕ್ಯ"ವು ಗತಕಾಲದಲ್ಲಿ ನಮಗೋಸ್ಕರವಾಗಿ ಯೇಸುವು ಅನುಭವಿಸಿದ ಶ್ರಮೆ ಮತ್ತು ಅವಮಾನದ ವ್ಯಾಪ್ತಿಯಲ್ಲಿಯೇ ಉಳಿದುಕೊಳ್ಳಕೂಡದು. ಬದಲಾಗಿ, ಶಿಲುಬೆಯು ಪರಿಣಾಮಗಳನ್ನು ಹೊಂದಿದೆ - ವಿಶ್ವಾಸಿಗಾಗಿ ಆರಂಭದಲ್ಲಿ ಮಾತ್ರವೇ ಆಗಿರುವದಿಲ್ಲ, ಆದರೆ ಆತನ ಮಿಕ್ಕ ಜೀವಿತ ಕಾಲವೆಲ್ಲಾ ಇರುವದಾಗಿದೆ. ವಾಸ್ತವಿಕದಲ್ಲಿ, ಪ್ರತಿಯೊಬ್ಬ ಕ್ರೈಸ್ತನಿಗೂ ಒಂದು ಶಿಲುಬೆಯಿರುತ್ತದೆ, ಪೌಲನು 5:19-21ರಲ್ಲಿ ಪಟ್ಟಿಮಾಡಿರುವ ಅದೇ "ಶರೀರಭಾವದ

ಕರ್ಮಗಳನ್ನು" ಶಿಲುಬೆಗೆ ಹಾಕುವಿಕೆಯು ಇರುತ್ತದೆ. ಕರ್ತನು ಸ್ವತಃ ಹೇಳಿದ್ದೇನೆಂದರೆ, "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ" (ಲೂಕ 9:23).[115]

**ವಚನ 25.** ಗಲಾತ್ಯದಲ್ಲಿದ್ದ ಕ್ರೈಸ್ತರು ದೀಕ್ಷಾಸ್ನಾನವನ್ನು ಮಾಡಿಸಿಕೊಂಡ ವೇಳೆ ಕ್ರಿಸ್ತನನ್ನು ಧರಿಸಿಕೊಂಡಾಗ ಪಾಪದ ಪಾಲಿಗೆ ಸತ್ತವರಾಗಿದ್ದರು (3:26, 27; ನೋಡಿರಿ ರೋಮಾ 6:3-7). ಆ ಸಂದರ್ಭದಲ್ಲಿಯೇ ಅವರು ತಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ತಮ್ಮೊಳಗೆ ವಾಸಿಸುವಂತೆ ಪವಿತ್ರಾತ್ಮನ ವರವನ್ನು ಪಡೆದುಕೊಂಡಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 2:38 39; ತೀತನಿಗೆ 3:5, 6). ಆದದರಿಂದ, ಪೌಲನು ಅವರಿಗೆ ಅಪ್ಪಣೆ ಕೊಟ್ಟಿದ್ದೇನೆಂದರೆ, **ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನನುಸರಿಸಿ ನಡೆಯೋಣ.** "ದಾದರೆ" (εἰ, *ei*) ಎಂಬುದು ಮೊದಲ ಪರಿಚ್ಛೇದದಲ್ಲಿನ ಷರತ್ತು ಸತ್ಯವೆಂದು ಭಾವಿಸಿಕೊಳ್ಳಲಾಗಿದೆ ಎಂಬುದನ್ನು ಸೂಚಿಸುತ್ತದೆ.[116] ಈ ವಚನವನ್ನು NIVಯು ಹೀಗೆ ಅನುವಾದಿಸುತ್ತದೆ: "ನಾವು ಪವಿತ್ರಾತ್ಮನನ್ನು ಅನುಸರಿಸಿ ಜೀವಿಸುತ್ತೇ*ವಾದ್ದರಿಂದ*, ಪವಿತ್ರಾತ್ಮನೊಂದಿಗೆ ಹೆಜ್ಜೆಯನ್ನಿಡುವವರಾಗಿರೋಣ" (ಒತ್ತಿ ಹೇಳಿದ್ದು ನನ್ನದು).

"ನಡೆ" ಅಥವಾ "ಹೆಜ್ಜೆಯನ್ನಿಡು" (NIV) ಎಂಬ ಕ್ರಿಯಾಪದವು στοιχέω (*stoicheō*) ಎಂಬ ಪದದಿಂದ ಅನುವಾದಿಸಲ್ಪಟ್ಟಿದ್ದು, ಅದು 5:16ರಲ್ಲಿ ಬಳಸಲ್ಪಟ್ಟಿರುವ (*peripateō*) ಎಂಬ ಪದಕ್ಕಿಂತ ವ್ಯತ್ಯಾಸವಾಗಿರುತ್ತದೆ - ಆದಾಗ್ಯೂ ಎರಡೂ ಪದಗಳು ಸ್ಥೂಲವಾಗಿ ಸಮಾನಾರ್ಥವಾಗಿರುತ್ತವೆ. ಆಸರೆ *peripateō* ಎಂಬುದು ಒಬ್ಬೊಬ್ಬರಾಗಿ ನಡೆಯುವದನ್ನು ಸೂಚಿಸುವದಕ್ಕೆ ಹೆಚ್ಚು ಬಳಸಲ್ಪಟ್ಟಿದ್ದರೆ, *stoicheō* ಎಂಬುದು ಮತ್ತೊಬ್ಬರ ಸಹವಾಸದೊಂದಿಗೆ ನಡೆಯುವದನ್ನು ಸೂಚಿಸುತ್ತದೆ. ಈ στοῖχος (*stoichos*, "ಸಾಲು") ಎಂಬುದಕ್ಕೆ ಸಂಬಂಧಪಟ್ಟದ್ದಾಗಿ, *stoicheō* ಎಂಬುದು ಮೂಲತಃ "ಸಾಲಿನಲ್ಲಿ ನಡೆ" ಅಥವಾ "ಶ್ರೇಣಿಯಲ್ಲಿರು" ಎಂದರ್ಥವನ್ನು ಹೊಂದಿತ್ತು. ಈ ಪದವು ಮುಂದೆ "ಒಮ್ಮತದಿಂದಿರು" ಎಂಬ ಸಾಂಕೇತಿಕವಾದ ಅರ್ಥವನ್ನು ಪಡೆದುಕೊಂಡಿತ್ತು. ಗಲಾತ್ಯದವರು ತಮ್ಮ ಜೀವಿತಗಳನ್ನು ಪರೀಕ್ಷಿಸಿಕೊಂಡು ದೇವರಾತ್ಮನಿಂದ ಉಂಟಾಗುವ ಫಲವನ್ನು ಕೊಡುವವರಾಗಿ, ದೇವರಾತ್ಮನೊಂದಿಗೆ ಸಾಮರಸ್ಯದಿಂದಿರುವಂತೆ ನೋಡಿಕೊಳ್ಳಬೇಕು ಎಂಬುದು ಪೌಲನ ಬಯಕೆಯಾಗಿತ್ತು (ನೋಡಿರಿ ರೋಮಾ 8:5, 6). ಅವರು ತಮ್ಮೆಲ್ಲಾ ಕ್ರಿಯೆಗಳಲ್ಲಿ ಮಾರ್ಗದರ್ಶಿಸುವಂತೆ ಪವಿತ್ರಾತ್ಮನಿಗೆ ಅವಕಾಶ ಕೊಡಬೇಕೆಂಬುದು ಅವರ ವಿಷಯದಲ್ಲಿ ಆತನಿಗಿದ್ದ ಬಯಕೆಯಾಗಿತ್ತು.

## ಸಹೋದರರಿಗೆ ಅಪೊಸ್ತಲನ ಬುದ್ಧಿವಾದ (5:26)

**26 ಅಹಂಕಾರಿಗಳೂ ಒಬ್ಬರನ್ನೊಬ್ಬರು ಕೆಣಕುವವರೂ ಒಬ್ಬರ ಮೇಲೊಬ್ಬರು ಮತ್ಸರವುಳ್ಳವರೂ ಆಗದೆ ಇರೋಣ.**

**ವಚನ 26.** 5ನೇ ಅಧ್ಯಾಯವು ಈ ಬುದ್ಧಿವಾದದೊಂದಿಗೆ ಮುಕ್ತಾಯಕ್ಕೆ ಬರುತ್ತದೆ: **ಅಹಂಕಾರಿಗಳೂ ಒಬ್ಬರನ್ನೊಬ್ಬರು ಕೆಣಕುವವರೂ ಒಬ್ಬರ ಮೇಲೊಬ್ಬರು ಮತ್ಸರವುಳ್ಳವರೂ ಆಗದೆ ಇರೋಣ.** ಅನೇಕ ಆಂಗ್ಲ ಆವೃತ್ತಿಗಳು "ಆಗದೆ ಇರೋಣ" ಎಂಬುದನ್ನು NASBಯಲ್ಲಿರುವದ ರೀತಿಯಲ್ಲಿಯೇ ಅನುವಾದಿಸುತ್ತವೆ (ನೋಡಿರಿ ASV; NKJV; NRSV; NIV; ESV; NLT; CJB). ಈ ಪ್ರಕರಣದಲ್ಲಿ ಮೂಲ ಕ್ರಿಯಾಪದವು γίνομαι (*ginomai*),

ಇದು ವಿವಿಧ ಸೂಚ್ಯಾರ್ಥಗಳನ್ನು ಒಳಗೊಂಡಿರಬಹುದಾದ ಅತ್ಯಂಥ ಸರ್ವಸಾಮಾನ್ಯ ಪದವಾಗಿರುತ್ತದೆ. ಬಹುಶಃ ಅತ್ಯಂಥ ಸಾಮಾನ್ಯ ಅರ್ಥವು “ಆಗು,” “ನೆರವೇರು,” ಅಥವಾ “ಸಂಭವಿಸು” ಎಂದಾಗಿರುತ್ತದೆ. ಹೇಗೂ, ಈ ಪದವು ಇರುವಿಕೆಯ ಒಂದು ಕ್ರಿಯಾಪದವಾಗಿ ಸಹ ರೂಪವನ್ನು ತಾಳಬಹುದಾಗಿದೆ, ಉದಾಹರಣೆಗೆ “ಇರು” ಅಥವಾ “ಅಸ್ತಿತ್ವದಲ್ಲಿರು.” ಕೆಲವು ಆವೃತ್ತಿಗಳು ಕ್ರಿಯಾಪದದ ಈ ಅರ್ಥವನ್ನು ಕೊಡಬಹುದಾಗಿದೆ (ನೋಡಿರಿ KJV; NEB; REB; NJB; NCV; CEV; GNT).

ಗ್ರೀಕ್ ವಾಕ್ಯದಲ್ಲಿ ನಿಜಕ್ಕೂ ಇರುವ ಪದವು γινώμεθα (*ginōmetha*) ಎಂದಾಗಿರುವದು ಗಮನಾರ್ಹವಾದದ್ದು, ಅದು *ginomai* ಎಂಬ ಕ್ರಿಯಾಪದದ ವರ್ತಮಾನ ಸಂಭವನಾರ್ಥಕ ಪದವಾಗಿರುತ್ತದೆ. ಇದೊಂದು ಅನಿಶ್ಚಿತ ಭೂತಕಾಲವಾಗಿದ್ದು, ಅದು ಕಾಲನಿಷ್ಠ ಕ್ರಿಯೆಯನ್ನು, ಅಂದರೆ ಕಾಲದ ಒಂದು ಹಂತದಲ್ಲಿ ವ್ಯಕ್ತಪಡಿಸಲಾದ ಕ್ರಿಯೆಯನ್ನು ಸೂಚಿಸುತ್ತದೆ (.). ಬದಲಾಗಿ, ಒಂದು ವರ್ತಮಾನವಾಗಿ, ಅದು ರೇಖೀಯವನ್ನು ಅಥವಾ ನಿರಂತರವಾದ ಕ್ರಿಯೆಯನ್ನು (⟶) ಸೂಚಿಸುತ್ತದೆ. ಈ ಕಾರಣಕ್ಕಾಗಿ, ನಕಾರಾತ್ಮಕ ಆಜ್ಞೆಯನ್ನು ಸಹೋದರರು ಮಾಡುವದಕ್ಕೆ *ಆರಂಭಿಸ*ಬಾರದಂತಹ ಸಂಗತಿಯನ್ನಾಗಿ ಅರ್ಥಮಾಡಿಕೊಳ್ಳಕೂಡದು, ಆದರೆ ಅವರು ಮಾಡುವದನ್ನು *ನಿಲ್ಲಿಸ*ಬೇಕಾದ ಒಂದು ನಡವಳಿಯ ಎಂಬಂತೆ ಅರ್ಥಮಾಡಿಕೊಳ್ಳತಕ್ಕದ್ದು (5:15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 26ನೇ ವಚನದ ಮೊದಲನೆಯ ಭಾಗವು ಹೀಗೆ ಹೇಳುತ್ತಿದೆ, “ನಾವು ಅಹಂಕಾರಿಗಳಾಗಿರುವದನ್ನು ನಿಲ್ಲಿಸಿ ಬಿಡೋಣ.”[117]

“ಕೆಣಕುವವರು” ಎಂಬುದು ಗ್ರೀಕ್ ಭಾಷೆಯ προκαλέω (*prokaleō*) ಎಂಬ ಪದದಿಂದ ಬಂದಿರುತ್ತದೆ, ಇದು ಹೊಸ ಒಡಂಬಡಿಕೆಯೊಳಗೆ ಈ ವಚನದಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಈ ಪದದ ಅಕ್ಷರಶಃ ಅರ್ಥವು “ಒಬ್ಬನನ್ನು ಮುಂದೆ ಬರುವಂತೆ ಕರೆಯುವದು” ಎಂದಾಗಿರುತ್ತದೆ. ಇದು ಅನೇಕ ಸಾರಿ ಗ್ರೀಕ್ ಸಾಹಿತ್ಯಲ್ಲಿ “ಕೆಣಕುವ” ಪ್ರತಿಕೂಲ ಸೂಚ್ಯಾರ್ಥದೊಂದಿಗೆ ಬಳಸಲ್ಪಡುತ್ತಿತ್ತು.[118] ಇಲ್ಲಿ ಹಲವಾರು ಆವೃತ್ತಿಗಳು “ಕೆಣಕುವವರು” ಎಂದು ಹೊಂದಿರುತ್ತವೆ, ಅದು ಸ್ಪಷ್ಟವಾಗಿ ಪ್ರತಿಕೂಲತೆಯನ್ನು ವ್ಯಕ್ತಪಡಿಸುತ್ತದೆ (KJV; NKJV; ASV; RSV; NIV; ESV; CJB). ಪ್ರೊಕಾಲೆಯೋ ಎಂಬುದು “ಕಾದಾಟ ಅಥವಾ ವೈರತ್ವ”ವನ್ನು ಸೂಚಿಸುತ್ತದೆ.[119]

ಈ ಮುಂಚೆ ಗಮನಿಸಿದ ಪ್ರಕಾರ, ಪೌಲನು 5:19–21ರಲ್ಲಿ ಪಟ್ಟಿ ಮಾಡಿದ ದುರ್ಗುಣಗಳು ಸಮಗ್ರವಾದವಗಳಾಗಿರಲಿಲ್ಲ, ಆದರೆ ಬದಲಾಗಿ ಪ್ರತಿನಿಧಿಸುವವುಗಳಾಗಿದ್ದವು. 5:21ರಲ್ಲಿರುವ “ಇಂಥವುಗಳನ್ನು” ಎಂಬ ಪದಗುಚ್ಛವು ಅದೇ ರೀತಿಯ ಸ್ವಭಾವವುಳ್ಳ ದುಷ್ಕೃತ್ಯಗಳನ್ನು ಒಳಗೊಂಡಿರುತ್ತದೆ. ಅಪೊಸ್ತಲನು 5:26ರಲ್ಲಿ ಸೇರ್ಪಡೆಗೊಳಿಸಿದ ನಡವಳಿಕೆಯ ಮೂರು ನಮೂನೆಗಳೊಳಗೆ ಪ್ರತಿಯೊಂದು - “ಅಹಂಕಾರಿಗ[ಳಾಗುವದು],” “ಒಬ್ಬರನ್ನೊಬ್ಬರು ಕೆಣಕುವ[ವರಾಗುವದು],” ಮತ್ತು “ಒಬ್ಬರ ಮೇಲೊಬ್ಬರು ಮತ್ಸರವುಳ್ಳವ[ರಾಗುವದು]” - ಸ್ಪಷ್ಟವಾಗಿ ತನ್ನ ಸ್ಥಾನವನ್ನು “ಶರೀರಭಾವದ ಕರ್ಮಗಳಲ್ಲಿ” ಹೊಂದಿರುತ್ತದೆ. ವಾಸ್ತವಿಕದಲ್ಲಿ, “ಮತ್ಸರವುಳ್ಳವರಾಗುವದು” ಎಂಬುದು φθονέω (*phthoneō*) ಎಂಬ ಕ್ರಿಯಾಪದದಿಂದ ಬಂದದ್ದಾಗಿದೆ, ಅದಕ್ಕೆ ಸಂಬಂಧಿಸಿದ *ಫಥೋನೊಸ* ಎಂಬ ನಾಮಪದವು 5:21ರಲ್ಲಿ “ಮತ್ಸರ” ಎಂಬುದಕ್ಕಾಗಿ ಕಾಣಿಸಿಕೊಳ್ಳುತ್ತದೆ. ಇದು ಪೌಲನಿಂದ ಒಂದೊಂದಾಗಿ ಪಟ್ಟಿ ಮಾಡಲ್ಪಟ್ಟ ಶರೀರಭಾವದ ಕರ್ಮಗಳು ಕೇವಲ ಊಹನಾತ್ಮಕವಾಗಿರಲಿಲ್ಲ ಎಂದು ತೋರಿಸಿ ಕೊಡುತ್ತದೆ; ಅದು ಗಲಾತ್ಯದಲ್ಲಿರುವ ಸಭೆಗಳ ಸ್ಥಾನಕ್ಕೆ ಕುತ್ತು ಉಂಟು ಮಾಡಿದ್ದಂಥ ಒಂದು ನಿಜವಾದ ಸಮಸ್ಯೆಯಾಗಿತ್ತು.

ತಮ್ಮ ದುರ್ನಡತೆಯನ್ನು ಬಿಟ್ಟು ಬಿಡಬೇಕೆಂದು ಗಲಾತ್ಯದವರಿಗೆ ಬುದ್ಧಿವಾದವನ್ನು ಹೇಳಿದ್ದು ಅವರಲ್ಲಿ ಯೆಹೂದಿಕರಣಗೊಳಿಸುವವರು ಇನ್ನೂ ಉಪಸ್ಥಿತಿರಿದ್ದರೋ ಎಂಬ ಪ್ರಶ್ನೆಯನ್ನು ಎಬ್ಬಿಸುತ್ತದೆ. ವ್ಯಾಖ್ಯಾನಕಾರರು ಈ ವಿಷಯದಲ್ಲಿ ತಮ್ಮೊಳಗೆ ಬೇರೆ ಬೇರೆ ಅಭಿಪ್ರಾಯಗಳನ್ನು ನೀಡುತ್ತಾರೆ. ಅವರಲ್ಲಿ ನಿಜಕ್ಕೂ ಯೆಹೂದಿಕರಣಗೊಳಿಸುವವರು ಈಗಲೂ ಇದ್ದರು ಎಂಬುದಾಗಿ Warren W. Wiersbeನು ಭಾವಿಸಿಕೊಳ್ಳುತ್ತಾನೆ: "ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಸ್ತುತಿ ಹಾಗೂ 'ಒಣಹೆಮ್ಮೆ'ಗೋಸ್ಕರ ಚಿಂತಿಸುವವರಾಗಿದ್ದರು ಮತ್ತು ಇದರಿಂದ ಪೈಪೋಟಿ ಹಾಗೂ ವಿಭಜನೆಗಳಿಗೆ ದಾರಿಯಾಗಿತ್ತು. ಅಂಥ ವಿಧವಾದ ವಾತಾವರಣದಲ್ಲಿ ಫಲವು ಬೆಳೆಯುವದಕ್ಕೆ ಎಂದಿಗೂ ಸಾಧ್ಯವಿರುವದಿಲ್ಲ."[120] Coleನು ಇತರ ಆಯ್ಕೆಗಳ ಬಗ್ಗೆ ಆಲೋಚಿಸುತ್ತಾನೆ. ಒಂದು ಸಾಧ್ಯತೆಯು ಏನೆಂದರೆ "ಯೆಹೂದಿಕರಣಗೊಳಿಸುವ ತಪ್ಪಿಗೆ ಸಿಕ್ಕಿಕೊಳ್ಳದೆ ಇದ್ದವರು ಈಗ ತಮ್ಮ ಅತ್ಯುತ್ಕೃಷ್ಠವಾದ ಆತ್ಮೀಕ ಶಕ್ತಿಯ ಕುರಿತು ಬಡಾಯಿ ಕೊಚ್ಚಿಕೊಳ್ಳುತ್ತಿದ್ದರು." ಹಾಗಿರುವದಾದಲ್ಲಿ, ಇದರಿಂದ ಯೆಹೂದಿಕರಣಗೊಳಿಸುವವರಿಗೆ ತಮ್ಮನ್ನು ಅಧೀನಪಡಿಸಿಕೊಂಡವರಲ್ಲಿ ಹೊಟ್ಟೇಕಿಚ್ಚು ಅಥವಾ ಮತ್ಸರವು ತುಂಬಿಕೊಳ್ಳುವಂತೆ ಮಾಡಿರಬಹುದಾಗಿದೆ. ಇನ್ನೊಂದು ವಿಚಾರವು ಏನಾಗಿದ್ದಿರಬಹುದೆಂದರೆ ಅಲ್ಲಿ "ಸಭೆಯೊಳಗೆ ಅಧಿಕಾರಕ್ಕೋಸ್ಕರ ಒಂದು ಹೋರಾಟ" ಉಂಟಾಗಿತ್ತು. ಹಾಗಿರುವದಾದಲ್ಲಿ, ಯೆಹೂದಿಕರಣಗೊಳಿಸುವದರ ವಿವಾದದ ಕುರಿತಾಗಿ ಯಾವದೇ ವಿಧವಾದ ಉಲ್ಲೇಖವನ್ನು ಹುಡುಕುವದು ಅನಾವಶ್ಯಕವಾಗಿರುತ್ತದೆ.[121]

ಕ್ರೈಸ್ತರನ್ನು "ಸ್ವಪ್ರತಿಷ್ಠೆಯುಳ್ಳವರಾಗಿರುವಂತೆ, ಒಬ್ಬರನ್ನೊಬ್ಬರು ಕೆಣಕುವವರಾಗಿರುವಂತೆ, ಒಬ್ಬರ ಮೇಲೊಬ್ಬರು ಹೊಟ್ಟೆಕಿಚ್ಚು ಪಡುವವರಾಗಿರುವಂತೆ" ಸ್ಫೂರ್ತಿಗೊಳಿಸುವ ಸಂಗತಿ ಯಾವದಿರಬಹುದು (NKJV)? ಗಲಾತ್ಯದ ಸಭೆಯಲ್ಲಿನ ಸಮಸ್ಯೆಗೆ ಕಾರಣವು "ದೈವಶಾಸ್ತ್ರೀಕ ವಾಗ್ವಾದ"ವಾಗಿತ್ತೆಂದು Bruceನು ಅಭಿಪ್ರಾಯ ಪಡುತ್ತಾನೆ.[122] ಇದರ ಸಾಧ್ಯತೆಯು ಇರಬಹುದಾದರೂ, ಅದನ್ನು ಖಚಿತವಾಗಿ ಹೇಳುವದಕ್ಕಾಗಿ ನಮ್ಮಲ್ಲಿ ಸಾಕಷ್ಟು ಮಾಹಿತಿ ಲಭ್ಯವಿರುವದಿಲ್ಲ.

Walter Schmithalsನ ಊಹೆಯು ಏನಾಗಿತ್ತೆಂದರೆ 5:26ರ ಭಾಷೆಯ ಮೂಲಕ "ಗ್ನಾಸ್ಟಿಕ್ ಆಧ್ಯಾತ್ಮಿಕವಾದಿಗಳು"[123] ಸ್ಫುಟವಾಗಿ ಬಣ್ಣಿಸಲ್ಪಟ್ಟಿರುತ್ತಾರೆ ಎಂಬದೆ. ಒಣಹೆಮ್ಮೆ (κενόδοξος, *kenodoxos*) ಎಂಬ ಬಣ್ಣನೆಯು ಗ್ನಾಸ್ಟಿಕರಿಗೆ ಅನ್ವಯವಾಗಬಹುದಾದರೂ, ಇಲ್ಲಿ ಅವರೊಂದಿಗೆ ಸಂಬಂಧವನ್ನು ಕಲ್ಪಿಸಿಡುವದಕ್ಕೆ ಕಾರಣವು ಇರುವದಿಲ್ಲ. Bruceನು ಹೀಗೆ ವಿವರಿಸುತ್ತಾನೆ,

> ಸಭೆಯ ಜೀವಿತದ ಬಗ್ಗೆ ಒಡನಾಟವಿರುವ ಯಾವದೇ ಒಬ್ಬ ವ್ಯಕ್ತಿಯು . . . ಪೌಲನು ಯಾವ ಪ್ರವೃತ್ತಿಗಳ ವಿರುದ್ಧ ಈ ಎಚ್ಚರಿಕೆಯನ್ನು - ಆತ್ಮೀಕ ಗರ್ವ, ಪರಸ್ಪರರನ್ನು ಕೆಣಕುವಿಕೆ, ಮತ್ತು ಮತ್ಸರ - ನುಡಿಯುತ್ತಾನೋ ಅವುಗಳು ಅತ್ಯಂಥ ಸಾಧಾರಣ ಕ್ರೈಸ್ತರೊಳಗೆ, ಗ್ನಾಸ್ಟಿಕ್ ವಾದದ ಬಗ್ಗೆಯಾಗಲಿ ಅಥವಾ ಉನ್ಮಾದತೆಯ ಬಗ್ಗೆಯಾಗಲಿ ಏನನ್ನೂ ಅರಿಯದಂತಹ ಅವರೊಳಗೆ ಉದ್ಭವವಾಗಬಲ್ಲವು ಎಂದು ಬಲ್ಲವನಾಗಿರುತ್ತಾನೆ.[124]

ಕೆಲವು ವೇದ ಪಂಡಿತರು ಹೊಸ ಒಡಂಬಡಿಕೆಯ ಬರಹಗಳಲ್ಲಿ ಗ್ನಾಸ್ಟಿಕತ್ವದ ಪ್ರವೃತ್ತಿಗಳನ್ನು ಹುಡುಕುವದಕ್ಕೆ ಹಾತೋರೆಯುವಂತೆ ಕಾಣಿಸುತ್ತದೆ; ಆದರೆ ಈ ಕ್ಷೇತ್ರದಲ್ಲಿ ಸಮಗ್ರವಾದ ಅಧ್ಯಯನಗಳನ್ನು ಮಾಡಿರುವಂಥವರು, ಉದಾಹರಣೆಗೆ Bruceನಂಥವರು ಅಂತಹ ನಿರ್ಣಯಗಳನ್ನು ಅವಸರದಿಂದ ಒಪ್ಪಿಕೊಳ್ಳಲು ಸಂಕೋಚ ಪಡುತ್ತಾರೆ. ಪ್ರೇರಿತ

ಲೇಖಕರ ಸಾಮಾನ್ಯವಾದ ವಾತಾವರಣದಲ್ಲಿ ಗ್ನಾಸ್ಟಿಕತ್ವದಲ್ಲಿ ಅಡಕವಾಗಿರುವ ಅಂಶಗಳು ಉಪಸ್ಥಿತವಿದ್ದವಾದರೂ, ಕ್ರಿ.ಶ. ಪ್ರಥಮ ಶತಮಾನದ ವೇಳೆ ಅವುಗಳು ಅವರ ವಿವಿಧ ವ್ಯವಸ್ಥೆಗಳೊಳಗೆ ಇನ್ನೂ ಬೆರೆತುಕೊಳ್ಳಲು ಆರಂಭಿಸಿರಲಿಲ್ಲ ಎಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುತ್ತದೆ. ಆದದರಿಂದ, ಇಲ್ಲಿ "ಆರಂಭದಶೆಯಲ್ಲಿದ್ದ ಗ್ನಾಸ್ಟಿಕತ್ವ"ಕ್ಕಿಂತ ಹೆಚ್ಚಿನದ್ದರ ಬಗ್ಗೆ ಮಾತಾಡದೆ ಇರುವದೇ ಹೆಚ್ಚು ಜಾಣತನವಾಗಿರುತ್ತದೆ. ಕ್ರಿ.ಶ. ಎರಡನೆಯ ಮತ್ತು ಮೂರನೆಯ ಶತಮಾನಗಳಲ್ಲಿ, ಗ್ನಾಸ್ಟಿಕತ್ವವು ಪೂರ್ಣ ಬೆಳೆದಿತ್ತು ಮತ್ತು ಸಭೆಯ ಅಸ್ತಿತ್ವಕ್ಕೇ ಗಂಡಾಂತರವನ್ನು ತಂದಿಟ್ಟಿತ್ತು.[125]

# ಅನ್ವಯಿಸುವಿಕೆ

## ಧರ್ಮಶಾಸ್ತ್ರದಿಂದ ನೀತಿವಂತರೆಂಬ ನಿರ್ಣಯವೋ? (5:2-4)

ಗಲಾತ್ಯದವರಿಗೆ ಬರೆದ ಪತ್ರಿಕೆಯನ್ನು "ನೇಮನಿಷ್ಠೆ" ಎಂಬುದರ ಕುರಿತಾದ ಒಂದು ಸಾಮಾನ್ಯ ಪ್ರಬಂಧಗ್ರಂಥವೆಂಬುದಾಗಿ ಪರಗಣಿಸಕೂಡದು, ಆದರೆ ಬದಲಾಗಿ ಸುನ್ನತಿಗೊಪ್ಪಿಸಿಕೊಳ್ಳುವ ಮೂಲಕ ಮತ್ತು ಮೋಶೆಯ ಧರ್ಮಶಾಸ್ತ್ರದ ನಿಯಮಗಳನ್ನು ಕೈಕೊಂಡು ನಡೆಯುವ ಮೂಲಕ ನೀತಿವಂತರೆಂಬ ನಿರ್ಣಯವನ್ನು ಪಡೆದುಕೊಳ್ಳುವದಕ್ಕೆ ಅಪೇಕ್ಷಿಸುವ ಘೋರವಾದ, ಖಂಡನಾತ್ಮಕವಾದ ತಪ್ಪು ಬೋಧನೆಯ ವಿರುದ್ಧವಾಗಿ ಒಂದು ತೀವ್ರಾಸಕ್ತಿಯುಳ್ಳ ಪ್ರತ್ಯುತ್ತರವಾಗಿರುತ್ತದೆ. ಈ ಸಂಗತಿಗಳನ್ನು ಗಲಾತ್ಯದವರು ಕೈಕೊಂಡು ನಡೆಯಬೇಕೆಂದು ಯೆಹೂದಿಕರಣಗೊಳಿಸುವವರು ಕಡ್ಡಾಯ ಪಡಿಸುತ್ತಿದ್ದರು. ಪೌಲನು ಹೇಳುವ ಪ್ರಕಾರ, ಅವರ ಸಂದೇಶವು ಸುವಾರ್ತೆಯೇ ಆಗಿರಲಿಲ್ಲ. ಬದಲಾಗಿ, ಅದು ಕ್ರಿಸ್ತನ ಸುವಾರ್ತೆಯ ಒಂದು ವಿಕೃತಿಯಾಗಿತ್ತು (1:6–9).

ಪತ್ರಿಕೆಯ ಆಂತರೀಕ ಪುರಾವೆಯು ಸೂಚಿಸುವದೇನೆಂದರೆ ಪೌಲನು ಮೋಶೆಯ ಧರ್ಮಶಾಸ್ತ್ರದ ನಿರ್ದಿಷ್ಟ ವಿಧಿಗಳ ಕುರಿತು, ವಿಶೇಷವಾಗಿ ಸುನ್ನತಿಯ ಕುರಿತಾಗಿ ಮಾತಾಡುತ್ತಿದ್ದಾನೆ ಎಂಬುದೆ (5:2; 6:13). ಪತ್ರಿಕೆಯಲ್ಲಿ ಈ ಮುಂಚೆ, ಆತನು ತನ್ನ ನಂಬಿಗಸ್ತ ಜೊತೆಗೆಲಸದವನಾದ ತೀತನ ಉದಾಹರಣೆಯನ್ನು ಬಳಸಿದನು. ಈ ಸಹೋದರನು "ಗ್ರೀಕನಾಗಿದ್ದರೂ ಅವನಿಗೆ ಸುನ್ನತಿಯಾಗಬೇಕೆಂದು ಯಾರೂ ಬಲಾತ್ಕಾರ ಮಾಡಲಿಲ್ಲ" (2:3). ಅಲ್ಲದೆ ಪೇತ್ರನು ಸಿರಿಯಾದ ಅಂತಿಯೋಕ್ಯಕ್ಕೆ ಭೇಟಿ ಕೊಟ್ಟಂಥ ಘಟನೆಯನ್ನು ಕುರಿತು ಸಹ ಉಲ್ಲೇಖ ಮಾಡುತ್ತಾನೆ. ಯೆಹೂದಿ ಕ್ರೈಸ್ತರು ಅಲ್ಲಿಗೆ ಬರುತ್ತಿದ್ದಂತೆ, ಆತನು ಅನ್ಯಜನಾಂಗದ ಕ್ರೈಸ್ತರೊಂದಿಗೆ ಊಟ ಮಾಡುತ್ತಿದ್ದ ವೇಳೆ ಅವರಿಂದ ಬೇರ್ಪಡಿಸಿಕೊಂಡನು (2:12). ಈ ಕಪಟತನಕ್ಕಾಗಿ ಪೌಲನು ಆತನನ್ನು ಗದರಿಸಿದನು: "ನೀನು ಯೆಹೂದ್ಯನಾಗಿದ್ದು ಯೆಹೂದ್ಯರಂತೆ ನಡೆಯದೆ ಅನ್ಯಜನರಂತೆ ನಡೆದ ಮೇಲೆ *ಅನ್ಯಜನರಿಗೆ - ನೀವು ಯೆಹೂದ್ಯರ ಪದ್ಧತಿಗಳನ್ನು ಅನುಸರಿಸಬೇಕೆಂದು ನೀನು ಬಲಾತ್ಕಾರ ಮಾಡುವದು ಹೇಗೆ?"* (2:14; ಒತ್ತಿ ಹೇಳಿದ್ದು ನನ್ನದು). ಅಷ್ಟುಮಾತ್ರವಲ್ಲದೆ, ಪೌಲನು "ಆಯಾ ದಿನಗಳನ್ನೂ ಮಾಸಗಳನ್ನೂ ಉತ್ಸವಕಾಲಗಳನ್ನೂ ಸಂವತ್ಸರಗಳನ್ನೂ ನಿಷ್ಠೆಯಿಂದ ಆಚರಿಸುತ್ತೀರಿ" ಎಂಬುದಾಗಿ ಪ್ರಸ್ತಾಪಿಸಿದನು (4:10).

ಹೇಗೂ, ಗಲಾತ್ಯದವರು ನಿಯಮ-ಕೈಕೊಳ್ಳುವದರ ಒಂದು ಜೈವಿಕ ತತ್ವದ ಕುರಿತಾಗಿ ಕಳಕಳಿ ಹೊಂದಿದ್ದರೆಂಬುದನ್ನು ಸೂಚಿಸುವ ಯಾವದೇ ಪುರಾವೆಯು ಕಾಣಿಸಿಕೊಳ್ಳುವದಿಲ್ಲ. ಬೈಬಲಿನ ಪ್ರಕಾರವಾಗಿ ಶಿಕ್ಷಣವಿಲ್ಲದ ಅವರು ಅಂತಹ ಅಸ್ಪಷ್ಟವಾದ ಸಂಗತಿಗಳ ವಿಷಯದಲ್ಲಿ

ಚಿಂತಿಸುವ ಒಲವು ಹೊಂದಿರುವ ಸಾಧ್ಯತೆಯು ಇರಲಿಲ್ಲ. ಇದು ಅನೇಕ ಆಧುನಿಕ ವ್ಯಾಖ್ಯಾನಕಾರರು ಒಂದು ನೇಮನಿಷ್ಠೆಯ, ಪರಲೋಕಕ್ಕೆ-ನಿಮ್ಮ-ಮಾರ್ಗವನ್ನು-ಸಂಪಾದಿಸಿಕೊಳ್ಳಿರಿ (ಒಬ್ಬನ ಸ್ವಂತ ಪರಿಶ್ರಮಗಳ ಶಕ್ತಿಯಿಂದ ನೀತಿಯನ್ನು ಹೊಂದಿಕೊಳ್ಳಲು ಪ್ರಯತ್ನಿಸುವಿಕೆ) ಎಂಬ ಮನೋಭಾವದ ವಿರುದ್ಧ ಹೋಲಿಕೆಯನ್ನು ಮಾಡುವದಾಗಿದೆ.

ಧರ್ಮಶಾಸ್ತ್ರ, ಶಾಸ್ತ್ರಗಳು, ಮತ್ತು ಒಡಂಬಡಿಕೆಗಳ ಕುರಿತಾದ ಉಲ್ಲೇಖಗಳು ಈ ಪತ್ರಿಕೆಯ ಚೌಕಟ್ಟಿನೊಳಗೆ ಹೆಣೆಯಲ್ಪಟ್ಟಿವೆ. ಪೌಲನು ಚರ್ಚಿಸಿದ ಗಲಾತ್ಯದ ಸಭೆಗಳಲ್ಲಿದ್ದಂಥ ಐತಿಹಾಸಿಕ ಪರಿಸ್ಥಿತಿಯು ಸುವಾರ್ತೆಯನ್ನು ಕಲಬೆರಕೆಗೊಂಡದ್ದಾಗುವಂತೆ ಮತ್ತು ಎಂದಿಗೂ ಉದ್ದೇಶಿಸದ ರೀತಿಯಲ್ಲಿ ಅದು ಮಾರ್ಪಡುವಂತೆ ಮಾಡುವ ಹಾಗೆ ಅದಕ್ಕೆ ಬಾಹ್ಯ ಅಂಶಗಳನ್ನು ಮಿಶ್ರಣಗೊಳಿಸಿದ್ದಕ್ಕೆ ಸಂಬಂಧಿಸಿದ್ದಾಗಿತ್ತು. ಎಣ್ಣೆ ಮತ್ತು ನೀರು ಹೇಗೆ ಒಟ್ಟಿಗೆ ಕೂಡಿಸಲ್ಪಡುವದಿಲ್ಲವೋ ಹಾಗೆಯೇ ಸುವಾರ್ತೆ ಮತ್ತು ಧರ್ಮಶಾಸ್ತ್ರಗಳು ಒಂದಾಗಿ ಮಿಶ್ರಣಗೊಳ್ಳಲಾರವು. ದೇವರ ನಿತ್ಯವಾದ ಉದ್ದೇಶದಲ್ಲಿ ಇವುಗಳಿಗೆ ಒಂದೊಂದು ವಿಶಿಷ್ಟವಾದ ಪಾತ್ರವು ಇರುತ್ತದೆ, ಮತ್ತು ಇವರೆಡರ ನಡುವಿನ ವ್ಯತ್ಯಾಸವನ್ನು ನಾವು ಅರ್ಥಮಾಡಿಕೊಳ್ಳುವದು ಆಜ್ಞಾರ್ಥಕವಾಗಿರುತ್ತದೆ. ಧರ್ಮಶಾಸ್ತ್ರವು ಜೀವ ಕೊಡುವ ಮೆಸ್ಸೀಯನ ವಿಷಯದಲ್ಲಿ ಸಾಕ್ಷಿ ಕೊಡುತ್ತದಾದರೂ, ಅದು ಎಂದಿಗೂ ಜೀವವನ್ನು ಕೊಡಲು ಸಾಧ್ಯವಿಲ್ಲ (ಯೋಹಾನ 5:39). ಬಹಳ ತದ್ವಿರುದ್ಧವೆಂದರೆ, ಅದು "ಮರಣವಿಧಿಸುವ ನಿಯಮದ ಸೇವೆಯು" ಮತ್ತು "ಅಪರಾಧನಿರ್ಣಯಕ್ಕೆ ಸಾಧನವಾಗಿರುವ ಸೇವೆಯು" (2 ಕೊರಿಂಥ 3:7, 9). ಇನ್ನೊಂದೆಡೆಯಲ್ಲಿ, ಸುವಾರ್ತೆಯು "ದೇವರಾತ್ಮಸಂಬಂಧವಾದ ಸೇವೆ" ಮತ್ತು "ನೀತಿಗೆ ಸಾಧನವಾಗಿರುವ ಸೇವೆ" ಆಗಿರುತ್ತದೆ (2 ಕೊರಿಂಥ 3:8, 9). ಅದು ಪವಿತ್ರಾತ್ಮ ವರಗಳನ್ನು ಮತ್ತು ಶಕ್ತಿಗಳನ್ನು ತಂದದ್ದು ಮಾತ್ರವೇ ಆಗಿರಲಿಲ್ಲ, ಆದರೆ ಸ್ವತಃ ಪವಿತ್ರಾತ್ಮನು ನಮ್ಮೊಳಗೆ ವಾಸಿಸುವಂತೆ ಅನುಗ್ರಹಿಸಲ್ಪಟ್ಟಿದ್ದನು. ಧರ್ಮಶಾಸ್ತ್ರವು ಅಷ್ಟೊಂದು ಮಹಿಮೆಕರ ಹಾಗೂ ಉತ್ತಮವಾಗಿದ್ದಾಗ್ಯೂ, ಈ ಪರಲೋಕದ ವರವನ್ನು ತಿಳಿಯಪಡಿಸಲು ಎಂದಿಗೂ ಸಾಧ್ಯವಾಗಲಿಲ್ಲ, ಅದು ಇಲ್ಲದೆ ಮಾನವನ ಹೃದಯವು ಪಾಳುಬಿದ್ದದ್ದು, ಫಲವಿಲ್ಲದ್ದು, ಮತ್ತು ದೇವರಲ್ಲಿ ದೊರಕುವ ಜೀವದಿಂದ ವಂಚಿತವಾದದ್ದು ಆಗಿರುವದು (ಗಲಾತ್ಯ 3:2, 3; ನೋಡಿರಿ ಎಫೆಸ 4:18).

## ದೇವರ ವಾಕ್ಯಕ್ಕೆ ವಿಧೇಯರಾಗುವದು (5:2-4)

ಪೌಲನು ಕೊರಿಂಥದ ಸಭೆಯೊಳಗೆ ಜಾರಿಗೆ ತರುವ ಉದ್ದೇಶವುಳ್ಳ ನಿಯಮಗಳ ಒಂದು ಯಥೇಷ್ಟವಾದ ಪಟ್ಟಿಯನ್ನೇ ಮುಂದಿಟ್ಟ ಬಳಿಕ, ಆತನು ಈ ಪ್ರಾಮುಖ್ಯವಾದ ಹೇಳಿಕೆಯನ್ನು ನೀಡಿದನು: "ಯಾವನಾದರೂ ತನ್ನನ್ನು ಪ್ರವಾದಿಯೆಂದಾಗಲಿ ದೇವರಾತ್ಮನಿಂದ ನಡಿಸಲ್ಪಡುವವನೆಂದಾಗಲಿ ಭಾವಿಸಿಕೊಂಡರೆ ನಾನು ನಿಮಗೆ ಬರೆದಿರುವ ಸಂಗತಿಗಳು ಕರ್ತನ ವಿಧಿಯೇ ಎಂದು ಚೆನ್ನಾಗಿ ತಿಳುಕೊಳ್ಳಲಿ" (1 ಕೊರಿಂಥ 14:37). ಅಂಥ ವಾಕ್ಯಭಾಗಗಳನ್ನು ಅನ್ವಯಿಸಿಕೊಳ್ಳುವದರಲ್ಲಿ, ಖಂಡಿತವಾಗಿಯೂ, ಅದರಲ್ಲಿ ಅಡಕವಾಗಿರುವ ಆಳವಾದ ತತ್ವಗಳನ್ನು ಹುಡುಕುವದಕ್ಕಾಗಿ ನಾವು ನಮ್ಮ ಮಾನವ ವಿವೇಚನೆಯನ್ನು ಬಳಸತಕ್ಕದ್ದು. ಹಾಗಿದ್ದರೂ, ದೇವರ ವಾಕ್ಯಕ್ಕೆ ವಿಧೇಯವಾಗಬೇಕಾದ ನಮ್ಮ ಹೊಣೆಗಾರಿಕೆಯ ಯಾವದೇ ಪ್ರಜ್ಞೆಯಿಂದ ನಮ್ಮನ್ನು ಮುಕ್ತಗೊಳಿಸುವ ಒಲವು ಹೊಂದಿರುವಂಥ ಮನಸೆಳೆಯುವ ಪದಗುಚ್ಛಗಳು ಮತ್ತು ಘೋಷವಾಕ್ಯಗಳ ವಿಷಯದಲ್ಲಿ ನಾವು ಜಾಗರೂಕತೆಯಿಂದಿರಬೇಕು. ನಾವು ಶಾಸ್ತ್ರಗಳನ್ನು ಅಸಡ್ಡೆಯ ಮನೋಭಾವವೊಂದರಿಂದ ಓದುವಾಗ, ನಾವು

ಧರ್ಮಶಾಸ್ತ್ರವಿರೋಧಿ (ἀνομία, *anomia*, "ಅಧರ್ಮಸ್ವರೂಪ") ಅಂಚಿನಲ್ಲಿ ನಿಲ್ಲುವವರಾಗುತ್ತೇವೆ.

"ಮನಃಪೂರ್ವಕವಾಗಿ ಅಧೀನರಾದ"ವನಾಗಿ (ರೋಮಾ 6:17), ಕ್ರೈಸ್ತನ ಚಿತ್ತವು ಆ ವಿಧೇಯತೆ ಆತನ ಬಯಕೆಯಾಗಿ ಮಾರ್ಪಡುವಷ್ಟರ ಮಟ್ಟಿಗೆ ಬದಲಾವಣೆಯನ್ನು ಹೊಂದುವದೆಂಬುದು ಹೊಸ ಒಡಂಬಡಿಕೆಯಲ್ಲಿ ಅಂತರ್ಗತವಾಗಿರುವ ಸ್ವಭಾವವಾಗಿದೆ. ಯೇಸುವು ಗೆತ್ಸೇಮನೆ ತೋಟದಲ್ಲಿ, ದೇವರ ಚಿತ್ತಕ್ಕನುಗುಣವಾಗಿ ಆತನು ಅನುಭವಿಸಬೇಕೆಂದು ನೇಮಿಸಲ್ಪಟ್ಟಿದ್ದ ಭಯಂಕರತೆಯ ವಿಷಯವಾಗಿ ಹೋರಾಟ ನಡಿಸಿದನು. ಆತನು ಅಂತಿಮವಾಗಿ ತಂದೆಯ ಚಿತ್ತಕ್ಕೆ ಶರಣಾಗತನಾಗಿ, "ಹೇಗೂ ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ಆಗಲಿ" ಎಂದು ನುಡಿದನು (ಲೂಕ 22:42). ಅದೇ ರೀತಿಯಲ್ಲಿಯೇ, ಕ್ರೈಸ್ತನು ತನ್ನ ಚಿತ್ತದ ಪಾಲಿಗೆ ಮರಣಿಸಬೇಕು ಮತ್ತು ತನ್ನನ್ನು ಸಮರ್ಪಿಸಿಕೊಂಡಿರುವ "ಕಲಿಸಲ್ಪಟ್ಟ ಬೋಧನೆ"ಯನ್ನು - ಅಂದರೆ, ಸುವಾರ್ತೆಯ ತಿರುಳು ಆಗಿರುವಂಥ ಆತ್ಮೀಕ ಮರಣ, ಹೂಣಲ್ಪಡುವಿಕೆ, ಹಾಗೂ ಪುನರುತ್ಥಾನಗಳು (ರೋಮಾ 6:1-6, 17) - ಅನುಭವಿಸತಕ್ಕದ್ದು.

ಈ ವಿಧವಾಗಿ ದೀಕ್ಷಾಸ್ನಾನದಲ್ಲಿ ಬಹಿರಂಗದ, ಗೋಚರವಾದ ವಿಧೇಯತೆಯು ಪಶ್ಚಾತ್ತಾಪ ಪಟ್ಟಿರುವ ವಿಶ್ವಾಸಿಯು ದೇವರ ರಾಜ್ಯದೊಳಗೆ ಪ್ರವೇಶಿಸುವದಕ್ಕೆ ಕಾರಣವಾಗುವ ಏಕೈಕ ಘಟನೆಯಾಗಿರುತ್ತದೆ (3:26, 27; ಯೋಹಾನ 3:5); ಆದರೆ ಅದು ಅದಕ್ಕಿಂತ ಎಷ್ಟೋ ಅಧಿಕ ಸಹ ಆಗಿರುತ್ತದೆ. ಮನಃಪೂರ್ವಕವಾದ ವಿಧೇಯತೆಯ ಮೂಲಕ ತನ್ನ ಜೀವಿತವನ್ನು ಕ್ರಿಸ್ತನಿಗೆ ಒಳಪಡಿಸಿಕೊಳ್ಳುವ ಮೂಲಕ, ಒಬ್ಬನು "ಹೊಸಬನಾಗಿ ನಡೆದುಕೊಳ್ಳುವಂತೆ" (ರೋಮಾ 6:4) ಈ ಮುಳುಗಿಸುವಿಕೆಯಿಂದ (ಅಥವಾ ಹೂಣಲ್ಪಡುವಿಕೆ) ಕ್ರಿಸ್ತನ ಸಂಗಡ ಎಬ್ಬಿಸಲ್ಪಡುತ್ತಾನೆ. ಇನ್ನು ಮೇಲೆ ಆತನು ತನ್ನನ್ನು ಅಧೀನಪಡಿಸಿಕೊಳ್ಳತಕ್ಕ ಒಂದು ಬಾಹ್ಯ ಧರ್ಮಶಾಸ್ತ್ರದ ನಿರ್ಬಂಧಗಳ ಬಗ್ಗೆ ಯೋಚಿಸುವದಿಲ್ಲ. ಬದಲಾಗಿ, ಆತನು ಮನಃಪೂರ್ವಕವಾಗಿ ತನ್ನ ಕರ್ತನಿಗೆ ಅಧೀನಪಡಿಸಿಕೊಳ್ಳುವವನಾಗಿ ಜೀವಿಸುವದಕ್ಕೆ ಹೊಸದಾಗಿ ಹುಟ್ಟಿದವನಾಗಿರುವನು. ಇನ್ನು ಆತನು ವಿಧೇಯನಾಗಬೇಕೆಂಬುದಕ್ಕೆ ಆಂತರಿಕವಾಗಿ ಬಂಡಾಯವೇಳುವದಿಲ್ಲ. ಆತನಿಗೆ ಜನ್ಮಸಿದ್ಧವಾಗಿ ಬಂದಿದ್ದ ಉದ್ದೇಶಪೂರಿತವಾದ ಗರ್ವ ಮತ್ತು ಅವಿಧೇಯತೆಗಳು, ಆತನ ದಂಡನೆಯನ್ನು ತನ್ನ ದೇಹದಲ್ಲಿ ಅನುಭವಿಸಿದಾತನ ಕೃಪೆಯ ಮೂಲಕವಾಗಿ ನಿವಾರಿಸಲ್ಪಟ್ಟು ಆತನು ಶುದ್ಧ ಮಾಡಲ್ಪಟ್ಟಿರುತ್ತಾನೆ. ಆತನು ದೇವರು ತನಗೆ ತೋರಿಸಿದ ಉದಾರ ಹೃದಯದ ಪ್ರೀತಿಗೆ ತನ್ನಿಂದ ಸಾಧ್ಯವಾಗುವಂಥ ಯಾವದೇ ಸೇವೆಯನ್ನು ಮಾಡುವ ಮೂಲಕವಾಗಿ ಪ್ರತಿಕ್ರಿಯಿಸುವದಕ್ಕೆ ಆರಂಭಿಸುವನು. ಈ ಅದ್ಭುತವಾದ ತ್ಯಾಗಮಯ ಪ್ರೀತಿಯನ್ನು ಗ್ರಹಿಸಿಕೊಂಡವನಿಗಾದರೋ, ಕ್ರಿಸ್ತನ ಸೇವೆಯನ್ನು ಮಾಡುವದು ಇನ್ನು ಮೇಲೆ ನಿಯಮಗಳನ್ನು ಕೈಕೊಂಡು ನಡೆಯುವ ವಿಷಯವಾಗಿರುವದೇ ಇಲ್ಲ. ಬದಲಾಗಿ, ಅದು ಸಾರ್ವಭೌಮನಾದ ಮೆಸ್ಸೀಯನಿಗೆ, ಜೀವಸ್ವರೂಪನಾದ ದೇವರ ಮಗನಿಗೆ ಇಚ್ಛಾಪೂರ್ವಕವಾಗಿ ಮೊಣಕಾಲನ್ನೂರುವಿಕೆ ಆಗಿರುತ್ತದೆ. ಆತನು ತನ್ನ ಕರ್ತನು ಮತ್ತು ರಕ್ಷನು ಆಜ್ಞಾಪಿಸಿರುವದನ್ನೆಲ್ಲಾ ಮಾಡುವದಕ್ಕೆ ಬಯಸುತ್ತಾನೆ.[126] ಕರ್ತನಾದ ಯೇಸುವನ್ನು ಅರಿತುಕೊಂಡಿರುವಾತನಿಗೆ, ಈ ಕೃಪಾಭರಿತ ಸಾರ್ವಭೌಮನ ಬಯಕೆಯು ಈಗ ಆತನ (ಮನಸ್ಸುಳ್ಳ ದಾಸನಿಗೆ) ಆಜ್ಞೆಯಾಗುವದು. ಈ ವಿಧವಾದ ಜೀವನವು ರೂಪಾಂತರಗೊಳ್ಳುವಿಕೆಯೇ ಪೌಲನು ಪ್ರಸ್ತಾಪಿಸಿದ ಮತ್ತು ಯಾವದಕ್ಕೆ ತಾನು ಸ್ವತಃ ಸಮರ್ಪಿತನಾಗಿದ್ದನೋ ಈ "ಹೊಸದಾದ ಜೀವಿತ"ವನ್ನು ಆಂತರ್ಯದಲ್ಲಿ ಒಳಗೊಂಡಿರುತ್ತದೆ ಮತ್ತು ಬಾಹ್ಯದಲ್ಲಿ ಅದಕ್ಕೆ ಸಾಕ್ಷಿ ಹೇಳುವದಾಗಿದೆ.

"ನೇಮನಿಷ್ಠೆ" ಕುರಿತು ಮಾತಾಡುವವನು "ನೇಮನಿಷ್ಠೆ" ಎಂದರೆ ಏನೆಂಬುದು ತನಗೆ ತಿಳಿದದೆ ಎಂಬುದನ್ನು ಬಹಳ ಖಚಿತವಾಗಿ ಬಲ್ಲವನಾಗಿರತಕ್ಕದ್ದು. ಈ ಭಾವನೆಯು ಶಾಸ್ತ್ರಗಳಲ್ಲಿ ಉಪಸ್ಥಿತವಾಗಿರುತ್ತದಾದರೂ, ಅದೊಂದು ಬೈಬಲಿನ ಪದವಲ್ಲ. ಬೈಬಲಿನ ವಿದ್ಯಾರ್ಥಿಯು ದೇವರ ವಾಕ್ಯವು ಏನು ಹೇಳುತ್ತದೋ ಅದನ್ನು ಯಥಾಃರೀತಿಯಲ್ಲಿ ಪ್ರತಿನಿಧಿಸುವಂಥ ಭಾಷೆಯನ್ನು ಬಳಸುವದಕ್ಕೆ ಜಾಗರೂಕನಾಗಿರತಕ್ಕದ್ದು.

Everett Fergusonನು "ಕ್ರೈಸ್ತ ಸ್ವಾತಂತ್ರ್ಯ"ವನ್ನು "ನೇಮನಿಷ್ಠೆ (ದೇವರು ನಿರ್ಬಂಧಿಸದೆ ಇರುವದನ್ನು ನಿರ್ಬಂಧಿಸುವದು) ಮತ್ತು ಪರವಾನಿಗೆ (ದೇವರು ನಿರ್ಬಂಧಿಸಿರುವದನ್ನು ಸ್ವತಂತ್ರಗೊಳಿಸುವದು) ನಡುವಿನ ಒಂದು ನಡುನೆಲೆ" ಎಂದು ಅರ್ಥನಿರೂಪಣೆ ಮಾಡಿದನು.[127] ಈ ಭಿನ್ನತೆಯು ಅತ್ಯಂಥ ಪ್ರಾಮುಖ್ಯತೆಯುಳ್ಳದ್ದು. ಇವೆರಡರೊಳಗೆ ಒಂದರಲ್ಲಿ ಅತಿರೇಕವಿದ್ದರೂ ಅದು ಮಾನವ ಸಿದ್ಧಾಂತವೇ ಹೊರತು ಮತ್ತೇನೂ ಆಗಿರುವದಿಲ್ಲ. ಎರಡೂ ಕಡೆಯಲ್ಲಿನ ಅತಿರೇಕಗಳು ದೇವರ ವಾಕ್ಯದ ಕಡೆಗೆ ಮನುಷ್ಯನಿಗಿರುವ ಘನಗಂಭೀರವಾದ ಹೊಣೆಯನ್ನು ನಿರ್ಲಕ್ಷ್ಯಿಸುತ್ತವೆ.

### ಕ್ರಿಸ್ತನಲ್ಲಿ . . . ಮತ್ತು ಆತನ ಸಭೆಯಲ್ಲಿ (5:6)

ಸಕಲ ಆತ್ಮೀಕ ಆಶೀರ್ವಾದಗಳು "ಕ್ರಿಸ್ತನಲ್ಲಿ," ಅಂದರೆ, ಆತನ ದೇಹವಾಗಿರುವ ಸಭೆಯೊಳಗೆ ಸಿಕ್ಕುತ್ತವೆ (ಎಫೆಸ 1:3, 22, 23). ಬಹಳಷ್ಟು ನಮ್ಮ ದಿನದಲ್ಲಿನ "ವಿಶ್ವಾಸಿಗಳು" ಈ ಹೇಳಿಕೆಯ ಮೊದಲ ಭಾಗವನ್ನು ತಕ್ಷಣವೇ ಸ್ವೀಕರಿಸಿಕೊಳ್ಳುವರು, ಸಕಲ ಆತ್ಮೀಕ ಆಶೀರ್ವಾದಗಳು ಕ್ರಿಸ್ತನಲ್ಲಿ ನೆಲೆಸಿರುತ್ತವೆಂಬುದನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತಾರೆ, ಆದಾಗ್ಯೂ ಎರಡನೆಯ ಭಾಗವನ್ನು ಸ್ವೀಕರಿಸಿಕೊಳ್ಳುವದಿಲ್ಲ ಅಥವಾ ಸ್ವೀಕರಿಸಿಕೊಂಡರೂ ಅದನ್ನು ಕಲ್ಪನೆಯಲ್ಲಿ ಮಾತ್ರವೇ ಅಂಗೀಕರಿಸಿಕೊಳ್ಳುತ್ತಾರೆ ಎಂಬುದು ದುಃಖಕರವಾದದ್ದಾಗಿದೆ. ಯೇಸುವನ್ನು ಕರ್ತನೆಂದು ನಂಬುವಂತಹ ಮತ್ತು ಆತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡುವ ಅಧಿಕಾಧಿಕ ಜನರು "ಸಭೆ" ಎಂಬುದನ್ನು ಕೇವಲ ಆ ಶ್ರೇಷ್ಠ, ಆಕೃತಿಯಿಲ್ಲದ ವಿಶ್ವಾಸಿಗಳ ಆತ್ಮೀಕ ಸಮೂಹವೆಂಬ ಅರ್ಥದಲ್ಲಿ ಮಾತ್ರವೇ ಅಂಗೀಕರಿಸಿಕೊಳ್ಳುವರು. ಅವರು ತಮ್ಮನ್ನು ವಿಶ್ವಾಸಿಗಳ ಯಾವದೇ ನಿರ್ದಿಷ್ಟವಾದ, ಗೋಚರವಾದ ಅಥವಾ ಸ್ಥಳೀಯ ಸಭೆಯೊಂದಿಗೆ ಸೇರಿಸಿಕೊಳ್ಳುವ ಯಾವ ಬಯಕೆಯನ್ನೂ ಹೊಂದಿರುವದಿಲ್ಲ. ಅವರು ಅನ್ಯೋನ್ಯತೆಯಲ್ಲಿ, ಪರಸ್ಪರ ಭಕ್ತಿವೃದ್ಧಿಯಲ್ಲಿ, ಉಪದೇಶ, ಶಿಸ್ತು, ಆರಾಧನೆ, ಅಥವಾ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂಬ ಅಗತ್ಯತೆಯನ್ನು ಕಾಣದವರಾಗಿದ್ದಾರೆ.

ಅಂಥ ಕ್ರೈಸ್ತರು, ಬಹುಶಃ ಉದ್ದೇಶಪೂರ್ವಕವಾಗಿ ಅಲ್ಲದಿದ್ದರೂ, ಕೇವಲ ಹೆಸರಿಗೆ ಮಾತ್ರವೇ "ಕ್ರೈಸ್ತರು" ಆಗಿರುತ್ತಾರೆ, ಕರ್ತನ ಸಭೆಯನ್ನು ತಿರಸ್ಕರಿಸುತ್ತಾರೆ. ಕೆಲವರು ತಮ್ಮನ್ನು ಸಮರ್ಥಿಸಿಕೊಳ್ಳುವದಕ್ಕೆ ಪ್ರಯತ್ನಿಸುವವರಾಗಿ, ತಾವು "ಸಂಘಟಿತ ಧರ್ಮ"ವನ್ನು ಮಾತ್ರವೇ ತಿರಸ್ಕರಿಸುವವರಾಗಿದ್ದೇವೆಂದು ಹೇಳುತ್ತಾರೆ, ಆದರೆ ವಾಸ್ತವಿಕದಲ್ಲಿ ಅವರು ಕ್ರಿಸ್ತನು ಸ್ಥಾಪಿಸಬೇಕೆಂಬ ಉದ್ದೇಶವನ್ನು ಹೊಂದಿದ್ದಂಥ ಕ್ರಿಸ್ತನ ದೇಹವನ್ನೇ ತಿರಸ್ಕರಿಸುವವರಾಗಿದ್ದಾರೆ. ದೇವರ ಚಿತ್ತವನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳುವವರಿಗೆ, ಕರ್ತನು ತನ್ನ ಅಪೊಸ್ತಲರಿಗೆ ನೀಡಿದಂಥ "ಶಿಷ್ಯರನ್ನಾಗಿ ಮಾಡಬೇಕು," "ಅವರಿಗೆ ದೀಕ್ಷಾಸ್ನಾನ ಮಾಡಿಸಬೇಕು," ಮತ್ತು ತಾನು ಆಜ್ಞಾಪಿಸಿದ್ದನ್ನೆಲ್ಲಾ "ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ" ಎಂದು ಹೇಳಿದ ಪ್ರಕಾರ ಅವರು ಮಾಡಬೇಕಾಗಿತ್ತೆಂಬುದು ಸ್ಪಷ್ಟವಾಗುತ್ತದೆ (ಮತ್ತಾಯ 28:19, 20). ಇದು ನಿರ್ಣಾಯಕವಾಗಿತ್ತು! ಪೇತ್ರ ಮತ್ತು ಇತರ ಅಪೊಸ್ತಲರು ಸಭೆಯ "ಜನ್ಮದಿನ"ವಾದ,

ಪಂಚಾಶತ್ತಮ ದಿನದಲ್ಲಿ ಮೊದಲ ಸುವಾರ್ತೆಯ ಸಂದೇಶವನ್ನು ಸಾರಿದಾಗ, "ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರುಸಾವಿರ ಜನರು ಅವರಲ್ಲಿ ಸೇರಿದರು" ಇವರು "ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:41, 42).

ಸುವಾರ್ತೆಯು ಸಾರಲ್ಪಟ್ಟು ಮತ್ತು ವಿಧೇಯವಾಗಲ್ಪಟ್ಟ ಆಯಾ ಸ್ಥಳಗಳಲ್ಲಿ ಎದ್ದಂಥ ವಿಶ್ವಾಸಿಗಳ ಸಮುದಾಯಗಳಿಗೆ ಇದೊಂದು ಆರಂಭವಾಗಿತ್ತು, ಮುಂದೆ ಈ ಸಮುದಾಯಗಳು "ಸಭೆಗಳು" (ἐκκλησίαι, *ekklēsiai*) ಎಂದು ಕರೆಯಲ್ಪಟ್ಟವು, ಅದರ ಮೂಲಭೂತ ಅರ್ಥವು "ಜನರ ಕೂಟಗಳು" ಅಥವಾ "ಸಭಿಕರು" ಎಂದಾಗಿದೆ. ಇವುಗಳು ಆರಾಧನೆಗಾಗಿ ಮತ್ತು ತಾವು ಯಾವ ನಂಬಿಕೆಯ ಕುರಿತು ಕಲಿತುಕೊಂಡಿದ್ದರೋ ಆ ನಂಬಿಕೆಯ ಸಾಮಾನ್ಯ ಜೀವಿತವನ್ನು ಆಚರಣೆಯಲ್ಲಿ ತರುವದಕ್ಕಾಗಿ ಒಟ್ಟಾಗಿ ಕೂಡಿ ಬರುತ್ತಿದ್ದ ಸ್ಥಳೀಯ ಗುಂಪುಗಳಾಗಿದ್ದವು. ಒಟ್ಟಾಗಿ ಕೂಡಿ ಬರುವ ಮೂಲಕ, ಅವರು "ಅಪೊಸ್ತಲರ ಬೋಧನೆಗೆ" ಅನುಗುಣವಾಗಿರುವದನ್ನು ಕಲಿಯುತ್ತಲಿದ್ದರು (ಅಪೊಸ್ತಲರ ಕೃತ್ಯಗಳು 2:42; ನೋಡಿರಿ ಮತ್ತಾಯ 28:20).

ಕ್ರಿಸ್ತನಿಗೆ ಮತ್ತು ಆತನ ಬೋಧನೆಗೆ ನಿಷ್ಠೆಯುಳ್ಳ ಇವರನ್ನು ಕರೆಯುವದಕ್ಕೆ ಬಳಸುತ್ತಿದ್ದ ಸಾಮಾನ್ಯವಾಗಿದ್ದ ಬಿರುದುಗಳೊಳಗೆ ಒಂದು "ಶಿಷ್ಯರು" ಎಂಬುದಾಗಿತ್ತು. "ಶಿಷ್ಯ" (μαθητής, *mathētēs*) ಎಂಬ ಪದದ ಅರ್ಥವು "ವಿದ್ಯಾರ್ಥಿ" ಅಥವಾ "ತರಬೇತಿಯಲ್ಲಿರುವವನು" ಎಂದಾಗಿದೆ. ಇದು ಯೇಸುವಿನ ಬೋಧನೆ ಮತ್ತು ಆತನ ಜೀವನ ದಾರಿಯನ್ನು ಕಲಿತುಕೊಳ್ಳಲು ಆತನನ್ನು ಹಿಂಬಾಲಿಸುವವನನ್ನು ಸೂಚಿಸುತ್ತದೆ. ಯೇಸುವಿನ ಪ್ರತಿಯೊಬ್ಬ ಶಿಷ್ಯನು ಒಬ್ಬ ಕ್ರೈಸ್ತನ ಜೀವಿತವನ್ನು ಜೀವಿಸುವದಕ್ಕೆ ಕಲಿತುಕೊಳ್ಳುವವನಾಗಿದ್ದನು ಮತ್ತು ತನ್ನ ಬೋಧಕ ಹಾಗೂ ಒಡೆಯನಾಗಿರುವಾತನಿಗೆ ನಿಷ್ಠೆಯುಳ್ಳವನಾಗಿದ್ದನು. ಆತನ ತರಗತಿ ಕೋಣೆ, ಮಾತ್ರವಲ್ಲದೆ ಪ್ರಯೋಗಶಾಲೆಯು ಸಭೆಯೇ ಆಗಿತ್ತು.

ಪ್ರಥಮ ಶತಮಾನದ ಕ್ರೈಸ್ತರು ಈ ಮಾದರಿಯನ್ನು ಅನುಸರಿಸದೆ ಮತ್ತು ನಿಜವಾದ, ಸ್ಥಳೀಯ ಸಭೆಗಳಿಗೆ ಸೇರಿದವರಾಗದೆ ಇದ್ದಿರುತ್ತಿದ್ದಲ್ಲಿ, ನಮಗೆ ಹೊಸ ಒಡಂಬಡಿಕೆಯ ಪತ್ರಿಕೆಗಳು ಇರುತ್ತಿರಲಿಲ್ಲ. ಇಂದು ನಮ್ಮ ಬಳಿಯಲ್ಲಿರುವಂಥ, ಅವುಗಳನ್ನು ಸ್ವೀಕರಿಸಿದವರ ಹೆಸರಿನಲ್ಲಿ ಪೌಲ ಮತ್ತು ಇತರ ಪ್ರೇರಿತ ಲೇಖಕರು ಬರೆದಿರುವ ಪತ್ರಿಕೆಗಳನ್ನು ಬರೆಯುವದಕ್ಕೆ ಸಾಧ್ಯವೇ ಇರುತ್ತಿರಲಿಲ್ಲ. ಇದರಲ್ಲಿ ನಮ್ಮ ಮುಂದಿರುವ ಈ ವಾಕ್ಯಭಾಗವನ್ನು, ಗಲಾತ್ಯದ ಪ್ರಾಂತ್ಯದಲ್ಲಿದ್ದ ರೋಮಾಪುರದ ಸಭೆಗಳಿಗೆ ಬರೆದ ಪತ್ರಿಕೆಯು ಸೇರಿರುತ್ತದೆ. ಪೌಲನು ಬರೆದ ಇನ್ನೂ ಅನೇಕ ಪತ್ರಿಕೆಗಳ ಹಾಗೆಯೇ, ಈ ಪತ್ರಿಕೆಯು ಕ್ರಿಸ್ತನ ಸುವಾರ್ತೆಯ ಕುರಿತಾದ ಮೂಲಭೂತ ಅಂಶಗಳಿಗಿಂತಲೂ ಅಧಿಕವಾದದ್ದನ್ನು ಒಳಗೊಂಡಿರುತ್ತದೆ. ಇದರೊಳಗೆ ಬುದ್ಧಿವಾದಗಳು, ಎಚ್ಚರಿಕೆಗಳು, ಮತ್ತು ಭಕ್ತಿವೃದ್ಧಿ ಇರುತ್ತವೆ. ಇದೆಲ್ಲವೂ ಅವರ ಖಾಸಗಿ ಮತ್ತು ಸಾರ್ವಜನಿಕ ಎರಡಕ್ಕೂ ಸಂಬಂಧಿಸಿದ, ಹೆಚ್ಚುಕಡಿಮೆ ಅವರ ಜೀವಿತದ ಸಕಲ ಅಂಶಗಳ ವಿಷಯದಲ್ಲಿ ಉಪದೇಶಿಸಲು ಮತ್ತು ನಿರ್ವಹಿಸಲು ರೂಪಿಸಲ್ಪಟ್ಟದ್ದಾಗಿತ್ತು.

ಕೆಲವು ಬೋಧಕರು ಮತ್ತು ಉಪದೇಶಕರು ಇಂದು ದೇವರ ವಾಕ್ಯವನ್ನು ಕಡಿಮೆಯೆಂದು ಎಣಿಸುತ್ತಾರೆ, ಹೊಸ ಒಡಂಬಡಿಕೆಯ ಉದ್ದೇಶವು ಎಂದಿಗೂ ಸರ್ವಕಾಲದಲ್ಲಿನ ಸಕಲ ಕ್ರೈಸ್ತರಿಗೆ ಆಜ್ಞೆಗಳ ಮತ್ತು ಉಪದೇಶದ ಪುಸ್ತಕವಾಗಿರಬೇಕೆಂದು ಇರಲೇ ಇಲ್ಲ ಎಂದು ವಾದಿಸುತ್ತಾರೆ. ಇವುಗಳು ವ್ಯಕ್ತಿಗತ ಸಭೆಗಳಿಗೆ ಬರೆಯಲಾಗಿದ್ದ "ಪ್ರೇಮ ಪತ್ರಗಳು" ಮಾತ್ರವೇ ಆಗಿದ್ದು, ಅವರ ನಿರ್ದಿಷ್ಟವಾದ ಪರಿಸ್ಥಿಗಳ ಬಗ್ಗೆಯಷ್ಟೇ ಚರ್ಚಿಸುತ್ತವೆ ಎಂದು ಸಮರ್ಥಿಸಿಕೊಳ್ಳುತ್ತಾರೆ. ಈ

ಉಪದೇಶಕರ ಪ್ರಕಾರ, ತಾವು ಎಲ್ಲಾ ಯುಗಗಳಲ್ಲಿನ ಕ್ರೈಸ್ತರ ನಡವಳಿಕೆಯ ಮೇಲೆ ಆಳ್ವಿಕೆಯನ್ನು ಮಾಡುವ ಉದ್ದೇಶವುಳ್ಳ ಅಧಿಕಾರಯುತ "ಶಾಸ್ತ್ರವನ್ನು" ಬರೆಯುತ್ತಿದ್ದೇವೆಂಬುದು ಪ್ರೇರಿತ ಲೇಖಕರಿಗೆ ಗೊತ್ತೇ ಇರಲಿಲ್ಲ ಎಂದಾಗಿದೆ.

ಹೊಸ ಒಡಂಬಡಿಕೆಯ ಪತ್ರಿಕೆಗಳು ಅನೇಕ ಸಾರಿ ಕೆಲವೊಂದು ಪರಿಸ್ಥಿತಿಗಳನ್ನು ಬಗೆಹರಿಸುವದಕ್ಕಾಗಿ ನಿರ್ದಿಷ್ಟ ಸಭೆಗಳಿಗೆ ಕಳುಹಿಸಲ್ಪಟ್ಟವಾದರೂ, ಅವುಗಳು ಅಧಿಕಾರಯುಕ್ತವೆಂದು ಪರಿಗಣಿಸಲ್ಪಟ್ಟಿದ್ದವು ಮತ್ತು ಅವುಗಳು ಇತರರಿಗೆ ಹಂಚಿಕೊಳ್ಳಲ್ಪಡಬೇಕು ಎಂಬ ಉದ್ದೇಶ ಹೊಂದಿದ್ದವು ಎಂಬುದು ಸಹ ಸತ್ಯವಾದದ್ದು. ಪೌಲನು ಕೊಲೊಸ್ಸೆಯವರಿಗೆ ಹೀಗೆ ಬರೆದನು, "ನಿಮ್ಮಲ್ಲಿ ಈ ಪತ್ರಿಕೆಯನ್ನು ಓದಿಸಿಕೊಂಡ ತರುವಾಯ ಲವೊದಿಕೀಯದವರ ಸಭೆಯಲ್ಲಿಯೂ ಓದಿಸಿರಿ; ಮತ್ತು ನಾನು ಬರೆದ ಪತ್ರಿಕೆಯನ್ನು ಲವೊದಿಕೀಯದಿಂದ ತರಿಸಿ ನೀವೂ ಓದಿಕೊಳ್ಳಿರಿ" (ಕೊಲೊಸ್ಸೆ 4:16). ಅಷ್ಟುಮಾತ್ರವಲ್ಲದೆ, ಪೇತ್ರನು ಈ ವಿಧವಾಗಿ ಅಭಿಪ್ರಾಯ ಪಡುತ್ತಾನೆ,

> . . . ಇದೇ ಅಭಿಪ್ರಾಯಕ್ಕೆ [ಎರಡನೆಯ ಬರೋಣದ ವಿಷಯವಾಗಿ] ಸರಿಯಾಗಿ ನಮ್ಮ ಪ್ರಿಯ ಸಹೋದರನಾದ ಪೌಲನು ಸಹ ತನಗೆ ಅನುಗ್ರಹಿಸಿರುವ ಜ್ಞಾನದ ಪ್ರಕಾರ ನಿಮಗೆ ಬರೆದನು . . . ವಿದ್ಯಾಹೀನರೂ ಚಪಲಚಿತ್ತರೂ ಹೇಗೆ ನಮಗಿರುವ ಮಿಕ್ಕಾದ ಗ್ರಂಥಗಳಿಗೆ ತಪ್ಪಾದ ಅರ್ಥಮಾಡಿಕೊಂಡಿದ್ದಾರೋ ಹಾಗೆಯೇ ಇವುಗಳಿಗೂ ತಪ್ಪಾದ ಅರ್ಥಮಾಡಿಕೊಂಡು ತಮಗೆ ನಾಶವನ್ನುಂಟುಮಾಡಿಕೊಳ್ಳುತ್ತಾರೆ (2 ಪೇತ್ರ 3:15, 16).

ಈ ವಾಕ್ಯಭಾಗದಲ್ಲಿ ಹಲವಾರು ಮುಖ್ಯವಾಗಿರುವ ಸತ್ಯಗಳು ಕಂಡು ಬರುತ್ತವೆ. (1) ಪೇತ್ರನು ಪೌಲನ ಪತ್ರಿಕೆಗಳನ್ನು ಪ್ರೇರಿತವಾದವುಗಳೆಂದು, ದೈವಿಕ "ಜ್ಞಾನ"ದ ಫಲಿತವಾಗಿದ್ದವು ಎಂದು ನಂಬಿದ್ದನು. (2) ಅಲ್ಲದೆ ಆತನು ಈ ಬರಹಗಳನ್ನು "ಮಿಕ್ಕ ಶಾಸ್ತ್ರಗಳ" ಸಮಾನವಾಗಿ ಎಣಿಸಿದನು. (3) ಪೇತ್ರನು "ಪೊಂತ ಗಲಾತ್ಯ ಕಪ್ಪದೋಕ್ಯ ಆಸ್ಯ ಬಿಥೂನ್ಯ ಎಂಬ ಸೀಮೆಗಳಲ್ಲಿ ಚದರಿರುವಂಥ ಪ್ರವಾಸಿಗಳಾದ ದೇವಜನರಿಗೆ" ಬರೆಯುವ ವೇಳೆ, ಪೌಲನ ಪತ್ರಿಕೆಗಳನ್ನು ಒಂದು ವ್ಯಾಪಕವಾದ ಶ್ರೋತೃಗಳಿಗೆ ಅಧಿಕಾರಯುತವಾದವುಗಳೆಂದು ಎಣಿಸಿದನು (1 ಪೇತ್ರ 1:1; ನೋಡಿರಿ 2 ಪೇತ್ರ 3:1, 2). (4) ಪೇತ್ರನಿಗೆ ತನ್ನ ಪತ್ರಿಕೆಗಳು ಆಸ್ಯ ಸೀಮೆಯ ಬಹಳಷ್ಟು ಪ್ರಾಂತ್ಯದಲ್ಲಿ ಸುತ್ತಾಡುತ್ತಿವೆ ಎಂಬುದು ಗೊತ್ತಿದ್ದು ಮಾತ್ರವೇ ಅಲ್ಲ, ಆದರೆ ಅದೇ ಕ್ಷೇತ್ರಗಳಲ್ಲೆಲ್ಲಾ ಪೌಲನ ಪತ್ರಿಕೆಗಳು ಸಹ ಸುತ್ತಾಡುತ್ತಿದ್ದವೆಂಬದನ್ನು ಸಹ ಪರೋಕ್ಷವಾಗಿ ಸೂಚಿಸುತ್ತಾನೆ. ಸರಳವಾಗಿ ಹೇಳುವದಾದರೆ, ಹೊಸ ಒಡಂಬಡಿಕೆಯ ಪತ್ರಿಕೆಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುತ್ತುವದು ಮತ್ತು ಸಂಗ್ರಹಿಸುವಿಕೆಯು ಒಂದು ಮುಂಚಿತವಾದ ದಿನಾಂಕದಲ್ಲಿ ನಡೆಯುತ್ತಿತ್ತು. (5) ಪೇತ್ರನು ಶಾಸ್ತ್ರಗಳನ್ನು "ಕೆಡಿಸುವಂಥ" ಅಥವಾ "ತಿರುಚುವ" (NKJV) ಜನರಿಗೆ ಕಠಿಣ ಎಚ್ಚರಿಕೆಯನ್ನು ನೀಡುತ್ತಾನೆ, ಯಾಕೆಂದರೆ ಈ ನಡವಳಿಕೆಯು "ನಾಶನಕ್ಕೆ" ನಡಿಸುವದಾಗಿದೆ.

### ಒಡಂಬಡಿಕೆಗಳಲ್ಲಿ ವ್ಯತ್ಯಾಸವನ್ನು ಗುರುತಿಸುವದು (5:7)

ಪೌಲನು ಗಲಾತ್ಯದಲ್ಲಿರುವ ಕ್ರೈಸ್ತರಿಗೆ 5:7ರಲ್ಲಿ ಹೇಳಿದ್ದೇನೆಂದರೆ ಅವರು ಕ್ರಿಸ್ತನ ಸುವಾರ್ತೆಯಲ್ಲಿ ತಮ್ಮ ಆತ್ಮೀಕ ಓಟವನ್ನು "ಚೆನ್ನಾಗಿ ಓಡುತ್ತಾ ಇದ್ದಿರಿ" ಆದರೆ ಯೆಹೂದಿಕರಣಗೊಳಿಸುವ ಜನರಿಂದ "ತಡೆ"ಯಲ್ಪಟ್ಟಿರಿ ಎಂದು ಹೇಳಿದನು. ಆತನು ಈ ಹೊಸದಾಗಿ ಕ್ರೈಸ್ತರಾಗಿದ್ದವರಿಗೆ ಧರ್ಮಶಾಸ್ತ್ರ ಮತ್ತು ಸುವಾರ್ತೆಗಳು ಬೆರೆತುಕೊಳ್ಳುವದಿಲ್ಲ ಎಂದು ಒತ್ತಿ ಹೇಳುವದನ್ನು ಮುಂದುವರೆಸುತ್ತಾನೆ. ಇವೆರಡು ಒಂದಕ್ಕೊಂದು

ಸರಿಹೊಂದುವದಿಲ್ಲ. ಕ್ರೈಸ್ತನು ಒಂದು ಆಯ್ಕೆಯನ್ನು ಮಾಡಿಕೊಳ್ಳಲೇಬೇಕು: ಮೋಶೆಯೋ ಅಥವಾ ಕ್ರಿಸ್ತನೋ, ಸೀನಾಯಿಯೋ ಅಥವಾ ಗೋಲ್ಗಥಾವೋ. ನೀತಿವಂತರೆಂಬ ನಿರ್ಣಯಕ್ಕೆ ಒಂದು ದಾರಿಯಾಗಿ ಒಂದನ್ನು ಮತ್ತೊಂದರೊಂದಿಗೆ ಮಿಶ್ರಣಗೊಳಿಸುವದಕ್ಕೆ ಯಾವದೆ ವಿಧವಾದ ಪ್ರಯತ್ನವನ್ನು ಮಾಡುವದು ಅಸಾಧ್ಯವಾದ ಕೆಲಸವನ್ನು ವಹಿಸಿಕೊಂಡಂತೆ ಆಗಿರುತ್ತದೆ. ನಮ್ಮ ಕಾಲದಲ್ಲಿಯೂ, ದೇವರನ್ನು ಸದುದ್ದೇಶದಿಂದ ಹುಡುಕುವವ ಅನೇಕರಿಗೆ ಸಹ ಈ ಎರಡು ಒಡಂಬಡಿಕೆಗಳ ನಡುವೆ ನಿರ್ಣಾಯಕವಾಗಿರುವ ವ್ಯತ್ಯಾಸವನ್ನು ಗುರುತಿಸಬೇಕೆಂಬುದು ಎಂದಿಗೂ ಕಲಿಸಲ್ಪಟ್ಟಿರುವದಿಲ್ಲ. ದಾಸತ್ವಕ್ಕೊಳಪಡಿಸುವ ಧರ್ಮಶಾಸ್ತ್ರವು ಸೀನಾಯಿ ಪರ್ವತದಲ್ಲಿ ಇಸ್ರಾಯೇಲ್ಯರಿಗೆ ಮೋಶೆಯ ಮುಖಾಂತರ ಕೊಡಲ್ಪಟ್ಟಿತು. ಸುಸ್ಪಷ್ಟವಾದ ವಿರುದ್ಧ ಹೋಲಿಕೆಯಲ್ಲಿ, ವಿಮೋಚಿಸುವಂಥ ಕೃಪೆಯ ಒಡಂಬಡಿಕೆಯು ಗೋಲ್ಗಥಾ ಮೇಲಿನ ಶಿಲುಬೆಯಲ್ಲಿ ಶ್ರಮೆಯನ್ನು ಅನುಭವಿಸುತ್ತಿದ್ದ ಯೇಸುವಿನ ಗಾಯಗಳಿಂದ ಹರಿದು ಬಂದದ್ದಾಗಿದೆ.

ಸದುದ್ದೇಶದ ಆದರೆ ತಪ್ಪಾಗಿ ಅರ್ಥಮಾಡಿಕೊಂಡಿರುವ ಧಾರ್ಮಿಕ ಗುಂಪುಗಳು ತಮ್ಮ ಅನುಯಾಯಿಗಳ ಮೇಲೆ ಮೋಶೆಯ ಧರ್ಮಶಾಸ್ತ್ರದ ಸಿದ್ಧಾಂತಗಳನ್ನು ಕಡ್ಡಾಯ ಮಾಡುತ್ತಲೇ ಇರುತ್ತವೆ. ಉದಾಹರಣೆಗೆ, ಅವರು ತಮ್ಮ ಸದಸ್ಯರ ಆದಾಯದಲ್ಲಿ ನಿಖರವಾಗಿ ಹತ್ತನೆಯ ಭಾಗವನ್ನು (ದಶಮಭಾಗ) ಕೊಡಬೇಕೆಂದು ಕಡ್ಡಾಯಗೊಳಿಸಬಹುದು, ಕೆಲವೊಂದು ಆಹಾರಗಳನ್ನು ತ್ಯಜಿಸಬೇಕೆಂದು ಹೇಳಬಹುದು, ಮತ್ತು ಸಬ್ಬತ್ ದಿನವನ್ನು ಆಚರಿಸಬೇಕೆಂದು ಕಡ್ಡಾಯಗೊಳಿಸಬಹುದಾಗಿದೆ. ಹೇಗೂ, ಅಂಥ ನಿಯಮಗಳಿಗೆ ಹೊಸ ಒಡಂಬಡಿಕೆಯಲ್ಲಿ ಅವಕಾಶವೇ ಇರುವದಿಲ್ಲ; ಅವುಗಳನ್ನು ರದ್ದುಗೊಳಿಸಲಾಗಿರುತ್ತದೆ.[128]

ಒಬ್ಬನು ಬೇರೆಯವರಿಗೆ ಮೋಶೆಯ ಧರ್ಮಶಾಸ್ತ್ರ ಮತ್ತು ಕ್ರಿಸ್ತನ ಸುವಾರ್ತೆ ನಡುವಿನ ವ್ಯತ್ಯಾಸವನ್ನು ಕುರಿತು ಕಲಿಸುವ ಪ್ರಯತ್ನವನ್ನು ಮಾಡುವಾಗ, ಆತನು ಬಗೆಬಗೆಯ ಪ್ರತಿಕ್ರಿಯೆಗಳನ್ನು ಕೇಳಿಸಿಕೊಳ್ಳಬಹುದಾಗಿದೆ. ಕೆಲವರು ಹೀಗೆ ಹೇಳುವರು, "ನಾನು ದೇವರಿಗೆ ನಂಬಿಗಸ್ತನಾಗಿದ್ದೇನೆ, ನಾನು ದಶಾಜ್ಞೆಗಳನ್ನು ಕೈಕೊಂಡು ನಡೆಯುತ್ತೇನೆ." ಈ ಯೋಚನೆಯು ದೋಷವುಳ್ಳದ್ದಾಗಿದೆ ಯಾಕೆಂದರೆ ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಕೈಕೊಂಡು ನಡೆಯುವದಕ್ಕೆ ಯಾವನೂ ಶಕ್ತನಲ್ಲ ಮತ್ತು ಕಾರಣದಿಂದ ತನ್ನ ಸ್ವಕಾರ್ಯಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಡುವದಕ್ಕೆ ಶಕ್ತನಲ್ಲದವನು. ಇನ್ನು ಕೆಲವರು ಹೀಗೆ ಪ್ರತ್ಯುತ್ತರ ನೀಡಬಹುದು, "ಹಳೆಯ ಒಡಂಬಡಿಕೆಯು ಸಹ ದೇವರ ವಾಕ್ಯವಾಗಿದೆ." ಈ ಹೇಳಿಕೆಯು ಸಂಪೂರ್ಣ ಸತ್ಯವೇ ಆಗಿರುತ್ತದೆ. ಹೇಗೂ, ಹಳೆಯ ಒಡಂಬಡಿಕೆಯು ಯಾರನ್ನು ದೇವರು ಐಗುಪ್ತದ ದೇಶದ ದಾಸತ್ವದೊಳಗಿಂದ ಬಿಡಿಸಿದನೋ, ಆ ಹಳೆಯ ಒಡಂಬಡಿಕೆಯ ಜನರಾದ ಇಸ್ರಾಯೇಲ್ಯರಿಗೆ ದೇವರ ವಾಕ್ಯವಾಗಿತ್ತು (ವಿಮೋಚನಕಾಂಡ 19:1-6). ಅದು ಸರ್ವ ಜನಾಂಗಗಳಿಗೆ ಒಡಂಬಡಿಕೆಯಾಗಿ ಎಂದಿಗೂ ಕೊಡಲ್ಪಟ್ಟಿರಲಿಲ್ಲ, ಮತ್ತು ಅದು ಪಾಪಗಳನ್ನು ನಿವಾರಿಸುವದಕ್ಕೆ ಅಶಕ್ತವಾಗಿತ್ತು. ಹೊಸ ಒಡಂಬಡಿಕೆಯು ಸಕಲ ಜನಾಂಗಗಳಿಗೆ ಸಾರತಕ್ಕದ್ದಾಗಿದೆ,[129] ಎಲ್ಲಾ ಜನರಿಗೆ ದೇವರ ಮಗನಾದ ಯೇಸು ಕ್ರಿಸ್ತನ ಮರಣದ ಮೂಲಕವಾಗಿ ಸಿಕ್ಕುವ ರಕ್ಷಣೆಯ ಕುರಿತ ದೇವರ ಶುಭವಾರ್ತೆಯನ್ನು ಕೊಡುವಂತದ್ದಾಗಿದೆ. ಈ ಶುಭವಾರ್ತೆ, "ಸುವಾರ್ತೆ"ಯು, ಇಂದು ನಮ್ಮ ಈಗಿನ ಕಾಲಕ್ಕೆ ದೇವರ ವಾಕ್ಯವಾಗಿದೆ. ಇದೊಂದು "ನಿತ್ಯವಾದ ಸುವಾರ್ತೆ," ಮತ್ತು ಮುಂದೆ ಮತ್ತೊಂದು ಸುವಾರ್ತೆಯು ಎಂದಿಗೂ ಇರಲಾರದು.[130]

ಗಲಾತ್ಯದವರಿಗೆ ಬರೆದ ಪತ್ರಿಕೆಯು ಯೇಸುವಿನ ವಿಮೋಚನಾತ್ಮಕ ಮರಣದಲ್ಲಿ

ವಿಶ್ವಾಸವಿಡುವದೇ ಸರ್ವ-ಸಂತೃಪ್ತಿಕರವಾದದ್ದೆಂಬುದನ್ನು ಗುರುತಿಸುವಂತೆ ಪ್ರತಿಯೊಂದು ಪೀಳಿಗೆಗೆ ಕರೆ ಕೊಡುತ್ತದೆ. ನಾವು "ಒಡೆಯತ್ವ"ವು (ಮತ್ತಾಯ 7:21) ಸೂಚಿಸುವಂತಹ ನಂಬಿಗಸ್ತವಾದ ವಿಧೇಯತೆಯ ಮೂಲಕವಾಗಿ ಆತನಿಗೆ ನಮ್ಮನ್ನು ಅಧೀನಪಡಿಸಿಕೊಳ್ಳಬೇಕು. ಸುವಾರ್ತೆಯನ್ನು ಹೊರತು ಪಡಿಸಿ ಬೇರೆ ಯಾವುದರ ಮೇಲಾದರೂ ಅವಲಂಭಿತರಾಗುವದು ಅವಿಧೇಯತೆಯಾಗುತ್ತದೆ ಮತ್ತು "ಕ್ರಿಸ್ತನಲ್ಲಿ" ದೊರಕುವ ಸಕಲ ಆಶೀರ್ವಾದಗಳಿಂದ ವಂಚಿತಗೊಳಿಸುವದಾಗಿದೆ.

**"ಸತ್ಯ" (5:7)**

ಒಬ್ಬ ವ್ಯಕ್ತಿಯು ಅನೇಕ ಬೇರೆ ಬೇರೆ ಕ್ಷೇತ್ರಗಳಲ್ಲಿನ ಸತ್ಯವನ್ನು ಕುರಿತು ಮಾತಾಡಬಹುದು. ಒಂದು ಉದಾಹರಣೆಯು ಕಾನೂನಿನ ವ್ಯಾಪ್ತಿಯಾಗಿದೆ. ಒಂದು ನ್ಯಾಯಾಲಯದ ಕೋಣೆಯಲ್ಲಿ, ಲಕ್ಷ್ಯವು ವಾಸ್ತವಾಂಶಗಳನ್ನು ರುಜುವಾತು ಪಡಿಸುವದೇ ಆಗಿರುತ್ತದೆ. ವಿಚಾರಣೆಯಲ್ಲಿರುವ ಪ್ರಕರಣದ ಕುರಿತಾಗಿ ಮಾಹಿತಿಯನ್ನು ಒದಗಿಸುವಂತೆ ಸಾಕ್ಷಿಯಾದವನನ್ನು ಕರೆಯಲಾಗುತ್ತದೆ. ಅಮೆರಿಕದ ನ್ಯಾಯಾಲಯದಲ್ಲಾದರೋ, ಆತನು "ಸತ್ಯವನ್ನು, ಪೂರ್ಣ ಸತ್ಯವನ್ನು ಹೇಳುತ್ತೇನೆ, ಮತ್ತು ಸತ್ಯವನ್ನಲ್ಲದೆ ಬೇರೆ ಏನನ್ನೂ ಹೇಳುವದಿಲ್ಲ" ಎಂದು ಮಾತು ಕೊಡುತ್ತಾನೆ. ಆತನು ಮಿಥ್ಯಕ್ಕೆ ವಿರುದ್ಧವಾಗಿ, ತಾನು ಹೇಳಲಿರುವ ಸಾಕ್ಷಿಯು ಸತ್ಯದಿಂದ ಕೂಡಿದ್ದಾಗಿರಲಿದೆ ಎಂಬುದಕ್ಕೆ ಪ್ರಮಾಣ ಮಾಡುತ್ತಾನೆ.

ಯೇಸುವಿನ ಮೇಲೆ ತೀರ್ಪನ್ನು ಘೋಷಿಸುವಂಥ ನೋವುಭರಿತ ಕರ್ತವ್ಯವು ಇದ್ದಂಥ ಪಿಲಾತನು, "ಸತ್ಯವಂದರೇನು?" ಎಂದು ಕೆರಳಿದವನಾಗಿ ಕೇಳಿದನು (ಯೋಹಾನ 18:38). ಯೆಹೂದ್ಯರು ಯೇಸುವನ್ನು ಹೊಟ್ಟೆಕಿಚ್ಚಿನಿಂದಾಗಿ ತನಗೆ ಒಪ್ಪಿಸಿ ಕೊಟ್ಟಿದ್ದಾರೆಂದು ಆತನ ಭಾವಿಸಿಕೊಂಡಿದ್ದನು. ಕರ್ತನ ನಿರಪರಾಧಿಯಾಗಿದ್ದನೆಂದು ಆತನಿಗೆ ಮನವರಿಕೆಯಾಗಿತ್ತು, ಆದರೆ ಈಗಷ್ಟೆ ಯೇಸುವು ಆತನ ಮುಂದೆ ಅರಿಕೆ ಮಾಡಿದ್ದ ಸಂಗತಿಯನ್ನು ಆತನಿಗೆ ನಿರ್ಲಕ್ಷ್ಯಿಸುವದಕ್ಕೆ ಸಾಧ್ಯವಾಗಲಿಲ್ಲ. ಪಿಲಾತನು ಯೇಸುವನ್ನು, "ಹಾಗಾದರೆ ನೀನು ಅರಸನು ಹೌದಲ್ಲವೇ" ಎಂದು ಕೇಳಿದ್ದನು. ಕರ್ತನ ಉತ್ತರವು ಕೂಡಲೆ ಬಂದಿತ್ತು ಮತ್ತು ಅದು ಒತ್ತಿ ಹೇಳಲ್ಪಟ್ಟಿದ್ದಾಗಿತ್ತು: "ನನ್ನನ್ನು ಅರಸನೆಂದು ನೀನೇ ಹೇಳಿದ್ದೀ. ನಾನು ಸತ್ಯದ ವಿಷಯದಲ್ಲಿ ಸಾಕ್ಷಿ ಹೇಳುವದಕ್ಕೋಸ್ಕರ ಹುಟ್ಟಿದವನು, ಅದಕ್ಕೋಸ್ಕರವೇ ಈ ಲೋಕಕ್ಕೆ ಬಂದಿದ್ದೇನೆ . . ." (ಯೋಹಾನ 18:37). ಯೇಸುವು ಕ್ರಿಸ್ತನು ಮೆಸ್ಸೀಯನೆಂಬುದು ಆ ಪ್ರಶ್ನೆಯಲ್ಲಿದ್ದ ಸತ್ಯವಾಗಿತ್ತು.

ಯೇಸುವು ಪಿಲಾತನಿಗೆ ನುಡಿದ ಈ ಹೇಳಿಕೆಯು ಪೌಲನು 1 ತಿಮೊಥೆ 6:13ರಲ್ಲಿ "ಪೊಂತ್ಯ ಪಿಲಾತನ ಕಾಲದಲ್ಲಿ ಶ್ರೇಷ್ಠಪ್ರತಿಜ್ಞೆಯನ್ನು ತಾನೇ ಸಾಕ್ಷಿಯಾಗಿದ್ದು ಸ್ಥಾಪಿಸಿದ ಕ್ರಿಸ್ತ ಯೇಸುವಿನ" ಎಂದು ಉಲ್ಲೇಖಿಸಿದ್ದಕ್ಕೆ ಹಿನ್ನಲೆಯ ಇದೇ ಆಗಿರುವಂತೆ ಕಾಣಿಸುತ್ತದೆ. "ಸತ್ಯ"ವೇ ಕ್ರಿಸ್ತನ ಬಳಿಗೆ ಬರುವ ಪ್ರತಿಯೊಬ್ಬನು ಮಾಡುವಂತೆ ಕರೆಯಲ್ಪಟ್ಟಿರುವ "ಶ್ರೇಷ್ಠಪ್ರತಿಜ್ಞೆ" ಆಗಿರುತ್ತದೆ - ಏನೆಂದರೆ, ಯೇಸುವು ನಿಜವಾಗಿಯೂ ಅರಸನು, ವಾಗ್ದಾನ ಮಾಡಲ್ಪಟ್ಟಿರುವ ಮೆಸ್ಸೀಯನು ಮತ್ತು ಜೀವಸ್ವರೂಪನಾದ ದೇವರ ಮಗನು ಎಂಬುದೆ (ನೋಡಿರಿ ಮತ್ತಾಯ 16:16; ಯೋಹಾನ 11:27; ಅಪೊಸ್ತಲರ ಕೃತ್ಯಗಳು 8:37).

**ಸತ್ಯವನ್ನು ಹುಡುಕಿರಿ (5:11)**

ಇಂದು ಗಲಾತ್ಯದವರಿಗೆ ಬರೆದ ಪತ್ರಿಕೆಯನ್ನು ಓದುವ ಅನೇಕರಿಗೆ, ಸುನ್ನತಿಯ ಶಾರೀರಿಕ ಕ್ರಿಯೆಯಿಂದ ಯಾವ ಪರಿಣಾಮಗಳೂ ಇಲ್ಲವೆಂದು ಕಾಣಿಸಬಹುದು. ಬಿದ್ದು ಹೋಗಿರುವ

ಮಾನವ ಜನಾಂಗವನ್ನು ವಿಮೋಚಿಸುವದಕ್ಕೆ ದೇವರು ಹೊಂದಿರುವ ನಿತ್ಯವಾದ ಉದ್ದೇಶದಲ್ಲಿ, ಈ ಶಾರೀರಿಕ, ಧಾರ್ಮಿಕ ವಿಧಿಯ ಶಸ್ತ್ರಚಿಕಿತ್ಸೆಯು ಒಂದು ಸಣ್ಣ ವಿಚಾರವಷ್ಟೆ. ದೇವರಾದುಕೊಂಡ ಜನರು - ತಮ್ಮ ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನಿಗಾಗಿ ಹಂಬಲದಿಂದ ಹಾತೋರೆಯುತ್ತಿದ್ದವರು (ಲೂಕ 2:25) - ನಮಗೆ ಅಂತಹ ಒಂದು ಅಮುಖ್ಯವಾದ ಶಾರೀರಿಕ ಕ್ರಿಯೆಯನ್ನು ಮಾಡದೆ ಇರುವ ಕಾರಣದಿಂದ ಹೇಗೆ ಅಷ್ಟೊಂದು ಭಯಂಕರವಾಗಿ ಎಡವುವದಕ್ಕೆ ಸಾಧ್ಯವಾಗಿತ್ತು?

ಅವರು ತಮ್ಮ ವಿಶಿಷ್ಟವಾದ ದೃಷ್ಟಿಕೋನದ ನಿಮಿತ್ತವಾಗಿ ಎಡವಿದ್ದರು. ಸುನ್ನತಿಯು ಧರ್ಮಶಾಸ್ತ್ರದಡಿಯಲ್ಲಿ ಒಂದೂವರೆ ಸಹಸ್ರವರ್ಷಗಳ ಕಾಲ ದೇವರ ಆಜ್ಞೆಯಾಗಿತ್ತು (ಯಾಜಕಕಾಂಡ 12:1-3). ಆ ಕಾಲಕ್ಕೆ 430 ವರ್ಷಗಳಷ್ಟು ಮುಂಚೆನಿಂದ ದೇವರು ಅವರ ಗೌರವಾನ್ವಿತ ಮೂಲಪಿತೃವಾದ ಅಬ್ರಹಾಮನ ಸಂಗಡ ಮಾಡಿಕೊಂಡ ಒಡಂಬಡಿಕೆಯ ಗುರುತು ಆಗಿತ್ತು (3:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸ್ಪಷ್ಟವಾಗಿರುವಂತೆ, ಇಸ್ರಾಯೇಲ್ಯರು ಐಗುಪ್ತ ದೇಶದಲ್ಲಿ ದಾಸತ್ವದೊಳಗಿರುವ ವೇಳೆ ಸುನ್ನತಿಯು ಆಚರಿಸಲ್ಪಡುತ್ತಿತ್ತು ಆದರೆ ಅವರು ಅರಣ್ಯದಲ್ಲಿ ಅಲೆದಾಡುತ್ತಿದ್ದ ವೇಳೆ ಆಚರಿಸಲ್ಪಡುತ್ತಿರಲಿಲ್ಲ. ಈ ಕಾರಣಕ್ಕಾಗಿ, ಅರಣ್ಯದಲ್ಲಿ ಜನಿಸಿದ ಪುರುಷರು ಮತ್ತು ಬಾಲಕರಿಗೆ ಯೋರ್ದಾನ್ ನದಿಯನ್ನು ದಾಟಿದ ಬಳಿಕ ಗಿಲ್ಗಾಲಿನಲ್ಲಿ ಸುನ್ನತಿ ಮಾಡಿಸಲಾಯಿತು. ಅವರು ಕಾನಾನ್ ದೇಶವನ್ನು ಜಯಿಸಿಕೊಳ್ಳುವ ಮುಂಚೆ ಈ ಕಾರ್ಯವನ್ನು ಮಾಡಿಸಿಕೊಂಡರು (ಯೆಹೋಶುವ 5:2-9). ಯೆಹೂದ್ಯರಿಗೆ ಸುನ್ನತಿಯು ಹೊಂದಿದ್ದ ಐತಿಹಾಸಿಕ ಮಹತ್ವಪೂರ್ಣತೆಯು ನಮಗೆ ಕನಿಷ್ಠ ಭಾಗಶಃವಾದರೂ ಯೆಹೂದಿ ಕ್ರೈಸ್ತರು ಏಕೆ ಅನ್ಯಜನರ ಮೇಲೆ ಸುನ್ನತಿಯನ್ನು - ತಾವು ಹಾಗೆ ಮಾಡುವದು ತಪ್ಪಾಗಿತ್ತಾದರೂ - ಕಡ್ಡಾಯಗೊಳಿಸುತ್ತಿದ್ದರೆಂಬುದನ್ನು ಅರ್ಥಮಾಡಿಕೊಳ್ಳುವಂತೆ ನಮಗೆ ಸಹಾಯ ಮಾಡುವದು.

ಅವರು ಎದುರುನೋಡಿದ್ದ ಪ್ರಕಾರವಾದ ಮೆಸ್ಸೀಯನಾಗಿ ಯೇಸುವು ಇರಲಿಲ್ಲವಾದ್ದರಿಂದ ಅವರು ಎಡವಿದ್ದರು. ಆತನು ಶ್ರಮೆಯನ್ನನುಭವಿಸುವನು ಎಂಬುದಾಗಿ ಪ್ರವಾದನೆಗಳಿದ್ದಾಗ್ಯೂ (ಕೀರ್ತನೆ 22; ಯೆಶಾಯ 53), ಯೆಹೂದ್ಯರು ಒಬ್ಬ ರಾಜಕೀಯ ಅರಸನನ್ನು ಎದುರು ನೋಡಿದ್ದರು. ಅವರು ಸೈನ್ಯಗಳನ್ನು ಕಟ್ಟಿಕೊಂಡು ಸೇಡು ತೀರಿಸುವ, ರೋಮನ್ ಸರ್ಕಾರದ ನೊಗವನ್ನು ಕಿತ್ತು ಹಾಕುವಂಥ, ಮತ್ತು ಇಸ್ರಾಯೇಲಿನ ನ್ಯಾಯವನ್ನು ಜನಾಂಗಗಳ ಮಧ್ಯದಲ್ಲಿ ಸ್ಥಾಪಿಸುವವನಾಗುವಂಥ ವ್ಯಕ್ತಿಯನ್ನು ಬಯಸಿದ್ದರು. ಯೇಸುವು ಅವರ ನಿರೀಕ್ಷೆಗಳನ್ನು ನೆರವೇರಿಸದೆ ಹೋದಾಗ, ಅವರು ಆತನನ್ನು ಶಿಲುಬೆಗೆ ಹಾಕಿದರು, ದೇವರು ಪೂರ್ವ-ನಿರ್ಧರಿಸಿದ್ದ ಮತ್ತು ವಿಮೋಚನೆಯ ಪ್ರಧಾನ ಕೆಲಸವನ್ನು ಮಾಡುವದಕ್ಕೆ ಸಾಧನಗಳಾದರು (ಅಪೊಸ್ತಲರ ಕೃತ್ಯಗಳು 2:22-24). ಇದು ಯೇಸುವು "ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೊಳಗಾದವನು, ವ್ಯಾಧಿಪೀಡಿತನು" ಆಗುವನು ಎಂದು ಹೇಳಿದ ಶಾಸ್ತ್ರವನ್ನ ನೆರವೇರಿಸಿತ್ತು (ಯೆಶಾಯ 53:3). ಮೊದಲೇ ಗೊತ್ತುಮಾಡಿದ್ದ "ಉಳಿದವರ" ನಡುವಿನ ಕೆಲವರನ್ನು ಹೊರತು ಪಡಿಸಿ (ರೋಮಾ 11:1-5), ಮಿಕ್ಕ ಇಸ್ರಾಯೇಲ್ಯರಿಗೆ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನು "ವಿಘ್ನ" ಆಗಿದ್ದನು.

ಅವರು ಸತ್ಯವನ್ನು ಸ್ವೀಕರಿಸಿಕೊಳ್ಳಲು ತೆರೆದ ಮನಸ್ಸುಳ್ಳವರಾಗಿಲ್ಲದ ಕಾರಣ ಎಡವಿ ಬಿದ್ದರು. ನಾವು ಯಾವದೇ ಒಂದು ಸಿದ್ಧಾಂತ ಅಥವಾ ಸಂಪ್ರದಾಯವನ್ನು "ಅದು ಯಾವಾಗಲೂ ಹೀಗೆಯೇ ಇರುತ್ತದೆ" ಎಂಬುದಕ್ಕಾಗಿ ಮಾತ್ರವೇ ಎಂದಿಗೂ ಅಂಗೀಕರಿಸಿಕೊಳ್ಳಕೂಡದು. ಬದಲಾಗಿ, ನಾವು ನಿರಂತರವಾಗಿ ಸತ್ಯವನ್ನು ಹುಡುಕಬೇಕು. ಇದು ದೇವರ ಕಡೆಗೆ ನಮಗಿರುವ

ನೈತಿಕ ಹೊಣೆಯಾಗಿದೆ.

ರೂಢಿಗಳು ಸುರಕ್ಷತೆಯಿಂದಿರುತ್ತೇವೆಂಬ ಮಿಥ್ಯವಾದ ಭರವಸವನ್ನು ನೀಡಬಹುದಾದ ಕಾರಣ ಅವರು ಎಡವಿ ಬಿದ್ದರು. ಗತಕಾಲದ ಇಸ್ರಾಯೇಲಿನ ಹಾಗೆಯೇ, ನಾವು "ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ" ಎಲ್ಲರಿಗೂ ಸಂಭವಿಸುವಂಥ ಕುರುಡುತನ ಹಾಗೂ ವಂಚನೆಗೆ ಬಲಿಯಾಗಬಹುದಾಗಿದೆ (2 ಥೆಸಲೋನಿಕ 2:10). ಆ ವಾಕ್ಯಭಾಗವು ಮುಖ್ಯವಾಗಿ "ಅನೀತಿಯಲ್ಲಿ ಆನಂದಪಡುವ" ಜನರಿಗೆ ಸಂಬಂಧ ಪಟ್ಟದ್ದಾಗಿದ್ದಾಗ್ಯೂ (2 ಥೆಸಲೋನಿಕ 2:12), ಇದು ಸತ್ಯದ ಕಡೆಗೆ ಅಸಡ್ಡೆತೆಯನ್ನು ಹೊಂದಿರುವದರ ಬಗ್ಗೆ ಪರೋಕ್ಷವಾಗಿ ಸೂಚಿಸುತ್ತದೆ.

## ಸೇವೆ ಮಾಡುವದಕ್ಕೆ ಸ್ವತಂತ್ರಗೊಳಿಸಲ್ಪಟ್ಟವರು (5:13)

ಒಬ್ಬ ಕ್ರೈಸ್ತನ ಬೆಳಕು ಪ್ರೀತಿಯುಳ್ಳ ಸೇವೆಯನ್ನು ದೀನತೆಯಿಂದ ಮಾಡುವದರ ಮೂಲಕವಾಗಿ ಅತ್ಯಂಥ ಪ್ರಕಾಶಮಾನವಾಗಿ ಹೊಳೆಯಬಲ್ಲದು. ದೇವರ ಕೃಪೆಯ ಅದ್ಭುತಗಳ ಕುರಿತಾಗಿ ಕೇವಲ ಮಾತಾಡಿದರೆ ಸಾಕಾಗುವದಿಲ್ಲ. ನಮ್ಮೊಳಗೆ ವಾಸಿಸುವಂತೆ ತನ್ನ ಪವಿತ್ರಾತ್ಮನ ವರವನ್ನು ಕೊಡುವ ಮೂಲಕ, ದೇವರ ಉದ್ದೇಶವು ಆತನ ಕೃಪೆಯು ನಮ್ಮ ಜೀವಿತಗಳಲ್ಲಿ "ದೇವರಾತ್ಮನಿಂದ ಉಂಟಾಗುವ ಫಲ"ದಲ್ಲಿ ತೋರಿ ಬರಲಿ ಎಂದಾಗಿತ್ತು. ನಾವು ಸ್ವತಃ ದೇವರ ಆತ್ಮೀಕ ಸ್ವಭಾವದ ಮಹತ್ವವನ್ನು ಅರಿತುಕೊಂಡಂತೆ ಪವಿತ್ರಾತ್ಮನು ನಮ್ಮ ಮನೋಭಾವಗಳಲ್ಲಿ ಮತ್ತು ಕ್ರಿಯೆಗಳಲ್ಲಿ ತರುವ ರೂಪಾಂತರದಿಂದಾಗಿ ಈ ಫಲವು ಉಂಟಾಗುತ್ತದೆ.

ನಾವು "ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು *ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ* ಉದ್ದೇಶದಿಂದ" ದೇವರು ಶ್ರೇಷ್ಠವಾದ ವಾಗ್ದಾನಗಳನ್ನು ದಯಪಾಲಿಸಿದ್ದಾನೆಂಬುದಾಗಿ ಪೇತ್ರನು ಮಾತಾಡಿದನು (2 ಪೇತ್ರ 1:4; ಒತ್ತಿ ಹೇಳಿದ್ದು ನನ್ನದು). ಈ ಆತ್ಮೀಕ ಪ್ರಕ್ರಿಯೆಯು ಬೇರೊಂದು ಕಡೆಯಲ್ಲಿ ಈ ಮಾತುಗಳಲ್ಲಿ ವಿವರಿಸಲ್ಪಟ್ಟಿದೆ: "ದೇಹದ ಆಶೆಗಳನ್ನು ಪೂರೈಸುವದಕ್ಕಾಗಿ ಚಿಂತಿಸದೆ" ಇರಿ (ರೋಮಾ 13:14). ಒಬ್ಬ ಕ್ರೈಸ್ತನಾಗಿ ಮಾರ್ಪಟ್ಟಿರುವ ಯಾವನಾದರೂ "ಪೂರ್ವಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನಸ್ವಭಾವವನ್ನು ಧರಿಸಿಕೊಂಡಿ[ರಬೇಕು]. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ" (ಕೊಲೊಸ್ಸೆ 3:9, 10).

ದೇವರು ತನ್ನ ಮಗನನ್ನು ಕಳುಹಿಸಿ ಕೊಡುವದರಲ್ಲಿ ಉದ್ದೇಶಿಸಿದ್ದ – ಮತ್ತು ಆತನ ಕೃಪೆಯ ಮೂಲಕ ಸಾಧಿಸಿದ್ದ – ಈ ಅದ್ಭುತವಾದ ಸಂಗತಿಯ ಕುರಿತು ಸ್ಪಷ್ಟತೆಯನ್ನು ಹೊಂದಿದ್ದನು. ನಾವು ಯಾವದನ್ನು ಸ್ವತಃ ಮಾಡುವದಕ್ಕೆ ಅಶಕ್ತರಾಗಿದ್ದೇವೋ ಅದನ್ನು ಸಾಧಿಸುವದಕ್ಕೆ ಯೇಸುವು ನಮಗೋಸ್ಕರ ಮರಣಿಸಿದನು. ಆತನ ಯಜ್ಞದ ಮುಖಾಂತರವಾಗಿ, "ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ ನಮ್ಮಲ್ಲಿ" "ಧರ್ಮಶಾಸ್ತ್ರದ ನಿಯಮ" ನೆರವೇರಿರುತ್ತದೆ (ರೋಮಾ 8:4). ಈ ಆತ್ಮೀಕ ನಡೆಯು ಈಗ ಆತನ ಆತ್ಮನ ವರದ ಮೂಲಕ ಸಾಧ್ಯವಾಗಿಸಲ್ಪಟ್ಟಿರುವದರಿಂದ, ಅದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕು.

ಪವಿತ್ರಾತ್ಮನನ್ನುಸರಿಸಿ ನಡೆಯುವದು ಯಾವಾಗಲೂ ಒಂದು ಹೋರಾಟವಾಗಿರುತ್ತದೆ, ಅದನ್ನು 5:16–26ರಲ್ಲಿ ಪೌಲನು ಸ್ಪಷ್ಟಗೊಳಿಸಿದನು. ನಮ್ಮೊಳಗಿರುವ ದೇವರಾತ್ಮನನ್ನು ತೊಡಗಿಸುವದರ ಮೂಲಕ, ನಾವು "ದೇಹದ ದುರಭ್ಯಾಸಗಳನ್ನು ನಾಶ ಮಾಡುವ" ಪ್ರಯತ್ನದಲ್ಲಿ

ಪ್ರಗತಿಯನ್ನು ಅನುಭವಿಸಬಹುದು (ರೋಮಾ 8:13). ಈಗಾಗಲೇ ನಮಗೆ ಯೇಸುವಿನ ರಕ್ತದ ಮೂಲಕ ಜಯವನ್ನು ಮತ್ತು ತನ್ನ ಪವಿತ್ರಾತ್ಮನ ವರದಾನವನ್ನು ಕೊಟ್ಟು, ಆತನೊಂದಿಗೆ ನಡೆಯುವಂತೆ ನಮ್ಮನ್ನು ಶಕ್ತಗೊಳಿಸಿದ್ದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ.

## ಪವಿತ್ರಾತ್ಮನ ಬರುವಿಕೆ (5:16)

ಹೊಸ ಒಡಂಬಡಿಕೆಯ ದಿನಗಳಲ್ಲಿ ಜೀವಿಸುವದರಲ್ಲಿರುವ ಶ್ರೇಷ್ಠ ಆಶೀರ್ವಾದಗಳಲ್ಲೊಂದು ಎಂದರೆ ದೇವರು ಹಳೆಯ ಒಡಂಬಡಿಕೆಯಲ್ಲಿ ಹೇಗೆ ವಾಗ್ದಾನಗಳನ್ನು ಮಾಡಿದನು ಮತ್ತು ಅವುಗಳನ್ನು ನೆರವೇರಿಸುವ ಮೂಲಕ ತನ್ನ ಮಾತನ್ನು ಕಾಪಾಡಿಕೊಂಡನೆಂಬುದನ್ನು ನೆನಪಿಸಿಕೊಳ್ಳಬಹುದಾಗಿದೆ. ಇವುಗಳಲ್ಲಿ ಸರ್ವೋತ್ಕೃಷ್ಠವಾದದ್ದೆಂದರೆ ಮೆಸ್ಸೀಯನನ್ನು (ತನ್ನ ಮಗನಾದ, ನಜರೇತಿನ ಯೇಸುವನ್ನು) ಕಳುಹಿಸಿ ಕೊಡುವದೇ ಆಗಿತ್ತು, ಆತನ ಧ್ಯೇಯವು ನಾಶನದಲ್ಲಿರುವ ಮನುಷ್ಯನನ್ನು ಕಾಪಾಡಿ ರಕ್ಷಿಸುವದಾಗಿತ್ತು. ಯೇಸುವು ನಮಗೆ ಪರಲೋಕದ ನಿರೀಕ್ಷೆಯನ್ನು ಕೊಡುವದಕ್ಕೆ, ಮಾತ್ರವಲ್ಲದೆ ಈ "ದೇಹಧರ್ಮಕ್ಕೆ ಒಳಗಾದವನೂ ಪಾಪದ ಸ್ವಾಧೀನದಲ್ಲಿರುವದಕ್ಕೆ ಮಾರಲ್ಪಟ್ಟ" (ರೋಮಾ 7:14) ಶರೀರದಲ್ಲಿ ಸಹ ಬದುಕುಳಿಯುವದಕ್ಕೆ ಕಾರ್ಯಸಾಧ್ಯವಾದ ದಾರಿಯನ್ನು ಒದಗಿಸುವದಕ್ಕೆ ಬಂದನು.

ರೋಮಾ 7:24ರಲ್ಲಿ, ಪೌಲನು ವಿಮೋಚಿಸಲ್ಪಡದ ಮನುಷ್ಯನಲ್ಲಿರುವ ಹತಾಶೆಯ ಪ್ರಶ್ನೆಯೊಂದನ್ನು ಮುಂದಿಡುತ್ತಾನೆ: "ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು?" ಸ್ವತಃ ಪೌಲನಿಗಾದರೋ ಇದೊಂದು ಭಾವೋತ್ತೇಜಕ ಪ್ರಶ್ನೆಯಾಗಿತ್ತು; ಆತನಿಗೆ ಉತ್ತರವು ಸಹ ತಿಳಿದಿತ್ತು. ಮುಂದಿನ ವಚನದಲ್ಲಿ, ಆತನು ಹೀಗೆ ಹರ್ಷೋದ್ಗಾರ ಮಾಡುತ್ತಾನೆ, "ಬಿಡಿಸುವವನು ಇದ್ದಾನೆಂಬದಕ್ಕಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ" (ರೊಮಾ 7:25). ದೇವರು ತನ್ನ ಮಗನ ಮರಣ ಹಾಗೂ ಪುನರುತ್ಥಾನದ ಮೂಲಕ ಮತ್ತು ಅದಾದ ಬಳಿಕ ತನ್ನ ಆತ್ಮನನ್ನು ಸುರಿಸುವ ಮೂಲಕವಾಗಿ ಜಯವನ್ನು ತಂದನು. ಆತನು ತನ್ನ ಆತ್ಮನನ್ನು ಸುರಿಸುವೆನೆಂದು ಪ್ರವಾದಿಗಳ[131] ಮೂಲಕವಾಗಿ ವಾಗ್ದಾನ ಮಾಡಿದ್ದನು ಮತ್ತು ಕಾಲವು ಪರಿಪೂರ್ಣವಾದಾಗ ತನ್ನ ವಾಗ್ದಾನವನ್ನು ನೆರವೇರಿಸಿದನು.[132]

ಕ್ರಿಸ್ತನು "ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ . . . ಪ್ರತ್ಯಕ್ಷನಾದನು" ಎಂದು ಯೋಹಾನನು ಘೋಷಿಸಿದನು (1 ಯೋಹಾನ 3:8). ಯೇಸುವಿನ ಧ್ಯೇಯವು ಪಾಪವನ್ನು ಮತ್ತು ಅದರ ಭಯಾನಕ ಪರಿಣಾಮಗಳನ್ನು ಜಯಿಸುವದಾಗಿತ್ತು. ಅದ್ಭುತವಾದ ವಾಗ್ದಾನಗಳ ಮೂಲಕವಾಗಿ, ನಾವು "ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು" ಕೊಟ್ಟನೆಂಬುದಾಗಿ ಪೇತ್ರನು ವಿವರಿಸಿದನು (2 ಪೇತ್ರ 1:4). ಕ್ರಿಸ್ತನ ಶಿಲುಬೆಯ ಮೂಲಕವಾಗಿ ಮತ್ತು ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಮೂಲಕವಾಗಿ, ಸೈತಾನನ ದುಷ್ಟ ಆಡಳಿತದಿಂದ ಉಂಟಾಗುವ ಕೆಡುಕಿನಿಂದ ತಪ್ಪಿಸಿಕೊಳ್ಳಬಲ್ಲೆವು. ಪೌಲನು ಹೀಗೆ ಬರೆದನು, "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ" (ರೋಮಾ 8:18).

## ಮಹಾ ಯುದ್ಧಗಳು (5:17)

ಪೌಲನು ಗಲಾತ್ಯ 5:17ರಲ್ಲಿ ಯಾವುದರ ಕುರಿತು ಮಾತಾಡುತ್ತಿದ್ದನೆಂಬುದನ್ನು ತಿಳಿದುಕೊಳ್ಳೋಣ. ಶರೀರಭಾವ ಮತ್ತು ಆತ್ಮನ ನಡುವಿನ ವಿರೋಧವು, ಈ ಭೂಮಿಯ ಮೇಲೆ

ಇದುವರೆಗೂ ನಡೆದಿರುವ ಅತ್ಯಂಥ ಶ್ರೇಷ್ಠವಾದ, ಅತಿ ಅಪಾಯಕರವಾದ ಯುದ್ಧಕ್ಕಿಂತ ಕಡಿಮೆಯೇನೂ ಆಗಿರುವದಿಲ್ಲ. ಇದರ ಅತ್ಯಂಥ ಘಾತಕತನದ ವಿಷಯವೆಂದರೆ ಈ ಯುದ್ಧವು ನಡೆಯುತ್ತಿದೆ ಎಂಬುದು ಬಹುಪಾಲು ಜನರಿಗೆ ಅರಿವು ಸಹ ಇರುವದಿಲ್ಲ ಎಂಬುದೆ!

ಎರಡನೆಯ ವಿಶ್ವ ಯುದ್ಧದ ನಂತರ, ಅಮೆರಿಕ ಮತ್ತು ಸೋವಿಯತ್ ಯುನಿಯನ್ ಯುದ್ಧದ ಭಯಾನಕ ಅಂಚಿನಲ್ಲಿದ್ದವು (ಅದನ್ನು ಈಗ ನಾವು "ಶೀತಲ ಸಮರ" ಎಂದು ಕರೆಯುತ್ತೇವೆ). ಈ ಎರಡು ಶ್ರೇಷ್ಠ ಅಣುಶಕ್ತಿಯ ದೇಶಗಳು ಸಾಗರದ ಆಚೆ ಮತ್ತು ಈಚೆ ಕಡೆಗಳಿಂದ ಅಧೈರ್ಯದಿಂದ ಒಬ್ಬರನ್ನೊಬ್ಬರು ದುರುಗುಟ್ಟಿಕೊಂಡು ನೋಡುತ್ತಿದ್ದರು. ಎರಡು ದೇಶಗಳು ಯುದ್ಧದ ಫಲಿತವು, ದುರಂತಕರವಾದ ಅಣುಬಾಂಬ್ ಚಾಲನೆ ಮಾಡುವದೊಂದನ್ನು ಬಿಟ್ಟರೆ ಬೇರೆ ಯಾವದಕ್ಕೂ ಒಪ್ಪಿಕೊಳ್ಳಲಿಲ್ಲ, ಅದು "ಪರಸ್ಪರರನ್ನು ನಾಶಮಾಡಿಕೊಂಡಂತೆಯೇ" ಆಗುತ್ತಿತ್ತು. ಆ ಅಣುಬಾಂಬ್ ಪ್ರಯೋಗಿಸಿ ನರಮೇಧವನ್ನು ನಡಿಸುವ ಬೆದರಿಕೆಯು ಈಗ ಮರೆಯಾಗಿದೆ, ಆದರೆ ಹೊಸ ಭಯಗಳು ಉದ್ಭವವಾಗಿರುತ್ತವೆ.

"ಕ್ರೈಸ್ತ" ಎಂದು ಹೆಸರಿರುವ ಯಾವದೇ ಆಗಲಿ ನಮ್ಮ ಜಗತ್ತಿನಲ್ಲಿ ಆಕ್ರಮಣಕ್ಕೆ ತುತ್ತಾಗುತ್ತಿದೆ. ಬಹುಸಾಂಸ್ಕೃತಿಕತೆ, ಜಾತ್ಯತೀತತೆ, ಲಂಗುಲಗಾಮಿಲ್ಲದ ಅನೈತಿಕತೆ, ಮತ್ತು ನಾಸ್ತಿಕವಾದಗಳ ಸಕಲವನ್ನು ನುಂಗಿ ಹಾಕುವ ಅಲೆಯ ಮುಂದೆ ಕ್ರೈಸ್ತತ್ವವು ಕ್ಷೀಣಿಸುತ್ತಿದೆ. ಹಾಗಿದ್ದರೂ, "ಪ್ರಜೆಗೆ ಧರ್ಮವು ಉನ್ನತಿ, ಅಧರ್ಮವು ಅವಮಾನ" ಎಂಬುದು ಈಗಲೂ ಸತ್ಯವಾಗಿಯೇ ಉಳಿದಿರುತ್ತದೆ (ಜ್ಞಾನೋಕ್ತಿ 14:34).

ನಮ್ಮಲ್ಲಿ ಪ್ರತಿಯೊಬ್ಬರು ತೊಡಗಿಸಿಕೊಂಡಿರುವ ಭಯಂಕರ ಯುದ್ಧವು ನಿತ್ಯವಾದ ಪರಿಣಾಮಗಳನ್ನು ಒಳಗೊಂಡಿರುತ್ತದೆ. ಇದು ಶರೀರದಲ್ಲಿ ಮಾನವನು ಮಾಡುವ ಪಯಣದಲ್ಲಿನ ತಾತ್ಕಾಲಿಕ ಸ್ಥಿತಿ ಮತ್ತು ಆತನಿಗೆ ಈ ಯುದ್ಧವನ್ನು ಮಾಡಿ ಬದುಕುಳಿಯಲು ಇರುವ ಒಂದು ಸಾಧ್ಯತೆಯ ನಡುವೆ ಅಂತ್ಯವಿಲ್ಲದೆ ನಡೆಯುವ ವೈಯಕ್ತಿಕ ಹೋರಾಟವಾಗಿರುತ್ತದೆ. ಆತನು ದೇವರ ಉದ್ದೇಶದಲ್ಲಿ, ಮೂಲತಃ ಯಾವದಕ್ಕಾಗಿ ಸೃಷ್ಟಿಸಲ್ಪಟ್ಟನೋ ಆ ನಿತ್ಯವಾದ ಮಂಡಲಗಳೊಳಗೆ ಹದ್ದಿನ ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವದಕ್ಕೆ ಪವಿತ್ರಾತ್ಮನಿಗೆ ಮಾತ್ರವೇ ಸಾಧ್ಯ (2 ಕೊರಿಂಥ 5:4, 5). ಇದು ನಿಜಕ್ಕೂ ಮುಖ್ಯವೇನಿಸುವಂಥ ಯುದ್ಧವಾಗಿದೆ. ನಮ್ಮ ನಿತ್ಯವಾದ ಗಮ್ಯತೆಯು ಸಂಪೂರ್ಣವಾಗಿ ಇದರ ಫಲಿತದ ಮೇಲೆಯೇ ಆಧಾರವಾಗಿರುತ್ತದೆ.

**ಆತ್ಮೀಕ ರೂಪಾಂತರ (5:17)**

ನಾವು ಆದಾಮ ಮತ್ತು ಹವ್ವಳ ಸ್ಥಾನದಲ್ಲಿದ್ದಿದ್ದರೆ ನಮ್ಮಲ್ಲಿ ಯಾರು ವ್ಯತ್ಯಾಸವಾಗಿ ನಡೆದುಕೊಂಡಿರುತ್ತಿದ್ದೆವು? ಅವರು ಏಕೆ ಅಷ್ಟೊಂದು ಸುಲಭವಾಗಿ ವಂಚಿಸಲ್ಪಟ್ಟರೆಂಬುದನ್ನು, ವಿಶೇಷವಾಗಿ ಅವರು ಇನ್ನೂ ಪಾಪದ ಅನುಭವವಿಲ್ಲದವರಾಗಿದ್ದರಿಂದ ಹೇಗೆ ವಂಚನೆಗೊಳಗಾದರೆಂಬುದನ್ನು ಅರ್ಥಮಾಡಿಕೊಳ್ಳುವದು ಕಷ್ಟಕರವಾಗಿರುತ್ತದೆ.

ಪವಿತ್ರಾತ್ಮನ ವರದಾನದಿಂದ ಆಶೀರ್ವಾದಿಸಲ್ಪಟ್ಟಿರುವದು ಮಾತ್ರವೇ ಅಲ್ಲ ಆದರೆ ಪ್ರೇರಿತ ಶಾಸ್ತ್ರಗಳಲ್ಲಿ ನಮಗೆ ತಿಳುವಳಿಕೆಯು ಲಭ್ಯವಿರುವದರಿಂದ ನಮ್ಮಿಂದ ಹೆಚ್ಚಿನದನ್ನು ನಿರೀಕ್ಷಿಸಲಾಗುತ್ತದೆ. ಲೌಕಿಕತೆಯ ವಿರುದ್ಧ ಪವಿತ್ರಾತ್ಮನು ನೀಡುವ ಎಚ್ಚರಿಕೆಗಳನ್ನು ನಾವು ಅಸಡ್ಡೆ ಮಾಡುವದಾದರೆ ಎಷ್ಟೋ ಹೆಚ್ಚು ಕಠಿಣವಾದ ತೀರ್ಪು ನಮಗಾಗುವದಿಲ್ಲವೋ? ಸಂಸ್ಕೃತಿಯು ಹೆಚ್ಚೆಚ್ಚು ಜಾತ್ಯತೀತವಾಗುತ್ತಾ ಹೋದಂತೆ, ನಾವು ಅದಕ್ಕೊಳಗಾಗುವ ಪ್ರಲೋಭನೆಯನ್ನು ವಿರೋಧಿಸಬೇಕು (ರೋಮಾ 12:1, 2). ಲೋಕವು ಕ್ಷಣಿಕವಾದದ್ದು ಆದರೆ ಪರಲೋಕವು ನಿತ್ಯವಾದದ್ದೆಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು (2 ಕೊರಿಂಥ 4:16-18).

## ನಮ್ಮ ಇಚ್ಛೆಗಳು (5:17)

ನಮ್ಮ ನಿಜವಾದ ಹೃದಯಗಳು *ನಾವು ಮಾಡುವ ಕಾರ್ಯದಿಂದಲ್ಲ* ಆದರೆ *ನಾವು ನಿಜಕ್ಕೂ ಏನು ಮಾಡಬೇಕೆಂದು ಇಚ್ಛಿಸುತ್ತೇವೆ* - ಆ ಇಚ್ಛೆಯನ್ನು ಕಾರ್ಯರೂಪಕ್ಕೆ ತರಲು ನಮಗೆ ಮನಸ್ಸಿನ ಅಥವಾ ದೇಹದ ಬಲವು ಇಲ್ಲವಾದಾಗ್ಯೂ - ಎಂಬುದರ ಮೂಲಕವೇ ಬಯಲುಗೊಳಿಸಲ್ಪಡುತ್ತವೆ. ಒಬ್ಬ ವ್ಯಕ್ತಿಯು ವಿಧೇಯತೆಯ ಕ್ರಿಯೆಗಳನ್ನು ನಡಿಸಬಹುದು ಆದರೆ ಅದನ್ನು ಪ್ರತಿ ನಿಮಿಷವೂ ದ್ವೇಷಿಸುತ್ತಿರಬಹುದಾಗಿದೆ. ಅದೇ ರೀತಿಯಲ್ಲಿಯೇ, ಒಬ್ಬ ವ್ಯಕ್ತಿಯು ತಾನು ಅಸಮರ್ಥನಾಗಿದ್ದರೂ ತನ್ನ ಕರ್ತನಿಗೋಸ್ಕರ ಉದಾತ್ತವಾದ, ಪ್ರೀತಿಯ ಸೇವೆಯನ್ನು ಮಾಡುವದಕ್ಕೆ (ಕಣ್ಣೀರಿನಿಂದ ಸಹ) ಹಂಬಲಿಸಬಹುದಾಗಿದೆ.

## "ನೀವು ಧರ್ಮಶಾಸ್ತ್ರಾಧೀನರಲ್ಲ" (5:18)

ಪೌಲನು ಕ್ರಿಸ್ತನ ದೈಹಿಕ ಪುನರುತ್ಥಾನದ ಅಂತಿಮ ಜಯವನ್ನು ಎದುರುನೋಡುವವನಾಗಿ, ಕೊರಿಂಥದವರಿಗೆ ಹೀಗೆ ಬರೆಯುತ್ತಾನೆ,

> . . . ಬರೆದಿರುವ ಮಾತು ನೆರವೇರುವದು. ಆ ಮಾತು ಏನಂದರೆ - ಮರಣವು ನುಂಗಿಯೇ ಹೋಯಿತು, ಜಯವಾಯಿತು ಎಂಬದೇ. ಮರಣವೇ, ನಿನ್ನ ಜಯವೆಲ್ಲಿ? ಮರಣವೇ, ನಿನ್ನ ವಿಷದ ಕೊಂಡಿ ಎಲ್ಲಿ? ಮರಣದ ಕೊಂಡಿ ಪಾಪವೇ; ಮತ್ತು ಪಾಪದ ಬಲಕ್ಕೆ ಆಧಾರವು ಧರ್ಮಶಾಸ್ತ್ರವೇ. ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ (1 ಕೊರಿಂಥ 15:54-57).

ಪಾಪ ಮತ್ತು ಮರಣಗಳ ಮೇಲಿನ ಅಂತಿಮವಾದ ಜಯವು ಸಂಪೂರ್ಣವಾಗಿ ದೇವರ ಉದಾತ್ತವಾದ ಕೃಪೆಯಿಂದಾದ ವರದಾನವೇ ಆಗಿದೆ.

ದೇವರು ಅನೇಕರು ಹೇಗೆ ಆತನನ್ನು ಸಮೀಪಿಸುವರು ಎಂಬ ಒಂದು ಅತಿ ದೊಡ್ಡ ಅಮೂಲಾಗ್ರ ತತ್ವದಲ್ಲಿ ತನ್ನ ಕೃಪೆಯನ್ನು ಲಭ್ಯಗೊಳಿಸಿರುತ್ತಾನೆ. ದೇವರ ಮುಂದೆ ಆತನ ಹಿಂದಿನ ಧರ್ಮಶಾಸ್ತ್ರಕ್ಕೆ ದೋಷವಿಲ್ಲದೆ ವಿಧೇಯರಾಗುವದರ ಮೂಲಕ "ನೀತಿವಂತಿಕೆ"ಯನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸುವ ತತ್ವವು ಈಗ ಬದಲಾಯಿಸಲ್ಪಟ್ಟಿದೆ. ಬದಲಾಗಿ, ಈಗ ನಾವು ತನ್ನ ಪ್ರೀತಿಯ ಹಾಗೂ ಪಾಪರಹಿತ ಮಗನನ್ನು ನಮ್ಮ ಬದಲಾಗಿ ಮರಣಿಸುವದಕ್ಕೆ ಒಪ್ಪಿಸುವ ದೇವರ ಸಾರ್ವಭೌಮ ತೀರ್ಮಾನವನ್ನು ನಂಬಿಕೆಯ ಮೂಲಕವಾಗಿ ಅಂಗೀಕರಿಸಿಕೊಳ್ಳುತ್ತೇವೆ. ಆತನ ನೀತಿಯ ಮೂಲಕವಾಗಿ, ದೇವರ ದೃಷ್ಟಿಯಲ್ಲಿ ನಾವು ನೀತಿವಂತರೆಂದು ಎಣಿಸಲ್ಪಡಬಲ್ಲೆವು. ಈ ನೀತಿಯು ಆತನ ಕೃಪೆಯ ಹೊಸ ಒಡಂಬಡಿಕೆಗೆ ಅನುಗುಣವಾಗಿರುತ್ತದೆ, ಇದು ನೂರಾರು ವರ್ಷಗಳ ಮುಂಚೆ ಯೆರೆಮೀಯನ ಮುಖಾಂತರ ವಾಗ್ದಾನ ಮಾಡಲ್ಪಟ್ಟಿತ್ತು (ಯೆರೆಮೀಯ 31:31-34) ಮತ್ತು ಶಿಲುಬೆಯ ಮೇಲೆ ಯೇಸುವಿನ ರಕ್ತವು ಸುರಿಸಲ್ಪಡುವದರಲ್ಲಿ ಜಾರಿಗೆ ತರಲ್ಪಟ್ಟಿತು (ಲೂಕ 22:20; ಇಬ್ರಿಯ 9:11-15).

ಧರ್ಮಶಾಸ್ತ್ರದ ಸ್ವಭಾವದ ಪ್ರಕಾರವಾಗಿ, ಒಬ್ಬ ಮನುಷ್ಯನು ದೇವರ ಒಂದು ಕಟ್ಟಳೆಗೆ ಅವಿಧೇಯನಾಗುವದಾದರೆ, - ಆತನು ಮಿಕ್ಕ ಎಲ್ಲಾ ಕಟ್ಟಳೆಗಳಿಗೆ ವಿಧೇಯನಾಗಿದ್ದರೂ - ಆತನು ಒಬ್ಬ ಅಪರಾಧಿಯಾಗುತ್ತಾನೆ. ಒಬ್ಬ ಕಟ್ಟಳೆಯನ್ನು ಉಲ್ಲಂಘಿಸಿದವನಾಗಿ, ಆತನು ಚರ್ಚೆಯಲ್ಲಿರುವ ಕಾನೂನು ವ್ಯವಸ್ಥೆಯಲ್ಲಿ ವಿಧಿಸಲಾಗಿರುವ ಸಮರ್ಪಕವಾದ ದಂಡನೆಗೆ ಗುರಿಯಾಗುವನು. ಯಾಕೋಬನು ಹೇಳಿದ ರೀತಿಯಲ್ಲಿ, "ಯಾಕಂದರೆ ಯಾವನಾದರೂ [ಮೋಶೆಯ] ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ" (ಯಾಕೋಬ 2:10).[133]

ನ್ಯಾಯಾಲಯದಲ್ಲಿ, ನಿರಪರಾಧಿತ್ವದ ಅಥವಾ ಅಪರಾಧಿತ್ವದ ಪ್ರಶ್ನೆಯು ನಡುವಿದ್ದಾಗಲಿ, ಅದು ದುರ್ವರ್ತನೆಯೋ ಅಥವಾ ಮರಣದಂಡನೆಗೆ ಅರ್ಹವಾದ ಅಪರಾಧವೋ ಎಂಬದಾಗಿರುವದಿಲ್ಲ. ಎಲ್ಲವನ್ನು ಕೇಳಿಸಿಕೊಂಡ ಬಳಿಕ, ನ್ಯಾಯಮಂಡಲಿಯ ಮುಂದೆ "ಪ್ರತಿವಾದಿಯ ವಿಷಯದಲ್ಲಿ ನೀವು ಏನು ಕಂಡುಕೊಂಡಿರುವಿರಿ?" ಎಂಬ ಪ್ರಶ್ನೆಯು ಇಡಲ್ಪಡುತ್ತದೆ. ಉತ್ತರವು ಒಂದು "ನಿರಪರಾಧಿ" ಎಂದಿರುತ್ತದೆ ಅಥವಾ "ಅಪರಾಧಿ" ಎಂದಿರುತ್ತದಷ್ಟೆ.

ಧರ್ಮಶಾಸ್ತ್ರದ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಳ್ಳುವದಾದರೆ, "ನೇಮನಿಷ್ಠೆಗಳನ್ನು ಆಧಾರಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ." ಸ್ವತಃ ಧರ್ಮಶಾಸ್ತ್ರವು ಸಂಪೂರ್ಣ ವಿಧೇಯತೆಯನ್ನು ಕೇಳುವದಾಗಿದೆ: "ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಕೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆದದೆ" (3:10; ನೋಡಿರಿ ಧರ್ಮೋಪದೇಶಕಾಂಡ 27:26). ಒಬ್ಬನೇ ಒಬ್ಬ ವ್ಯಕ್ತಿಯು ಸಹ (ಸ್ವತಃ ಯೇಸುವನ್ನು ಹೊರತು ಪಡಿಸಿದರೆ) ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆಯಲು ಶಕ್ತನಾಗಲಿಲ್ಲ.

ಶಾಸ್ತ್ರಗಳಲ್ಲಿ ಎರಡು ಒಡಂಬಡಿಕೆಗಳ ಪರಿಚಿತಿಯುಳ್ಳವನಿಗೆ ಧರ್ಮಶಾಸ್ತ್ರ ಪಾಠವು ಸ್ಪಷ್ಟವಾಗಿರತಕ್ಕದ್ದು. ಹಳೆಯ ಒಡಂಬಡಿಕೆಯ ಮೂಲಕವಾಗಿ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಪ್ರಯತ್ನಿಸುವದೆಂದರೆ ನೀವೇ-ಸ್ವತಃ ಮಾಡಿರಿ ಎಂಬ ಸಂಪೂರ್ಣ ನಿರೀಕ್ಷೆರಹಿತ ಕೆಲಸವಾಗಿರುತ್ತದೆ; ಧರ್ಮಶಾಸ್ತ್ರವನ್ನು ದೋಷವಿಲ್ಲದೆ ಕೈಗೊಂಡು ನಡೆಯುವ ಮೂಲಕವಾಗಿ ರಕ್ಷಣೆ ಹೊಂದುವದಕ್ಕೆ ಯಾವ ವ್ಯಕ್ತಿಗೂ ಸಾಧ್ಯವಿಲ್ಲ. ಯೇಸುವಿನಲ್ಲಿ ನಂಬಿಕೆಯಿಡುವ ಮೂಲಕವಾಗಿ ದೊರಕುವ ಕೃಪೆಯ ಒಡಂಬಡಿಕೆಯು ವ್ಯತ್ಯಾಸವಾದದ್ದು. ಯಾವದೇ ಯಥಾರ್ಥವಾದ ವಿಶ್ವಾಸಿಯು ರಕ್ಷಣೆ, ನೀತಿವಂತನೆಂಬ ನಿರ್ಣಯ, ಮತ್ತು ವಿಮೋಚನೆಯನ್ನು ದೇವರಿಂದ ಉಚಿತ ವರದಾನವಾಗಿ ಪಡೆದುಕೊಳ್ಳಬಲ್ಲನು. ಈ ಯುಗವು "ಪ್ರಧಾನದೂತನ ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ" ತನ್ನ ಅಂತಿಮವಾದ ಸಮಾರೋಪಕ್ಕೊಳಗಾಗುವ ವೇಳೆ ಪ್ರಭಾವದಲ್ಲಿ ಮನುಷ್ಯನು ಪಾಲ್ಗೊಳ್ಳುವದಕ್ಕೆ ಏಕೈಕ ದಾರಿಯು ಕ್ರಿಯೆಗಳಲ್ಲ, ಆದರೆ ನಂಬಿಕೆಯೇ ಆಗಿರುತ್ತದೆ (1 ಥೆಸಲೋನಿಕ 4:16, 17).

ಜನರನ್ನು ಕ್ರಿಸ್ತನ ಬಳಿಗೆ ನಡಿಸುವಂಥ ಕೇವಲ ಪೂರ್ವಸಿದ್ಧತೆಯ ಹಾಗೂ ತಾತ್ಕಾಲಿಕ ದಾರಿಯಾಗಿದ್ದ, ಆದರೆ ಎಂದಿಗೂ ರಕ್ಷಣೆಯ ಮಾರ್ಗವಾಗಿರಬೇಕೆಂದು ಉದ್ದೇಶಿಸಿಯೇ ಇಲ್ಲದಂಥ ಒಡಂಬಡಿಕೆಯೊಂದರ ವಿಧಿಗಳಿಗೆ ಒಬ್ಬ ವ್ಯಕ್ತಿಯು ಏಕೆ ಅಂಟಿಕೊಂಡಿರುವನು? ಕಾವಲುಗಾರನ ಪರ್ವವು ಮುಗಿದು ಹೋಗಿರುತ್ತದೆ (3:23-25). ಮೆಸ್ಸೀಯನ ಆಳ್ವಿಕೆಯ ಪ್ರಕಾಶಮಾನ ಮುಂಜಾನೆಯು ಉದಯಿಸಿರುತ್ತದೆ - ಅದು "ಧರ್ಮಪ್ರಮಾಣಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವ" ದಿನವಾಗಿರುತ್ತದೆ (ರೋಮಾ 3:28).[134]

### "ಬಂಡುತನ" (5:19)

ಗಲಾತ್ಯ 5:19ರಲ್ಲಿ "ಬಂಡುತನ" ಎಂಬ ಪದವು ಇಂದು ಮಾಧ್ಯಮಗಳಿಂದ "ಮನೋರಂಜನೆ" ಎಂಬುದಾಗಿ ಪ್ರಸಾರ ಮಾಡಲ್ಪಡುವ ಲೈಂಗಿಕತೆಯ ಸಕಲ ಅನಾಚಾರಗಳನ್ನು ಮತ್ತು ಅಶ್ಲೀಲತೆಗಳನ್ನು ಒಳಗೊಂಡಿರುತ್ತದೆ. ಯೇಸುವು ಹೀಗೆ ಹೇಳಿದನು, "ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು" (ಮತ್ತಾಯ 5:28). ಪವಿತ್ರಾತ್ಮನನ್ನು ಅನುಸರಿಸಿ

ನಡೆಯುವದಕ್ಕೆ ಬಯಸುವವರಿಗೆ, ಅಂಥ "ಮನೋರಂಜನೆ" ಬಗ್ಗೆ ಯೋಚಿಸುವ ಅವಕಾಶವನ್ನು ಯೇಸುವಿನ ಮಾತುಗಳು ತೆಗೆದು ಹಾಕುತ್ತವೆ.

ಕೆಲವು ಮನೋಶಾಸ್ತ್ರಜ್ಞರು ಮತ್ತು ಇತರ "ಅಧಿಕಾರಿಗಳು" ಕಾಮಪ್ರಚೋದಕ ಸಾಮಗ್ರಿಗಳು[135] ಮತ್ತು ಕಾಮ ಸಂಬಂಧಿತ ಅಪರಾಧಗಳ ನಡುವೆ ಯಾವದೇ ಸಂಬಂಧವಿಲ್ಲ ಎಂದು ಹೇಳಬಹುದಾದರೂ, ಅವುಗಳ ನಡುವಿನ ಸಂಬಂಧವನ್ನು ಪುರಾವೆಯು ನಿರಂತರವಾಗಿ ಸಾಭಿತುಗೊಳಿಸುತ್ತಲೇ ಇದೆ. ಕಾಮಪ್ರಚೋದಕ ಸಿನಿಮಾಗಳು ಒಂದು ದೊಡ್ಡ ವ್ಯಸನವಾಗಿರುತ್ತದೆಂದು ಸಾಭಿತಾಗಿರುತ್ತದೆ. ಅಂತಹ ಮನಸ್ಸಿನ-ಮಲೀನತೆಯು ಲಜ್ಜೆಗೆಟ್ಟ ವ್ಯಾಪಾರಿಗಳಿಂದಾಗಿ ಉತ್ತೇಜಿಸಲ್ಪಡುವದಾಗಿದ್ದು ಅವರ ವ್ಯಾಪಾರವು ಕೋಟ್ಯಾಂತರ ರೂಪಾಯಿಗಳಾಗಿ ಬೆಳೆದಿರುತ್ತದೆ, ಪ್ರತಿ ವರ್ಷವೂ ಎಷ್ಟೋ ಕೋಟಿಗಳನ್ನು ಸಂಪಾದಿಸಿಕೊಳ್ಳುತ್ತಾರೆ. ಮನುಷ್ಯನಲ್ಲಿರುವ ಅತ್ಯಂಥ ಮೂಲಭೂತವಾದ ಸಹಜ ಪ್ರಕೃತಿಗಳಲ್ಲೊಂದನ್ನು ಆಕರ್ಷಿಸುವದಾಗಿದ್ದು, ಅದು ಚಿಕ್ಕವರು ಮತ್ತು ದೊಡ್ಡವರ ನೈತಿಕ ಸ್ವಭಾವವನ್ನು ಕೆಡಿಸುತ್ತದೆ, ಅವರನ್ನು ಊಹಿಸಿಕೊಳ್ಳಬಹುದಾದ ಎಲ್ಲಾ ಅಡ್ಡದಾರಿಗಳನ್ನು ಮತ್ತು ವಿಕೃತಿಗಳನ್ನು ಹಿಡಿಯುವಂತೆ ಪ್ರಚೋದಿಸುವದಾಗಿದೆ. ಈ ರೀತಿಯ ನಡತೆಯು ಅಶ್ಲೀಲ ಚಿತ್ರಗಳನ್ನು ನೋಡುವದರಲ್ಲಷ್ಟೆ ನಿಂತು ಹೋದಾಗ್ಯೂ - ಅದು ಸಾಮಾನ್ಯವಾಗಿ ಅಷ್ಟರಲ್ಲಿ ನಿಲ್ಲುವದಿಲ್ಲ - "ಬಂಡುತನ" ಎಂಬ ಪದವು ಈಗಿನ ಸಾಂಕ್ರಾಮಿಕ ಪಿಡುಗನ್ನು ಸ್ಪಷ್ಟವಾಗಿ ಖಂಡಿಸುತ್ತದೆಂಬುದನ್ನು ಗಂಭೀರವಾಗಿರುವ ಯಾವ ಕ್ರೈಸ್ತನೂ ನಿರಾಕರಿಸುವದಕ್ಕೆ ಸಾಧ್ಯವಿಲ್ಲ.

ಚಿತ್ರಗಳು ಸಿನಿಮಾದಲ್ಲಿ ತೋರಿಸಲ್ಪಡಲಿ, ಟಿವಿಯ ಪರದೆಯಲ್ಲಿ, ಕಂಪ್ಯೂಟರ್ ಪರದೆಯಲ್ಲಿ, ಅಥವಾ ಮುದ್ರಿತ ಪುಟದಲ್ಲಿ ತೋರಿಸಲ್ಪಟ್ಟರೂ ಸರಿಯೇ, ಈ ಅಶ್ಲೀಲತೆಗಳು ಮನಸ್ಸನ್ನು ಕಲುಷಿತಗೊಳಿಸುತ್ತವೆ, ಜನರನ್ನು ಕಾನೂನುಬಾಹಿರ ಕೃತ್ಯಗಳನ್ನು ನಡಿಸುವಂತೆ ಪ್ರಚೋದಿಸುವವು, ಮತ್ತು ಮನುಷ್ಯನಲ್ಲಿ ಸ್ವಾಭಾವಿಕವಾಗಿರುವ, ಮದುವೆಯ ಹಾಸಿಗೆಗೆ ಮಾತ್ರವೇ ಮೀಸಲಿಡಲ್ಪಡುವಂತೆ ದೇವರಿಂದ ಕೊಡಲ್ಪಟ್ಟಿರುವ ಪ್ರತಿಕ್ರಿಯೆಗಳಿಗೆ ದೊಡ್ಡ ಹಾನಿಯನ್ನುಂಟು ಮಾಡುತ್ತವೆ.

## ವಿಗ್ರಹಾರಾಧನೆ (5:20)

ಈ ಸುಸಂಸ್ಕೃತವಾದ ಆಧುನಿಕ ಜಗತ್ತಿನಲ್ಲಿ ಜೀವಿಸುವ ಅನೇಕರು ಗ್ರೀಕ್-ರೋಮನ್ ಅನ್ಯಧರ್ಮಿಯ ವಿಗ್ರಹಾರಾಧನೆಯ ಕಾಲಮಾನವನ್ನು ಅನಾಗರಿಕ ಮತ್ತು ಬಾಲೀಶವಾದದ್ದೆಂದು ಕಾಣುತ್ತಾರೆ. ಹೇಗೂ, ನಾವು ನಮ್ಮ ಕಾಲದಲ್ಲಿರುವ ವಿಗ್ರಹಗಳಿಂದ ಎದುರಿಸಲ್ಪಟ್ಟಿರುವ ಮತ್ತು ಪ್ರಲೋಭನೆಗೊಳಗಾಗಿರುವ ಸಂಭವವಿರುತ್ತದೋ? ಪ್ರಾಚೀನ ವಿಗ್ರಹಾರಾಧನೆಯೊಂದಿಗೆ ಹೋಲಿಸಬಹುದಾದ ವಿದ್ಯಾಮಾನಗಳು ನಮ್ಮ ಈಗಿನ ಪರಿಸ್ಥಿತಿಗಳಲ್ಲಿರುತ್ತವೋ?

ಪೌಲನು ಎಫೆಸದ ಸಹೋದರರಿಗೆ "ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ" (ಎಫೆಸ 5:1) ಪ್ರಬೋಧಿಸಿದನು ಮತ್ತು ನಂತರ ಒಂದು ಆಘಾತಕಾರಿಯಾದ ವಿರುದ್ಧಾರ್ಥ ಸೂಚಕವೊಂದನ್ನು ಮಧ್ಯದಲ್ಲಿ ಸೇರಿಸುತ್ತಾನೆ:

> ಜಾರತ್ವ ಯಾವ ವಿಧವಾದ ಬಂಡುತನ ದ್ರವ್ಯಾಶೆ ಇವುಗಳ ಸುದ್ದಿಯಾದರೂ ನಿಮ್ಮಲ್ಲಿ ಇರಬಾರದು; ಇವುಗಳಿಗೆ ದೂರವಾಗಿರುವದೇ ದೇವಜನರಿಗೆ ಯೋಗ್ಯವಾದದ್ದು . . . ಜಾರರು ದುರಾಚಾರಿಗಳು *ವಿಗ್ರಹಾರಾಧಕರಂತಿರುವ ಲೋಭಿಗಳು* ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ (ಎಫೆಸ 5:3-5; ಒತ್ತಿ ಹೇಳಿದ್ದು ನನ್ನದು).

ಅದೇ ರೀತಿಯಲ್ಲಿಯೇ, ಪೌಲನು ಕೊಲೊಸ್ಸೆಯವರಿಗೆ ಅವರು ಕ್ರಿಸ್ತನೊಂದಿಗೆ ಮರಣ ಹಾಗೂ ಪುನರುತ್ಥಾನಗಳನ್ನು ಹಾದು ಬಂದಿರುತ್ತಾರೆಂಬುದರ ಕುರಿತು ಬರೆದನು. ಅವರು ತಮ್ಮ ಶುದ್ಧೀಕರಣದ ಪಥದಲ್ಲಿ ಮುನ್ನಡೆಯುವಂತೆ ಬೇಡಿಕೊಂಡನು. ಅವರು ತಮ್ಮ ಶರೀರಭಾವದಲ್ಲಿ ಪಾಪದಿಂದ ಕೂಡಿರುವಂಥದ್ದು ಏನೇ ಇದ್ದರೂ ಅದನ್ನು ಮರಣಕ್ಕೊಳಪಡಿಸಿಕೊಳ್ಳುವ ಮೂಲಕ ಈ ಕಾರ್ಯವನ್ನು ಮಾಡಬೇಕಾಗಿತ್ತು: "ಆದದರಿಂದ ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಅಂದರೆ ಜಾರತ್ವ ಬಂಡುತನ ಕಾಮಾಭಿಲಾಷೆ ದುರಾಶೆ *ವಿಗ್ರಹಾರಾಧನೆಯಾಗಿರುವ ಲೋಭ* ಇವುಗಳನ್ನು ಸಾಯಿಸಿರಿ" (ಕೊಲೊಸ್ಸೆ 3:5; NKJV; ಒತ್ತಿ ಹೇಳಿದ್ದು ನನ್ನದು).

ಜನರನ್ನು, ಕ್ರೈಸ್ತರನ್ನು ಸಹ ಪರಲೋಕದಿಂದ ಹೊರಗಿಡುವಷ್ಟರ ಮಟ್ಟಿಗೆ ಲೋಭವು ನಿಜಕ್ಕೂ ಕೆಟ್ಟದ್ದಾಗಿರಬಲ್ಲದೋ? "ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು ಬುದ್ಧಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ. ಇಂಥ ಆಶೆಗಳು ಮನುಷ್ಯರನ್ನು ಸಂಹಾರನಾಶನಗಳಲ್ಲಿ ಮುಳುಗಿಸುತ್ತವೆ" (1 ತಿಮೊಥೆ 6:9). ಐಶ್ವರ್ಯವನ್ನು ದೇವರಿಂದ ಬರುವ ಆಶೀರ್ವಾದವೆಂದು ತಿಳಿದು ಆನಂದಿಸಬೇಕಾಗಿರುತ್ತದಾದರೂ, ಗರ್ವಿಷ್ಠರಾಗಿ ದೇವರಿಗೆ ಬದಲಾಗಿ ಐಶ್ವರ್ಯದಲ್ಲಿಯೇ ಭರವಸವನ್ನಿಡಬೇಕೆಂಬ ಶೋಧನೆಗಳು ಅದರಲ್ಲಿ ಅಂತರ್ಗತವಾಗಿರುತ್ತವೆ (1 ತಿಮೊಥೆ 6:17). ಈ ವಿಷಯದಲ್ಲಿ, ಲೋಭವನ್ನು ವಿಗ್ರಹಾರಾಧನೆಗೆ ಸಮಾನಗೊಳಿಸಲಾಗಿದೆ. ನಮ್ಮ ಪ್ರೀತಿ ಹಾಗೂ ಭಕ್ತಿಯಲ್ಲಿ ದೇವರಿಗಿರುವ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಯಾವದೇ ಆಗಲಿ, ಅಥವಾ ನಮ್ಮ ಭರವಸೆಯ ಆಧಾರವಾಗುವಂತೆ ಯಾವದಕ್ಕಾದರೂ ಅನುಮತಿ ಕೊಟ್ಟಿದ್ದರೆ, ಅದು ನಮ್ಮ ಪಾಲಿಗೆ ಈಗಾಗಲೇ ಒಂದು ವಿಗ್ರಹವಾಗಿ ಮಾರ್ಪಟ್ಟಿರುತ್ತದೆ.

ಶಿಷ್ಯನಾಗಬೇಕೆಂಬ ಬಯಕೆಯಿಂದ ಯೇಸುವಿನ ಬಳಿಗೆ ಬಂದು ಐಶ್ವರ್ಯವಂತನಾದ ಯುವಕನಿಗೆ ಆತನು ನುಡಿದ ಮಾತುಗಳು ಕಠೋರವೆಂದು ಕಾಣಿಸುತ್ತವೆ: "ನಿನಗೆ ಒಂದು ಕಡಿಮೆಯಾಗಿದೆ; ಹೋಗು, ನಿನ್ನ ಬದುಕನ್ನೆಲ್ಲಾ ಮಾರಿ ಬಡವರಿಗೆ ಕೊಡು; ಪರಲೋಕದಲ್ಲಿ ನಿನಗೆ ಸಂಪತ್ತಿರುವದು; ನೀನು ಬಂದು ನನ್ನನ್ನು ಹಿಂಬಾಲಿಸು" (ಮಾರ್ಕ 10:21). ಈ ಕೆಳಗಿನ ವಚನವು ದುರಂತಕರವಾದ ಫಲಿತಾಂಶವನ್ನು ತೋರಿಸುತ್ತದೆ: "ಆದರೆ ಅವನು ಬಹಳ ಆಸ್ತಿಯುಳ್ಳವನಾಗಿದ್ದದರಿಂದ ಈ ಮಾತಿಗೆ ಮೋರೆ ಬಾಡಿದವನಾಗಿ ದುಃಖದಿಂದ ಹೊರಟುಹೋದನು" (ಮಾರ್ಕ 10:22). ಸದುದ್ದೇಶದಿಂದ ತನ್ನನ್ನು ಹುಡುಕುವವನಾಗಿದ್ದ ಈ ವ್ಯಕ್ತಿಯ ದಾರಿಯಲ್ಲಿ ಯೇಸುವು ಏಕೆ ಅಷ್ಟೊಂದು ದೊಡ್ಡ ವಿಘ್ನವನ್ನಿಟ್ಟನು?

ಅವನನ್ನು "ಅವನನ್ನು ದೃಷ್ಟಿಸಿನೋಡಿ ಪ್ರೀತಿಸಿ"ದ ಯೇಸುವು (ಮಾರ್ಕ 10:21), ಈ ಮುಂಚೆಯೇ ಅಲ್ಲಿದ್ದ ತಡೆಯು ಏನೆಂಬುದನ್ನು ಕಂಡನು. ಈ ಯುವಕನು ತನ್ನ ಐಶ್ವರ್ಯದೊಂದಿಗೆ ಬಹಳ ಬಲವಾಗಿ ಅಂಟಿಕೊಂಡಿರುತ್ತಾನೆಂಬುದನ್ನು ಆತನು ಅರಿತುಕೊಂಡನು. ನಿಸ್ಸಂದೇಹಕರವಾಗಿ, ಈ ಯುವಕನು ಪ್ರಾಮಾಣಿಕವಾಗಿದ್ದನು ಮತ್ತು ಕುತಂತ್ರವಿಲ್ಲದವನಾಗಿದ್ದನು. ಆತನು ಕರ್ತನನ್ನು ಎದುರುಗೊಳ್ಳುವ ಮುನ್ನ, ತಾನೊಬ್ಬ ವಿಗ್ರಹಾರಾಧಕನಾಗಿರುವನೆಂಬ ಆಲೋಚನೆಯೇ ಆತನಿಗೆ ತೋಚಿರಲಿಲ್ಲ. ಹಾಗಿದ್ದರೂ, ಆತನ ಭರವಸವು ಐಶ್ವರ್ಯದಲ್ಲಿತ್ತು, ಮತ್ತು ಈ ಆಘಾತವುಳ್ಳ ವಿಷಯವನ್ನು ಕಂಡುಕೊಂಡದ್ದು ಆತನಿಗೆ ಸಹಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲದ್ದಾಗಿತ್ತು. ಯೇಸುವು ಪರ್ವತದ ಮೇಲಿನ ಪ್ರಸಂಗದಲ್ಲಿ ಹೀಗೆ ಹೇಳಿದ್ದನು, "ಯಾವನೂ ಇಬ್ಬರು ಯಜಮಾನರಿಗೆ ಸೇವೆಮಾಡಲಾರನು. ಅವನು ಒಬ್ಬನನ್ನು

ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರಮಾಡುವನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ" (ಮತ್ತಾಯ 6:24).

ಈ ಮನಃಸ್ಪರ್ಶಿಸುವ ಭೇಟಯ ಬೆಳಕಿನಲ್ಲಿ ನಾವು ನಮ್ಮನ್ನು ಪರೀಕ್ಷಿಸಿಕೊಳ್ಳಬೇಕು. ಯೇಸುವು ನಮ್ಮನ್ನು ತನ್ನ ಸ್ವಪ್ರಾಣಕ್ಕಿಂತ ಅಧಿಕವಾಗಿ ಪ್ರೀತಿಸುತ್ತಾನಾದರೂ, ಈ ಲೋಕದೊಂದಿಗೆ ಮತ್ತು ದೇವರೊಂದಿಗೆ ನಾವು ಹೊಂದಿರುವ ಸಂಬಂಧಗಳ ವಿಷಯವಾದ ಅಷ್ಟೊಂದು ಸಾರಭೂತವಾದ ಸತ್ಯವೊಂದರಲ್ಲಿ ರಾಜಿ ಮಾಡಿಕೊಳ್ಳಲು ಆತನಿಗೆ ಸಾಧ್ಯವಿಲ್ಲ. ವಿಗ್ರಹಾರಾಧನೆಯು ದೇವರು ಮತ್ತು ಮನುಷ್ಯನ ನಡುವಿನ ತಡೆಗೋಡೆಯಾಗಿದೆ. ಸ್ವತ್ತುಗಳು ಒಬ್ಬನ ಮೇಲೆ ಸ್ವಾಮ್ಯತೆಯನ್ನು ಸಾಧಿಸುವಂತವುಗಳಾಗಿ ಮತ್ತು ಆತನು ಅವುಗಳ ಗುಲಾಮನಾಗಿ ಮಾರ್ಪಡುವಾಗ, ಆತನು ಇನ್ನು ಮೇಲೆ ದೇವರ ಸೇವಕನಾಗಿರಲಾರನು.

ಈ ಕಥೆಗೆ ಒಂದು ಸಕಾರಾತ್ಮಕ ಕೋನವೂ ಇರುತ್ತದೆ. ಶಿಷ್ಯರು, ಸಹಜವಾಗಿಯೇ ಯೇಸುವಿನ ಮಾತುಗಳಿಂದ ಕಳವಳಕ್ಕೊಳಗಾಗಿದ್ದು, ಆತನನ್ನು ಹೀಗೆ ಕೇಳಿದರು, "[ಹೀಗಿದ್ದರೆ] ಯಾರಿಗೆ ರಕ್ಷಣೆಯಾದೀತು" (ಮಾರ್ಕ 10:26). ಆತನು ಅದಕ್ಕೆ ಹೀಗೆ ಪ್ರತ್ಯುತ್ತರ ಕೊಟ್ಟನು, "ಇದು ಮನುಷ್ಯರಿಗೆ ಅಸಾಧ್ಯ; ದೇವರಿಗೆ ಅಸಾಧ್ಯವಲ್ಲ; ದೇವರಿಗೆ ಎಲ್ಲವು ಸಾಧ್ಯವೇ" (ಮಾರ್ಕ 10:27). ಆದದರಿಂದ, ನಿರೀಕ್ಷೆಯು ಎಲ್ಲರಿಗೂ ಲಭ್ಯವಿರುತ್ತದೆ.

ಹೊಸ ಒಡಂಬಡಿಕೆಯಲ್ಲಿ ವಿಗ್ರಹಾರಾಧನೆಯ ವಿಷಯವಾಗಿ ಪೌಲನಿಂದ ಬರೆಯಲ್ಪಟ್ಟಿರುವ ಎರಡು ವಾಕ್ಯಭಾಗಗಳು ವಿಶೇಷ ಗಮನ ಕೊಡುವದಕ್ಕೆ ಯೋಗ್ಯವಾಗಿರುತ್ತವೆ:

> ಅನೇಕರು ಕ್ರಿಸ್ತನ ಶಿಲುಬೆಗೆ ವಿರೋಧಿಗಳಾಗಿ ನಡೆಯುತ್ತಾರೆ; ಅವರ ವಿಷಯದಲ್ಲಿ ನಾನು ನಿಮಗೆ ಎಷ್ಟೋ ಸಾರಿ ಹೇಳಿದೆನು, ಈಗಲೂ ಅಳುತ್ತಾ ಹೇಳುತ್ತೇನೆ. ನಾಶನವೇ ಅವರ ಅಂತ್ಯಾವಸ್ಥೆ, ಹೊಟ್ಟೆಯೇ ಅವರ ದೇವರು, ನಾಚಿಕೆ ಕೆಲಸಗಳಲ್ಲಿಯೇ ಅವರ ಗೌರವವು. ಅವರು ಭೂಸಂಬಂಧವಾದವುಗಳ ಮೇಲೆ ಮನಸ್ಸಿಡುತ್ತಾರೆ (ಫಿಲಿಪ್ಪಿ 3:18, 19; NKJV).

> ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟು ಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿಹೋಗಿರಿ ಎಂದು ನಾನು ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಅಂಥವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಸೇವೆಯನ್ನು ಮಾಡದೆ ತಮ್ಮ ಹೊಟ್ಟೆಯ ಸೇವೆಯನ್ನೇ ಮಾಡುವವರಾಗಿ ನಯದ ನುಡಿ ಗಳಿಂದಲೂ ಹೊಗಳಿಕೆಯ ಮಾತುಗಳಿಂದಲೂ ನಿಷ್ಕಪಟಿಗಳ ಹೃದಯಗಳನ್ನು ಮೋಸಗೊಳಿಸುತ್ತಾರೆ (ರೋಮಾ 16:17, 18; NKJV).

ಈ ವಾಕ್ಯಭಾಗದಲ್ಲಿರುವ ಜನರು ಸಭೆಯಲ್ಲಿ ಪ್ರಭಾವವನ್ನು ಹೊಂದಿದ್ದರೆಂಬುದರಲ್ಲಿ ಸಂಶಯವೇ ಇಲ್ಲ; ಆದಾಗ್ಯೂ ಪೌಲನು ಅವರನ್ನು ವಿಗ್ರಹಾರಾಧಕರೆಂದು ಪರಿಗಣಿಸಿದನು. ಅವರ ಗುರಿಯು ಭೂಲೋಕದ ಲಾಭವೇ ಆಗಿತ್ತು ಹೊರತಾಗಿ ಕ್ರಿಸ್ತನ ಧ್ಯೇಯವು ಅಲ್ಲ. ಅವರು ತಮ್ಮ ದೈಹಿಕ ಹಸಿವೆಗಳನ್ನು ("ಅವರ ಹೊಟ್ಟೆ") ತೀರಿಸಿಕೊಳ್ಳಲು ಬಯಸುತ್ತಿದ್ದರು. 2 ತಿಮೊಥೆ 3:4ರಲ್ಲಿನ ಭಾಷೆಯನ್ನು ಬಳಸುವದಾದರೆ, ಅವರು "ದೇವರನ್ನು ಪ್ರೀತಿಸದೆ ಭೋಗಗಳನ್ನೇ ಪ್ರೀತಿಸುವವರು" ಆಗಿದ್ದರು. ದೇವರಿಗೆ ಮಾತ್ರವೇ ಪ್ರತ್ಯೇಕವಾಗಿ ಸ್ವಂತವಾಗಿದ್ದ ಸ್ಥಾನವನ್ನು ಆಕ್ರಮಿಸಿಕೊಳ್ಳುವಂತೆ ಅವರು ಭೋಗಗಳಿಗೆ ಅವಕಾಶವನ್ನು ಕೊಡುತ್ತಿದ್ದರು.

ಒಂದು ದೇಶವು ತನ್ನ ಸ್ವಶಕ್ತಿಯಲ್ಲಿ ಭರವಸವನ್ನಿಟ್ಟು ದೇವರ ಅನುಗ್ರಹವನ್ನು ಮರೆಯುವದರ ಮೂಲಕ ವಿಗ್ರಹಾರಾಧಕ ದೇಶವಾಗಬಲ್ಲದು. ವಿಗ್ರಹಾರಧನೆಯ ಹಳೇ ಕಾಲದ

ವಿಷಯವಾಗಿದೆ ಎಂದು ನಾವು ಎಂದಿಗೂ ಯೋಚಿಸಕೂಡದು. ಇಂದು ಸ್ವತಃ ಸೈತಾನನು ಸಕ್ರಿಯನಾಗಿರುವದು ನಿಶ್ಚಯವಾಗಿದ್ದು, ಪ್ರಾಚೀನ ವಿರೋಧಿಯು ವಿಗ್ರಹಗಳ ರೂಪವನ್ನು ಕೇವಲ ಬದಲಾವಣೆಗೊಳಿಸಿ ಅವುಗಳನ್ನು ನಮ್ಮ ಮುಂದೆ ತರುವವನಾಗಿದ್ದಾನೆ. ಅವುಗಳು ವಿಗ್ರಹಗಳಂತೆ ಕಾಣಿಸದೆ ಇರಬಹುದು, ಆದರೆ ಅವುಗಳು ವಿಗ್ರಹಗಳೇ. ಸೈತಾನನು ಹೇಗೆ ನಿರ್ಮೂಲಗೊಳಿಸಲ್ಪಟ್ಟಿಲ್ಲವೋ ಹಾಗೆಯೇ ವಿಗ್ರಹಾರಧನೆಯೂ ನಿರ್ಮೂಲಗೊಂಡಿರುವದಿಲ್ಲ.

## ವೈರತ್ವದ ಶೋಧನೆ (5:20)

"ಒಳಹಗೆ" ಎಂಬ ಪದವು "ವಿರುದ್ಧ ಭಾವವೊಂದನ್ನು" ಸೂಚಿಸುತ್ತದೆ. ಕೆಲವು ಸಾರಿ ಒಬ್ಬರ ಕಡೆಗೆ ಅಂತಹ ನಕಾರಾತ್ಮಕ ಮನೋಭಾವವು ವಿವರಣೆಯನ್ನೇ ಧಿಕ್ಕರಿಸುವಂಥದ್ದಾಗಿರುತ್ತದೆ. ನಾವು ಚರ್ಚೆಯಲ್ಲಿರುವ ವ್ಯಕ್ತಿಯನ್ನು ಯಾವ ಕಾರಣಕ್ಕೂ ಇಷ್ಟಪಡುವದಿಲ್ಲ ಮತ್ತು ಆ ಭಾವವನ್ನು ನಾವು ಬದಲಾಯಿಸುವದಕ್ಕೆ ಸಾಧ್ಯವೇ ಇಲ್ಲವೆಂದು ನಂಬುತ್ತೇವೆ. ಸ್ವತಃ ನಮ್ಮ ಕರ್ತನಾದ ಯೆಸುವಿಗೆ ವೈಯಕ್ತಿಕ ನೆಂಟಸ್ತಿಕೆಗಳ ಕಡೆಗಿರುವ ಮಾನವ ಒಲವುಗಳನ್ನು ಅರ್ಥಮಾಡಿಕೊಂಡಿದ್ದನು. ಉದಾಹರಣೆಗೆ, ಆತನು ಮರಿಯಳು, ಮಾರ್ಥಳು, ಮತ್ತು ಲಾಜರ ಇವರ ಸಂಗಡ ವಿಶೇಷ ಸಂಬಂಧವನ್ನಿಟ್ಟುಕೊಂಡಿದ್ದನು (ಯೋಹಾನ 11:3, 5). ಅಷ್ಟುಮಾತ್ರವಲ್ಲದೆ, ಆತನು "ತನ್ನ ಪ್ರೀತಿಯ ಶಿಷ್ಯನಾದ" (ಯೋಹಾನ 19:26; ನೋಡಿರಿ 20:2) ಯೋಹಾನನ ಜೊತೆ ನಿಕಟವಾದ ನಂಟು ಹೊಂದಿದ್ದನು. ಯೇಸುವು ಎಲ್ಲರ ಕಡೆಗೂ ದಯಾಪರತೆಯ *agapē* ರೀತಿಯ ಪ್ರೀತಿಯನ್ನು ತೋರಿಸುತ್ತಿದ್ದನೆಂಬುದು ನಮಗೆ ಗೊತ್ತಿದೆ; ಆದರೆ ಆತನು ಸ್ನೇಹದ ಪ್ರೀತಿಯನ್ನು ಅನುಭವಿಸಿದನಾದ್ದರಿಂದ, ತನಗೆ ವಿಶೇಷವಾಗಿ ಪ್ರಿಯರಾದ ಕೆಲವೊಬ್ಬ ವ್ಯಕ್ತಿಗಳ ಕಡೆಗೆ ಭಾವನಾತ್ಮಕವಾಗಿ ಆಕರ್ಷಿತನಾಗಿದ್ದರಿಂದ, ಆತನು ಬೇರೆ ಕೆಲವೊಬ್ಬರ ಕಡೆಗೆ ಒಳಹಗೆಯನ್ನು ಹೊಂದಿರಬಹುದಾಗಿದೆ. ಅಂತೂ, "ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ" ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು (ಇಬ್ರಿಯ 4:15).

ಒಂದು ಶೋಧನೆಯನ್ನು ಎದುರುಗೊಳ್ಳುವದು, ಅದು ನಮ್ಮನ್ನು ಎಳೆದು ಹಿಡಿದುಕೊಂಡಾಗ್ಯೂ, ಅದು ಇನ್ನೂ ಪಾಪ ಎಂದಾಗುವದಿಲ್ಲ. ನಾವು ನಮ್ಮ ಜೊತೆಯ ಮನುಷ್ಯನ ಬಗ್ಗೆ ಕಾಳಜಿ ಹೊಂದಿದವರಾಗಿರುವದಕ್ಕೆ ನಮ್ಮ ಕರ್ತನಿಂದ ಕಲಿತುಕೊಳ್ಳುವ ಅಗತ್ಯವಿರುತ್ತದೆ. ನಾವು ಪ್ರೀತಿಸಬೇಕೆಂದು (ἀγαπάω, *agapaō*) ಅದು ನಮಗೆ ಇಷ್ಟವಾದರೂ ಸರಿಯೇ ಅಥವಾ ಆಗದಿದ್ದರೂ ಸರಿಯೇ ಪ್ರೀತಿಸಬೇಕು ಎಂದು ಆಜ್ಞಾಪಿಸಲ್ಪಟ್ಟಿದ್ದೇವೆ. ನಾವು ನಿಶ್ಚಯವಾಗಿ ಪ್ರೀತಿಸುವದಕ್ಕೆ ಕಲಿಯಬಹುದಾದ ರೀತಿಯಲ್ಲಿಯೇ - ಬೇರೆ ವ್ಯಕ್ತಿಗೆ ಅತ್ಯುತ್ತಮವಾಗಿರುವದನ್ನು ಮಾಡುವದಕ್ಕೆ ಮನಸ್ಸು ಮಾಡುವದು ಮತ್ತು ಕಾರ್ಯಗತಗೊಳಿಸುವದು - ನಾವು ಪ್ರೀತಿಯಿಲ್ಲದ ಭಾವಗಳು ಉಕ್ಕಿ ಹಗೆತನ ಅಥವಾ ದ್ವೇಷದ ಭಾವಗಳಾಗಿ ಮಾರ್ಪಡುವದಕ್ಕೆ ಬಿಡದಿರಲು ಸಹ ನಿರ್ಣಯಿಸಿಕೊಳ್ಳಬಹುದು. ಯೋಹಾನನು ಹೀಗೆ ಎಚ್ಚರಿಸಿದನು, "ತನ್ನ ಸಹೋದರನನ್ನು ದ್ವೇಷಿಸುವವನು ಕೊಲೆಗಾರನಾಗಿದ್ದಾನೆ, ಮತ್ತು ಯಾವ ಕೊಲೆಗಾರನಲ್ಲಿಯೂ ನಿತ್ಯಜೀವವು ಇರುವದಿಲ್ಲವೆಂಬದು ನಿಮಗೆ ಗೊತ್ತಾಗಿದೆ" (1 ಯೋಹಾನ 3:15). ಪ್ರಿಯನಾದ ಶಿಷ್ಯನು ಮುಂದುವರೆಸಿ ಹೀಗೆ ಹೇಳಿದನು,

> ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು. ದೇವರನ್ನು ಪ್ರೀತಿಸುವವನು ತನ್ನ

ಸಹೋದರನನ್ನೂ ಪ್ರೀತಿಸಬೇಕೆಂಬ ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ (1 ಯೋಹಾನ 4:20, 21).

## ಜಗಳವನ್ನು ಸೇವಕನಂತಹ ನಾಯಕತ್ವದ ಮೂಲಕವಾಗಿ ಜಯಿಸುವದು (5:20)

ವಿಶೇಷವಾಗಿ ಸೇವಕರು, ಹಿರಿಯರು, ಮತ್ತು ಸಭಾಸೇವಕರಿಗಾಗಿ ಏರ್ಪಡಿಸಿದ್ದ ಒಂದು ಸಮಾವೇಶದಲ್ಲಿ, ಈ ಪ್ರಶ್ನೆಯನ್ನು ಕೇಳಲಾಯಿತು: "ಇಪ್ಪತ್ತೊಂದನೆಯ ಶತಮಾನದಲ್ಲಿ ನಾಯಕತ್ವ ಮಾದರಿಯ ವಿಷಯದಲ್ಲಿ ಬಗೆಹರಿಸಬೇಕಾಗಿರುವ ಪ್ರಧಾನ ಸಮಸ್ಯೆಗಳೊಳಗೆ ಯಾವದಾಗಿರುತ್ತದೆಂದು ನಿಮಗೆ ತೋರುತ್ತದೆ?" ಅತ್ಯಂಥ ಮನಃಸೆಳೆಯುವ ಉತ್ತರಗಳೊಳಗೆ ಒಂದು, ಮಾತ್ರವಲ್ಲದೆ ಎಲ್ಲರಿಂದಲೂ ಸಮ್ಮತಿಸಲ್ಪಟ್ಟ ಉತ್ತರವೆಂದರೆ, "ಸಭೆಯ ನಾಯಕರು ತಮ್ಮನ್ನು ತಾವೇ ನ್ಯಾಯಸಮ್ಮತಗೊಳಿಸಿಕೊಳ್ಳುವದರ ಹಿಂದೆ ಹೋಗುವದೇ." ಅಂತಹ ಒಂದು ಮನೋಭಾವವು ನಮ್ಮ ಕರ್ತನು ಬಯಸಿದ್ದಕ್ಕೆ ಮತ್ತು ತಾನು ಮಾದರಿಯನ್ನು ತೋರಿಸಿದ್ದಕ್ಕೆ ಬಹಳ ತದ್ವಿರುದ್ಧವಾಗಿರುತ್ತದೆ. ಯೇಸುವು "ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು" (ಮತ್ತಾಯ 20:28). ಈ ಹೇಳಿಕೆಯನ್ನು ಅತ್ಯಂಥ ಹೆಬ್ಬಯಕೆಯನ್ನು ಹೊಂದಿದ್ದ ಜೆಬದಾಯನ ಪುತ್ರರಿಗೆ ನೀಡಲಾಗಿತ್ತು, ಅವರು ಈಗ ಚರ್ಚೆಯಲ್ಲಿರುವ ಸಮಸ್ಯೆಗೆ ದೃಷ್ಟಾಂತವಾಗಿ ಕಂಡಿದ್ದರೆಂದು ತೋರುತ್ತದೆ. (3 ಯೋಹಾನ 9, 10ರಲ್ಲಿ ದಿಯೊತ್ರೇಫನ ಪ್ರಕರಣವನ್ನು ಸಹ ನೋಡಿರಿ.)

ಒಬ್ಬ ಹಿರಿಯನು ಒಂದು ಸಾರಿ ಸಭೆಗೆ ಹೀಗೆ ಹೇಳಿದನು, "ಸಭೆಯಲ್ಲಿ ಪಂಗಡಗಳಿಗೆ ಪ್ರಮುಖ ಕಾರಣಗಳಲ್ಲೊಂದು ಎಂದರೆ ಹಿರಿಯರ ಅಧಿಕಾರಕ್ಕೆ ವಿಧೇಯರಾಗಲು ನಿರಾಕರಿಸುವ ಸದಸ್ಯರೇ." ಆತನ ತಾತ್ಪರ್ಯವು ಸಂಪೂರ್ಣ ಅರ್ಥಮಾಡಿಕೊಳ್ಳತಕ್ಕದ್ದಾಗಿದೆ, ಆದರೆ ಅಂಥ ಹೇಳಿಕೆಯು ಮತ್ತೊಂದು ಸಮಸ್ಯೆಗೆ ಸೂಚನೆಯಾಗಿರಬಹುದಾಗಿದೆ. "ಅಧಿಕಾರ" (ἐξουσία, *exousia*) ಎಂಬ ಪದವು ಅಪೊಸ್ತಲರನ್ನು ಸೂಚಿಸಿ ಬಳಸಲ್ಪಟ್ಟಿದ್ದು ನಿಜವೇ ಆಗಿರುತ್ತದಾದರೂ, ಅದು ಎಂದಿಗೂ ಹೊಸ ಒಡಂಬಡಿಕೆಯೊಳಗೆ ಹಿರಿಯರು ಅಥವಾ ಸುವಾರ್ತಿಕರಿಗೆ ಸಂಬಂಧ ಪಟ್ಟಂತೆ ಎಂದಿಗೂ ಬಳಸಲ್ಪಟ್ಟಿಲ್ಲ."[136] ಏಕೆ? ಬಹುಶಃ ಮತ್ತಾಯ 20:25, 26ರಲ್ಲಿ ಕೊಟ್ಟಿರುವ ಅದೇ ಕಾರಣಕ್ಕಾಗಿಯೇ ಇರಬಹುದು, ಅಲ್ಲಿ ಯೇಸುವು ಶಿಷ್ಯರಿಗೆ ಹೀಗೆ ಹೇಳಿದನು, "ಆದರೆ ಜನಗಳನ್ನಾಳುವವರು ಅವರ ಮೇಲೆ *ಅಹಂಕಾರದಿಂದ ದೊರೆತನಮಾಡುತ್ತಾರೆ,* ಮತ್ತು ದೊಡ್ಡವರು *ಬಲಾತ್ಕಾರದಿಂದ ಅಧಿಕಾರ ನಡಿಸುತ್ತಾರೆ* ಎಂದು ನೀವು ಬಲ್ಲಿರಷ್ಟೆ. ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು" (ಒತ್ತಿ ಹೇಳಿದ್ದು ನನ್ನದು). ಅನ್ಯಜನಾಂಗದ ಮಾದರಿಯು ಯೇಸು ತನ್ನ ಶಿಷ್ಯರಿಗಾಗಿ ಕೊಟ್ಟಿದ್ದ ಮಾದರಿಗೆ ತದ್ವಿರುದ್ಧವಾಗಿತ್ತು (ನೋಡಿರಿ 1 ಪೇತ್ರ 5:1-4).

ದೇವರ ಸುವಾರ್ತೆಯನ್ನು ಸಾರುವ ಯಾವನೇ ಆಗಲಿ ಅದನ್ನು ಅಧಿಕಾರದಿಂದ ಸಾರಬೇಕು. ಹೇಗೂ, ಅದು ಆತನ ಸ್ವಂತ ಅಧಿಕಾರವಲ್ಲ, ಆದರೆ ಬದಲಾಗಿ ಸ್ವತಃ ದೇವರ ಅಧಿಕಾರವೇ. ಸೇವಕನಂತಹ ನಾಯಕತ್ವದ ಮಾದರಿಯನ್ನು ಗ್ರಹಿಸಿಕೊಳ್ಳ ಅನೇಕ ಬೋಧಕರು ಮತ್ತು/ಅಥವಾ ಹಿರಿಯರು ಬೇರೆಯವರ ಮೇಲೆ ದರ್ಪದಿಂದ ನಡೆದುಕೊಳ್ಳುವದೇ ಸಭೆಯಲ್ಲಿನ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಕರ್ತನಾದ ಯೇಸುವಿಗೆ ಸಕಲ ಅಧಿಕಾರವು ಕೊಡಲ್ಪಟ್ಟಿತ್ತು (ಮತ್ತಾಯ 28:18-20), ಮತ್ತು ಆತನು ತನ್ನ ಶಿಷ್ಯರಿಗೆ ಲೋಕದ ಎಲ್ಲಾ ಸ್ಥಳಗಳಿಗೆ ಹೋಗಿ ತಾನು ಅವರಿಗೆ ಆಗಷ್ಟೇ ಪ್ರಕಟಗೊಳಿಸುವದಕ್ಕೆ ಆರಂಭಿಸಿದ್ದ

ಪ್ರಕಟನೆಯನ್ನು ಸಂಪೂರ್ಣಗೊಳಿಸುವಂತೆ ಆ ಅಧಿಕಾರವನ್ನು ಕೊಟ್ಟು ಕಳುಹಿಸಿದನು.[137] ಅಪೊಸ್ತಲರು ಸಹ ತಮ್ಮ ಸೇವೆಯನ್ನು, ತಾವು ದೊರೆಗಳು ಮತ್ತು ಪ್ರಭುಗಳೋ ಎಂಬಂತೆ ದರ್ಪದ ಅಧಿಕಾರದಿಂದ ನಡೆಸಬಾರದಾಗಿತ್ತು. ಬದಲಾಗಿ, ಅವರು ಸೇವೆ ಮಾಡುವದಕ್ಕೂ ತನ್ನ ಪ್ರಾಣವನ್ನು ಲೋಕದ ರಕ್ಷಣೆಗೋಸ್ಕರ ಕೊಡುವದಕ್ಕೂ ಬಂದ, ಅವರ ಯಜಮಾನನಾದ ಯೇಸುವಿನಲ್ಲಿದ್ದಂಥ ದೀನವಾದ, ವಿಧೇಯತೆಯ ಆತ್ಮವುಳ್ಳವರಾಗಿರಬೇಕಿತ್ತು.

## ಐಕ್ಯತೆಯನ್ನು ಉತ್ತೇಜಿಸುವದು (5:20)

ಕರ್ತನ ಹೃದಯಕ್ಕೆ ಐಕ್ಯತೆಯು ಸರ್ವೋತ್ಕೃಷ್ಟವಾಗಿ ಪ್ರಾಮುಖ್ಯವಾದ ವಿಷಯವಾಗಿರುತ್ತದೆ. ಯೋಹಾನ 17ರಲ್ಲಿ, ಆತನು ಮೊದಲು ಹನ್ನೆರಡು ಮಂದಿಯ ಐಕ್ಯತೆಗಾಗಿ ಮತ್ತು ಬಳಿಕ ಅವರ ಸಂದೇಶದ ಮೂಲಕವಾಗಿ ತನ್ನಲ್ಲಿ ನಂಬಿಕೆಯಿಡಲಿದ್ದವರಲ್ಲಿ ಐಕ್ಯತೆಯು ಉಂಟಾಗಬೇಕೆಂಬುದಕ್ಕಾಗಿ ಪ್ರಾರ್ಥನೆ ಮಾಡಿದನು. ಅಂತೂ, ಯೇಸುವು ಜನರನ್ನು ಒಂದು ರಕ್ಷಣೆ ಹೊಂದಿದ ಸಮುದಾಯವಾಗಿ ಒಂದುಗೂಡಿಸುವ ಪ್ರಾಥಮಿಕ ಉದ್ದೇಶಕ್ಕಾಗಿಯೇ ಭೂಮಿಗೆ ಬಂದಿದ್ದನಷ್ಟೆ. ಪೌಲನು ಹೀಗೆ ವಿವರಿಸುತ್ತಾನೆ,

> ನಿಮ್ಮನ್ನೂ ನಮ್ಮನ್ನೂ ಒಂದು ಮಾಡಿದವನಾದ ಆತನೇ ನಮಗೆ ಸಮಾಧಾನಕರ್ತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದುಹಾಕಿ ಇದ್ದ ದ್ವೇಷವನ್ನು ಮುಗಿಸಿ ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿಹಾಕಿದನು. ಆತನು ಸಮಾಧಾನಮಾಡುವವನಾಗಿ ಉಭಯರನ್ನೂ [ಯೆಹೂದ್ಯರನ್ನು ಮತ್ತು ಅನ್ಯಜನರನ್ನು] ತನ್ನಲ್ಲಿ ಒಬ್ಬ ನೂತನಪುರುಷನನ್ನಾಗಿ ನಿರ್ಮಿಸಿದ್ದಾನೆ; ಇದ್ದ ದ್ವೇಷವನ್ನು ತನ್ನ ಶಿಲುಬೆಯ ಮೇಲೆ ಕೊಂದು ಆ ಶಿಲುಬೆಯ ಮೂಲಕ ಉಭಯರನ್ನೂ ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನಪಡಿಸಿದ್ದಾನೆ (ಎಫೆಸ 2:14-16).

ಈ ಸಾಧನೆಯನ್ನು ಮಾಡುವದಕ್ಕೆ ಆತನು ಶಿಲುಬೆಯ ಮೇಲೆ ವೇದನೆಯನ್ನು ಅನುಭವಿಸುತ್ತಿರುವವನಾಗಿ ಆತನ ಜೀವಧಾರೆಯಾದ ರಕ್ತದ ಬೆಲೆಯನ್ನೇ ತೆತ್ತಬೇಕಾಗಿತ್ತು. ಆ ಭಯಾನಕವಾದ ಘಟನೆಯಲ್ಲಿ, ಆತನು ಸರ್ವಮಾನವರ ಪಾಪದ ಮೂರ್ತರೂಪವೇ ಆಗಿ ಮಾರ್ಪಟ್ಟನು (2 ಕೊರಿಂಥ 5:21). ಆತನು ದೇವರ ಹೃದಯದಲ್ಲಿರುವದನ್ನು ಇನ್ನೆಷ್ಟು ಸ್ಪಷ್ಟವಾಗಿ ವ್ಯಕ್ತಪಡಿಸಿರುವದಕ್ಕೆ ಸಾಧ್ಯವಿತ್ತು? ಪೇತ್ರನು ಅಂತಿಮವಾಗಿ ಗ್ರಹಿಸಿಕೊಳ್ಳುವವನಾದ ಪ್ರಕಾರವೇ, “ದೇವರು ಪಕ್ಷಪಾತಿಯಲ್ಲ, ಯಾವ ಜನರಲ್ಲಿಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಗೆಯಾಗಿದ್ದಾರೆ” (ಅಪೊಸ್ತಲರ ಕೃತ್ಯಗಳು 10:34, 35).

ಹಾಗಿದ್ದಾಗ್ಯೂ, ನಮ್ಮ ದೇವರ ಕುರಿತಾದ ಈ ಮೂಲಭೂತವಾದ ಪಾಠವನ್ನು ಗ್ರಹಿಸಿಕೊಂಡು ಅದನ್ನು ಆಚರಣೆಯಲ್ಲಿ ಕೈಕೊಂಡು ನಡೆಯುವದಕ್ಕೆ ಈಗಲೂ ಕಷ್ಟಪಡುತ್ತೇವೆ. ಜನರು ಜನಾಂಗೀಯವಾದ ಪೂರ್ವಕಲ್ಪಿತ ಭಾವಗಳೊಂದಿಗೆ ಮತ್ತು ಕುಲ ಶ್ರೇಷ್ಠತೆಯ ಭಾವಗಳೊಂದಿಗೆ ಹೋರಾಡುತ್ತಾರೆ - ಹಾಗಿದ್ದರೂ ನಾವು ಅಂತಹ “ಪ್ರಧಾನ ಕುಲ” ಎಂಬ ಸ್ಥಾನಮಾನ ಹೊಂದಿದ್ದೇವೆಂದು ಹೇಳಿಕೊಳ್ಳುವವರೊಂದಿಗೆ ಸಹವಾಸವಿಟ್ಟುಕೊಳ್ಳಲು ಎಂದಿಗೂ ಇಷ್ಟಪಡುವದಿಲ್ಲ. ಆ ರೀತಿಯಾದ ಆಲೋಚನೆಗಳನ್ನು ಪೌಲನ ಮಾತುಗಳು ಅಡ್ಡಿಪಡಿಸುತ್ತವೆ:

> ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ. ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ (3:26-29).

ದೇವರ ಮಕ್ಕಳಲ್ಲಿ ಏಕತೆಗೆ ಅಡಚಣೆಯುಂಟು ಮಾಡುವ ಮತ್ತು ವಿಭಜಿಸುವ ಯಾವದೇ ಆಗಲಿ ಸೈತಾನನಿಂದ ಬಂದದ್ದಾಗಿದೆ ಮತ್ತು ನಮ್ಮ ಮಧ್ಯದಲ್ಲಿ ಅದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಪಕ್ಷಪಾತ, ಅಥವಾ "ವ್ಯಕ್ತಿಗಳನ್ನು ಗೌರವಿಸುವದು," ದೇವರ ಹೃದಯಕ್ಕೆ ಸಂಪೂರ್ಣ ಗೊತ್ತಿಲ್ಲದ ವಿಚಾರವಾಗಿದೆ. ವ್ಯಾಜ್ಯಗಳು ಸಮಾಧಾನವನ್ನು ಕೆಡಿಸುವಾಗ, ಸಭೆಯ ಒಟ್ಟಾಗಿ ಕೂಡಿ ಬಂದು ಅದರ ವಿಷಯದಲ್ಲಿ ಕ್ರಮ ಕೈಗೊಳ್ಳತಕ್ಕದ್ದು. ಕೆಲವೊಂದು ಮನೋಭಾವಗಳು ಸಭೆಯ ಸಮಾಧಾನವನ್ನು ಅಡ್ಡಿ ಪಡಿಸುವಾಗ, ಸಂಬಂಧಗಳು ಮುರಿಯಲ್ಪಟ್ಟ ನಂತರದಲ್ಲಿ ಸಂಧಾನಗೊಳ್ಳಲು ಕೆಲವರು ಮನಸ್ಸಿಲ್ಲದವರಾಗಿದ್ದರೆ, ದೇವರ ಮತ್ತು ಆತನ ಮಗನಾದ ಯೇಸುವಿನ ಹೆಸರಿಗೆ ಅವಮಾನವುಂಟು ಮಾಡುವಂತಹ ವಿವಾದಕರ ನಡವಳಿಕೆಗಳು ಸಂಭವಿಸಿರುವ ವೇಳೆ - ಈ ಪರಿಸ್ಥಿತಿಗಳ ಕಡೆಗೆ ಗಮನವನ್ನು ಹರಿಸತಕ್ಕದ್ದು.

ಕೊರಿಂಥದಲ್ಲಿ, ಅದು "ಒಬ್ಬನು ತನ್ನ ಅಪ್ಪನ ಹೆಂಡತಿಯನ್ನು ಇಟ್ಟುಕೊಂಡಿದ್ದಾನಂತೆ; ಅಂಥ ಜಾರತ್ವವು ಅನ್ಯಜನರಲ್ಲಿಯೂ ಇಲ್ಲ" ಎಂಬ ವಿಚಾರವಾಗಿತ್ತು (1 ಕೊರಿಂಥ 5:1). ಸಹೋದರರು ಅನ್ಯಜನಾಂಗದ ನ್ಯಾಯಾಲಯಗಳಲ್ಲಿ ತಮ್ಮ ಪ್ರಕರಣಗಳನ್ನು ಇತ್ಯರ್ಥಗೊಳಿಸುವಂತೆ ಒಬ್ಬರ ಮೇಲೊಬ್ಬರು ಮೊಕದ್ದಮೆ ದಾಖಲಿಸುತ್ತಿದ್ದರು (1 ಕೊರಿಂಥ 6:6). ಮೊದಲ ಪ್ರಕರಣದಲ್ಲಿ, ಪೌಲನು ಈ ಸಹೋದರರಿಗೆ ಹೀಗೆ ಆಜ್ಞೆ ಕೊಟ್ಟನು, "ಆ ದುಷ್ಟನನ್ನು ನಿಮ್ಮ ಮಧ್ಯದಿಂದ ತೆಗೆದುಹಾಕಬೇಕು" (1 ಕೊರಿಂಥ 5:13). ಎರಡನೆಯ ಪ್ರಕರಣದಲ್ಲಿ, ಆತನು ಹೀಗೆ ಹೇಳಿದನು, "ನಿಮಗೆ ವಿರುದ್ಧವಾಗಿ ಮಾಡಲ್ಪಟ್ಟ ತಪ್ಪನ್ನು ಏಕೆ ನೀವು ಸಹಿಸಿಕೊಂಡು ಸುಮ್ಮನಿರಬಾರದು? ನೀವು ಈಗಾಗಲೇ ಯೇಸುವಿನ ದೇಹವನ್ನು ಇಬ್ಭಾಗಗೊಳಿಸುವಂಥ ವೈಮನಸ್ಸನ್ನು ಎಲ್ಲಾ ಜನರು ಮುಂದೆ ತೋರ್ಪಡಿಸಿಕೊಳ್ಳುವ ಮೂಲಕ ಘನವಾದ ಕ್ರಿಸ್ತನ ಹೆಸರನ್ನು ಅವಮಾನಗೊಳಿಸಿರುವಿರಿ!" (ನೋಡಿರಿ 1 ಕೊರಿಂಥ 6:7.)

ಕೆಲವೊಂದು ಭಿನ್ನಾಭಿಪ್ರಾಯಗಳನ್ನು ತಪ್ಪಿಸಲು ಸಾಧ್ಯವಿಲ್ಲ ಎಂಬುದು ಪೌಲನಿಗೆ ಚೆನ್ನಾಗಿ ತಿಳಿದಿತ್ತು. ಇವುಗಳನ್ನು ಸಹ ದೇವರ ಉದ್ದೇಶ ನೆರವೇರಿಸುವಂತೆ ಮಾಡುವಂತೆ ಬಳಸಬಹುದು ಹಾಗೂ ಯಾರು ನಿಜವಾದ ಶಿಷ್ಯರು ಎಂಬುದನ್ನು ಸ್ಪಷ್ಟಗೊಳಿಸಬಹುದು ಎಂದು ಆತನು ಸೂಚ್ಯಾರ್ಥವಾಗಿ ಹೇಳಿದನು (1 ಕೊರಿಂಥ 11:18, 19). ಹಾಗಿದ್ದರೂ, ಅಂತಹ ಕೆಡುಕನ್ನು ಕ್ರಿಸ್ತನ ದೇಹಕ್ಕೆ ಅದರ ಸದಸ್ಯರಲ್ಲೊಬ್ಬರು ಮಾಡುವಾಗ, ಅಂಥ ವ್ಯಕ್ತಿಯ ಪಾಪವು ತೋರಿ ಬರುವ ರೀತಿಯಲ್ಲಿ ಅವನ ನಡವಳಿಕೆಯು ಛೀಮಾರಿ ಹಾಕತಕ್ಕದ್ದಾಗಿದೆ. ಅಷ್ಟುಮಾತ್ರವಲ್ಲದೆ, ಆತನನ್ನು ದೇಹದ ಅನ್ಯೋನ್ಯತೆಯೊಳಗಿಂದ ಹೊರಹಾಕುವದರ ಮೂಲಕ ಆ ಪಾಪವನ್ನು ದಂಡಿಸತಕ್ಕದ್ದು (1 ಕೊರಿಂಥ 5:11; 2 ಕೊರಿಂಥ 2:6). ರೋಮಾ 16:17ರಲ್ಲಿ ದೇಹದಲ್ಲಿ ಭೇದಗಳನ್ನು ಹುಟ್ಟಿಸುವವರ ವಿಷಯವಾಗಿ ಸರಿಯಾಗಿ ಇದನ್ನೇ ಪೌಲನು ಹೇಳುತ್ತಿದ್ದಾನೆ.

ವ್ಯಕ್ತಿಯು "ಭೇದಗಳನ್ನು" ಮತ್ತು "ವಿಘ್ನಗಳನ್ನು" (ಎಡವುವ ಸಂದರ್ಭಗಳನ್ನು) ಯಾವ ಕಾರಣಕ್ಕಾಗಿ (ಗಳಿಗಾಗಿ) ಅಥವಾ ದಾರಿಗಳ ಮೂಲಕ ಉಂಟು ಮಾಡುವನೆಂಬುದರ ಕುರಿತು ಪೌಲನು ವಿವರವಾಗಿ ತಿಳಿಸಲಿಲ್ಲ, ಅಂತವುಗಳು "ನೀವು ಹೊಂದಿದ ಉಪದೇಶಕ್ಕೆ

ವಿರುದ್ಧವಾಗಿವೆ" ಎಂದಷ್ಟೇ ಹೇಳಿದನು (ರೋಮಾ 16:17). ಅಂಥ ಕೃತ್ಯಗಳೆಲ್ಲವೂ "ಶರೀರಭಾವದ ಕರ್ಮಗಳು" ಆಗಿವೆ, ಒಬ್ಬ ಕ್ರೈಸ್ತನು ಅಂಥವುಗಳಿಂದ ದೂರವಿರತಕ್ಕದ್ದು (ಗಲಾತ್ಯ 5:19-21). ಅವುಗಳು ಪವಿತ್ರಾತ್ಮನನ್ನುಸರಿಸಿ ನಡೆಯುವದಕ್ಕೆ ವಿರೋಧಾತ್ಮಕವಾಗಿರುತ್ತವೆ. ಕ್ರೈಸ್ತನು ಯಾವ ದೇವರ ಸಭೆಯಲ್ಲಿ ಪರಲೋಕದ ಪೌರತ್ವವನ್ನು ಪಡೆದುಕೊಂಡಿದ್ದಾನೋ (ಫಿಲಿಪ್ಪಿ 3:20), ಆ ಸಭೆಯು ಆ ಉನ್ನತವಾದ, ಆತ್ಮೀಕ ಮಂಡಲವಾಗಿರುವ, "ದೇವರ ರಾಜ್ಯದ" (ಗಲಾತ್ಯ 5:21) ಪ್ರಜೆಗಳಾಗಿ - ಈಗಿನ ದುಷ್ಟ ಲೋಕದಲ್ಲಿ ಸಹ - ಸಭ್ಯತೆಯಿಂದ ನಡೆದುಕೊಳ್ಳುವದಕ್ಕೆ ಕರೆಯಲ್ಪಟ್ಟಿರುವ ದೇವರ ಮಕ್ಕಳ ಒಟ್ಟಿಗೆ ವಾಸಿಸುವ ಒಂದು ಕೇರಿ ಆಗಿರುತ್ತದೆ. ಅವರು "ದೇವಜನರ" ಹಾಗೆ, ಅಥವಾ "ಪರಿಶುದ್ಧರ" ಹಾಗೆ ಜೀವಿಸಬೇಕಾಗಿರುತ್ತದೆ; ಯಾಕೆಂದರೆ ಅವರು ಈಗಾಗಲೇ ಇದೇ ಆಗಿರುತ್ತಾರೆ. ಸಭೆಯು, ಅದು ನಾವು ಆಯಾ ಸ್ಥಳದಲ್ಲಿರುವ ಒಂದೇ ಸಭೆಯಾಗಿದ್ದರೂ ಸರಿಯೇ ಅಥವಾ ವಿಶ್ವದಲ್ಲೆಲ್ಲಾ ಇರುವ ಸಕಲ ಸಭೆಗಳನ್ನು ಒಳಗೊಂಡದ್ದಾಗಿ ಹೇಳಿದರೂ ಸರಿಯೇ, ಅದು ಕ್ರಿಸ್ತನ ದೇಹವಾಗಿರುತ್ತದೆ, ದೇವರ ನಿತ್ಯವಾದ ರಾಜ್ಯದ ಭೂಲೋಕದ ಮೂರ್ತರೂಪವಾಗಿರುತ್ತದೆ. ಅದರ ಸದಸ್ಯರ ಪರಿಶುದ್ಧ ಜೀವಿತಗಳ ಮುಖಾಂತರವಾಗಿ ಇದು ತೋರ್ಪಡಿಸಲ್ಪಡಬೇಕು, ಹೀಗೆ ಪಾಪಭರಿತ ಲೋಕವು ಬೇರೆ ದಾರಿಯೇ ಇಲ್ಲದೆ ವ್ಯತ್ಯಾಸವನ್ನು ನೋಡುವಂತಾಗಬೇಕೆಂಬುದು ದೇವರ ಲಕ್ಷ್ಯವಾಗಿರುತ್ತದೆ. ನಾವು ಕತ್ತಲೆಯಲ್ಲಿ ಬೆಳಕಿನ ಹಾಗೆ ಪ್ರಕಾಶಿಸಬೇಕಾಗಿರುತ್ತದೆ - ಕ್ರಿಸ್ತನ ಜೀವಿತದ ಸೌಂದರ್ಯದ ಕಿರಣಗಳನ್ನು ಹೊರಸೂಸುವದಷ್ಟೆ ಅಲ್ಲ ಆದರೆ ಲೋಕದಲ್ಲಿರುವ ಕೆಟ್ಟತನ, ಕ್ರೂರತನ, ಹಾಗೂ ಭ್ರಷ್ಟತೆಯನ್ನು ಬಯಲುಗೊಳಿಸುವಂಥದ್ದು ಸಹ ಆಗಿರುವ ಬೆಳಕು (ಮತ್ತಾಯ 5:14-16; 2 ಕೊರಿಂಥ 4:6; ಎಫೆಸ 5:8-11).

ಯೇಸುವು ಯೋಹಾನ 17:21ರಲ್ಲಿ ಪ್ರಾರ್ಥಿಸಿದ ಪ್ರಕಾರ ಐಕ್ಯತೆಯಲ್ಲಿ ಜೀವಿಸುವದಕ್ಕೆ ಅತ್ಯಾಸಕ್ತಿಯಿಂದ ಪ್ರಯತ್ನಿಸತಕ್ಕದ್ದು: "ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ." ಈ ಪ್ರಾರ್ಥನೆಯ ಲಕ್ಷ್ಯವು, ಈ ಉಳಿದಿರುವ ಲೋಕ-ಯುಗದ ಶತಮಾನಗಳಲ್ಲಿನ ಆತನ ಶಿಷ್ಯರು, ತಂದೆಯೊಂದಿಗೆ ಯೇಸುವು ಹೊಂದಿರುವ ಅದೇ ಐಕ್ಯತೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಿಕೊಳ್ಳಬೇಕೆಂಬುದೇ ಆಗಿತ್ತು. ಬೇರೆಯವರನ್ನು ರಕ್ಷಣೆಯುಂಟು ಮಾಡುವ ಸುವಾರ್ತೆಯೊಂದಿಗೆ ಸಂಧಿಸುವದರಲ್ಲಿ ನಮ್ಮ ಯಶಸ್ಸು ಅಂಥ ಐಕ್ಯತೆಯ ಮೇಲೆಯೇ ಆಧಾರವಾಗಿರುತ್ತದೆ.

ಯೇಸುವಿನ ಪ್ರಾರ್ಥನೆಯು ಈ ವಿಭಜನೆಶೀಲತೆ ಎಷ್ಟೊಂದು ಕೆಟ್ಟದ್ದು ಮತ್ತು ವಿನಾಶಕಾರಿ ಎಂಬುದನ್ನು ನಾವು ಅರ್ಥಮಾಡಿಕೊಳ್ಳುವಂತೆ ನಡಿಸತಕ್ಕದ್ದು. "ಪ್ರತಿಯೊಂದು ಸಭೆಯಲ್ಲಿಯೂ ಒಬ್ಬ ವಿರಸ ಉಂಟುಮಾಡುವವನು ಇದ್ದಾನೆ" ಎಂದು ಕೆಲವರು ಹೇಳಬಹುದು. ಪೌಲನು ಅಂತಹದ್ದಕ್ಕೆ ಅವಕಾಶವನ್ನು ಕೊಡಲಿಲ್ಲ. ಅದಕ್ಕೆ ಬಹಳ ತದ್ವಿರುದ್ಧವಾಗಿ, ಆತನು ತತ್ಪರಿಣಾಮವಾಗಿ ಹೇಳಿದ್ದೇನೆಂದರೆ, "ಮನೆಯನ್ನು ಶುದ್ಧಗೊಳಿಸಿರಿ! ಕ್ಯಾನ್ಸರ್ ಹರಡಿ ನೀವು ಸದಸ್ಯರಾಗಿರುವಂಥ ಇಡೀ ಆತ್ಮೀಕ ದೇಹಕ್ಕೆ ಸೊಂಕಿಸುವದಕ್ಕೆ ಮತ್ತು ಲೋಕದಲ್ಲಿ ಅದಕ್ಕಿರುವ ದೈವಿಕ ಉದ್ದೇಶವನ್ನು ಭಂಗಪಡಿಸುವದಕ್ಕೆ ಮುಂಚೆಯೇ ಆ ಮನುಷ್ಯನನ್ನು ನಿಮ್ಮ ಮಧ್ಯದಿಂದ ತೊಲಗಿಸಿಕೊಳ್ಳಿರಿ." ನಮ್ಮ ಕರ್ತನ ಆತ್ಮೀಕ ದೇಹದಲ್ಲಿ ವೈಷಮ್ಯಗಳನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಇದು ಈ ನಾಶನದಲ್ಲಿರುವ ಮತ್ತು ಹತಾಶೆಯಲ್ಲಿರುವ ಕತ್ತಲು ಲೋಕದಲ್ಲಿ ಆತನ

ಮಹಿಮೆಯನ್ನು ತೋರ್ಪಡಿಸುವದಕ್ಕಾಗಿ ರಚಿತಗೊಂಡಿರುವ ಪರಲೋಕ ಮಂಡಲದ ಒಂದು ಸೂಕ್ಷ್ಮರೂಪವಾಗಿರುತ್ತದೆ.

## ಕುಡಿತದ ಚಟದ ಕುರಿತು ಕ್ರಮ ಕೈಗೊಳ್ಳುವದು (5:21)

ಕುಡಿತದ ಚಟ ಮತ್ತು ಮದ್ಯಕ್ಕೆ ವ್ಯಸನಿಯಾಗಿರುವದರಲ್ಲಿ ದೈಹಿಕ ಹಾಗೂ ಮನೋಶಾಸ್ತ್ರೀಕವಾದ ಅಂಶಗಳು ಇರುತ್ತವೆ. ಅನೇಕ ಜನರು ಒಬ್ಬ ಕುಡುಕನ ಹೊರಗಿನ ವರ್ತನೆಯನ್ನು ನೋಡಿ ಅದನ್ನು ವಿನೋದಕಾರಿ ಎಂದು ಎಣಿಸುತ್ತಾರೆ. ಹೇಗೂ, ಒಬ್ಬ ವ್ಯಕ್ತಿಯು ಅಂಥ ವಿಧದಲ್ಲಿ ವರ್ತಿಸುವಷ್ಟರ ಮಟ್ಟಿಗೆ ತನ್ನ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುವದಕ್ಕೆ ಹಾಸ್ಯಮಯವಾದದ್ದೇನೂ ಇರುವದಿಲ್ಲ. ಕೆಲವರು ಈ ವಿಷಯದ ಕುರಿತು ಜ್ಞಾನೋಕ್ತಿ 23:29-35ರಲ್ಲಿ (NIV) ಹೇಳಿರುವದನ್ನು ವಿನೋದಕರವೆಂದು ಪರಿಗಣಿಸಿರುತ್ತಾರೆ:

> ಅಯ್ಯಯ್ಯೋ ಅನ್ನುವವರು ಯಾರು? ಅಕಟಾ ಎಂದು ಕೂಗಿಕೊಳ್ಳುವವರು ಯಾರು?
> ಯಾರು ಜಗಳವಾಡುತ್ತಾರೆ? ಯಾರು ಗೋಳಾಡುತ್ತಾರೆ?
> ಯಾರು ಸುಮ್ಮಸುಮ್ಮನೆ ಗಾಯಪಡುತ್ತಾರೆ? ಕೆಂಪೇರಿದ ಕಣ್ಣುಳ್ಳವರು ಯಾರು?
> ಮಿಶ್ರಮದ್ಯಪಾನಾಸಕ್ತರಾಗಿ
> ದ್ರಾಕ್ಷಾರಸವನ್ನು ಕುಡಿಯುತ್ತಾ ಕಾಲಹರಣಮಾಡುವವರೇ.
> ಪಾತ್ರೆಯಲ್ಲಿ ಕೆಂಪಗೆ ಥಳಥಳಿಸುವ
> ದ್ರಾಕ್ಷಾರಸದ ಮೇಲೆ ಕಣ್ಣಿಡಬೇಡ.
> ಅದು [ಗಂಟಲಿನೊಳಗೆ] ಮೆಲ್ಲಗೆ ಇಳಿದು ಹೋಗಿ!
> ಆಮೇಲೆ ಹಾವಿನಂತೆ ಕಚ್ಚುತ್ತದೆ,
> ಹೌದು, ನಾಗದ ಹಾಗೆ ಕಡಿಯುತ್ತದೆ.
> ನಿನ್ನ ಕಣ್ಣು ಇಲ್ಲದ್ದನ್ನೇ ಕಾಣುವದು,
> ಮನಸ್ಸು ವಿಪರೀತಗಳನ್ನು ಹೊರಪಡಿಸುವದು.
> ನೀನು ಸಮುದ್ರದ ನಡುವೆಯಾಗಲಿ
> ಹಡಗಿನ ಕಂಬದ ತುದಿಯಲ್ಲಾಗಲಿ ಮಲಗಿರುವವನಂತೆ ಇರುವಿ.
> ಜನರು ನನ್ನನ್ನು ಹೊಡೆದರೂ ನೋವಾಗಲಿಲ್ಲ,
> ಬಡಿದರೂ ತಿಳಿಯಲಿಲ್ಲ;
> ಯಾವಾಗ ಎಚ್ಚೆತ್ತೇನು?
> ಪುನಃ ಅದನ್ನೇ ಹುಡುಕೇನು ಎಂದುಕೊಳ್ಳುವಿ.

ಈ ಸಾಲುಗಳನ್ನು ಓದಬಲ್ಲವನಾಗಿಯೂ ಅವುಗಳಲ್ಲಿ ಎದ್ದು ಕಾಣುವ ದುರಂತವನ್ನು ಕಾಣದ ವ್ಯಕ್ತಿಯು ಬಹುಶಃ ಮದ್ಯವ್ಯಸಯಾಗಿ ಮಾರ್ಪಟ್ಟಿರುವ ತನ್ನ ಪ್ರಿಯರೊಬ್ಬರಿಗಾಗಿ ಎಂದೂ ಶೋಕಿಸಿರುವದಿಲ್ಲ ಎಂದು ಕಾಣಿಸುತ್ತದೆ. ಅಂಥ ವ್ಯಕ್ತಿಯು ಹೆಚ್ಚುಕಡಿಮೆ ದೆವ್ವ ಪೀಡಿತನಂತೆ ಕಾಣುತ್ತಾನೆ; ಆತನು ತನ್ನ ದೇಹವನ್ನು ಎಷ್ಟೊಂದು ವಿಷಗೊಳಿಸಿಕೊಂಡಿದ್ದಾನೆಂದರೆ ಆತನ ಸಹಜವಾದ ರಸಾಯನಿಕ ಸಮತೋಲನವೇ ಕೇಡಿಸಲ್ಪಟ್ಟಿರುತ್ತದೆ. ಆತನು ದೈಹಿಕವಾಗಿಯೂ ಮಾನಸಿಕವಾಗಿಯೂ ಈ ದ್ರವ್ಯಕ್ಕೆ ಅಂಟಿಕೊಳ್ಳುವವನಾಗಿ ಮಾರ್ಪಡಬಲ್ಲನು. ಬಹುಶಃ ಆತನ ಒಂದು ರೀತಿಯ ಕ್ಷಣಿಕ ರೋಮಾಂಚಕತೆಯನ್ನು ಅನುಭವಿಸಬೇಕೆಂದು ಅದರೊಂದಿಗೆ ಪ್ರಯೋಗವನ್ನು ನಡಿಸುವದಕ್ಕೆ ಬಯಸಬಹುದು. ಆ ಆಯ್ಕೆಯಿಂದಾಗುವ ಪರಿಣಾಮಗಳನ್ನು ಬಣ್ಣಿಸುವ ವೇಳೆ

ಸೊಲೊಮೋನನು ಎಂಥ ಮನಸೆಳೆಯುವಂಥ ಚಿತ್ರವನ್ನು ಆರಿಸಿಕೊಂಡನು! ಆತನು ದೈಹಿಕ ದುಸ್ಥಿತಿಗಳನ್ನು, ಸಾಮಾಜಿಕ ಅಸಮನ್ವಯತೆ, ಮತ್ತು ದೈಹಿಕ ರೂಪವನ್ನು ಕೆಡಿಸಿಕೊಳ್ಳುವಿಕೆ ಇವುಗಳನ್ನು ಚಿತ್ರಿಸುತ್ತಾನೆ. ಅದರ ಜೊತೆಗೆ, ಅಮೂಲ್ಯವಾದ ಸಮಯ, ಸ್ಪಷ್ಟ ದೃಷ್ಟಿ, ಚಿತ್ತಸ್ತಿಮಿತತೆ, ಮತ್ತು ನೊವಿಗೆ ಸ್ವಭಾವಿಕ ಸ್ಪಂದನೆ (ದೈಹಿಕವಾಗಿ ಏನೋ ತಪ್ಪಿರುತ್ತದೆ ಮತ್ತು ಅದಕ್ಕೆ ತಕ್ಷಣ ಗಮನ ಕೊಡಬೇಕೆಂಬುದಾಗಿ ದೇವರಿಂದ-ಕೊಡಲ್ಪಟ್ಟ ಸೂಚನೆ) ಇವುಗಳನ್ನು ಕಳೆದುಕೊಳ್ಳುವದರ ಕುರಿತು ಮಾತಾಡಿದನು. ಆ ಬಳಿಕ ಅತಿ ದೀನಸ್ಥಿತಿಯ ವ್ಯಸನದ ದುರಂತವು ಬರುತ್ತದೆ: ಇನ್ನೊಂದು ಸಾರಿ ಮದ್ಯ ಸೇವನೆ ಮಾಡುವದರ ಮೂಲಕ ಮಾತ್ರವೇ “ಸಹಾಯ ಪಡೆಯುವಂಥ” ದುಸ್ತರವಾದ ವೇದನೆ.

ಒಬ್ಬ ಮದ್ಯ ವ್ಯಸನಿಗಾಗಿ ಪ್ರೀತಿ ಮತ್ತು ಅರ್ಥಮಾಡಿಕೊಳ್ಳುವಿಕೆಯನ್ನು ಕಾಯ್ದುಕೊಳ್ಳಲು ಪ್ರಯತ್ನವೊಂದನ್ನು ಮಾಡುವ ವೇಳೆ, ಶಾಸ್ತ್ರಗಳ ಸ್ಪಷ್ಟವಾದ ಬೋಧನೆಯನ್ನು ಒಪ್ಪಿಸುವಂತೆ ಅಥವಾ ವಿಕೃತಗೊಳಿಸುವಂತೆ ಪರಿಸ್ಥಿತಿಗೆ ಅವಕಾಶವನ್ನು ಕೊಡಬಾರದು. ಈ ಕುಡಿಕತನದ ಕುರಿತಾದ ಚರ್ಚೆಯು ಯಾವ ಸನ್ನಿವೇಶದಲ್ಲಿ ಮಾಡಲ್ಪಡುತ್ತಿದೆ ಎಂಬುದರ ಕಡೆಗೆ ಹಿಂದಿರುಗತಕ್ಕದ್ದು: ಪೌಲನು ಅದನ್ನು “ಶರೀರಭಾವದ ಕರ್ಮಗಳು” ಎಂದು ಕರೆಯುತ್ತಾನೆ (5:19-21). ಒಬ್ಬ ಕುಡಿತದ ಚಟಕ್ಕೆ ಬಿದ್ದಿರುವವನ ಕುಟುಂಬವನ್ನು ಅಥವಾ ಸ್ನೇಹಿತನನ್ನು ನಾವು ಪ್ರೀತಿಸಬೇಕೆಂಬ ವಾಸ್ತವಾಂಶದ ಹೊರತಾಗಿಯೂ, ಆತನು ಹೇಳಿದ್ದೇನೆಂದರೆ, “ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ” (5:21).

ಅಂತಿಮ ನ್ಯಾಯತೀರ್ಪು, ಖಂಡಿತವಾಗಿಯೂ ದೇವರಿಗೆ ಮತ್ತು, ಆತನು ಲೋಕಕ್ಕೆ ನ್ಯಾಯತೀರ್ಪನ್ನು ಕೊಡುವ ಅಂತಿಮ ಕೆಲಸವನ್ನು ಒಪ್ಪಿಸಿರುವ ಆತನ ಕ್ರಿಸ್ತನಿಗೆ ಸೇರಿದ್ದಾಗಿದೆ.[138] ಅಷ್ಟುಮಾತ್ರವಲ್ಲದೆ, ಈ ಮಾತುಗಳು (5:19-21) “ಸಾರುವವನಾಗಿಯೂ ಅಪೊಸ್ತಲನಾಗಿಯೂ ಉಪದೇಶಕನಾಗಿಯೂ ನೇಮಿಸಲ್ಪಟ್ಟವನ” (2 ತಿಮೊಥೆ 1:11) ಪ್ರೇರಿತ ಲೇಖನಿಯ ಮೂಲಕವಾಗಿ ನಮಗೆ ಬಂದಿರುತ್ತವೆ. ಮಾನವರನ್ನು “ದೇವರೊಂದಿಗೆ ಸಮಾಧಾನವಾಗಿರೆಂದು” ಕರೆಯುವವನಾಗಿ, ಪೌಲನು ಕ್ರಿಸ್ತನ ರಾಯಭಾರಿ ಪಾತ್ರದಲ್ಲಿ ಸೇವೆ ಮಾಡುತ್ತಿದ್ದನು (2 ಕೊರಿಂಥ 5:20; ನೋಡಿರಿ ಎಫೆಸ 6:20). ದೇವರು ಆತನ ಮೂಲಕವಾಗಿ ಮಾತಾಡುತ್ತಿದ್ದನಾದ್ದರಿಂದ, ಆತನ ಮಾತುಗಳ ಅರ್ಥವನ್ನು ಬದಲಾಯಿಸಬೇಕೆಂಬ ಪ್ರಲೋಭನೆಗೆ ನಾವು ಎಂದಿಗೂ ಒಳಗಾಗಬಾರದು.

ಒಬ್ಬ ಕುಡಿತದ ಚಟವಿರುವ ವ್ಯಕ್ತಿಯ ಕುಟುಂಬವನ್ನು ಅಥವಾ ಸ್ನೇಹಿತನನ್ನು ನಾವು ಎಷ್ಟೇ ಪ್ರೀತಿ ಮಾಡಿದರೂ ಸರಿಯೇ, ಕುಡುಕತನವು ಶರೀರಭಾವದ ಒಂದು ಕರ್ಮ, ಒಬ್ಬನನ್ನು ಪರಲೋಕದಿಂದ ಹೊರಗೆ ಇಡುವಂಥ ಒಂದು ಪಾಪವಾಗಿದೆ! ನಾವು ಯಾರನ್ನೇ ಆಗಲಿ ನಾಶವಾಗಲೆಂದು ತೀರ್ಪು ಮಾಡುವದಕ್ಕೆ ಬಯಸುದಿಲ್ಲ, ದೇವರು ಸಹ ಬಯಸುವದಿಲ್ಲ (2 ಪೇತ್ರ 3:9). ಹಾಗಿದ್ದರೂ, ಕುಡಿತದ ಚಟವಿರುವವನು, ಇಲ್ಲಿ ಪಟ್ಟಿ ಮಾಡಲಾಗಿರುವ ದುರ್ಗುಣಗಳನ್ನು ನಡಿಸುವ ಮಿಕ್ಕ ಎಲ್ಲರಂತೆಯೇ, ತನ್ನ ಪಾಪಕ್ಕೆ ತಾನೇ ಹೊಣೆಗಾರನು. ಆತನು ದೇವರೊಂದಿಗೆ ಸಮಾಧಾನಗೊಳ್ಳುವ ಅಗತ್ಯವಿರುತ್ತದೆ. ಬಹಳಷ್ಟು ಸಾರಿ, ಪ್ರಿಯರಾದವರು ದೇವರ ಚಿತ್ತದ ವಿರುದ್ಧವಾಗಿ ಎದ್ದೇಳುವದನ್ನು ಕಾಣುವಾಗ, ತಮ್ಮ ಮಗುವು ನಿತ್ಯವಾದ ನಾಶನಕ್ಕೆ ಒಳಗಾಗುವ ಅಪಾಯದಲ್ಲಿರುವ ಒಬ್ಬ ಮತಭ್ರಷ್ಟನನ್ನಾಗಿ ಕಾಣುವದಕ್ಕೆ ಮನಸ್ಸಿಲ್ಲದ ಕಾರಣದಿಂದ ತಮ್ಮ ದೈವಶಾಸ್ತ್ರವನ್ನು ಮಾರ್ಪಡಿಸಿಕೊಳ್ಳುತ್ತಾರೆ. ಈ ವಿಷಯದ ಕುರಿತಾಗಿ ಮತ್ತಾಯ 10:37ರಲ್ಲಿ ಸ್ವತಃ ಕರ್ತನು ಕೆಲವು ಮಾತುಗಳನ್ನು ಹೇಳಿರುತ್ತಾನೆ: “ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ

ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ." ಕ್ರೈಸ್ತನ ಪ್ರೀತಿಯ ಆದ್ಯತೆಗಳೊಳಗೆ ಯಾವುದರಲ್ಲಿಯೂ ಎರಡನೆಯ ಸ್ಥಾನವನ್ನು ದೇವರು ಸ್ವೀಕರಿಸಿಕೊಳ್ಳುವದಿಲ್ಲ. ನಾವು ನಾಶನದಲ್ಲಿರುವ ಒಬ್ಬ ಪ್ರಿಯರನ್ನು ಎಷ್ಟೇ ಪ್ರೀತಿ ಮಾಡಿದಾಗ್ಯೂ, ನಾವು ಆತನನ್ನು ಎಂದಿಗೂ ಕರ್ತನಿಗಿಂತಲೂ ಅಧಿಕವಾಗಿ ಪ್ರೀತಿಸಕೂಡದು. ನಾವು ಆತನನ್ನು ಕಾಪಾಡಿ ಪುನಃ ನಮ್ಮವನನ್ನಾಗಿಸಿಕೊಳ್ಳಲು ನಮ್ಮ ಶಕ್ತಿಯಲ್ಲಿರುವದನ್ನೆಲ್ಲಾ - ದೇವರು ಸ್ವತಃ ತನ್ನ ಪ್ರೇರಿತ ವಾಕ್ಯದಲ್ಲಿ ಪ್ರಕಟಗೊಳಿಸಿರುವದನ್ನು ರಾಜಿ ಮಾಡಿಕೊಳ್ಳದೆ ಅಥವಾ ಬದಲಾಯಿಸದೆ ಆ ಕೆಲಸವನ್ನು ಮಾಡತಕ್ಕದ್ದು. ಈ ಸಂದೇಶದ ಆಧಾರದಲ್ಲಿ, ಕ್ರಿಸ್ತನು ಕಡೇ ದಿನದಂದು ಅಂತಿಮ ನ್ಯಾಯತೀರ್ಪನ್ನು ಘೋಷಿಸುವನೆಂದು ನಾವು ಒಪ್ಪಿಕೊಳ್ಳುತ್ತೇವೆ (ಯೋಹಾನ 12:48).

### ದುಂಣದೌತಣದ ಪಾಪ (5:21)

ಈ ದಿನದಲ್ಲಿ ಡಿಯೊನಿಸುಸ್ ದೇವತೆಯ ಗೌರವಾರ್ಥವಾದ ಒಂದು ಕುಡಿತದಿಂದ, ಸ್ವಚ್ಛಂದವಾದ ಮೆರವಣಿಯಲ್ಲಿ ಪಾಲ್ಗೊಳ್ಳುವವರು ಯಾರಾದರೂ ಇರುವದಾದರೆ, ಕೆಲವೇ ಕೆಲವರು ಇದ್ದಾರಾದರೂ, ಅನೇಕರು ಈಗಲೂ "ದುಂದೌತಣ" (*kōmos*) ಪಾಪ ಮಾಡಿದವರಾಗಿರಬಹುದು. ಕೆಲವು ಸಾರಿ ಜನರು ರೋಮಾಂಚಕಾರಿ ಕ್ರೀಡಾ ಸಮಾರಂಭಗಳಿಗೆ ಸಂಬಂಧಪಟ್ಟಂತೆ ನಿಯಂತ್ರಣವಿಲ್ಲದ ಹುಚ್ಚಾಟದ ವರ್ತನೆಯನ್ನು ತೋರ್ಪಡಿಸುತ್ತಾರೆ. ಯುವಕರು ನಿಯಂತ್ರಣವಿಲ್ಲದ ಮತ್ತು ಕ್ರಮವಿಲ್ಲದ ನಡವಳಿಕೆಯ ಕಾರಣದಿಂದಾಗಿ ಅಂತರಾಷ್ಟ್ರೀಯ ಕಾಲ್ಚೆಂಡು ಕ್ರೀಡೆಗಳಿಂದ ಹಿಂದಿರುಗುವಾದ ಹಲ್ಲುಗಳನ್ನು ಮುರಿದುಕೊಂಡು ಮತ್ತು ಕಣ್ಣನ್ನು ಕಪ್ಪು ಮಾಡಿಕೊಂಡು ಬರುತ್ತಾರೆ. ಕೆಲವರು ರಾತ್ರಿಯನ್ನು ಜೈಲಿನಲ್ಲಿ ಸಹ ಕಳೆಯಬೇಕಾದ ಸ್ಥಿತಿಗೊಳಗಾಗಿದ್ದರು. ಕ್ರೀಡಾ ಅಭಿಮಾನಿಗಳು, ರೋಮಾಂಚನಕ್ಕೊಳಗಾಗಿ ಅಥವಾ ಕೋಪದಿಂದಾಗಿ ನಿಯಂತ್ರಣವನ್ನು ಸಂಪೂರ್ಣ ಕಳೆದುಕೊಂಡು ಪ್ರೇಕ್ಷಕರ ಬೆಂಚುಗಳಿಂದ ರಭಸವಾಗಿ ಓಡಿ ಬಂದು ವಾಸ್ತವಿಕದಲ್ಲಿ ಜನರನ್ನು ತುಳಿದಾಡಿ ಸಾವಿಗೆ ಕಾರಣವಾಗಿರುವಂಥ ಘಟನೆಗಳನ್ನು ಸುದ್ದಿ ಮಾಧ್ಯಮಗಳು ವರದಿ ಮಾಡಿರುತ್ತವೆ.

ಯಾವದೇ ವ್ಯಕ್ತಿಗೂ ಸ್ವೇಚ್ಛಾಮಯವಾದ, ನಿಯಂತ್ರಣವಿಲ್ಲದ ವರ್ತನೆಯನ್ನು ನಡಿಸುವ ಸಾಮರ್ಥ್ಯವಿರುತ್ತದೆ. ಹಲವಾರು ವರ್ಷಗಳ ಹಿಂದೆ, ಕಾಲೇಜ್ ಕಾಲ್ಚೆಂಡು ಆಟವೊಂದರ ವೇಳೆಯಲ್ಲಿ, ಎದುರಾಳಿ ತಂಡದ ಸದಸ್ಯರಿಗೆ ಗಾಯವನ್ನುಂಟು ಮಾಡುವವನೆಂದು ಪರಿಚಿತನಾಗಿದ್ದ ಆಟಗಾರನೊಬ್ಬನು ಎದುರಾಳಿ ತಂಡದಲ್ಲಿನ ಒಬ್ಬ ಪ್ರಮುಖ ಆಟಗಾರನಿಗೆ ಗಂಭೀರವಾಗಿ ಗಾಯವುಂಟು ಮಾಡಿದನು. ಈ ಒರಟಾದ ಆಟವನ್ನು ಕಂಡು ಒಬ್ಬ ಕ್ರೈಸ್ತನು, "ಸಾಯಿಸಿರಿ ಅವನನ್ನು! ಸಾಯಿಸಿರಿ ಅವನನ್ನು!" ಎಂದು ಕೂಗುವ ಮೂಲಕ ಪ್ರತಿಕ್ರಿಯಿಸಿದ್ದನು. ಈ ಅಜಾಗರೂಕತೆಯ ಮಾತುಗಳಿಂದ, ಆತನು ಈ ದುರ್ವರ್ತನೆಗೆ ಬಲಿಯಾಗಿದ್ದ ವ್ಯಕ್ತಿಯ ಗಾಯದಲ್ಲಿ ಆತನು ತನಗೆ ಅರಿವಿಲ್ಲದೆಯೇ ಸಂಭ್ರಮಿಸುತ್ತಿದ್ದನು!

ಜನಸ್ತೋಮದ ಮನೋಶಾಸ್ತ್ರದಿಂದ ಬರಬಹುದಾದ ಶಕ್ತಿ ಮತ್ತು ಸಂಭಾವ್ಯ ಹಾನಿಯನ್ನು ಕುರಿತು ನಾವೆಲ್ಲರೂ ಬಲ್ಲವರಾಗಿದ್ದೇವೆ, ಅದಕ್ಕೆ ಸಂದರ್ಭವು ಏನೇ ಆಗಿದ್ದರೂ ಸರಿಯೇ (ಅಪೊಸ್ತಲರ ಕೃತ್ಯಗಳು 19:28-34). ಸ್ವ-ನಿಯಂತ್ರಣ ಮತ್ತು ಸ್ವಸ್ಥಬುದ್ಧಿ ಇವುಗಳು ಆತ್ಮೀಕ ಸದ್ಗುಣಗಳಾಗಿವೆ; ಮತ್ತು ನಮ್ಮ ಸಂಭಾಷಣೆಯ ವಿಷಯದಲ್ಲಿ ಸಹ, ಇವುಗಳು ಇಲ್ಲವಾದಲ್ಲಿ

ಬೇರೆಯವರಿಗೆ ನೋವುಂಟು ಮಾಡುವ ಸಂಭಾವ್ಯತೆಯಿರುತ್ತದೆ.

ಈಗ ನಮ್ಮ ಮುಂದಿರುವ ಪ್ರಕರಣದಲ್ಲಿ, ಕೆಲವು ಶ್ರೋತೃಗಳು ಈ ಕ್ರೈಸ್ತನ ಕಡಗೆ ಮಾತ್ರವಲ್ಲದೆ ಮತ್ತೊಬ್ಬನಿಗಾದ ಗಾಯಕ್ಕಾಗಿ ಸಂಭ್ರಮಿಸುವದಕ್ಕೆ ಆತನೊಂದಿಗೆ ಕೂಡಿಕೊಂಡ ಬೇರೆಯವರ ಕಡೆಗಿನ ಗೌರವವನ್ನು ಕಳೆದುಕೊಂಡರು. ನನ್ನ ಸ್ವಂತ ಪ್ರತಿಕ್ರಿಯೆ ಸಹ ಅಷ್ಟಾಗಿ ಆತ್ಮೀಕವಾಗಿರಲಿಲ್ಲವೆಂದು ನಾನು ಒಪ್ಪಿಕೊಳ್ಳಲೇ ಬೇಕಾಗುತ್ತದೆ ಯಾಕೆಂದರೆ ನಾನು ಆತನ ಈ ಸ್ವೇಚ್ಛಾಮಯ ವರ್ತನೆಯ ವಿಷಯವಾಗಿ ಆತನ ಮೇಲೆ ಕೋಪದಿಂದ ಕೂಗಾಡಿದ್ದೆನು. ಈ ನಡವಳಿಕೆಯು "ದುಂದೌತಣ" (*kōmos*) ಅಂಶವಿಲ್ಲದಂಥದ್ದಾಗಿತ್ತೋ?

## ದೇವರ ರಾಜ್ಯದಿಂದ ಕೈ ಬಿಡಲ್ಪಡುವವರಾಗಿರಬಾರದೆಂದು ಎಚ್ಚರಿಕೆ (5:21)

ಪೌಲನು ಗಲಾತ್ಯದ ಕ್ರೈಸ್ತರನ್ನು (ಪವಿತ್ರಾತ್ಮನ ಮಾರ್ಗದರ್ಶನದಂತೆ ನಡೆಯುವದರ ಬದಲಾಗಿ) ಈ ಶರೀರಭಾವದ ಕರ್ಮಗಳನ್ನು ನಡಿಸುವವರು "ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು" ಮುನ್ನೆಚ್ಚರಿಸಿದನು (5:21). ದೇವರು ತನ್ನ ಪ್ರೀತಿಸುವವರಿಗೆ ಮತ್ತು ವಿಧೇಯರಾಗುವವರಿಗೆ ಸಿದ್ಧಪಡಿಸಿರುವ ನಿತ್ಯವಾದ ಬಾಧ್ಯತೆಯನ್ನು ಈ ಅಪರಾಧಿಗಳು ಕಳೆದುಕೊಳ್ಳುವರು.

ಈ ತತ್ವವನ್ನು ಹಳೆಯ ಒಡಂಬಡಿಕೆಯಲ್ಲಿನ ಇಸ್ರಾಯೇಲ್ಯರ ಉದಾಹರಣೆಯ ಮೂಲಕವಾಗಿ ದೃಷ್ಟಾಂತ ಪಡಿಸಬಹುದು. ಜನರು ಐಗುಪ್ತದ ದಾಸತ್ವವೆಂಬ ನೊಗದಲ್ಲಿ ಸಿಕ್ಕು ಗೋಳಾಡಿದ್ದರು, ಆದರೆ ದೇವರು ಅದ್ಭುತಕರವಾಗಿ ಅವರನ್ನು ದಬ್ಬಾಳಿಕೆ ಮಾಡುವವರ ಕೈಯೊಳಗಿಂದ ಬಿಡಿಸಿ ಕಾಪಾಡಿದನು. ಆತನು ಅವರಿಗೆ ಒಂದು ಅದ್ಭುತವಾದ ಸ್ವದೇಶವನ್ನು - ಕಾನಾನ್ ದೇಶವನ್ನು, "ಹಾಲೂ ಜೇನೂ ಹರಿಯುವ" ದೇಶವನ್ನು ಕೊಡುವದಾಗಿ ವಾಗ್ದಾನ ಮಾಡಿದನು (ವಿಮೋಚನಕಾಂಡ 3:8). ದಾಸತ್ವದಲ್ಲಿ ಹುಟ್ಟಿದವರಾದ, ತಮ್ಮನ್ನು ದುಡಿಸಿಕೊಳ್ಳುತ್ತಿದ್ದವರ ಕೈ ಕೆಳಗೆ ಶತಮಾನಗಳ ಕಾಲ ಗುಲಾಮರಾಗಿದ್ದವರಿಗೆ, ತಮ್ಮ ಪ್ರಯಾಸಗಳಿಗೆ ವಿಶ್ರಾಂತಿ ಸಿಗಬೇಕು ಮತ್ತು ದೇವರ ಕಾಪಾಡುವ ರೆಕ್ಕೆಗಳ ಕೆಳಗೆ ಭದ್ರತೆಯು ಸಿಕ್ಕಬೇಕೆಂದು ನಿಷ್ಠೆಯಿಂದ ನಿರೀಕ್ಷೆ ಪಡುತ್ತಿದ್ದವರಿಗೆ, ಬೇರೆ ಇನ್ನಾವದು ಹೆಚ್ಚು ಅಮೂಲ್ಯವಾಗಿದ್ದಿರಲು ಸಾಧ್ಯ?

ಆ ವಾಗ್ದಾನ ಮಾಡಲ್ಪಟ್ಟ ವಿಶ್ರಾಂತಿಯ ಕಡೆಗೆ ಸಾಗುವ ದಾರಿಯಲ್ಲಿ ಏನು ಸಂಭವಿಸಿತು? ಇಸ್ರಾಯೇಲ್ಯರು ಗೊಣಗಾಡುವ, ಬೇಸರ ವ್ಯಕ್ತಪಡಿಸುವ, ಮತ್ತು ಗುಣಗುಟ್ಟುವ ನಿರಂತರವಾದ ಶೋಕಗೀತೆಯಲ್ಲಿ ಒಂದುಗೂಡಿಕೊಂಡರು. ಅವರು ತಮ್ಮ ಅಪನಂಬಿಕೆ ಮತ್ತು ಅವಿಧೇಯತೆಗಳಿಂದ ಕರ್ತನಿಗೆ ಕೋಪವೆಬ್ಬಿಸಿದರು. ಕೀರ್ತನೆ 95:10, 11ರಲ್ಲಿನ ಭಾಷೆಯನ್ನು ಬಳಸಿಕೊಳ್ಳುವವನಾಗಿ, ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಇಸ್ರಾಯೇಲ್ಯರ ವಿಷಯದಲ್ಲಿ ವಾಸ್ತವಿಕವಾಗಿ ದೇವರು ಕ್ರಮೇಣದಲ್ಲಿ ತನ್ನ ಸಂಪೂರ್ಣ ತಾಳ್ಮೆಯನ್ನು ಕಳೆದುಕೊಂಡಿದ್ದನೆಂದು ವಿವರಿಸುತ್ತಾನೆ:

> ಆದದರಿಂದ ನಾನು ಆ ಸಂತತಿಯವರ ಮೇಲೆ ಬಹಳವಾಗಿ ಕೋಪಿಸಿಕೊಂಡು -
> ಅವರು ಯಾವಾಗಲೂ ಹೃದಯದಲ್ಲಿ ತಪ್ಪಿಹೋಗುವವರು ಎಂದು ಹೇಳಿದೆನು.
> ಆದರೆ ಅವರು ನನ್ನ ಮಾರ್ಗವನ್ನು ತಿಳುಕೊಳ್ಳಲಿಲ್ಲ.
> ಹೀಗಿರಲು ಇವರು ನನ್ನ ವಿಶ್ರಾಂತಿಯಲ್ಲಿ ಸೇರುವದೇ ಇಲ್ಲವೆಂದು
> ಕೋಪಗೊಂಡು ಪ್ರಮಾಣಮಾಡಿದೆನು (ಇಬ್ರಿಯ 3:10, 11).

ಈ ದುರಂತಕರವಾದ ಘಟನಾವಳಿಯು ಇಂದು, ದೇವರ ಆತ್ಮೀಕ ಇಸ್ರಾಯೇಲ್ಯರಾದ

ನಮಗೆ ಏನು ಹೇಳುವದಾಗಿದೆ? ಈ ಪ್ರಶ್ನೆಗೆ ಉತ್ತರವು ಇಬ್ರಿಯ 3:12ರಲ್ಲಿ ಕೊಡಲ್ಪಟ್ಟಿದೆ: "ಸಹೋದರರೇ, ನೋಡಿಕೊಳ್ಳಿರಿ, ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು." ಲೇಖಕನು ಇನ್ನು ಮುಂದಕ್ಕೆ ಹೋಗಿ ಇಸ್ರಾಯೇಲ್ಯರ ಅವಿಧೇಯತೆ ಹಾಗೂ ಅಪನಂಬಿಕೆಗಳನ್ನು ಅನುಸರಿಸುವವರಾಗಿ "ಪಾಪದಿಂದ ಮೋಸಹೋಗಿ ಹೃದಯಗಳನ್ನು ಕಠಿಣಗೊಳಿಸಿಕೊಳ್ಳಬೇಡಿರಿ" ಎಂದು ಎಚ್ಚರಿಸುತ್ತಾನೆ (ಇಬ್ರಿಯ 3:13, 18, 19).

ಆತನು ಮಾತಾಡಿದ ವಾಗ್ದಾನ ಮಾಡಲ್ಪಟ್ಟ ವಿಶ್ರಾಂತಿಯು ಅಕ್ಷರಶಃ ಕಾನಾನ್ ದೇಶವಾಗಿರಲಿಲ್ಲ: "ಯೆಹೋಶುವನು ಅವರನ್ನು ಆ ವಿಶ್ರಾಂತಿಯಲ್ಲಿ ಸೇರಿಸಿದ್ದಾದರೆ ತರುವಾಯ ಮತ್ತೊಂದು ದಿವಸವನ್ನು ಕುರಿತು ಹೇಳೋಣವಾಗುತ್ತಿರಲಿಲ್ಲ" (ಇಬ್ರಿಯ 4:8).[139] ಅರಣ್ಯದಲ್ಲಿ ಕಳೆದ ನಾಲ್ವತ್ತು ವರ್ಷಗಳೊಳಗೆ ಅವಿಧೇಯರಾದ ಇಸ್ರಾಯೇಲ್ಯರೆಲ್ಲರೂ ಮರಣಿಸಿದ್ದರು. ಅದಾದ ಬಳಿಕ, ಯೆಹೋಶುವನು ಇಸ್ರಾಯೇಲ್ಯರ ಹೊಸ ಪೀಳಿಗೆಯನ್ನು ಕಾನಾನ್ ದೇಶದೊಳಗೆ ನಡಿಸಿದನು. "ಯೆಹೋವನು ಅವರ ಪೂರ್ವಿಕರಿಗೆ ಆಣೆಯಿಟ್ಟು ಹೇಳಿದಂತೆ ಅವರಿಗೆ ಎಲ್ಲಾ ಕಡೆಯಲ್ಲಿಯೂ ಸಮಾಧಾನಕೊಟ್ಟನು" ಎಂದು ಹೇಳಲಾಗಿರುತ್ತದೆ (ಯೆಹೋಶುವ 21:44). ಹೇಗೂ, ಲೇಖಕನು ಅದಕ್ಕಿಂತ ಎಷ್ಟೋ ಶ್ರೇಷ್ಠವಾದ, ಪರಲೋಕದ ವಿಶ್ರಾಂತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದನು. ಆತನು ಹೀಗೆ ಹೇಳಿದನು, "ಆದದರಿಂದ ದೇವರ ಜನರು ಅನುಭವಿಸುವದಕ್ಕಿರುವ ಸಬ್ಬತೆಂಬ ವಿಶ್ರಾಂತಿಯು ಇನ್ನೂ ಉಂಟು. ಹೇಗಂದರೆ ದೇವರು ತನ್ನ ಕೆಲಸಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ ಹಾಗೆಯೇ ಆತನ ವಿಶ್ರಾಂತಿಯಲ್ಲಿ ಸೇರಿರುವವನು ಸಹ ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿದ್ದಾನೆ" (ಇಬ್ರಿಯ 4:9, 10).

ಪೌಲನು ತನ್ನ ವಾಚಕರಿಗೆ ನೀಡುವ ಈ ಅಂತಿಮ ಎಚ್ಚರಿಕೆಯ ಕಡೆಗೆ ಬರುತ್ತಾನೆ. ಮೂಲತಃ, ಇದು ಆತನ ದಿನದಲ್ಲಿದ್ದ ಯೆಹೂದಿ ಕ್ರೈಸ್ತರಿಗಾಗಿ ಕೊಡಲ್ಪಟ್ಟದ್ದಾಗಿದೆ, ಆದಾಗ್ಯೂ ಇದು ಪ್ರತಿಯೊಂದು ಪೀಳಿಗೆಯ ಎಲ್ಲಾ ಕ್ರೈಸ್ತರಿಗೂ ಅನ್ವಯವಾಗುತ್ತದೆ: "ಆದದರಿಂದ ನಾವು ಆ ವಿಶ್ರಾಂತಿಯಲ್ಲಿ ಸೇರುವದಕ್ಕೆ ಪ್ರಯಾಸಪಡೋಣ; ನಮ್ಮಲ್ಲಿ ಒಬ್ಬರಾದರೂ ಅವರ ಅವಿಧೇಯತ್ವವನ್ನು ಅನುಸರಿಸುವವರಾಗಬಾರದು" (ಇಬ್ರಿಯ 4:11).

ಆತನು ಯಾವ ಅಂತಿಮ ವಿಶ್ರಾಂತಿಯ ಕುರಿತು ಮಾತಾಡಿದನೋ ಅದು ಪರಲೋಕದಲ್ಲಿ ದೇವರ ಸಂಗಡ ಇರುವ ವಿಶ್ರಾಂತಿಯಾಗಿದೆ. ಎಲ್ಲಾ ಯುಗಗಳಲ್ಲಿರುವ ದೇವರ ಜನರು, ಪಾಪದ ದಾಸತ್ವದಲ್ಲಿ ಸಿಕ್ಕವರಾಗಿದ್ದಂಥ ಆದರೆ ಈಗ ವಿಮೋಚಿಸಲ್ಪಟ್ಟಿರುವವರಾಗಿ, ಅವರು ತಮ್ಮ ಮರಣದ ಯೋರ್ದಾನ್ ನದಿಯನ್ನು ದಾಟಿ, ತಮ್ಮ ಭಾರಗಳನ್ನೆಲ್ಲಾ ಕೆಳಕ್ಕೆ ಇಟ್ಟು ಆ ನಿಜವಾದ ವಿಶ್ರಾಂತಿಯನ್ನು ಕಂಡುಕೊಳ್ಳುವದಕ್ಕೆ ಶಕ್ತರಾಗುವರು. ದೇವರು ಈ ಅದ್ಭುತಕರವಾದ ವಿಶ್ರಾಂತಿಯ ಸ್ಥಳವನ್ನು ಖಂಡಿತವಾಗಿಯೂ ನಮ್ಮೆಲ್ಲರಿಗೋಸ್ಕರ ಸಿದ್ಧ ಮಾಡಿದ್ದಾನಾದರೂ (ಇಬ್ರಿಯ 11:10), ನಾವು ಇನ್ನೂ ಅಲ್ಲಿಗೆ ತಲುಪಿರುವದಿಲ್ಲ. ಒಂದು ಸಾರಿ ಒಬ್ಬ ವೃದ್ಧ ಕ್ರೈಸ್ತನಿಗೆ ಆರಾಮವಾಗಿರುವಂತೆ ಮತ್ತು ಬಹಳ ಕಷ್ಟಪಟ್ಟು ಕೆಲಸ ಮಾಡಬೇಡವೆಂದು ಬೇಡಿಕೊಳ್ಳಲಾಯಿತು. ಈ ಸಲಹೆಗೆ ಆತನು ಪ್ರತ್ಯುತ್ತರವಾಗಿ ಹೀಗೆ ಹೇಳಿದನು, "ಪರಲೋಕವು ವಿಶ್ರಾಂತಿ ಪಡೆಯುವ ಸ್ಥಳವಾಗಿದೆ; ಭೂಮಿಯು ಕೆಲಸ ಮಾಡಬೇಕಾದ ಸ್ಥಳವಾಗಿದೆ." ಆತನು ಹೇಳಿದ್ದು ಸರಿಯಾಗಿಯೇ ಇದೆ. ನಮ್ಮ ವಿಮೋಚನೆ ಹಾಗೂ ಯೋರ್ದಾನ್ ದಾಟಿ ಹೋಗುವದರ ನಡುವಿನ ಮಧ್ಯಂತರವು ಲೇಖಕನ ಘನಗಂಭೀರವಾದ ಎಚ್ಚರಿಕೆಗೆ ಕಿವಿಗೊಡುವಂಥ ಸಮಯವಾಗಿರುತ್ತದೆ.

ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿನ ಈ ಉದಾಹರಣೆಯು, ಅದರ ಕಣ್ಸೆಳೆಯುವಂಥ ಚಿತ್ರಣದೊಂದಿಗೆ, ಪೌಲನು ಗಲಾತ್ಯದ ಸಹೋದರರ ಜೊತೆಯಲ್ಲಿ ಹಂಚಿಕೊಳ್ಳುತ್ತಿರುವ ಅದೇ ಸಂದೇಶವನ್ನೇ ಹೊಂದಿರುತ್ತದೆ. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ, ಚಿತ್ರಣವು ವಾಗ್ದಾನದ ದೇಶದ್ದಾಗಿದೆ (ಪರಲೋಕದ ಕಾನಾನ್), ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಾದರೋ ಅದು "ದೇವರ ರಾಜ್ಯ" ಆಗಿರುತ್ತದೆ. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ, ಸಮಸ್ಯೆಯು ನಂಬಿಕೆಯಲ್ಲಿ ಬಳಲಿ ಹೋಗುವಿಕೆ ಮತ್ತು ಬಿದ್ದು ಹೋಗುವಿಕೆ (ಮತಭ್ರಷ್ಟತೆ) ಕುರಿತಾಗಿರುತ್ತದೆ; ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ, ಕ್ರೈಸ್ತರನ್ನು ಅಪ ರೀತಿಯಲ್ಲಿ ತಮ್ಮ ಬಾಧ್ಯತೆಯನ್ನು ನಷ್ಟಪಡಿಸಿಕೊಳ್ಳುವಂತೆ ಮಾಡುವಂತಹ ಬೇರೆ ಸಂಗತಿಗಳೊಳಗೆ, ನೈತಿಕ ಹಾಗೂ ಮನೋಭಾವಕ್ಕೆ ಸಂಬಂಧಿಸಿದ ಪಾಪಗಳನ್ನೊಳಗೊಂಡ ಸಮಸ್ಯೆಯು ಇತ್ತು.

### ನಾಲ್ಕು ಪ್ರೀತಿಗಳು (5:22)

ವ್ಯಾವಹಾರಿಕ ಗ್ರೀಕ್ ಭಾಷೆಯಲ್ಲಿ "ಪ್ರೀತಿ" ಎಂಬುದಕ್ಕೆ ನಾಲ್ಕು ಪದಗಳಿರುತ್ತವೆ: ἀγάπη (*agapē*), φιλία (*philia*), στοργή (*storgē*), ಮತ್ತು ἔρως (*erōs*). ಇವುಗಳಲ್ಲಿ ಮೂರು ಪದಗಳು ಹೊಸ ಒಡಂಬಡಿಕೆಯೊಳಗೆ ಕಾಣಿಸಿಕೊಳ್ಳುತ್ತವೆ.[140] ಈ ಬೈಬಲಿನಲ್ಲಿ ಮತ್ತು ಪ್ರಾಚೀನ ಗ್ರೀಕ್ ಸಾಹಿತ್ಯದಲ್ಲಿ ಹೇಗೆ ಬಳಸಲ್ಪಟ್ಟಿವೆ?

*Erōs* ಎಂಬುದು ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ, ಅದರ ನಾಮಪದ ರೂಪದಲ್ಲಾಗಲಿ ಅಥವಾ ಕ್ರಿಯಾಪದ ರೂಪದಲ್ಲಾಗಲಿ ಬಳಸಲ್ಪಟ್ಟೇ ಇಲ್ಲ. ಈ ಪದವು ಆಂಗ್ಲದ "ಎರೊಟಿಕ್" ಎಂಬ ಪದಕ್ಕೆ ಸಂಬಂಧಿಸಿರುತ್ತದೆ. ಗ್ರೀಕ್ ಭಾಷೆಯಲ್ಲಿ, ಇದು ಗಾಢಾನುರಕ್ತ ಪ್ರೀತಿಯನ್ನು, ಆದರೆ ಯಾವಾಗಲೂ ಒಂದು ಇಂದ್ರಿಯ ಸುಖದ ಅರ್ಥದೊಂದಿಗೆ ಇರದ ಪ್ರೀತಿಯನ್ನು ಸೂಚಿಸುತ್ತದೆ. ಉದಾಹರಣೆಗೆ, ಇದು ಸ್ವತಂತ್ರಗೊಳ್ಳಬೇಕೆಂದು ಒಬ್ಬ ದಾಸನಲ್ಲಿರುತ್ತಿದ್ದ "ಉತ್ಕಟವಾದ ಇಚ್ಛೆ"ಯನ್ನು ಸೂಚಿಸಬಹುದು. ಹಾಗಿದ್ದರೂ, ಅನೇಕ ಸಂದರ್ಭಗಳಲ್ಲಿ ಈ ಪದವು ಒಂದು ಲೈಂಗಿಕ ಸೂಚ್ಯಾರ್ಥವನ್ನು ಹೊಂದಿತ್ತು.

ಪ್ರಾಚೀನತೆಯ ಲೌಕಿಕ ಗ್ರೀಕರೊಳಗೆ, *ಎರೋಸ*ಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕವಾದ ವಿಶಾಲವಾದ ಶಬ್ದಮಾಲೆಯು ಅಭಿವೃದ್ಧಿಗೊಂಡಿತ್ತು. ಅದಕ್ಕೆ ತದ್ವಿರುದ್ಧವಾಗಿ, LXXನಲ್ಲಿರುವ ಕಾಮಾಸಕ್ತ ಶಬ್ದಮಾಲೆಯು ಅತ್ಯಂಥ ಮಿತಿಯುಳ್ಳದ್ದಾಗಿದೆ. ಕೆಲವು ವಾಕ್ಯಭಾಗಗಳು "ಪ್ರಿಯತಮ" (ἐραστής, *erastēs*) ಎಂಬ ಪದವನ್ನು ಒಬ್ಬ ಮಿಂಡ ಎಂಬ ಅರ್ಥದಲ್ಲಿ ಬಳಸುತ್ತವೆ.[141] ಈ ವ್ಯಭಿಚಾರತೆಯ ಪರಿಭಾಷೆಯು ಅನೇಕ ಸಾರಿ ಇಸ್ರಾಯೇಲ್ಯರ ವಿಗ್ರಹಾರಾಧನೆ ಮತ್ತು ಅನ್ಯರ ಸ್ನೇಹವನ್ನು ಸೂಚಿಸುವ ಒಂದು ರೂಪಕೋಕ್ತಿಯಾಗಿರುತ್ತದೆ. ಹೊಸ ಒಡಂಬಡಿಕೆಯಲ್ಲಿ *ಎರೋಸ* ಪದವು ಸಂಪೂರ್ಣ ಅನುಪಸ್ಥಿತವಾಗಿರುವದು ಈಗ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಕಾಮಾಸಕ್ತಿಯ ಮೇಲೆ ಕೊಡಲಾಗಿರುವ ಒತ್ತಿಗೆ ಒಂದು ನಾಟಕೀಯವಾದಂಥ ತದ್ವಿರುದ್ಧತೆಯಾಗಿದೆ. ಇದು ಪ್ರೀತಿಯ ಕುರಿತಾದ ಹೊಸ ಒಡಂಬಡಿಕೆಯ ಭಾವನೆಯು ನಮ್ಮ ಭಾವನೆಗಿಂತ ಎಷ್ಟು ವ್ಯತ್ಯಾಸವಾಗಿದೆ ಎಂಬುದನ್ನು ತೋರಿಸುತ್ತದೆ.

*Storgē*. ನಾಮಪದವಾದ *storgē* ಆಗಲಿ ಅಥವಾ ಅದಕ್ಕೆ ಸಂಬಂಧಿಸಿದ στοργέω (*storgeō*) ಎಂಬ ಕ್ರಿಯಾಪದವಾಗಲಿ ಹೊಸ ಒಡಂಬಡಿಕೆಯಲ್ಲಿ ಸಿಕ್ಕುವದಿಲ್ಲವಾದರೂ, ಅದಕ್ಕೆ ಸಂಬಂಧ ಪಟ್ಟ ಒಂದು ಗುಣವಾಚಕವು ಕಾಣಿಸಿಕೊಳ್ಳುತ್ತದೆ. ಈ ಪದವು ἄστοργος (*astorgos*) ಎಂಬುದು, ಅದರ ಅರ್ಥವು "ಸ್ವಾಭಾವಿಕ ಪ್ರೀತಿಯಿಲ್ಲದ" ಎಂದಾಗಿದೆ. ಉಪಸರ್ಗ α- ಎಂಬುದು (ಅ ಅಥವಾ "ಇಲ್ಲದ" ಎಂಬ ಅರ್ಥವನ್ನು ಕೂಡಿಸುವದು) *ಸ್ಟೊರ್ಗೇ* ಎಂಬ ಪದಕ್ಕೆ

ಜೋಡಿಸಲ್ಪಟ್ಟಿದೆ, ಅದು ಸ್ವತಃ "ಕುಟುಂಬ ಮಮತೆ" ಅಥವಾ "ಬಂಧು ಪ್ರೀತಿ" ಎಂಬುದಕ್ಕೆ ಸಂಬಂಧಿಸಿರುತ್ತದೆ.[142] ಆದದರಿಂದ, *astorgos* ಎಂಬ ಗುಣವಾಚಕವು "ಪ್ರೀತಿಯಿಲ್ಲದ, ಒಬ್ಬನ ಬಂಧುವಿನ ಕಡೆಗೆ ಇರತಕ್ಕ ಸಹಜವಾದ ಮಮತೆಯಿಲ್ಲದ" ಎಂಬುದನ್ನು ಸೂಚಿಸುತ್ತದೆ. *Astorgos*ದ ನಕಾರಾತ್ಮಕ ರೂಪದ ಪದವು ರೋಮಾ 1:31ರಲ್ಲಿ ಮತ್ತು 2 ತಿಮೊಥೆ 3:3ರಲ್ಲಿ ಪೌಲನು ತಿಳಿಸುವ ದುರ್ಗುಣಗಳ ಪಟ್ಟಿಯಲ್ಲಿ ಕಾಣಿಸಿಕೊಳ್ಳುತ್ತದೆ. ಈ ಪದವನ್ನು ಎರಡೂ ವಾಕ್ಯಭಾಗಗಳಲ್ಲಿ NASBಯು "ಪ್ರೀತಿಸದವರು" ಎಂದು ಅನುವಾದಿಸುತ್ತದೆ.

ಈ ಪ್ರೀತಿಯಿಲ್ಲದಿರುವಿಕೆ ಕುರಿತಾಗಿ ಮಾರ್ಕ 7ನೇ ಅಧ್ಯಾಯದಲ್ಲಿ ನಮ್ಮ ಕರ್ತನು ಮಾತಾಡುತ್ತಾನೆ. ಆತನ ದಿನದಲ್ಲಿ ಕೆಲವರು ತಮ್ಮ ಹೆತ್ತವರ ಕಡೆಗಿರುವ ತಮ್ಮ ಕರ್ತವ್ಯವನ್ನು ಕಡಿಮೆಗೊಳಿಸಿಕೊಂಡದ್ದನ್ನು ಸಮರ್ಥಿಸಿಕೊಳ್ಳಲು ಭಕ್ತಿ ವೈರಾಗ್ಯದಿಂದ "ಕೊರ್ಬಾನ್" ಎಂಬ ಪದವನ್ನು ಬಳಸುತ್ತಿದ್ದರು ಎಂಬುದರ ಬಗ್ಗೆ ಆತನು ಹೇಳುತ್ತಾನೆ. ಅವರು "[ತಮ್ಮ] ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕಮಾಡುತ್ತಾರೆ" ಎಂದು ಯೇಸುವು ಹೇಳಿದನು (ಮಾರ್ಕ 7:11-13).

*Philia*. ಈ ಪದದ ಮೂಲಪದವು ಆಂಗ್ಲದ ಫಿಲಾಸೊಫಿ ("ಜ್ಞಾನ ಪ್ರೇಮ"), ಫಿಲಂತ್ರೊಪಿ ("ಮಾನವಪ್ರೇಮ"), ಮತ್ತು ಫಿಲದೆಲ್ಫಿಯ ("ಸಹೋದರಪ್ರೇಮ") ಎಂಬಂತಹ ಸಾಮಾನ್ಯ ಪದಗಳಲ್ಲಿ ಕಾಣಿಸಿಕೊಳ್ಳುತ್ತದೆ. ಈ ಪದವು ಮಮತೆ ಅಥವಾ ಸ್ನೇಹದ ವಿಧವಾದ ಪ್ರೀತಿಯನ್ನು ಸೂಚಿಸುತ್ತದೆ. ಇದು ನಮ್ಮ ಭಾವಗಳನ್ನು ಕದಲಿಸುವಂಥ ರೀತಿಯ ಪದವಾಗಿದೆ. ನಾವು ನಮ್ಮ ಪ್ರೀತಿಗೆ ಗುರಿಯಾಗಿರುವ ಸಂಗತಿಯಲ್ಲಿ ಏನೋ ಆಕರ್ಷಣೆಯೊಂದನ್ನು ಕಾಣುತ್ತೇವೆ. ಆ ಸಂಗತಿಯು ಒಬ್ಬ ಮೆಚ್ಚತಕ್ಕ ಒಬ್ಬ ವ್ಯಕ್ತಿಯಾಗಿರಬಹುದು, ಒಂದು ಸುಂದರವಾದ ನೀಳ ದೃಶ್ಯ, ಒಂದು ಸಂತೋಷಪಡತಕ್ಕ ಚಟುವಟಿಕೆ, ಅಥವಾ ಹೆಚ್ಚುಕಡಿಮೆ ಏನು ಬೇಕಾದರೂ ಆಗಿರಬಹುದಾಗಿದೆ.

ತಪ್ಪಾದ ರೀತಿಯಲ್ಲಿ ಪ್ರೀತಿಸುವದು ಪಾಪವಾಗಿ ಮಾರ್ಪಡಬಲ್ಲದು. ಯೇಸುವು ಹೇಳಿದ್ದೇನೆಂದರೆ ಕಪಟಿಗಳು "ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದೀಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆ ಮಾಡುವದಕ್ಕೆ ಇಷ್ಟಪಡುತ್ತಾರೆ [φιλέω, *phileō*]" (ಮತ್ತಾಯ 6:5). ಕ್ರಿಸ್ತನು ಹೀಗೆ ಸಹ ಎಚ್ಚರಿಸಿದನು,

> ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು [*phileō*] ನನಗೆ ಯೋಗ್ಯನಲ್ಲ. ಮತ್ತು ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ (ಮತ್ತಾಯ 10:37, 38).

ಈ ವಾಕ್ಯಭಾಗಗಳು ಇಂದಿನ ನಮ್ಮ ಜಗತ್ತಿಗೆ ಮಾತಾಡುತ್ತವೆ. ನಾವು ಜೀವಿಸುವ ಈ ಕಾಲದಲ್ಲಿ ನಾವು ಬಹಳವಾಗಿ ಪ್ರೀತಿಸುವವರು, ಬಹುಶಃ ನಮ್ಮ ಮಕ್ಕಳು ನಂಬಿಕೆಯನ್ನು ತೊರೆದು ಬಿಡುವಂಥ ಮತ್ತು ಸುಳ್ಳು ಬೋಧನೆಗಳ ಹಿಂದೆ ಹೋಗಬಹುದಾದ ಅಪಾಯದಲ್ಲಿರುತ್ತಾರೆ. ಅಂಥ ಪ್ರಕರಣಗಳಲ್ಲಿ, ನಮ್ಮ ಸ್ವಂತ ದೈವಶಾಸ್ತ್ರವನ್ನು ಬದಲಾಯಿಸಿಕೊಳ್ಳುವ ಮೂಲಕ ಅವರನ್ನು ಸಮರ್ಥಿಸಿಕೊಳ್ಳಬೇಕೆಂಬ ಶೋಧನೆಗೆ ನಾವು ಒಳಪಡಲೇ ಬಾರದು. ಖಂಡಿತವಾಗಿಯೂ, ನಾವು ಯೇಸುವನ್ನು ಅತ್ಯಧಿಕವಾಗಿ ಪ್ರೀತಿಸತಕ್ಕದ್ದು.

ಒಬ್ಬ ಸ್ನೇಹಿತನನ್ನು (φίλος, *philos*) ಹೊಂದಿರುವದು ಶ್ರೇಷ್ಠವಾದದ್ದು. ನಾವು ಒಟ್ಟಿಗೆ

ಇರುವದಕ್ಕೆ ಸಂತೋಷಿಸುತ್ತೇವೆ; ನಾವು ನಮ್ಮ ಸ್ನೇಹಿತರನ್ನು ಇಷ್ಟಪಡುತ್ತೇವೆ ಮತ್ತು ಅವರಿಂದ ಇಷ್ಟಪಡಲ್ಪಡುವದನ್ನು ಆನಂದಿಸುತ್ತೇವೆ. *Philia* ಎಂದರೆ ಇದೇ ಆಗಿದೆ, ಮತ್ತು ಅದರಲ್ಲಿ ಯಾವ ತಪ್ಪೂ ಇರುವದಿಲ್ಲ. ಅಬ್ರಹಾಮನಿಗೆ "ದೇವರ ಸ್ನೇಹಿತನೆಂಬ" ಹೆಸರು ಸಹ ಇತ್ತು (ಯಾಕೋಬ 2:23). ಲಾಜರನು, ವಿಶೇಷವಾದ ರೀತಿಯಲ್ಲಿ ಯೇಸುವಿನ ಒಬ್ಬ "ಮಿತ್ರನು" ಎಂದು ಕರೆಯಲ್ಪಟ್ಟಿದ್ದನು (ಯೋಹಾನ 11:11). ಯೋಹಾನನು "ಸ್ನೇಹಿತರನ್ನು ಹೆಸರ್ಹೆರಾಗಿ ವಂದಿಸುತ್ತೇನೆ" ಎಂದು ಬರೆದಾಗ (3 ಯೋಹಾನ 15), ಆತನು ಸಭೆಯಲ್ಲಿದ್ದ ಪ್ರಿಯರಾದ ಸಹೋದರರರನ್ನು ಸೂಚಿಸಿ ಮಾತಾಡುತ್ತಿದ್ದಾನೆ. ಹನ್ನೆರಡು ಮಂದಿ ಶಿಷ್ಯರೊಂದಿಗೆ ಮಾತಾಡುವ ವೇಳೆ, ಯೇಸುವು ಹೀಗೆ ಹೇಳಿದನು, "ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನೀವು ನಡೆದರೆ ನೀವು ನನ್ನ ಸ್ನೇಹಿತರು" (ಯೋಹಾನ 15:14).

ನಾವು ಫಿಲೆಯೋ ಬಗ್ಗೆ ಮಾತಾಡಿದರೂ ಸರಿಯೇ ಅಥವಾ *agapē* ಬಗ್ಗೆ ಸರಿಯೇ, ಶಿಷ್ಯರು ಯೇಸುವನ್ನು ಗಾಢವಾಗಿ ಪ್ರೀತಿಸುತ್ತಿದ್ದರೆಂಬ ವಿಷಯದಲ್ಲಿ ನಾವು ಸಂಶಯಿಸುವದಕ್ಕೆ ಸಾಧ್ಯವಿಲ್ಲ. ಪೇತ್ರ ಮತ್ತು ಯೇಸುವಿನ ನಡುವೆ ಯೋಹಾನ 21:15-17ರಲ್ಲಿ ನಡೆದ ಸ್ಮರಣೀಯವಾದ ಸಂಭಾಷಣೆಯಲ್ಲಿ ಇವೆರಡೂ ಪದಗಳು ಬಳಸಲ್ಪಟ್ಟವು. ಆ ಸನ್ನಿವೇಶದಲ್ಲಿ ಈ ಎರಡು ಪದಗಳ ಮಹತ್ವದ ಕುರಿತಾಗಿ ವೇದ ಪಂಡಿತರು ಭಿನ್ನಾಭಿಪ್ರಾಯ ಪಡುತ್ತಾರೆ. ಯೋಹಾನನು ಒಂದು ಸಾರಿ *agapaō* ಎಂಬುದನ್ನು ಮತ್ತು ಮತ್ತೊಂದು ಸಾರಿ *phileō* ಎಂಬ ಪದವನ್ನು ಬಳಸುವದು ಏಕರೀತಿಯಾಗಿರಬಾರದೆಂದು ಕೇವಲ ಭಿನ್ನ ಶೈಲಿಗೋಸ್ಕರ ಬಳಿಸಿದ್ದಾಗಿದೆ ಎಂಬುದಾಗಿ ಕೆಲವರು ಅಭಿಪ್ರಾಯ ಪಡುತ್ತಾರೆ. ಇನ್ನು ಕೆಲವರು ಆ ಪದಗಳನ್ನು ಪರ್ಯಾಯವಾಗಿ ಬಳಸಿರುವದು ಒಂದು ಆಳವಾದ ಮಹತ್ವವನ್ನು ಹೊಂದಿರುತ್ತದೆಂದು ಭಾವಿಸುತ್ತಾರೆ. ಪೇತ್ರನು ಈ ಮುಂಚೆ ತಾನು ಮಿಕ್ಕವರೆಲ್ಲರಿಗಿಂತಲೂ ಅತ್ಯುನ್ನತವಾಗಿ ಸ್ಥಿರತೆಯನ್ನು ಹೊಂದಿದ್ದೇನೆಂದು ಬಡಾಯಿ ಕೊಚ್ಚಿಕೊಂಡಿದ್ದನು ಮತ್ತು ಬಳಿಕ ಕರ್ತನನ್ನು ಮೂರು ಸಾರಿ ಅಲ್ಲಗಳೆದು ಶೋಚನೀಯವಾಗಿ ಸೋತು ಹೋಗಿದ್ದನು. ಈ ಸಮಯದಲ್ಲಿ, ಆತನು ಯೇಸುವಿಗಾಗಿ ಹೊಂದಿರುವ ತನ್ನ ಸಮರ್ಪಿತವಾದ ಪ್ರೀತಿ (*agapaō*) ಕುರಿತಾಗಿ ಒಂದು ಧೈರ್ಯದ ಹೇಳಿಕೆಯನ್ನು ನೀಡುವದಕ್ಕೆ ಆತನು ಸಿದ್ಧನಾಗಿರಲಿಲ್ಲ; ಆತನ ಮೇಲೆ ತನಗಿದ್ದ ಮಮತೆಯನ್ನು (*phileō*) ಕುರಿತು ಹೇಳುವದಕ್ಕೆ ಆತನಿಗೆ ಸಾಧ್ಯವಾಗಲಿಲ್ಲ.[143]

*Agapē*. ಈಗ ನಾವು ಗಲಾತ್ಯ 5:22ರಲ್ಲಿರುವ ಪದಕ್ಕೆ ಬಂದಿರುತ್ತೇವೆ, ಅದನ್ನು ಪೌಲನು ತನ್ನ "ದೇವರಾತ್ಮನಿಂದ ಉಂಟಾಗುವ ಫಲ"ದ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿಟ್ಟನು. "ಪ್ರೀತಿ" ಎಂಬುದಕ್ಕಾಗಿರುವ ಈ ಗ್ರೀಕ್ ಪದಗಳು ಅರ್ಥದಲ್ಲಿ ಒಂದನ್ನೊಂದು ಅತಿವ್ಯಾಪನೆ ಮಾಡಬಹುದಾಗಿವೆ ಮತ್ತು ಆ ಕಾರಣದಿಂದ ಸಮಾನಾರ್ಥವುಳ್ಳವುಗಳೆಂದು ಪರಿಗಣಿಸಲ್ಪಡಬಹುದಾದರೂ, ಪ್ರತಿಯೊಂದು ಪದವು ಕೆಲವೊಂದು ಅಂಶಗಳಲ್ಲಿ ಬೇರೊಂದಕ್ಕಿಂತ ಭಿನ್ನವಾಗಿರುತ್ತವೆ ಮತ್ತು ಅದರದ್ದೇ ಆಗಿರುವ ವಿಶಿಷ್ಟವಾದ ರುಚಿಯನ್ನು ಹೊಂದಿರುತ್ತದೆ. ಅದು ಹೊಸ ಒಡಂಬಡಿಕೆಯಲ್ಲಿ ಬಳಸಲ್ಪಟ್ಟಿರುವ ಪ್ರಕಾರ, *agapē* ಎಂಬುದು ಪ್ರೀತಿಯ ಅತ್ಯಂಥ ಎತ್ತರವಾದ ಗುಣಸ್ವಭಾಗಳನ್ನು ತೋರ್ಪಡಿಸುವದಾಗಿದೆ. Nigel Turnerನು ಹೀಗೆ ಬರೆದನು,

> ಕ್ರೈಸ್ತೀಯ ಗ್ರೀಕ್ ಭಾಷೆಯಲ್ಲಿ *agapē* ಎಂಬ ನಾಮದ ಮತ್ತು *agapaō* ಎಂಬ ಕ್ರಿಯಾಪದವು ಒಂದು ಸಮರ್ಪಕವಾದ ಕ್ರೈಸ್ತೀಯ ಮಮತೆಯನ್ನು, ವಿಶ್ವಾಸಿಯು ದೇವರ ಮತ್ತು ಮನುಷ್ಯನ ಕಡೆಗೆ ಹೊಂದಿರುವ ಪ್ರೀತಿಯನ್ನು, ಮತ್ತು ನಮಗಾಗಿ ಹಾಗೂ ಕ್ರಿಸ್ತನಿಗಾಗಿ ದೇವರು ಹೊಂದಿರುವ ಪ್ರೀತಿಯನ್ನು, ಮಾತ್ರವಲ್ಲದೆ ನಮಗಾಗಿ ಕ್ರಿಸ್ತನು ಹೊಂದಿರುವ

ಪ್ರೀತಿಯನ್ನು ಸಹ ಸೂಚಿಸುತ್ತವೆ. ಹಾಗಾದರೆ ಅದು ದೇವರ ಮತ್ತು ಮನುಷ್ಯನ ನಡುವಿನ ಪರಿಪೂರ್ಣ ಸಾಮರಸ್ಯತೆಯಾಗಿರುತ್ತದೆ - ಒಂದು ಅಸ್ವಾಭಾವಿಕವಾದ ಕೃಪೆ.[144]

ದೇವರು ತನ್ನ ದೇವಜನರ ("ಪರಿಶುದ್ಧರ") ಹೃದಯಗಳಲ್ಲಿ ತನ್ನ ಪ್ರೀತಿಯನ್ನು "ಸುರಿಸಿರುತ್ತಾನೆ," ಹೀಗೆ ಇದು ಕೃಪೆಯಿಂದ ಪಡೆದುಕೊಂಡ ವರದಾನವಾಗಿರುತ್ತದೆ (ರೋಮಾ 5:5).

ಈ ಪ್ರೀತಿಯನ್ನು ಕೇವಲ ಅನುಭವಕ್ಕೆ ಬರುವಂಥ ಪ್ರೀತಿ ಎಂದಷ್ಟೇ ಅರ್ಥಮಾಡಿಕೊಳ್ಳಕೂಡದು, ಮತ್ತು ಈ ಅರ್ಥದಲ್ಲಿ ಅವಶ್ಯಕವಾಗಿ "ಮಮತೆ" ಸೇರ್ಪಡೆಗೊಳ್ಳಬೇಕೋ ಬೇಡವೋ ಎಂಬ ಪ್ರಶ್ನೆಯನ್ನು ಸಹ ನಾವು ಕೇಳಬಹುದಾಗಿದೆ. ಈ ವಿಧವಾದ ಪ್ರೀತಿಯನ್ನು ತಾನು ನೆಂಟಸ್ತಿಕೆಯೊಂದನ್ನು ಹೊಂದಿರುವವರಿಗೆ ಅಥವಾ ತಾನು ಇಷ್ಟಪಡುವವರಿಗೆ ತೋರಿಸುವದಕ್ಕಷ್ಟೆ ಇದನ್ನು ಮಿತಿಗೊಳಿಸುವ ಪರಮಾಧಿಕಾರವನ್ನು ಕ್ರೈಸ್ತನು ಹೊಂದಿರುವದಿಲ್ಲ. ದೇವರು ಮಾನವರೆಲ್ಲರನ್ನೂ ಪ್ರೀತಿಸುತ್ತಾನೆ ಮತ್ತು ಆಶೀರ್ವಾದಿಸುತ್ತಾನೆ, ಅವರಲ್ಲಿ ಒಳ್ಳೇಯವರೂ ಕೆಟ್ಟವರೂ ಸೇರಿದ್ದಾರೆ. ಕ್ರಿಸ್ತನನ್ನು ಹಿಂಬಾಲಿಸುವವರು ಅದೇ ರೀತಿಯಲ್ಲಿಯೇ ಸಕ್ರಿಯವಾಗಿ ಪ್ರೀತಿಸಬೇಕೆಂದು ಆಜ್ಞಾಪಿಸಲ್ಪಟ್ಟಿದ್ದಾರೆ (ಮತ್ತಾಯ 5:43-48).

*Agapē*, ಸ್ವಾರ್ಥರಹಿತವಾಗ ಬೇರೆಯವರ ಹಿತಕ್ಕಾಗಿ ಕಾರ್ಯ ಮಾಡುವದಾಗಿದ್ದು ತಂದೆಯಿಂದ ಬರುವಂಥದ್ದಾಗಿದೆ (1 ಯೋಹಾನ 4:16, 19). ನಮ್ಮ ಪ್ರೀತಿಯು ದೇವರ ಪ್ರೀತಿಯಂತೆಯೇ ಇರಬೇಕೆಂದರೆ, ಅದು ಪ್ರಬುದ್ಧತೆಯುಳ್ಳ, ಸರ್ವರನ್ನೊಳಗೊಂಡ ಪ್ರೀತಿಯಾಗಿರತಕ್ಕದ್ದು. ಅದು ಇನ್ನು ಮೇಲೆ ಆತ್ಮೀಕನಲ್ಲದ, ಪ್ರಾಕೃತ ಮನುಷ್ಯನಲ್ಲಿ ಸಾಮಾನ್ಯವಾಗಿರುವಂತಹ ಇಷ್ಟವಾಗುವಿಕೆಗಳು ಮತ್ತು ಇಷ್ಟವಾಗದಿರುವಿಕೆಗಳು ಹೇಳಿದಂತೆ ಮಾಡುವದಾಗಿರುವದಿಲ್ಲ. ಈ ಪರಿಪೂರ್ಣ ಪ್ರೀತಿಯು ಪರಲೋಕದಲ್ಲಿರುವ ತನ್ನ ತಂದೆಯ ಹಾಗಿರಬೇಕೆಂದು ಬಯಸುವ ಪ್ರತಿಯೊಬ್ಬ ಕ್ರೈಸ್ತನ ಗುರಿಯಾಗಿರತಕ್ಕದ್ದು.

## ಯೇಸುವಿನ ಪ್ರೀತಿ (5:22)

ಯೇಸುವಿನ ಮಾತುಗಳು ಹಾಗೂ ಕ್ರಿಯೆಗಳು ಕ್ರೈಸ್ತ-ಪೂರ್ವ ಜಗತ್ತಿನ ನಿಘಂಟುಗಾರರಿಗೆ ಎಂದಿಗೂ ಹೊಳೆದಿರುವದಕ್ಕೆ ಸಾಧ್ಯವಿಲ್ಲದಂಥ ಬಗೆಬಗೆಯ ಅರ್ಥಗಳನ್ನು *agapē*ಯಲ್ಲಿ ತುಂಬಿದ್ದವು. ಯೇಸುವು ಯಾವ ವಿಧವಾದ ಪ್ರೀತಿಯನ್ನು ತೋರ್ಪಡಿಸಿದನು? ಪ್ರೀತಿಯು ಆತನನ್ನು ಏನು ಮಾಡುವಂತೆ ಪ್ರೇರಿಸಿತ್ತು?

*ಆತನು ತನ್ನ ವೈರಿಗಳನ್ನು ಧೈರ್ಯದಿಂದ ಎದುರಿಸಿದನು.* ಕ್ರಿಸ್ತನ ಪ್ರೀತಿಯು ಯಾವಾಗಲೂ ಇಷ್ಟವಾಗುವಂತೆ ಇರಲಿಲ್ಲ. ಕೆಲವು ಸಾರಿ ಅದು ಜನರಿಗೆ ಬೇಸರವನ್ನುಂಟು ಮಾಡಿತ್ತು. ಕೆಲವು ಸಂದರ್ಭಗಳಲ್ಲಿ, ಅದು ಖಂಡನೆಯನ್ನು ಸಹ ಮಾಡಿತ್ತು, ಉದಾಹರಣೆಗೆ ಯೇಸುವು ಶಾಸ್ತ್ರಿಗಳು ಹಾಗೂ ಫರಿಸಾಯರ ಮೇಲೆ ಕಠೋರವಾದ ಬೇಸರಗೊಳಿಸುವಂತ ಅಳಲಿನ ಟೀಕೆಯನ್ನು ಮಾಡುವವನಾಗಿ, "ಹೀಗೆ ನುಡಿದನು, ಹಾವುಗಳೇ, ಸರ್ಪಜಾತಿಯವರೇ, ನರಕದಂಡನೆಗೆ ಹೇಗೆ ತಪ್ಪಿಸಿಕೊಂಡೀರಿ?" (ಮತ್ತಾಯ 23:33). ನಾವು ಆ ಮಾತುಗಳಲ್ಲಿ ಮಮತೆಯನ್ನು ಕೇಳಿಸಿಕೊಳ್ಳುತ್ತೇವೋ? ಕರ್ತನು ಈ ಜನರನ್ನು ಗದರಿಸಿದನು, ಆದರೆ ಆತನು ಅವರನ್ನು ಪ್ರೀತಿಸಿದನೆಂಬುದರ ಬಗ್ಗೆ ನಮ್ಮಲ್ಲಿ ಸಂಶಯವಿರುತ್ತದೋ? ಆತನು ಈ ಜನರನ್ನು, ಅವರು ಕಡೇ ದಿನದಲ್ಲಿ ಆತನು "ಲೋಕಕ್ಕೆ ನೀತಿಯಿಂದ ನ್ಯಾಯತೀರಿಸುವ" ವೇಳೆಯಲ್ಲಿ (ಅಪೊಸ್ತಲರ ಕೃತ್ಯಗಳು 17:31; ನೋಡಿರಿ 2 ಪೇತ್ರ 3:9), ಅವರನ್ನು ತಾನು ದಂಡನೆಗೆ ಗುರಿಪಡಿಸುವಂತೆ ಆಗಬಾರದೆಂಬುದಕ್ಕಾಗಿ ಅವರನ್ನು ಪಶ್ಚಾತ್ತಾಪಕ್ಕೆ ನಡಿಸಲು ಪ್ರಯತ್ನಿಸಿದನು. ಆತನು ಅವರನ್ನು ಗಾಢವಾಗಿ ಪ್ರೀತಿಸಿದನು, ಆದ್ದರಿಂದ ಅವರನ್ನು ಸತ್ಯ ಹೇಳಿ

ಗದರಿಸುವದು ಅಗತ್ಯವಾಗಿತ್ತು.

*ಆತನು ತನ್ನ ಧ್ಯೇಯವನ್ನು ನಂಬಿಗಸ್ತನಾಗಿ ಮಾಡಿ ಮುಗಿಸಿದನು.* ತಾನು ನಮ್ಮನ್ನು ರಕ್ಷಿಸುತ್ತಿದ್ದಾನೆಂಬುದರ ವಾಸ್ತವಿಕತೆಯನ್ನು ಯೇಸುವು ತಿಳಿದವನಾಗಿದ್ದನು, ಮತ್ತು ಆತನು ತನ್ನ ಧ್ಯೇಯವನ್ನು ನೆರವೇರಿಸುವದಕ್ಕೆ ಇಳಿದು ಬಂದಾಗ ನಮ್ಮನ್ನು ಯಾವದಕ್ಕಾಗಿ ರಕ್ಷಿಸುತ್ತಿದ್ದನೋ ಅದರ ಅಮೋಘವಾದ ಮಹಿಮೆಯನ್ನು ಸಹ ಬಲ್ಲವನಾಗಿದ್ದನು. ಆತನಿಗೆ ರಕ್ಷಣೆ ಮತ್ತು ಆತ್ಮನಾಶ ಇವೆರಡರ ಅರ್ಥವೂ ತಿಳಿದಿತ್ತು, ಮತ್ತು ಆತನು ತನ್ನ ಭೂಮಿಯ ಭೇಟಿಯಲ್ಲಾಗುವ ಸಂಕಷ್ಟವನ್ನೆಲ್ಲಾ ಸಹಿಸಿಕೊಂಡದ್ದು ಅದೇ ಕಾರಣಕ್ಕಾಗಿಯೇ ಆಗಿತ್ತು. ಆತನು ಅವಸರದಿಂದ, ಪ್ರೀತಿಯುಳ್ಳ ತಂದೆಯ ಬಳಿಗೆ ಹಿಂದಿರುಗಿ ಬರುವಂತೆ ನಾಶನದಲ್ಲಿರುವ ಮನುಷ್ಯನನ್ನು ಕೂಗಿ ಕರೆದನು.

ನಮ್ಮಲ್ಲಿ ಯಾರು ಅಂಥ *agapē*ಯನ್ನು ತೋರ್ಪಡಿಸುವಷ್ಟರ ಮಟ್ಟಿಗೆ ಸಮೀಪವಾದರೂ ಬಂದಿರುತ್ತೇವೆ? ನಾವು ನಮ್ಮ ವೈಯಕ್ತಿಕ ಹಿತಾಸಕ್ತಿಯ ಬಗ್ಗೆಯೇ ಬಹಳಷ್ಟು ಕಳಕಳಿಯುಳ್ಳವರಾಗಿದ್ದು ನಮ್ಮ ಸ್ವಂಥ ಮನೆಗಳಲ್ಲಿನ ಸುಖವನ್ನು ತಪ್ಪಿಸಿಕೊಳ್ಳುವವರು ಕೆಲವೇ ಕೆಲವರು ಇರುತ್ತಾರೆ. ಅದೇ ವೇಳೆಯಲ್ಲಿ, ಲಕ್ಷಾಂತರ ಜನರು ಕತ್ತಲಲ್ಲಿ ಎಡವುತ್ತಾರೆ, ಒಂದು ಪ್ರೀತಿಯಿಲ್ಲದ ಜೀವಿತಕ್ಕೆ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ.

*ಆತನು ವಿಧೇಯತೆಯುಳ್ಳವನಾಗಿ ನಮಗೆ ಯೋಗ್ಯವಾಗಿದ್ದ ದಂಡನೆಯನ್ನು ತಾನೇ ಅನುಭವಿಸಿದನು.* ಯೇಸುವು ಪ್ರೀತಿಸುವ ವಿಧದಲ್ಲಿ ಅಥವಾ ಆತನಂತೆ ಅಂತಹ ಪ್ರೀತಿಯನ್ನು ತೋರ್ಪಡಿಸಿರುವ ಬೇರೆ ಯಾವ ಮನುಷ್ಯನೂ ಇರುವದಿಲ್ಲ. ಹೊಸ ಒಡಂಬಡಿಕೆಯಲ್ಲಿ "ನರಕ" (*gehenna*) ಎಂಬ ಪದವು ಹನ್ನೆರಡು ಸಾರಿ ಕಾಣಿಸಿಕೊಳ್ಳುವದಾಗಿದ್ದು, ಅದರಲ್ಲಿ ಹನ್ನೊಂದು ಸಾರಿ ಯೇಸುವು ಅದನ್ನು ಬಳಸಿದ್ದಾನೆ; ಮತ್ತು ಆತನ ಸಹೋದರನಾದ ಯಾಕೋಬನು ಅದನ್ನು ಒಂದು ಸಾರಿ ಬಳಸಿದ್ದಾನೆ (ಯಾಕೋಬ 3:6). ಯೇಸುವು ಈ ಭಯ ಹುಟ್ಟಿಸುವಂಥ ಪದದ ಅರ್ಥವನ್ನು ಅರ್ಥಮಾಡಿಕೊಂಡಿದ್ದನು, ಅದು ನಿತ್ಯಕಾಲಕ್ಕೂ ದಂಡಿಸಲ್ಪಟ್ಟಿರುವವರ ಸ್ಥಿತಿಯನ್ನು ಸೂಚಿಸುತ್ತದೆ. ಈ ಕಾರಣಕ್ಕಾಗಿ, ಆತನು ಗೆತ್ಸೇಮನೆ ತೋಟದಲ್ಲಿ ತನ್ನ ಸ್ವಂತ ಚಿತ್ತದೊಂದಿಗೆ ವೇದನೆಯಿಂದ ಹೋರಾಡುವ ವೇಳೆ ಬೆವರಿನ ದೊಡ್ಡ ಹನಿಗಳ್ನು ಸುರಿಸಿದ್ದನು; ಆತನು ತನ್ನನ್ನು ತಂದೆಯ ಚಿತ್ತಕ್ಕೆ ಒಳಪಡಿಸಿಕೊಂಡನು, ಶಿಲುಬೆಯ ಘೋರವಾದಂತ ಹಿಂಸೆಯನ್ನು ಅನುಭವಿಸುವದನ್ನು ಆರಿಸಿಕೊಂಡನು. ಆತನು ಗೊಲ್ಗಥಾದ ಮೇಲೆ ಕಡುಯಾತನೆಯ ಶ್ರಮೆ ಹಾಗೂ ಅವಮಾನವನ್ನು ಅನುಭವಿಸಿದ್ದಕ್ಕೆ ಕಾರಣವು ನರಕವೇ ಆಗಿತ್ತು. ಆ ಕಾರಣದಿಂದಾಗಿಯೇ ಆತನು ಒಂದು ಶಾಪವಾದನು, ನಮ್ಮ ನಾಶನದಲ್ಲಿರುವ ಲೋಕಕ್ಕಾಗಿ ಪಾಪದ ಮೂರ್ತರೂಪನೇ ಆಗಿ ಮಾರ್ಪಟ್ಟನು. ಈ ಕಾರಣದಿಂದಲೇ, ಆತನು ತನ್ನ ಪ್ರೀತಿಯ ತಂದೆಯು ಸಹ ಆತನಿಂದ ವಿಮುಖನಾದ ವೇಳೆ ಆತನು ಹತಾಶನಾಗಿ, ಕ್ಲೀಷ್ಠಕರವಾದಂಥ ಒಂಟಿತನವನ್ನು ಅನುಭವಿಸಿದನು. ಇದು ದೈವಿಕ ಪ್ರೀತಿಗೆ ಅಂತಿಮವಾದ ಪುರಾವೆಯಲ್ಲವೋ? "ಜಗದುತ್ಪತ್ತಿಗೆ ಮೊದಲೇ ಗೊತ್ತು ಮಾಡಲ್ಪಟ್ಟ" (1 ಪೇತ್ರ 1:20; ನೋಡಿರಿ ಅಪೊಸ್ತಲರ ಕೃತ್ಯಗಳು 2:23, 24) ದೇವರ ವಿಮೋಚನಾ ಯೋಜನೆಯು ಆತನ ಶ್ರೇಷ್ಠ ಪ್ರೀತಿಯ (ನೋಡಿರಿ ಯೋಹಾನ 3:16) ಫಲಿತವಾಗಿತ್ತೆಂದು ಶಾಸ್ತ್ರಗಳು ಬಯಲುಗೊಳಿಸುತ್ತವೆ. ಯೇಸುವು ಹೀಗೆ ವಿವರಿಸಿದನು,

> ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು [*agapaō*] ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ದೇವರು ತನ್ನ ಮಗನ ಮುಖಾಂತರ

ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪುಮಾಡುವದಕ್ಕಾಗಿ ಕಳುಹಿಸಲಿಲ್ಲ. ಆತನನ್ನು ನಂಬುವವನಿಗೆ ತೀರ್ಪು ಆಗುವದಿಲ್ಲ; ಆದರೆ ನಂಬದವನಿಗೆ ದೇವರ ಒಬ್ಬನೇ ಮಗನ ಹೆಸರನ್ನು ನಂಬದೆಹೋದದರಿಂದ ಆಗಲೇ ತೀರ್ಪು ಆಗಿಹೋಯಿತು. ಆ ತೀರ್ಪು ಏನಂದರೆ - ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು [*agapaō*] (ಯೋಹಾನ 3:16-19).

*ಮುಕ್ತಾಯ.* ಕ್ರಿಸ್ತನಲ್ಲಿ ತೋರಿಸಲ್ಪಟ್ಟ ದೇವರ ಪ್ರೀತಿಯ ಸಂದೇಶವನ್ನು ಎದುರ್ಗೊಳ್ಳುವ ವೇಳೆ, ಮನುಷ್ಯರು ಅವರ ಹೃದಯಗಳ ಮೂಲಭೂತ ಸ್ಥಿತಿಯ ಪ್ರಕಾರವಾಗಿ ಪ್ರತಿಕ್ರಿಯಿಸುವರು. ಯಾರ ಹೃದಯಗಳಲ್ಲಿ ಪ್ರಾಮಾಣಿಕತೆ ಮತ್ತು ಸತ್ಯದ ಮೇಲಿನ ಪ್ರೀತಿಯು ತುಂಬಿರುತ್ತದೋ ಅವುಗಳು ಈ ಸಂದೇಶದ ಆತ್ಮೀಕತೆಯಿಂದ ಪ್ರತಿಧ್ವನಿತಗೊಳ್ಳುತ್ತವೆ. ಅವರ ಯಥಾರ್ಥತೆ ಮತ್ತು ಪ್ರಾಮಾಣಿಕತೆಯ ಕಾರಣದಿಂದಾಗಿ, ಅವರು ಯೇಸುವನ್ನು ಕರ್ತನೆಂದು ನಂಬುವರು ಮತ್ತು ಸ್ವೀಕರಿಸಿಕೊಳ್ಳುವರು. ಪಾಪಭರಿತ ವ್ಯಕ್ತಿಗಳು ಅವರ ಕೆಟ್ಟ ಹೃದಯಗಳ ಮೇಲೆ ಬೆಳಕು ಉಂಟಾಗುವದನ್ನು ಹಗೆ ಮಾಡುತ್ತಾರೆ ಮತ್ತು ಅದರಿಂದ ವಿಮುಖರಾಗುವರು ಯಾಕೆಂದರೆ ಅವರು ಲೋಕವನ್ನು ಪ್ರೀತಿಸುವವರಾಗಿದ್ದಾರೆ. ಆಯ್ಕೆಯು ನೈತಿಕೆಗೆ ಸಂಬಂಧಿಸಿದ್ದಾಗಿದೆ, ಮತ್ತು ಅದರ ಪರಿಣಾಮವು ಒಂದೋ ನಿತ್ಯಜೀವವಾಗಿರುತ್ತದೆ ಅಥವಾ ನಿತ್ಯವಾದ ದಂಡನೆಯಾದರೂ ಆಗಿರುತ್ತದೆ (ನೋಡಿರಿ ಯೋಹಾನ 3:36).

ಕ್ರಿಸ್ತನ ಬಳಿಗೆ ಎಂದಿಗೂ ಬರದೆ ಇರುವವರ ಕುರಿತು ನಾವು ಮರುಕ ಪಡಬೇಕು. ಕ್ರಿಸ್ತನ ಧ್ಯೇಯದ ಅವಸರವನ್ನು ನಾವು ಗ್ರಹಿಸಿಕೊಳ್ಳುವ ಮತ್ತು ಆ ಧ್ಯೇಯಕ್ಕಾಗಿ ನಮ್ಮ ಜೀವಿತಗಳನ್ನು ಅರ್ಪಿಸಿಕೊಳ್ಳುವ ಹೊರತು ಜನಸಮೂಹದವರು ಕ್ರಿಸ್ತನ ಬಳಿಗೆ ಎಂದಿಗೂ ತಿಳಿಲಾರರು. ನಾವೆಲ್ಲರೂ - ದೇವರು ನಮಗೆ ಅನುಗ್ರಹಿಸಿರುವ ಪ್ರತಿಭೆಗಳು ಮತ್ತು ಸಾಮರ್ಥ್ಯಗಳನ್ನು ಹೊಂದಿರುವ ಆತನ ದೇಹದ ಅಂಗಗಳಾಗಿ - ಅವಸರದೊಂದಿಗೆ ಧ್ಯೇಯವನ್ನು ನೆರವೇರಿಸಲು ನಮ್ಮನ್ನು ಅರ್ಪಿಸಿಕೊಳ್ಳುವದಾದರೆ, ಜನಸಮೂಹದವರು ಕ್ರಿಸ್ತನನ್ನು ಅರಿತುಕೊಳ್ಳುವರು. ಯೇಸುವಿನ ಪ್ರೀತಿಯನ್ನು ಪ್ರತಿಫಲಿಸುವದು ಮತ್ತು ನಮ್ಮ ದೇವರು ಮತ್ತು ನಮ್ಮ ರಕ್ಷಕನ ಕುರಿತು ಲೋಕವು ಆಲಿಸುವಂತೆ ಮಾಡುವದು ನಮ್ಮ ಜವಾಬ್ದಾರಿಯಾಗಿರುತ್ತದೆ.

## ಸಂತೋಷವನ್ನು ಕಾಪಾಡಿಕೊಳ್ಳುವದು (5:22)

ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯ ಕುರಿತಾದ ತನ್ನ ವ್ಯಾಖ್ಯಾನ ಗ್ರಂಥಧಲ್ಲಿ, David Stewartನು ಹೀಗೆ ಬರೆದನು, "ಫಿಲಿಪ್ಪಿಯದವರಿಗೆ ಬರೆದ ಪತ್ರಿಕೆಯುದ್ದಕ್ಕೂ, ಅಪೊಸ್ತಲನು ಸಂತೋಷಿಸಬೇಕೆಂದು ವಾಚಕರನ್ನು ನಿರಂತರವಾಗಿ ಬೇಡಿಕೊಳ್ಳುತ್ತಾನೆ. 'ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ; ಸಂತೋಷಪಡಿರಿ ಎಂದು ತಿರಿಗಿ ಹೇಳುತ್ತೇನೆ' (ಫಿಲಿಪ್ಪಿ 4:4)." ಬಳಿಕ Stewartನು ಒಬ್ಬ ಕ್ರೈಸ್ತನಿಂದ ಆತನ ಸಂತೋಷವನ್ನು ದೋಚಿಕೊಳ್ಳುವಂಥ ಸಂಗತಿಗಳ ಕುರಿತಾಗಿ ಒಂದು ಕ್ಲುಪ್ತವಾದ ಆದರೆ ಸಹಾಯಕರವಾದ ವಿಭಾಗವನ್ನು ಮುಂದಿಡುತ್ತಾನೆ. ಇವುಗಳೊಳಗೆ, ಆತನು ಸಮಸ್ಯೆಗಳನ್ನು, ಜನರನ್ನು, ಮತ್ತು ಸ್ವತ್ತುಗಳನ್ನು ಪ್ರಸ್ತಾಪಿಸಿದನು.[145] ಕೆಲವು ಸಾರಿ ಈ ಮೂರು ಸಂಗತಿಗಳು - ಮಾತ್ರವಲ್ಲದೆ ಬೇರೆ ಕೆಲವು ಸಂಗತಿಗಳು - ಒಂದು ಘಟನೆ ಅಥವಾ ಪರಿಸ್ಥಿತಿಯಾಗಿ ಸಮ್ಮಿಲನಗೊಳ್ಳುತ್ತವೆ. ನಮ್ಮನ್ನು ನಮ್ಮ ಸಂತೋಷದಿಂದ ಓರೆಯಾಗುವಂತೆ ಮಾಡುವ ಯಾವದೇ ಕಾರಣಾಂಶಗಳಿಂದ ನಮ್ಮನ್ನು ತಪ್ಪಿಸಿ ಕಾಪಾಡಿಕೊಳ್ಳಬೇಕು. ನಾವು ನಮ್ಮ ಮುಂದಿರುವ ವಿಘ್ನಗಳ ಮೇಲೆ ಗಮನವನ್ನು ಇಡುವದರ

ಬದಲಾಗಿ ದೇವರು ಮತ್ತು ಬಿಡಿಸುವದಕ್ಕೆ ಆತನಿಗಿರುವ ಶಕ್ತಿಯ ಮೇಲೆ ಮುಖ್ಯ ಗಮನವನ್ನು ಹರಿಸಬೇಕು.

### ಸಮಾಧಾನದ ಬೆನ್ನತ್ತುವಿಕೆ (5:22)

"ಸಮಾಧಾನ" (*eirēnē*) ಎಂಬುದು ಒಂದು ಅದ್ಭುತಕರವಾದ ಪದವಾಗಿದೆ. ಇಷ್ಟು ಶತಮಾನಗಳುದ್ದಕ್ಕೂ ತಾಯಂದಿರು ಮತ್ತು ಅಪ್ಪಂದಿರು ತಮಗೆ ಹುಟ್ಟಿದ ಸುಂದರವಾದ ಹೆಣ್ಣು ಮಗುವನ್ನು ಪ್ರೀತಿಯಿಂದ ನೋಡುವವರಾಗಿ ಅವಳಿಗೆ, ಗ್ರೀಕ್ ಭಾಷೆಯಲ್ಲಿ "ಸಮಾಧಾನ" ಎಂಬುದಕ್ಕಾಗಿರುವ ಪದದಿಂದ ಬಂದಿರುವಂಥ "ಐರೆನೆ" ಎಂದು ಹೆಸರನ್ನು ಇಟ್ಟಿರುವರೆಂಬುದರಲ್ಲಿ ಆಶ್ಚರ್ಯವೇನಾದರೂ ಇರುತ್ತದೋ? ಆದಿ ಕ್ರೈಸ್ತ ಲೇಖಕನಾದ Irenaeusನು (c. ಕ್ರಿ.ಶ. 130-200) ತನ್ನ ಹೆಸರನ್ನು ಗ್ರೀಕ್ ಭಾಷೆಯ *eirēnē* ಪದದಿಂದ ಪಡೆದುಕೊಂಡನೆಂಬುದು ಆಸಕ್ತಿಕರವಾಗಿರುತ್ತದೆ. ಅಷ್ಟುಮಾತ್ರವಲ್ಲದೆ, ಆಂಗ್ಲದ "ಐರೆನಿಕ್" ಎಂಬ ಗುಣವಾಚಕವು ಈ ಪದದಿಂದಲೇ ಬರುತ್ತದೆ. ನಾವು ಒಂದು ಐರೆನಿಕ್ (ಅಥವಾ ಸಮಾಧಾನಕರ) ದೃಶ್ಯದ ಬಗ್ಗೆ ಮಾತಾಡಬಹುದು.

ಸರಿಯಾಗಿ ಯೋಚಿಸುವ ಜನರಿಗೆ, ವಿಶೇಷವಾಗಿ ಯಾವದೇ ಯುದ್ಧವನ್ನು ಅನುಭವಿಸುವಂಥವರಿಗೆ ಸಮಾಧಾನವು ಯಾವಾಗಲೂ ಒಂದು ಅಮೂಲ್ಯವಾದ ಸಂಪತ್ತು ಆಗಿರುತ್ತದೆ. ಸಮಾಧಾನವು ಯುದ್ಧಕ್ಕೆ ತದ್ವಿರುದ್ಧವಾದದ್ದೇ ಆಗಿರುತ್ತದೆ. ಒಂದು ಯುದ್ಧದ ಬಳಿಕ ಉಳಿಯುವ ದೊಡ್ಡ ಪ್ರಮಾಣದ ನಾಶನವು ಒಂದು ಆಲೋಚನಾಪೂರ್ಣ ನೋಟವಾಗಿರುತ್ತದೆ. ಒಂದು ಕಾಲದಲ್ಲಿ ಬಾನೆತ್ತರದ ಕಟ್ಟಡಗಳಿದ್ದಂಥ ಸ್ಥಳದಲ್ಲಿ ಈಗ ಧ್ವಂಸಗೊಂಡ ಕಟ್ಟಡಗಳ ರಾಶಿಗಳು ಬಿದ್ದಿರುತ್ತವೆ. ಇನ್ನೂ ಆಘಾತಕಾರಿ ಸಂಗತಿಯೆಂದರೆ ಎಷ್ಟೋಂದು ಮಾನವರು ಕೊಲ್ಲಲ್ಪಟ್ಟಿದ್ದಾರೆ ಅಥವಾ ಗಾಯಗೊಂಡಿದ್ದಾರೆ ಎಂಬುದಾಗಿರುತ್ತದೆ. ಬದುಕುಳಿದ ಕೆಲವರು ಅವರ ಜೀವಿತಗಳನ್ನೇ ಬದಲಾಯಿಸಿ ಬಿಟ್ಟಂಥ ಅಂಗವಿಕಲತೆಗಳೊಂದಿಗೆ ಮನೆಗೆ ಹಿಂದಿರುತ್ತಾರೆ. ಅವರ ಬಾಧೆಯು ಯುದ್ಧದ ಕ್ರೂರ ಸ್ವಭಾವಕ್ಕೆ ಸಾಕ್ಷಿಯಾಗುತ್ತದೆ.

ಸಮಾಧಾನವು ಯುದ್ಧದ ತದ್ವಿರುದ್ಧತೆಯಾಗಿದೆಯಾದರೂ, ಯುದ್ಧವು ಆಯುಧಗಳಿಂದ ನಡಿಸುವ ಒಂದು ಅಕ್ಷರಶಃ ಕಾದಾಟಕ್ಕೆ ಮಾತ್ರವೇ ಸೀಮಿತವಾಗಿರುವದಿಲ್ಲ. ವಿಶ್ವದ ವಿವಿಧ ಭಾಗಗಳಲ್ಲಿ, ಬುಡಕಟ್ಟು ಜನಗಳ ನಡುವಿನ ಕಲಹಗಳು, "ಮೆಟ್ಟಿಲುಸಾಲು ಯುದ್ಧಗಳು," ಮತ್ತು ಅಪರಾಧ ತಂಡಗಳಿಂದ ಪ್ರಾಣಗಳಿಗೆ ಕಂಟಕವಿರುತ್ತದೆ. ಹಗೆತನದ ಸಂಬಂಧಗಳು ಕೆಲಸದ ಸ್ಥಳಗಳಲ್ಲಿ, ಕುಟುಂಬಗಳಲ್ಲಿ, ಮತ್ತು ಕ್ರೈಸ್ತರ ಮಧ್ಯದಲ್ಲಿ ಸಹ ವ್ಯಾಪಕವಾಗಿರುತ್ತವೆ.

ಕ್ರಿಸ್ತನ ಅಮೂಲ್ಯವಾದ ಸಮಾಧಾನವು ನಮ್ಮ ಕೋಪ ಮತ್ತು ವೈಷಮ್ಯಗಳ ಲೋಕವನ್ನು ಒಂದು ಅದ್ಭುತಕರವಾಗಿ ಅತ್ಯಂಥ ಸುಂದರ ಲೋಕವನ್ನಾಗಿ ಮಾರ್ಪಡಿಸಬಲ್ಲದು; ಆದರೆ ಕ್ರೈಸ್ತರು ತೊಡಗಿಸಿಕೊಂಡಿದ್ದಾಗ್ಯೂ, ಜೀವಿತವೂ ಯಾವಾಗಲೂ ಆ ವಿಧದಲ್ಲಿ ಬದಲಾಗುವದಿಲ್ಲ. ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಲೇಖಕನು ಈ ಮಾತುಗಳನ್ನು ಬರೆದದ್ದು ಕ್ರೈಸ್ತರಿಗಾಗಿಯೇ ಆಗಿರುತ್ತದೆ, "ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೂ ಪರಿಶುದ್ಧತೆಯನ್ನು ಹೊಂದುವದಕ್ಕೂ ಪ್ರಯತ್ನಮಾಡಿರಿ" (ಇಬ್ರಿಯ 12:14). ಸಮಾಧಾನವು ನಮಗೆ ಸ್ವಾಭಾವಿಕವಾಗಿ ಬರುವದಿಲ್ಲ. ನಾವು ಒಬ್ಬರೊಬ್ಬರಿಗೆ ನೋವುಂಟು ಮಾಡುವದರ ಬದಲಾಗಿ "ಪವಿತ್ರಾತ್ಮನನ್ನನುಸರಿಸಿ ನಡೆಯಲು" ಒಂದು ನಿಜವಾದ ಪ್ರಯತ್ನವನ್ನು ಮಾಡಬೇಕು (ಗಲಾತ್ಯ 5:15, 16).

ಯೇಸುವು "ಸಮಾಧಾನದ ಪ್ರಭು"ವಾಗಿ ಬಂದನು. ಸಮಾಧಾನಗೊಳಿಸುವವನಾಗಿ ತನ್ನ

ಪಾತ್ರದಲ್ಲಿ, ಆತನು ಮಾನವರಿಗೆ ಪರಿಶುದ್ಧ ದೇವರೊಂದಿಗೆ ಸಮಾಧಾನಗೊಳ್ಳುವದಕ್ಕೆ ಒಂದು ದಾರಿಯನ್ನು ಒದಗಿಸಿದನು. “ಪಾಪಜ್ಞಾನವಿಲ್ಲದ” ಯೇಸುವು “ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ . . . ನಮಗೋಸ್ಕರ ಪಾಪ ಸ್ವರೂಪಿ” ಆತನು (2 ಕೊರಿಂಥ 5:21). ಸುವಾರ್ತೆಗೆ ವಿಧೇಯತೆಯುಳ್ಳ ನಂಬಿಕೆಯಿಂದ ಪ್ರತಿಕ್ರಿಯಿಸುವವರು “ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ” ಇರುತ್ತಾರೆ (ರೋಮಾ 5:1). ಕ್ರಿಸ್ತನು ಅವರನ್ನು ತನ್ನ ಒಂದೇ ದೇಹಕ್ಕೆ ಸೇರ್ಪಡೆಗೊಳಿಸುತ್ತಾನೆ, ಅವರು ಪರಸ್ಪರ ಸಮಾಧಾನದಿಂದಿರುವಂತೆ ಕರೆಯುತ್ತಾನೆ (ಎಫೆಸ 2:14-22). ನಾವು ಆತನ ಒಡಂಬಡಿಕೆಯ ಸಂಬಂಧದಲ್ಲಿರುವದಾದರೆ, ನಾವು “ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿ” ಹೊಂದಿಕೊಳ್ಳಬಹುದು (ಫಿಲಿಪ್ಪಿ 4:7). ಈ ಸಮಾಧಾನವು, ದೇವರಲ್ಲಿಟ್ಟಿರುವ ಭರವಸದ ಪ್ರಶಾಂತತೆಯು ಗಲಾತ್ಯ 5:22ರಲ್ಲಿ ಪೌಲನು ಯಾವ ಫಲದ ಕುರಿತು ಬರೆದನೋ ಆ ದೇವರಾತ್ಮನಿಂದ ಉಂಟಾಗುವ ಫಲವಾಗಿರುತ್ತದೆ.

ಕ್ರಿಸ್ತನನ್ನು ಮತ್ತು ಆತನ ಸುವಾರ್ತೆಯನ್ನು ಅನೇಕರು ತಮ್ಮ ಹೃದಯಗಳು ಕೆಟ್ಟವುಗಳಾಗಿದ್ದವೆಂಬ ಒಂದೇ ಒಂದು ಸರಳವಾದ ಕಾರಣಕ್ಕಾಗಿ ಸ್ವಾಗತಿಸಿಕೊಳ್ಳಲಿಲ್ಲ. ಅವರು ತಮ್ಮ ದುಷ್ಕೃತ್ಯಗಳ ಕತ್ತಲೆಯನ್ನೇ ಇಷ್ಟಪಟ್ಟರು (ಯೋಹಾನ 3:19-21; ರೋಮಾ 1:18-32). ದುರಂತಕರವಾಗಿ, ಆತನು ಅವರಿಗಾಗಿ ತನ್ನ ಸ್ವಂತ ಪ್ರಾಣವನ್ನೇ ಅರ್ಪಿಸಿದಾಗ್ಯೂ, ಅನೇಕರು ಈಗಲೂ ಆತನನ್ನು ದ್ವೇಷಿಸುತ್ತಾರೆ. ವಿಶ್ವವಿದ್ಯಾಲಯಗಳಲ್ಲಿ, ಮಾಧ್ಯಮದಲ್ಲಿ, ಮತ್ತು ಸರ್ಕಾರಗಳಲ್ಲಿ ನಂಬಿಕೆಯ ಮೇಲೆ ಕತ್ತಲೆಯು ಧೈರ್ಯದಿಂದ ಮತ್ತು ಆಕ್ರಮಣಶೀಲತೆಯಿಂದ ದಾಳಿ ಮಾಡುತ್ತಾ ಇಳಿದು ಬರುತ್ತಲೇ ಇರುತ್ತದೆ. ಅದು ಪ್ರವಾದಿಯು ಹೇಳಿರುವ ರೀತಿಯಲ್ಲಿಯೇ ಇರುತ್ತದೆ:

> ದುಷ್ಟರಾದರೋ ಅಲ್ಲೋಲಕಲ್ಲೋಲವಾದ ಸಮುದ್ರದಂತಿದ್ದಾರೆ; ಅದು ಸುಮ್ಮನಿರದು, ಅದರ ತೆರೆಗಳು ಕೆಸರನ್ನೂ ಬುರುದೆಯನ್ನೂ ಕಾರುತ್ತಲಿರುತ್ತವೆ. ದುಷ್ಟರಿಗೆ ಸಮಾಧಾನವೇ ಇಲ್ಲವೆಂದು ನನ್ನ ದೇವರು ನುಡಿಯುತ್ತಾನೆ (ಯೆಶಾಯ 57:20, 21).

## ಯೇಸುವು ತಾಳ್ಮೆಯಿಂದ ಸಹಿಸಿಕೊಂಡಿದ್ದು (5:22)

ಯೇಸು ನಮ್ಮ ಹೋರಾಟಗಳನ್ನು ಅರ್ಥಮಾಡಿಕೊಳ್ಳುತ್ತಾನೆ, ಯಾಕೆಂದರೆ ಆತನು ನಮ್ಮೊಳಗೆ ಒಬ್ಬರಂತೆ ಜೀವಿಸಿದ್ದನು (ಇಬ್ರಿಯ 2:17, 18; 4:15). ಆತನ ತಾಳ್ಮೆಯು ಕೆಲವು ಸಂದರ್ಭಗಳನ್ನು ತನ್ನ ಮಿತಿಗಳನ್ನು ದಾಟಿ ಹೋಗಿತ್ತೆಂಬುದರಲ್ಲಿ ಸಂಶಯವೇ ಇಲ್ಲ. ಆತನು ಮಾಡಿದ ಮೂರು ವರ್ಷಗಳ ಕಾಲದ ಸೇವೆಯ ವೇಳೆ, ಆತನು ದೇವರ ವಾಕ್ಯವನ್ನು ಸಾರುವದಕ್ಕೆ ಮತ್ತು ರೋಗಗಳಿಂದ ಹಾಗೂ ದೆವ್ವಗಳಿಂದ ಬಾಧೆಗೊಳಗಾದವರನ್ನು ಗುಣಪಡಿಸುವದಕ್ಕೆ ತನ್ನನ್ನು ಅರ್ಪಿಸಿಕೊಂಡಿದ್ದನು. ಹಾಗಿದ್ದರೂ, ಅನೇಕರು ಆತನ ಈ ಅದ್ಭುತಕರವಾದ ಕ್ರಿಯೆಗಳಿಗೆ ಪ್ರತ್ಯುತ್ತರವಾಗಿ ಕೃತಘ್ನತೆ ಮತ್ತು ಅಪನಂಬಿಕೆಯನ್ನು ವ್ಯಕ್ತಪಡಿಸಿದರು. ಆತನು ಖೊರಾಜಿನೇ, ಬೇತ್ಸಾಯಿದ, ಮತ್ತು ಕಪೆರ್ನೌಮ ಊರುಗಳ ಜನರು - ಆತನು ಅದ್ಭುತಗಳನ್ನು ನಡಿಸಿದ ಸ್ಥಳಗಳು - ಪಶ್ಚಾತ್ತಾಪ ಪಡಲಿಲ್ಲವಾದ್ದರಿಂದ ಆ ಊರುಗಳ ಮೇಲೆ ಅಯ್ಯೋ ಎಂದು ಹೇಳಿದನು (ಮತ್ತಾಯ 11:20-24). ಜನರು ಹೇಗೆ ಯೇಸುವಿಗೆ ಕಿರಿಕಿರಿಗೊಳಿಸಿದರೆಂಬುದಕ್ಕೆ ಒಂದು ಉದಾಹರಣೆಯು ಮಾರ್ಕ 9ನೇ ಅಧ್ಯಾಯದಲ್ಲಿ “ಮೂರ್ಛಾರೋಗ”ದ ಹುಡುಗನನ್ನು ಜನರು ಆತನ ಶಿಷ್ಯರ ಬಳಿಗೆ ಕರೆದುಕೊಂಡ ಬಂದ ಘಟನೆಯೇ ಆಗಿದೆ. ಅವರಿಗೆ ಹುಡುಗನೊಳಗಿಂದ ದೆವ್ವವನ್ನು ಓಡಿಸುವದಕ್ಕೆ ಸಾಧ್ಯವಾಗಲಿಲ್ಲ,

ಇವರ ಮೇಲೆ ಮತ್ತು ಯೇಸುವಿನ ಮೇಲೆ ಅಪನಂಬಿಕೆಯನ್ನು ಹುಟ್ಟಿಸುವದಕ್ಕೆ ಶಾಸ್ತ್ರಿಗಳು ಇದನ್ನು ಸದವಕಾಶವನ್ನು ಬಳಸಿಕೊಂಡರು. ಹುಡುಗನನ್ನು ಗುಣಪಡಿಸುವದಕ್ಕೆ ಮುನ್ನ, ಯೇಸುವು ಹೀಗೆ ಉದ್ಗರಿಸಿದನು, "ಎಲಾ, ನಂಬಿಕೆಯಿಲ್ಲದಂಥ ಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ನನ್ನ ಬಳಿಗೆ ತೆಗೆದುಕೊಂಡು ಬನ್ನಿರಿ" (ಮಾರ್ಕ 9:19).

ವಿರೋಧದ ಹೊರತಾಗಿಯೂ, ಯೇಸುವು ತನ್ನ ಸೇವೆಯನ್ನು ಛಲ ಬಿಡದೆ ಮಾಡಿದನು, ಅದು ಕೊನೆಯಲ್ಲಿ ಆತನು ನಮಗೋಸ್ಕರ ಶಿಲುಬೆಯಲ್ಲಿ ಯಜ್ಞವಾಗುವದರೊಂದಿಗೆ ಸಮಾಪ್ತಿಗೊಂಡಿತ್ತು. ಆತನ ತಾಳ್ಮೆಯ ಉದಾಹರಣೆಯು ಈ ಘಟನೆಯ ಮೂಲಕವಾಗಿ ಅತ್ಯುತ್ತಮವಾದ ರೀತಿಯಲ್ಲಿ ದೃಷ್ಟಾಂತಪಡಿಸಲ್ಪಟ್ಟಿದೆ. ಯೋಹಾನನು ಬರೆದ ಸುವಾರ್ತೆಯ ಪ್ರಕಾರವಾಗಿ, ಯೇಸುವು "ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಂಡು" ಗೊಲ್ಗೊಥಾಕ್ಕೆ ನಡೆಸಿಕೊಂಡು ಹೋಗಲ್ಪಟ್ಟನು (ಯೋಹಾನ 19:17).[146] ಆತನು ನಿರ್ದಯದಂಥ ಕೊರಡೆ ಏಟುಗಳಿಂದ ಘೋರವಾಗಿ ಬಲಹೀನಗೊಂಡವಾಗಿ ತನಗೆ ಸಾಧ್ಯವಾದಷ್ಟು ದೂರಕ್ಕೆ ಅದನ್ನು ಹೊತ್ತುಕೊಂಡು ಸಾಗಿದ್ದನು. ಕ್ರಮೇಣದಲ್ಲಿ, ಶಿಲುಬೆಯ ದಿಮ್ಮೆಯು ಆತನಿಗೆ ಹೊರಲಾರದಷ್ಟು ದೊಡ್ಡದಾಗಿತ್ತು, ಮತ್ತು ಆತನು ಅದರ ಭಾರದಡಿಯಲ್ಲಿ ಬಿದ್ದು ಬಿಟ್ಟಿದ್ದನು. ಇತರ ಮೂರು ಸುವಾರ್ತೆಗಳು ಇದಕ್ಕೆ ಸಂಬಂಧಿಸಿದಂತೆ ತಿಳಿಸುವದೇನೆಂದರೆ ಕುರೇನೆ ಪಟ್ಟಣದ ಸೀಮೋನನನ್ನು ಗೊಲ್ಗೊಥಾದ ವರೆಗೂ ಉಳಿದ ದಾರಿಯುದ್ದಕ್ಕೂ ಶಿಲುಬೆಯನ್ನು ಹೊತ್ತುಕೊಂಡು ಹೋಗುವ ಸೇವೆಗೆ ಕರೆ ತರಲ್ಪಟ್ಟನೆಂದು ಹೇಳುತ್ತವೆ (ಮತ್ತಾಯ 27:32; ಮಾರ್ಕ 15:21; ಲೂಕ 23:26).

ಶಾಸ್ತ್ರಗಳು ಯೇಸುವಿನ ಕುರಿತು ಯಾವ ಚಿತ್ರಣವನ್ನು ಮುಂದಿಡುತ್ತವೆ? ಆತನಿಗೆ ನಿದ್ದೆಯಿಲ್ಲದ ಕಾರಣ ಬಳಲಿ ಹೋಗಿದ್ದನು, ಆತನ ಬೆನ್ನು ಕೊರಡೆ ಏಟಿನಿಂದಾಗಿ ರಕ್ತಮಯವಾಗಿತ್ತು, ಮತ್ತು ಮುಳ್ಳಿನ ಕಿರೀಟವು ಆತನ ಹಣೆಯನ್ನು ಚುಚ್ಚುತ್ತಾ ನೋವುಂಟು ಮಾಡುತ್ತಿತ್ತು. ಆತನು ತನ್ನ ಭಾರವಾದ ಶಿಲುಬೆಯನ್ನು ಹೊತ್ತುಕೊಂಡು ಇಕ್ಕಟ್ಟಾದ ಬೀದಿಗಳೊಳಗೆ ಕಷ್ಟದಿಂದ ಹೆಜ್ಜೆ ಹಾಕುತ್ತಿದ್ದ ವೇಳೆ, ಆತನು ನಡುಗುತ್ತಿದ್ದನು, ಅವಮಾನ, ಕುಚೋದ್ಯ, ಮತ್ತು ಕೆನ್ನೆಗೆ ಹೊಡೆಯಲ್ಪಡುವಿಕೆಗಳಿಂದ ನಲುಗಿ ಹೋಗಿದ್ದನೆಂಬುದರಲ್ಲಿ ಸಂಶಯವೇ ಇರುವದಿಲ್ಲ. ಆತನು ಅಪಹಾಸ್ಯ ಮತ್ತು ರೋಮನ್ ಸೈನಿಕರಿಂದ ಮಾತ್ರವಲ್ಲದೆ ಪ್ರಧಾನ ಯಾಜಕರ ಮತ್ತು ಶಾಸ್ತ್ರಿಗಳಿಂದ ಕುಚೋದ್ಯದ ಕೂಗಾಟಗಳನ್ನು ಸೈರಿಸಿಕೊಂಡನು. ದೇವರಾಗಿ ಆತನು ತನ್ನ ಸಹಾಯಕ್ಕೆ ಬಂದು ಎಲ್ಲದಕ್ಕೂ ಅಂತ್ಯವನ್ನುಂಟು ಮಾಡುವ ಹಾಗೆ ದೇವದೂತರ ದಂಡುಗಳನ್ನು ಕರೆದಿರಬಹುದಾಗಿತ್ತಾದರೂ, ಆತನು ಇದೆಲ್ಲವನ್ನೂ ಸಹಿಸಿಕೊಂಡನು (ಮತ್ತಾಯ 26:53).

ಯೇಸುವು ದೃಢನಿಷ್ಠೆಯಿಂದ ಮುಂದುವರೆದಿದ್ದನು, ತನ್ನ ಮಣಿಕಟ್ಟುಗಳಿಗೆ ಹಾಗೂ ಪಾದಗಳಿಗೆ ಮೊಳೆಗಳನ್ನು ಹೊಡೆದಾಗಲೂ ಅಚಲವಾಗಿದ್ದನು. ಆತನು ಯೆಹೂದಿ ನಾಯಕರ ಮತ್ತು ದಾರಿಹೋಕರ, ಮತ್ತು ಆತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದ ಅಪರಾಧಿಗಳ ಕುಚೇಷ್ಟೆಗಳನ್ನು ಸಹಿಸಿಕೊಂಡನು. ಆತನು ಪರಲೋಕದ ತಂದೆಯಿಂದ ಬೇರ್ಪಟ್ಟವನಾಗಿ ಲೋಕದ ಪಾಪವನ್ನು ತನ್ನ ಮೇಲೆ ಹೊತ್ತುಕೊಂಡಿದ್ದನು (ಮತ್ತಾಯ 27:39-46). ಸತ್ಯವಾಗಿಯೂ, ಈ ಕೃತ್ಯವು ಒಡೆಯನ ಮಹಾ ಶಕ್ತಿಯನ್ನು ಮತ್ತು ಸ್ವ-ನಿಗ್ರಹವನ್ನು ತೋರಿಸಿ ಕೊಡುತ್ತದೆ. ಅದು ಲೋಕವು ಹಿಂದೆಂದೂ ಕಂಡಿರದ ಮತ್ತು ಮುಂದೆ ಪುನಃ ಎಂದೂ ಕಾಣಲಾರದಂಥ ತಾಳ್ಮೆಯುತ ಸ್ಥೈರ್ಯ ಮತ್ತು ಆತ್ಮಸಂಯಮಕ್ಕೆ ಒಂದು ಮಾದರಿಯನ್ನು

ಒದಗಿಸಿತ್ತು.

ಪ್ರತಿಯೊಬ್ಬ ಕ್ರೈಸ್ತನು ಕ್ರಿಸ್ತನನ್ನು ಅನುಸರಿಸುವದಕ್ಕೆ, ಈ ಪ್ರಕರಣದಲ್ಲಿ ನೋಡುವದಾದರೆ ಆತನು ತನ್ನ ಅತ್ಯಂಥ ದೊಡ್ಡ ನ್ಯಾಯವಿಚಾರಣೆಯನ್ನು ಎದುರಿಸುವ ವೇಳೆ ಹೇಗೆ ದೃಢನಿಷ್ಠೆಯಿಂದಿದ್ದನು ಎಂಬುದರಲ್ಲಿ ಆತನನ್ನು ಅನುಸರಿಸುವದಕ್ಕೆ ಸಮರ್ಪಿಸಿಕೊಳ್ಳಬೇಕು. ನಾವು ತಾಳ್ಮೆ, ದೀರ್ಘಶಾಂತಿ, ಮತ್ತು ಸ್ಥೈರಣೆಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು. ಯೇಸುವಿನ ಎರಡನೆಯ ಬರೋಣ ಮತ್ತು ನಿತ್ಯಜೀವವನ್ನು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಮಾಡತಕ್ಕದ್ದು (ಯಾಕೋಬ 5:7, 8).

## ದಯೆಯ ಪ್ರಭಾವ (5:22)

ನಾವು "ದಯೆ" ಎಂಬ ಪದವನ್ನು ನೋಡುವಾಗ, ಅದು ನಮಗೆ ಪರಿಚಯವಿರುವಂಥ ಕೆಲವೊಬ್ಬ ಜನರನ್ನು ನಮ್ಮ ನೆನಪಿಗೆ ತರುತ್ತದೆ. ಅವರ ದಯೆಯುಳ್ಳ ಮುಗುಳ್ನಗೆಗಳು ನಮ್ಮಲ್ಲಿ ಪ್ರಶಾಂತತೆಯ ಹೃತ್ಪೂರ್ವಕವಾದ ಭಾವಗಳನ್ನು ಮತ್ತು ದೈಹಿಕ ಅಥವಾ ಮಾನಸಿಕ ಅಗತ್ಯತೆಯ ಸಮಯಗಳಲ್ಲಿ ನಮ್ಮ ಬಗ್ಗೆ ಕಾಳಜಿ ವಹಿಸಿದ್ದವರಾಗಿ ಕೃತಜ್ಞತೆಯ ಭಾವಗಳನ್ನು ನಮ್ಮೊಳಗೆ ಉಂಟು ಮಾಡಿರುತ್ತವೆ. ಬಹುಶಃ ನಮ್ಮನ್ನು ಅರ್ಥಮಾಡಿಕೊಂಡು ವಿರೋಧವನ್ನು ಎದುರಿಸುತ್ತಿರುವ ವೇಳೆ ಅಥವಾ ನಾವು ಒತ್ತಡದ, ಕೊರತೆಯ, ಅಥವಾ ಏಕಾಂಗಿ ಭಾವಗಳನ್ನು ಅನುಭವಿಸುತ್ತಿರುವ ವೇಳೆ ನಮ್ಮನ್ನು ಆದರಿಸುವದಕ್ಕೆ ಯಾರಾದರೊಬ್ಬರ ಅಗತ್ಯತೆಯು ನಮಗೆ ಇದ್ದಿರಬಹುದಾಗಿದೆ. ಒಂದಿಲ್ಲಾ ಒಂದು ಸಂದರ್ಭದಲ್ಲಿ ಜೀವನದೊಳಗೆ ಕೇವಲ ಕತ್ತಲಿನಿಂದ ತುಂಬಿದ ಮೋಡಗಳೇ ಬಾನಂಗಳದಲ್ಲಿ ಕಾಣಿಸುತ್ತಿದ್ದಂಥ ಮಂಕುಕವಿದ ಸಮಯಗಳನ್ನು ಅನುಭವಿಸದವರು ಯಾರಿದ್ದಾರೆ? ಅದೊಂದು ಉದ್ಯೋಗ ಕಳೆದುಕೊಂಡ ಸಮಯ, ಕುಟುಂಬ ಸಮಸ್ಯೆಗಳ, ಏರುತ್ತಿರುವ ಸಾಲ, ಅಥವಾ ಸಂಧಾನಪಡಿಸಲಾಗದಂಥ ಸಂಬಂಧಗಳ ಸಮಯವು ಆಗಿರಬಹುದಾಗಿದೆ. ಅದು ಒಂದು ವೇಳೆ ನಮಗೆ ಯಾರೂ ಪರಿಚಯವಿಲ್ಲದ ಮತ್ತು ಸಹಾಯಕ್ಕಾಗಿ ತಿರುಗಿಕೊಳ್ಳಲು ಯಾರೂ ಇಲ್ಲದಂಥ ಹೊಸ ಸ್ಥಳವೊಂದು ಆಗಿರಬಹುದಾಗಿದೆ. ಆ ಸಂದರ್ಭದಲ್ಲಿ ಯಾರೋ ಒಬ್ಬರು ಸ್ನೇಹದ ಮುಖದೊಂದಿಗೆ ನಮಗೆ ಅಗತ್ಯವಿರುವ ಯಾವದೇ ವಿಧದಲ್ಲಿಯಾದರೂ ನಮಗೆ ಸಹಾಯ ಮಾಡುವದಕ್ಕೆ ಉತ್ತೇಜನಕರವಾದ ಸಿದ್ಧಮನಸ್ಸಿನಿಂದ ಕಾಣಿಸಿಕೊಳ್ಳುತ್ತಾರೆ. ಅದು ಆತ್ಮಕ್ಕೆ ಎಂತಹ ಒಂದು ಸಾಂತ್ವನಕಾರಿ! ನಮಗೆ ತೋರಲ್ಪಟ್ಟ ಅಂತಹ ದಯೆಯನ್ನು ನಾವು ಎಂದಾದರೂ ಮರೆಯುವೆವೋ?

ಒಂದು ಸಂದರ್ಭದಲ್ಲಿ, ಸುಮಾರು ಅರವತ್ತಕ್ಕೂ ಅಧಿಕ ವರ್ಷಗಳ ಹಿಂದೆ, ನಾನು ಹಳೆಯ ಸುಪ್ರಸಿದ್ಧ "Ruperto Carola Universität" (Germanyಯ University of Heidelbergದಲ್ಲಿ) ಅಧ್ಯಯನಕ್ಕಾಗಿ ಅಂಗೀಕರಿಸಿಕೊಳ್ಳಲ್ಪಟ್ಟಿದ್ದೆನು. ನಾನು ಒಂದು ಪರದೇಶದಲ್ಲಿ, ವಿಶೇಷವಾಗಿ ಬಹಳಷ್ಟು ಕಾಲದ ತನಕ ಅಮೆರಿಕವು ಇದುವರೆಗೂ ಎದುರಿಸಿರುವ ಅತ್ಯಂಥ ದೊಡ್ಡ ವೈರಿ ದೇಶದಲ್ಲಿ (ನಾಜೀ ಜರ್ಮನಿ) ಒಬ್ಬ ಯುವಕನಾಗಿ ನೆಲೆಸುವದಕ್ಕೆ ಹೆದರಿಕೆಯುಳ್ಳವನಾಗಿದ್ದೆನು. Heidelberg ಪಟ್ಟಣದ ಬೀದಿಗಳಲ್ಲಿ ನಡೆದಾಡುತ್ತಾ, ಅಲ್ಲಿನ ಪೂಜ್ಯನೀಯ ಸ್ಥಳಗಳನ್ನು ವಿಕ್ಷಿಸಿಕೊಂಡಿರುವ ವೇಳೆ ಒಬ್ಬ ಅಪರಿಚಿತನು ನನ್ನ ಬಳಿಗೆ ಬಂದನು. ಒಬ್ಬ ನೀಟಾಗಿದ್ದ ಯುವಕನು ನನ್ನೊಂದಿಗೆ ಮಾತಾಡುವದಕ್ಕಾಗಿ ನಿಂತನು ಮತ್ತು ಪಟ್ಟಣವನ್ನೆಲ್ಲಾ ಸುತ್ತಾಡಿಸಿ ತೋರಿಸುವ ಗೌರವವನ್ನು ನನಗೆ ಕೊಡುವಿಯಾ ಎಂದು ಕೇಳಿದನು. ಖಂಡಿತವಾಗಿಯೂ, ನಾನು ಸಂತೋಷವಾಗಿಯೇ ಇದನ್ನು ಒಪ್ಪಿಕೊಂಡೆನು. ಆತನ ವರ್ತನೆಯು ಮಾದರಿಯಿಂದ ಮತ್ತು ಸಭ್ಯತೆಯಿಂದ ಕೂಡಿದ್ದಲ್ಲದೆ ಮತ್ತೇನೂ ಆಗಿರಲಿಲ್ಲ, ಮತ್ತು ನಾನು

ಆತನ ದಯೆಯನ್ನು ಎಂದಿಗೂ ಮರೆತಿರುವದಿಲ್ಲ.

ಯೇಸುವು ಲೂಕ 10ನೇ ಅಧ್ಯಾಯದಲ್ಲಿ ದೇವರ ದಯೆಯ ಕುರಿತಾಗಿ ನಮಗೆ ಒಂದು ದೊಡ್ಡ ತಿಳುವಳಿಕೆಯನ್ನು ನೀಡುವಂತಹ ಸಾಮ್ಯವೊಂದನ್ನು ಹೇಳುತ್ತಾನೆ. ಯೇಸುವಿನ ಮಾತುಗಳನ್ನು ಕೇಳಿಸಿಕೊಂಡ ಯೆಹೂದ್ಯರಿಗಾದರೋ, ಆತನು ಹೇಳಿದ ಕಥೆಯಿಂದ ಈ ಪ್ರಶ್ನೆಯನ್ನು ಅವರಲ್ಲಿ ಹುಟ್ಟು ಹಾಕಿರಬಹುದಾಗಿದೆ: ಮಾದರಿಯಾದ ಯೆಹೂದ್ಯರಿಗಿಂತಲೂ ಒಬ್ಬ ಸಮಾರ್ಯದವನು ಹೇಗೆ ವ್ಯತ್ಯಾಸವಾಗಿ ನಡೆದುಕೊಳ್ಳುವದಕ್ಕೆ ಶಕ್ತನಾಗಿದ್ದನು? ಇದು ನಮಗೆ ದಯೆಯ ಕುರಿತಾಗಿ ಕಲಿಸುವಂತಹ ಒಂದು ಆಘಾತಕಾರಿ ಕಥೆಯಾಗಿದೆ.

ಈ ಕಥೆಯಲ್ಲಿ, ಒಬ್ಬ ಮನುಷ್ಯನು ಗಾಯಗೊಂಡವನಾಗಿ ಮತ್ತು ಯಾತನೆ ಪಡುವವನಾಗಿ ರಸ್ತೆಯಲ್ಲಿ ಬಿದ್ದುಕೊಂಡಿದ್ದನು, ವಸ್ತ್ರಗಳು ಕಿತ್ತುಹಾಕಲ್ಪಟ್ಟು, ಹೊಡೆಯಲ್ಪಟ್ಟವನಾಗಿ, ಮತ್ತು "ಅರೆಜೀವ ಮಾಡಿ" ಬಿಟ್ಟು ಹೋಗಲ್ಪಟ್ಟಿದ್ದನು (ಲೂಕ 10:30). ಆಗ "ಹೇಗೋ," ಒಬ್ಬ ಯಾಜಕನು ಮತ್ತು ಬಳಿಕ ಒಬ್ಬ ಲೇವಿಯನು ಆ ದಾರಿಯಲ್ಲಿ ಬಂದನು. ಅವರಿಬ್ಬರೂ ಆತನನ್ನು ನೋಡಿದರು ಆದರೆ "ವಾರೆಯಾಗಿ" ಹೊರಟು ಹೋದರೆಂದು ಸ್ಪಷ್ಟವಾಗಿ ಹೇಳಲಾಗಿರುತ್ತದೆ (ಲೂಕ 10:31, 32). ದೇವರಾದುಕೊಂಡ ಜನಾಂಗವಾಗಿ, ಈ ಯೆಹೂದ್ಯರು "ಅನ್ಯಜನಗಳಿಗೆ ಬೆಳಕು" ಆಗಿರುವಂತೆ (ಯೆಶಾಯ 42:6-8; ನೋಡಿರಿ 49:6), ತಮ್ಮ ಯಜಮಾನನಿಗೆ ಸೇವೆ ಮಾಡುತ್ತಾ ಎಲ್ಲಾ ಜನಾಂಗಗಳು (ಅನ್ಯಜನರು) ಹೇಗೆ ಜೀವಿಸಬೇಕೆಂಬುದಕ್ಕೆ ಒಂದು ಮಾದರಿಯಾಗಿ ಇರುವಂತೆ ಕರೆಯಲ್ಪಟ್ಟಿದ್ದರು. ಇಸ್ರಾಯೇಲವು ದೇವರನ್ನು ಪ್ರೀತಿಸಬೇಕು ಮತ್ತು ನೆರೆಯವನನ್ನು ಪ್ರೀತಿಸಬೇಕು ಎಂಬ ಎರಡು ಅತ್ಯಂಥ ಪ್ರಧಾನವಾದ ಆಜ್ಞೆಗಳ ಮೇಲೆ ಮುಖ್ಯ ಗಮನವನ್ನು ಹೊಂದಿದ್ದಂಥ ಜನಾಂಗವಾಗಿರಬೇಕಾಗಿತ್ತು (ಲೂಕ 10:25-28). ಈ ಎರಡನೆಯ ಆಜ್ಞೆಯನ್ನು ನೆರವೇರಿಸುವವರಾಗಿಯೇ ಅನ್ಯಜನರು ಮೊದಲ ಆಜ್ಞೆಯ ಲಕ್ಷ್ಯವಾಗಿದ್ದಂಥವನನ್ನು ತಿಳಿದುಕೊಳ್ಳುವವರಾದರು. ಯಾಜಕರು ಮತ್ತು ಲೇವಿಯರು ದೇವರ ಸ್ವಕೀಯ ಪ್ರಜೆಗಳಿಗೆ ಪ್ರಮುಖ ಮಾದರಿಗಳಾಗಿದ್ದರು, ಆದಾಗ್ಯೂ ಅವರು ದೇವರ ಹೃದಯವನ್ನೇ ಮರೆತು ಬಿಟ್ಟಿದ್ದರು. ಸಮಾರ್ಯದವನ ಪ್ರತಿಕ್ರಿಯೆಯು ಎಷ್ಟು ವ್ಯತ್ಯಾಸವಾಗಿತ್ತು:

> ಅವನನ್ನು ಕಂಡು ಕನಿಕರಿಸಿ ಅವನ ಹತ್ತಿರಕ್ಕೆ ಹೋಗಿ ಅವನ ಗಾಯಗಳಲ್ಲಿ ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಹೊಯ್ದು ಕಟ್ಟಿ ತನ್ನ ಸ್ವಂತ ವಾಹನದ ಮೇಲೆ ಹತ್ತಿಸಿಕೊಂಡು ಛತ್ರಕ್ಕೆ ಕರಕೊಂಡು ಹೋಗಿ ಅವನನ್ನು ಆರೈಕೆಮಾಡಿದನು (ಲೂಕ 10:33, 34).

ಆತನು ಗಾಯಾಳುವಿನ ರಾತ್ರಿಯ ತಂಗುವಿಕೆಗಾಗಿ ಸ್ವಂತ ಹಣವನ್ನು ಸಂದಾಯ ಮಾಡಿದ್ದು ಮಾತ್ರವೇ ಅಲ್ಲ. ಆದರೆ ತಾನು ಹಿಂದಿರುಗಿ ಬಂದ ಬಳಿಕ ಇನ್ನೂ ಹೆಚ್ಚಿನ ವೆಚ್ಚವಾಗಿದ್ದರೆ ಕೊಡುವೆನೆಂದು ವಾಗ್ದಾನ ಸಹ ಮಾಡಿದನು (ಲೂಕ 10:35). ಎಂತಹ ಮಾದರಿ ತೋರುವಂಥ ನಡವಳಿಕೆ - ಮತ್ತು ಅದು ಸಹ ಒಬ್ಬ ಅಸಹ್ಯಿಸಲ್ಪಡುವಂಥ ಸಮಾರ್ಯದವನು ಮಾಡಿದ್ದು! ಆತನ ದಯೆಯ ಮೂಲಕವಾಗಿ, ಆತನು ಗಾಯಗೊಂಡವನಿಗೆ ತನ್ನನ್ನು "ನೆರೆಯವನು" ಎಂದು ಸಾಭಿತುಪಡಿಸಿಕೊಂಡನು (ಲೂಕ 10:36, 37).

ದೇವರು ತನ್ನ ಜನರಲ್ಲಿ ಕಾಣುವದಕ್ಕೆ ಬಯಸುವದು ದಯೆಯನ್ನು ಅಭ್ಯಾಸ ಮಾಡಿಕೊಳ್ಳುವದೇ. ನಾವು ಬೇರೆಯವರಿಂದ ಅನುಭವಿಸಿರುವಂತಹ ದಯಾ ಕಾರ್ಯಗಳಲ್ಲಿ ಸಂಭ್ರಮಿಸುವದು ಅಥವಾ ದೇವರು ನಮ್ಮ ಕಡೆಗೆ ತೋರಿದ ದಯೆಯ ಅಪಾರತೆಯನ್ನು ಕಂಡು ಮನಸ್ಪರ್ಶಿಸಲ್ಪಡುವದು ಮಾತ್ರವೇ ಸಾಲದು. ಈ ಗುಣವು ನಮ್ಮ ಜೀವಿತಗಳಲ್ಲಿ ಸಹ ಕಾರ್ಯ ಮಾಡತಕ್ಕದ್ದು. ನಾವು ಒರಟು ಹಾಗೂ ಕಾಳಜಿಯಿಲ್ಲದವರನ್ನಾಗಿ ಮಾಡುವಂತೆ ದಿನದಲ್ಲಿ

ಉಂಟಾಗುವ ಬೇಸರ, ಕಿರಿಕಿರಿಗಳಿಗೆ, ಹಾಗೂ ಉದ್ವೇಗಗಳಿಗೆ ಅವಕಾಶವನ್ನು ಕೊಡಬಾರದು. ಬದಲಾಗಿ, ಪವಿತ್ರಾತ್ಮನನ್ನನುಸರಿಸಿ ನಡೆಯುವವರಾಗಿ ಪ್ರತಿಯೊಂದು ಪರಿಸ್ಥಿತಿಗಳಲ್ಲಿ ದೇವರ ದಯೆಯನ್ನು ಪ್ರತಿಫಲಿಸಬೇಕು. ನಮ್ಮ ದಯೆಯ ಮನೋಭಾವಗಳು ಮತ್ತು ಕ್ರಿಯೆಗಳು ಖಂಡಿತವಾಗಿಯೂ ಬೇರೆಯವರ ಮೇಲೆ ಪ್ರಭಾವವನ್ನು ಬೀರುವವು (ನೋಡಿರಿ ಮತ್ತಾಯ 5:14-16; 1 ಪೇತ್ರ 2:12).

## ಒಬ್ಬ ಒಳ್ಳೇ ಮನುಷ್ಯನು (5:22)

"ಒಳ್ಳೇಯ" (*agathos*) ಎಂಬುದು ಮನುಷ್ಯನಿಗೆ ಸಂಬಂಧಿಸಿದಂತೆ, ಸ್ವತಃ ಯೇಸುವು ಸೇರಿದಂತೆ ವಿರಳವಾಗಿ ಬಳಸಿರುವ ಪದವಾಗಿದೆ. ಒಂದು ಸಂದರ್ಭದಲ್ಲಿ, ಒಬ್ಬ ವ್ಯಕ್ತಿಯು ಯೇಸುವನ್ನು "ಒಳ್ಳೇ ಬೋಧಕನೇ" ಎಂದು ಕರೆದನು. ಆ ಸಂದರ್ಭದಲ್ಲಿ ಯೇಸುವಿನ ಪ್ರತ್ಯುತ್ತರವು "ನನ್ನನ್ನು ಒಳ್ಳೆಯವನೆಂದು ಯಾಕೆ ಹೇಳುತ್ತೀ? ದೇವರೊಬ್ಬನೇ ಹೊರತು ಮತ್ತಾವನೂ ಒಳ್ಳೇಯವನಲ್ಲ" ಎಂದಾಗಿತ್ತು (ಮಾರ್ಕನು 10:17, 18). ಬಹುಶಃ, ಆ ಮನುಷ್ಯನು ಯೇಸುವಿನ ನಿಜವಾದ ಗುರುತನ್ನು ತಿಳಿದಿದ್ದನೋ ಎಂಬುದನ್ನು ಕರ್ತನು ಪರೀಕ್ಷಿಸುತ್ತಿರಬಹುದಾಗಿದೆ.

ಕೆಲವು ಮರ್ತ್ಯರಷ್ಟೇ "ಒಳ್ಳೇಯವರು" ಎಂದು ಕರೆಯಿಸಿಕೊಳ್ಳಲ್ಪಡುತ್ತಾರೆ. ಯೇಸುವು ತನ್ನ ಶಿಷ್ಯರು ಮನವಿ ಮಾಡಿದ್ದರಿಂದಾಗಿ, ಪ್ರಾರ್ಥಿಸುವದು ಹೇಗೆಂದು ಅವರಿಗೆ ಕಲಿಸಿ ಕೊಡುವ ವೇಳೆ, ಆತನು ಸ್ವಲ್ಪ ಆಶ್ಚರ್ಯಕರವಾದ ಮಾತುಗಳನ್ನೇ ನುಡಿದನು, ಏನೆಂದರೆ "ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ *ಒಳ್ಳೇ* ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವನಲ್ಲವೇ" (ಲೂಕ 11:13; ಒತ್ತಿ ಹೇಳಿದ್ದು ನನ್ನದು). ಹೊಸ ಒಡಂಬಡಿಕೆಯಲ್ಲಿ ಅನೇಕ ವಸ್ತುಗಳು ಮತ್ತು ಗುಣಗಳು "ಒಳ್ಳೆಯ" ಎಂದು ಕರೆಯಲ್ಪಟ್ಟಿವೆಯಾದರೂ (ಉದಾಹರಣೆಗೆ, "ಒಳ್ಳೇ ಫಲ," "ಒಳ್ಳೇ ಕ್ರಿಯೆಗಳು," ಮತ್ತು ಒಂದು "ಒಳ್ಳೇ ಮನಸ್ಸಾಕ್ಷಿ"), ಕೆಲವೇ ಕೆಲವು ವ್ಯಕ್ತಿಗಳು ಮಾತ್ರವೇ "ಒಳ್ಳೇ" (*agathos*) ಎಂದು ಕರೆಯಲ್ಪಟ್ಟಿದ್ದಾರೆ.

"ಒಳ್ಳೇ" ಎಂದು ಕರೆಯಲ್ಪಟ್ಟವರೊಳಗೆ ಒಬ್ಬನು ಬಾರ್ನಬ (ಅಪೊಸ್ತಲರ ಕೃತ್ಯಗಳು 11:22, 24). ಈ ವ್ಯಕ್ತಿಯನ್ನು ಚೆನ್ನಾಗಿ ಪರಿಚಿತಿ ಮಾಡಿಕೊಳ್ಳುವದು "ಉಪಕಾರ" (*agathōsunē*) ಎಂಬ ದೇವರಾತ್ಮನಿಂದ ಉಂಟಾಗುವ ಫಲವನ್ನು ಕುರಿತು ತಿಳುವಳಿಕೆ ಪಡೆದುಕೊಳ್ಳುವ ಉತ್ತಮ ದಾರಿಯಾಗಿರಬಹುದಾಗಿದೆ. ಆತನ ಜೀವಿತದ ವೈಶಿಷ್ಟ್ಯತೆಯು ದಾರಾಳತೆ, ಧೈರ್ಯ, ಪ್ರೀತಿ, ಮತ್ತು ಬೇರೆಯವರಲ್ಲಿ ಭರವಸವನ್ನು ಹೊಂದಿರುವದಾಗಿತ್ತು. ಬಾರ್ನಬನು ಆದಿ ಸಭೆಯಲ್ಲಿ ಪ್ರಖ್ಯಾತನಾಗಿ ಕಾಣುತ್ತಾನೆ - ಅದಕ್ಕೆ ಕಾರಣವು ಆತನ ಭಾಷಣಗಳಾಗಲಿ ಅಥವಾ ಪತ್ರಿಕೆಗಳಾಗಲಿ ಅಲ್ಲ, ಆದರೆ ಪವಿತ್ರಾತ್ಮ ಮತ್ತು ನಂಬಿಕೆಯ ಫಲಿತವಾಗಿ ಆತನ ಜೀವಿತದಲ್ಲಿದ್ದಂಥ ಒಳ್ಳೇತನದ ಕಾರಣದಿಂದಲೇ ಆಗಿದೆ.

## ನಂಬಿಕೆಯ ಅವಶ್ಯಕತೆ (5:22)

*Pistis* ("ನಂಬಿಗಸ್ತಿಕೆ") ಎಂಬ ಪದವು ಹೊಸ ಒಡಂಬಡಿಕೆಯೊಳಗೆ ವಿವಿಧ ಬಗೆಯ ಅರ್ಥಗಳನ್ನು ಹೊಂದಿದ್ದು, ಅದು ಸಾಮಾನ್ಯವಾಗಿ "ನಂಬಿಕೆ" ಎಂದು ಅನುವಾದಿಸಲ್ಪಡುತ್ತದೆ. ನಂಬಿಕೆಯ ಪ್ರಾಮುಖ್ಯತೆಯನ್ನು ಕುರಿತು ಒತ್ತಿ ಹೇಳತಕ್ಕದ್ದು. ದೇವರಲ್ಲಿ ನಂಬಿಕೆ ಮತ್ತು

ಯೇಸುವಿನಲ್ಲಿ ಕ್ರಿಸ್ತನೆಂದು ನಂಬಿಕೆ ನಮ್ಮ ರಕ್ಷಣೆಗೆ ಅತ್ಯಾವಶ್ಯಕವಾಗಿರುತ್ತವೆ. ಈ ಕೆಳಗಿನ ವಾಕ್ಯಭಾಗಗಳನ್ನು ಆಲೋಚಿಸೋಣ:

> ಆತನನ್ನು ನಂಬುವವನಿಗೆ ತೀರ್ಪು ಆಗುವದಿಲ್ಲ; ಆದರೆ ನಂಬದವನಿಗೆ ದೇವರ ಒಬ್ಬನೇ ಮಗನ ಹೆಸರನ್ನು ನಂಬದೆಹೋದದರಿಂದ ಆಗಲೇ ತೀರ್ಪು ಆಗಿಹೋಯಿತು (ಯೋಹಾನ 3:18).

> ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು (ಯೋಹಾನ 3:36).

> ಆದದರಿಂದ ನೀವು ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ನಿಮಗೆ ಹೇಳಿದೆನು; ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿ (ಯೋಹಾನ 8:24).

> ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ (ಇಬ್ರಿಯ 11:6).

## ಯೇಸುವಿನ ಸಾಧುತ್ವ (5:23)

"ದೇವರಾತ್ಮನಿಂದ ಉಂಟಾಗುವ ಫಲ"ಕ್ಕೆ ಸಂಬಂಧ ಪಟ್ಟಂತೆ, ಸ್ವತಃ ಯೇಸುವಿನ ಮಾದರಿಯನ್ನು ಯಾವದೂ ಮೀರಿಸಲಾರದು ಅಥವಾ ಅದಕ್ಕೆ ಹೋಲಿಕೆ ಸಹ ಆಗಲಾರದು. "ಸಾಧುತ್ವ" (*prautēs*) ವಿಷಯವಾಗಿ ನೋಡುವದಾದರೆ, ನಮ್ರತೆ, ದೀನತೆ, ಮತ್ತು ಸ್ವ-ನಿಯಂತ್ರಣಗಳ ಗುಣಸ್ವಭಾವಗಳನ್ನು ಶಿಲುಬೆಯ ಮೇಲೆ ಶ್ರಮೆಯನ್ನು ಅನುಭವಿಸಿ ನಮಗೋಸ್ಕರ ಮರಣಸಿದ ವೇಳೆ ಕಣ್ಣಿಗೆ ಕಟ್ಟಿದಂತೆ ಪ್ರದರ್ಶಿಸಿದನು. ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಎಲ್ಲಾ ಕ್ರೈಸ್ತರಿಗೆ ಅನುಸರಿಸುವದಕ್ಕೆ ಯೇಸುವನ್ನು ಮಾದರಿಯಾಗಿ ಬಳಸುತ್ತಾನೆ. ಕರ್ತನ ಶಿಲುಬೆಯ ಮರಣವನ್ನು ಪರೋಕ್ಷವಾಗಿ ಸೂಚಿಸುತ್ತಾ, ಆತನು ಹೀಗೆ ಬರೆದನು, "ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು" (ಇಬ್ರಿಯ 12:3). ಅದೇ ರೀತಿಯಲ್ಲಿ, ಪೇತ್ರನು ಸಹ ಯೇಸುವನ್ನು ನಮಗೆ ಅನುಸರಿಸಲು ಒಂದು ಮಾದರಿಯನ್ನಾಗಿ ಎತ್ತಿ ಹಿಡಿಯುತ್ತಾನೆ, "ಆತನು ಬಾಧೆಯನ್ನನುಭವಿಸಿದಾಗ ಯಾರನ್ನೂ ಬೆದರಿಸದೆ ನ್ಯಾಯವಾಗಿ ತೀರ್ಪುಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು" (1 ಪೇತ್ರ 2:23).

ಯಾಜಕರು ಮತ್ತು ಸೈನಿಕರು ಯೇಸುವಿನ ಮೇಲೆ ಉಗುಳುತ್ತಾ ಮುಷ್ಟಿಗಳಿಂದ ಆತನನ್ನು ಹೊಡೆಯುತ್ತಿರುವ ವೇಳೆ, ರೋಮನ್ನರ ಕೊರಡೆಯು ಆತನ ಬೆನ್ನನ್ನು ಹರಿದು ಹಾಕುತ್ತಿರುವ ವೇಳೆ, ಮತ್ತು ಜನರ ಗುಂಪು ಆತನನ್ನು ನೋಡಿ "ಆತನನ್ನು ಶಿಲುಬೆಗೆ ಹಾಕಿಸು, ಶಿಲುಬೆಗೆ ಹಾಕಿಸು" ಎಂದು ಕೂಗುತ್ತಿರುವ ವೇಳೆಯಲ್ಲಿ ಯೇಸುವು ಸೌಮ್ಯತೆ ಹಾಗೂ ನಮ್ರತೆಗಳು ಅದ್ಭುತಕರವಾಗಿ ತೋರಿ ಬಂದವು (ಯೋಹಾನ 19:6). ಶಿಲುಬೆಗೆ ಹಾಕಲ್ಪಟ್ಟಿದ್ದ ಮೂವರು ವ್ಯಕ್ತಿಗಳನ್ನು ಜನರು ದಾಟಿಕೊಂಡು ಹೋಗುತ್ತಿರುವ ವೇಳೆಯಲ್ಲಿ ಈ ಗುಣಗಳು ಇನ್ನಷ್ಟು ತೋರಿ ಬಂದಿದ್ದವು. ಮರಣ ದಂಡನೆಗೊಳಗಾದವರು ನೋವಿನಲ್ಲಿ ನರಳುತ್ತಾ ಇದ್ದರೆ, ಯಾಜಕರು, ಶಾಸ್ತ್ರಿಗಳು, ಮತ್ತು ಹಿರಿಯರು ಗೇಲಿಗಳನ್ನು ಮತ್ತು ಅಪಹಾಸ್ಯಗಳನ್ನು ಮಾಡುತ್ತಿದ್ದರು (ಮತ್ತಾಯ 27:42, 43). ಯೇಸುವು ಅದಕ್ಕೆ ಹೇಗೆ ಪ್ರತಿಕ್ರಿಯಿಸಿದನು? ಆತನು ಹೀಗೆ

ಪ್ರಾರ್ಥಿಸಿದನು, "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು" (ಲೂಕ 23:34; ASV).

ಇದು ನರಾವತಾರವೆತ್ತಿದ ದೇವತ್ವವುಳ್ಳವನ ಉತ್ಪ್ರೇಕ್ಷೆಯ ಸಾಧುತ್ವವಾಗಿತ್ತು! ದೇವರು ನಮಗೆ ಈ ಸಾಧುತ್ವವನ್ನು ಕಲಿಸಿ ಕೊಡುವಂತಾಗಲಿ, ತನ್ನ ಮತ್ತು ಪವಿತ್ರಾತ್ಮನ ನಿತ್ಯತ್ವದ ಮಂಡಲದ ಕುರಿತಾದ ಒಂದು ಮಿನುಗು ನೋಟವನ್ನು ಕೊಡುವದಕ್ಕಾಗಿ ಆ ಕ್ಲುಪ್ತ ಸಮಯದಲ್ಲಿ ಕಾಣಿಸಿಕೊಂಡ ಪ್ರಭಾವದಲ್ಲಿ ಸ್ವಲ್ಪ ಪ್ರಭಾವವನ್ನು ಪ್ರದರ್ಶಿಸುವಂತಾಗಲಿ. ನಮ್ಮ ಸುತ್ತಲಿನ ಜನರು ದೇವರನ್ನು ಮತ್ತು ಆತನು ಅವರನ್ನು ಎಷ್ಟೊಂದು ಪ್ರೀತಿಸುತ್ತಾನೆ ಎಂಬುದನ್ನು ಅರಿತುಕೊಳ್ಳುವಂತಾಗುವ ಹಾಗೆ ನಾವು ಕ್ರಿಸ್ತನ ಸಾಧುತ್ವವನ್ನು ಅನುಕರಣೆ ಮಾಡಬೇಕು (ಯೋಹಾನ 1:14, 18; 3:16, 17).

## ದಾವೀದನ ಸಾಧುತ್ವ, ಭಾಗ 1 (5:23)

"ಸಾಧುತ್ವ"ವು ("ವಿನಯತೆ"; KJV; ASV) ಹಳೆಯ ಒಡಂಬಡಿಕೆಯ ಸಮಯಗಳಲ್ಲಿ ಯೆಹೂದ್ಯರ ಲೆಕ್ಕಾಚಾರದಲ್ಲಿ ಯಾವ ಶ್ರೇಣಿಯಲ್ಲಿತ್ತು? ಪ್ರಾಚೀನ ಗ್ರೀಕರೊಳಗೆ ಅದಕ್ಕೆ ಅಷ್ಟೊಂದು ಗೌರವದ ಸ್ಥಾನವಿರಲಿಲ್ಲ ಎಂದು ತೋರುತ್ತದೆ. ಅವರ ದೃಷ್ಟಿಯಲ್ಲಿ, ಅದು ವಾಸ್ತವಿಕದಲ್ಲಿ "ಬಲಹೀನತೆ"ಗೆ ಸಮಾನವಾಗಿತ್ತು, ಅದು ಪುನಃ ನಮ್ಮ ದಿನದಲ್ಲಿನ ಲೋಕದ ಜನರ ವಿಷಯದಲ್ಲಿ ಸಹ ಅದೇ ರೀತಿಯೇ ಆಗಿರುತ್ತದೆ.

ದಾವೀದನು ಹಳೆಯ ಒಡಂಬಡಿಕೆಯಲ್ಲಿ ಅತ್ಯಂಥ ಬಲಿಷ್ಠನಾದ ಮತ್ತು ಧೈರ್ಯಶಾಲಿ ವ್ಯಕ್ತಿಗಳಲ್ಲೊಬ್ಬನೆಂಬುದರಲ್ಲಿ ಯಾವ ಸಂದೇಹವೂ ಇರುವದಿಲ್ಲ. ಕೀರ್ತನೆ 132ರಲ್ಲಿರುವ (131; LXX) ದಾವೀದನ ಕುರಿತಾದ ಉಲ್ಲೇಖವು ಕಲಹದ ಮಧ್ಯದಲ್ಲಿ ಬಲವಾಗಿರುವದೆಂಬ ವಿಚಾರವನ್ನು ಒತ್ತಿ ಹೇಳುತ್ತದೆ. ಕೀರ್ತನೆಯು ಹೀಗೆ ಆರಂಭಗೊಳ್ಳುತ್ತದೆ,

> ಯೆಹೋವನೇ, ದಾವೀದನ ಹಿತಕ್ಕೋಸ್ಕರ
> ಅವನ ಶ್ರಮಗಳನ್ನು [*prautēs*, "ಸಾಧುತ್ವ"; LXX] ನೆನಪುಮಾಡಿಕೋ.
> ಯಾಕೋಬ್ಯರ ಶೂರನಾದ ಯೆಹೋವನಿಗಾಗಿ
> ಒಂದು ವಾಸಸ್ಥಾನವನ್ನು ಏರ್ಪಡಿಸುವ ತನಕ
> ನಾನು ನನ್ನ ಮನೆಯೊಳಗೆ ಪ್ರವೇಶಿಸುವದಿಲ್ಲ,
> ಮಂಚವನ್ನು ಹತ್ತುವದಿಲ್ಲ,
> ಕಣ್ಣುಗಳನ್ನು ಮುಚ್ಚುವದಿಲ್ಲ,
> ರೆಪ್ಪೆಗಳನ್ನು ಕೂಡಿಸುವದಿಲ್ಲ ಎಂದು
> ಅವನು ಯಾಕೋಬ್ಯರ ಶೂರನಾದ ಯೆಹೋವನಿಗೆ
> ಪ್ರಮಾಣದಿಂದ ಹರಕೆಮಾಡಿಕೊಂಡನಲ್ಲಾ (ಕೀರ್ತನೆ 132:1-5).

ಇಲ್ಲಿ ನಮಗೆ ಇಲ್ಲಿ ಸಂಬಂಧಿಸುವದೇನೆಂದರೆ ಪ್ರಾಥಮಿಕವಾಗಿ ಎರಡನೆಯ ಸಾಲು, ಅದರಲ್ಲಿ LXX "ಸಾಧುತ್ವ" (*prautēs*) ಎಂಬ ಬದಲಿ ಪದವನ್ನು ಇಬ್ರಿಯ ವಾಕ್ಯಭಾಗದಲ್ಲಿ ಬಳಸಿರುತ್ತದೆ (ಇಲ್ಲಿ NASBಯಲ್ಲಿ ಅನುವಾದಿಸಲ್ಪಟ್ಟಿರುವ ಪ್ರಕಾರ). ಮೂಲ ಇಬ್ರಿಯ ಪದಕ್ಕೆ ಇವೆರಡರಲ್ಲಿ ಯಾವ ಅನುವಾದವನ್ನಾದರೂ ಮಾಡಬಹುದಾಗಿದೆ.

ಕೀರ್ತನೆ 132ರಲ್ಲಿನ ಶ್ರಮವು ಕರ್ತನ ನಿವಾಸದ, ತಾನು ಆತನಿಗೋಸ್ಕರ ಕಟ್ಟಬೇಕೆಂದು ನಿಷ್ಠೆಯಿಂದ ಹಂಬಲಿಸುತ್ತಿದ್ದ ವಿಶ್ರಾಂತಿ ಸ್ಥಳದ ಕುರಿತಾಗಿ ತನ್ನಲ್ಲಿ ಹೊತ್ತುಕೊಂಡಿದ್ದ ಭಾರವೇ ಆಗಿತ್ತು. ಕೀರ್ತನೆಯಲ್ಲಿರುವ ಈ ಪ್ರಬಲವಾದ ಮುಖ್ಯ ಚರ್ಚೆಯಾಂಶವು ಜಾಕರೂಕತೆಯಿಂದ

ಓದುವ ವಾಚಕನಿಗೆ ಸ್ಪಷ್ಟವಾಗಿರುತ್ತದೆ.

ಕೀರ್ತನೆಯು ದಾವೀದನನ್ನು ಕುರಿತು ಹೇಳಲ್ಪಟ್ಟಿದ್ದಲ್ಲ. ಆತನ ಬಗ್ಗೆ ಕ್ಲುಪ್ತವಾಗಿ ಉಲ್ಲೇಖಿಸಲಾಗಿದೆ, ಆತನ ಬಗ್ಗೆಯೂ ಆತನ ವಂಶದ ಬಗ್ಗೆಯೂ ಪದೇ ಪದೇ ಕೀರ್ತನೆಯಲ್ಲಿ ಉಲ್ಲೇಖಿಸಲಾಗಿದೆ. ಹೇಗೂ, ದೇವರ ನಿವಾಸವು, ಆತನ ಜನರು ಆತನ ಪ್ರಸನ್ನತೆಯ ಗುಡಾರದ ಮುಂದೆ ಆತನನ್ನು ಆರಾಧಿಸುವದಕ್ಕೆ ಕೂಡಿ ಬರುತ್ತಿದ್ದ ಸ್ಥಳವು ಮುಖ್ಯವಾಗಿ ಚರ್ಚೆಯಲ್ಲಿರುತ್ತದೆ. ದೇವರ ಸಿಂಹಾಸನವು ಪರಲೋಕದಲ್ಲಿರುತ್ತದೆಂದು ನಂಬಲಾಗಿತ್ತಾದರೂ, ಆತನ ಪಾದಪೀಠವು ಭೂಮಿಯಲ್ಲಿದೆ, ಮತ್ತು ಹೆಚ್ಚು ನಿರ್ದಿಷ್ಟವಾಗಿ ಆತನ ದೇವಾಲಯದಲ್ಲಿ ಇರುವದೆಂದು ಅರ್ಥಮಾಡಿಕೊಳ್ಳಲಾಗಿದೆ (1 ಪೂರ್ವಕಾಲವೃತ್ತಾಂತ 28:2; ಕೀರ್ತನೆ 132:7). ಎಲ್ಲಕ್ಕಿಂತ ಮೇಲಾಗಿ, ಕೀರ್ತನೆಯ ಹಿಂದಿನ ಕಥೆಯಲ್ಲಿರುವ ಐತಿಹಾಸಿಕ ಪರಿಸ್ಥಿತಿ ಮತ್ತು ಪಾತ್ರವನ್ನು ನೆನಪಿಟ್ಟುಕೊಳ್ಳತಕ್ಕದ್ದು.

ಕೀರ್ತನೆಯು ಸ್ವತಃ ಅನಂತರ ಕಾಲದಲ್ಲಿನ ಯಾತ್ರಿಗಳ ಬಾಯಲ್ಲಿರುವ ಒಂದು ವಿಜ್ಞಾಪನೆಯ ಪ್ರಾರ್ಥನೆಯಾಗಿರುತ್ತದೆ. ಅವರು ತಮ್ಮ ರಾಷ್ಟ್ರೀಯ ರಾಜಧಾನಿ ಮತ್ತು ದಾವೀದನ ನಗರವನ್ನು, ದೇವರು ಸ್ವತಃ ತಾನು ಆರಾಧಿಸಲ್ಪಡುವದಕ್ಕಾಗಿ ಆರಿಸಿಕೊಂಡಿದ್ದ ಸ್ಥಳವನ್ನು ಸಮೀಪಿಸುತ್ತಾ ಇದನ್ನು ಹಾಡಿದರು. ಯಾತ್ರಿಕರು ತಮ್ಮ ಪ್ರಯಾಣದ ಅಂತ್ಯದಲ್ಲಿ ಯೆರೂಸಲೇಮಿನ ಕಡೆಗೆ ಸಮೀಪಿಸುತ್ತಿದ್ದಂತೆ ಹಾಡುತ್ತಿದ್ದ (ಅಥವಾ ಪಠಿಸುತ್ತಿದ್ದ) "ಆರೋಹನ ಹಾಡುಗಳು" (ಕೀರ್ತನೆಗಳು 120-134) ಎಂಬ ಹದಿನೈದು ಹಾಡುಗಳಲ್ಲೊಂದಾಗಿತ್ತಷ್ಟೇ.

ಈ ಕೀರ್ತನೆಗೆ ದೇವದರ್ಶನ ಗುಡಾರವು ಹೊಂದಿದ್ದ ಹಿನ್ನಲೆಯ ಪ್ರಾಮುಖ್ಯತೆಯನ್ನು ಕುರಿತು ಎಷ್ಟು ಹೇಳಿದರೂ ಅತಿಯಾಗುವದಿಲ್ಲ. ವಾಸ್ತವಿಕದಲ್ಲಿ, ಇದು ಈ ಹಾಡುಗಳ ಗುಂಪಿನಲ್ಲಿ ದೇವದರ್ಶನ ಗುಡಾರವನ್ನು ಪ್ರಸ್ತಾಪಿಸುವ ಏಕೈಕ ಹಾಡು ಆಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ದಾವೀದನ ಕಷ್ಟಾನುಭವ ಮತ್ತು ವೇದನೆಯ ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಮುಖ್ಯವಾಗಿರುತ್ತದೆ. ಮೊದಲನೆಯದಾಗಿದೆ, ಅದು ಎಲ್ಲಿದೆ ಎಂದು ಕಂಡು ಹಿಡಿಯುವದಕ್ಕೆ ಮುಂಚೆ ಕಾಯಬೇಕಾದ ವರ್ಷಗಳಿದ್ದವು (ಕೀರ್ತನೆ 132:6). ಎರಡನೆಯದಾಗಿ, ದಾವೀದನ ಸಂಭ್ರಮವು ಉಜ್ಜೀಯನ ಮರಣದಿಂದಾಗಿ ಏಕಾಏಕಿ ಕೋಪ, ವೇದನೆ, ಮತ್ತು ಭಯಗಳಾಗಿ ಮಾರ್ಪಟ್ಟಿತು, ಉಜ್ಜೀಯನು ದೇವದರ್ಶನ ಗುಡಾರವನ್ನು ಮುಟ್ಟಿದ ಉದ್ದೇಶವು ಅದು ಸಾಗಿಸಲ್ಪಡುತ್ತಿದ್ದ ಚಕ್ಕಡಿಯೊಳಗಿಂದ ಭೂಮಿಗೆ ಬೀಳದಂತೆ ಅದನ್ನು ತಡೆಯುವದೇ ಆಗಿತ್ತು (2 ಸಮುವೇಲ 6:1-11). ಅಂತಿಮವಾಗಿ, ದಾವೀದನ ಹೆಂಡತಿಯಾದ ಮೀಕಲಳ ಪ್ರತಿಕ್ರಿಯೆಯು ಒಂದು ಘೋರವಾದ ಪರಿಶೋಧನೆಯಾಗಿತ್ತು. ಆಕೆಯು ಆತನ ವಿವಾದಾತ್ಮಕ ವರ್ತನೆಯು (ಜಿಗಿಯುವದು ಮತ್ತು ನಾಟ್ಯ ಮಾಡುವದು) ತಮ್ಮ ದಾಂಪತ್ಯವನ್ನೇ ಹಾಳು ಮಾಡುವಂಥದ್ದೆಂದು ಗ್ರಹಿಸಿಕೊಂಡು ಆತನನ್ನು ಬಹಳ ಘೋರವಾಗಿ ಅವಮಾನ ಪಡಿಸಿದಳು (2 ಸಮುವೇಲ 6:16-23).

ಕೀರ್ತನೆ 132ರ ಪ್ರಾಥಮಿಕವಾದ ಮುಖ್ಯ ಗಮನವು ತನ್ನ ಪ್ರಿಯ ಕರ್ತನಿಗೆ ಯೋಗ್ಯವಾದಂಥ ಒಂದು ಶಾಶ್ವತವಾದ ಆಲಯವನ್ನು ಕಟ್ಟಬೇಕೆಂಬ ದಾವೀದನ ಹಂಬಲವೇ ಆಗಿತ್ತು. ಈ ಸನ್ನಿವೇಶದಲ್ಲಿಯೇ *prautēs,* ಸಾಧುತ್ವದ ಬಳಕೆಯು ಮೊದಲನೆಯ ವಚನದಲ್ಲಿ ಕಾಣಿಸಿಕೊಳ್ಳುತ್ತದೆ. ದಾವೀದನು ದೇವರಿಗೆ ಒಪ್ಪುವ ಮನುಷ್ಯನು ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆಯಾದರೂ (1 ಸಮುವೇಲ 13:14), ಆತನ ಬಯಕೆಯಾಗಿದ್ದ ಈ ಉದಾತ್ತವಾದ ಲಕ್ಷ್ಯವು ಆತನಿಗೆ ನಿರಾಕರಿಸಲ್ಪಟ್ಟಿತು ಮತ್ತು ಬೇರೊಬ್ಬನಿಗೋಸ್ಕರ ಬಿಡಲ್ಪಟ್ಟಿತು. ಶಾರೀರಿಕ ಮಟ್ಟದಲ್ಲಿ, ಅದು ಆತನ ಮಗನಾದ ಸೊಲೊಮೋನನಿಗಾಗಿ ಬಿಡಲ್ಪಟ್ಟಿತು ಯಾಕೆಂದರೆ

ದಾವೀದನು ರಕ್ತ ಸುರಿಸಿದ, ಯುದ್ಧವನ್ನು ಮಾಡಿದ್ದ ವ್ಯಕ್ತಿಯಾಗಿದ್ದನು (1 ಪೂರ್ವಕಾಲವೃತ್ತಾಂತ 22:6-10; 28:3).[147] ಒಂದು ದೂರದ ಆತ್ಮೀಕ ಮಟ್ಟದಲ್ಲಿ, ಈ ಪಾತ್ರವು ಕ್ರಿಸ್ತನಿಗೆ ಸೇರಿದ್ದಾಗಿತ್ತು.

ಹಳೆಯ ಒಡಂಬಡಿಕೆಯ ಇಸ್ರಾಯೇಲ್ಯವು ಸಾಧುತ್ವದ ಗುಣಸ್ವಭಾವವನ್ನು ಹೇಗೆ ಮೌಲ್ಯ ಮಾಡುತ್ತಿತ್ತು? ಹಳೆಯ ಒಡಂಬಡಿಕೆಯಲ್ಲಿನ ಎಲ್ಲಾ ವ್ಯಕ್ತಿಗಳಲ್ಲಿಯೂ, ದಾವೀದನು ಬಹುಶಃ ಅವರೆಲ್ಲರಿಗಿಂತಲೂ ಅತ್ಯಂಥ ಅಧಿಕ ಪ್ರಿಯವಾದ ಮತ್ತು ಸನ್ಮಾನಿಸಲ್ಪಡುತ್ತಿದ್ದ ವೀರನಾಗಿದ್ದನು. ವಾಸ್ತವಿಕದಲ್ಲಿ "ದಾವೀದ" ಎಂಬ ಹೆಸರಿನ ಅರ್ಥವು "ಪ್ರಿಯನು" ಎಂದಾಗಿದೆ. ಖಂಡಿತವಾಗಿಯೂ, ಆತನು ಇಂದು ನಾವು ಅನೇಕ ಸಾರಿ ಬಳಸುವ ಅರ್ಥದಲ್ಲಿ ಒಬ್ಬ ಮಿಲಿಟರಿ ವೀರನಾಗಿದ್ದನು. ಆತನ ಸಾಧುತ್ವದ ಗುಣದ ನಿಮಿತ್ತವಾಗಿ ಆತನು ಯೆಹೂದ್ಯರಿಂದ ದೀರ್ಘಕಾಲದ ತನಕವೂ ಅತ್ಯಂಥ ಗೌರವಪಾತ್ರನಾಗಿದ್ದನೆಂಬುದನ್ನು ಈ ಕೀರ್ತನೆಯು ಸೂಚಿಸುತ್ತದೆ. ಪೌಲನು ಗಲಾತ್ಯ 5:23ರಲ್ಲಿನ ತನ್ನ "ದೇವರಾತ್ಮನಿಂದ ಉಂಟಾಗುವ ಫಲ"ದ ಪಟ್ಟಿಯಲ್ಲಿ ಸೇರಿಸಿದ್ದ ಅದೇ ಸದ್ಗುಣವು ಇದಾಗಿದೆ.

ಶಾಸ್ತ್ರಗಳ ಸತ್ಯದ ಕುರಿತು ಉತ್ತಮ ಸಾಕ್ಷಿಗಳಲ್ಲೊಂದು ಎಂದರೆ ಇದು ನರಾವತಾರವೆತ್ತಿದ ದೇವರು, ವಾಗ್ದಾನ ಮಾಡಲ್ಪಟ್ಟಿದ್ದ ಮೆಸ್ಸೀಯನು ಮತ್ತು ರಕ್ಷಕನೂ ಆಗಿರುವ ನಜರೇತಿನ ಯೇಸುವನ್ನು ಹೊರತು ಪಡಿಸಿ, ಬೇರೆ ಯಾವ ವ್ಯಕ್ತಿಗಳನ್ನೂ ತನ್ನ ಕಥನಗಳಲ್ಲಿ ದೋಷವಿಲ್ಲದವರೆಂದು ಮುಂದಿಡುವದಿಲ್ಲ. ದಾವೀದನಲ್ಲಿ ಅನೇಕ ಪ್ರಶಂಸನೀಯಾದ ಗುಣಗಳಿದ್ದವು; ಮತ್ತು ಕರ್ತನ ಸಕಲ "ಪೂರ್ವಛಾಯೆಗಳಲ್ಲಿ" ಅರಸನಾದ ದಾವೀದನು ಆ ಪಾತ್ರವನ್ನು ಉತ್ತಮವಾಗಿ ನೆರವೇರಿಸುತ್ತಾನೆ. ಒಪ್ಪಿಕೊಳ್ಳುವ ಪ್ರಕಾರ, ಈತನು ಒಂದು ಕಳೆಪೆಯಾಗಿರುವ ಛಾಯೆಯಾಗಿದ್ದಾನೆ; ಆದಾಗ್ಯೂ, ಆತನ ಎಲ್ಲಾ ದೊಡ್ಡ ದೋಷಗಳಲ್ಲಿಯೂ, ನ್ಯಾಯಕ್ಕಾಗಿ ಮತ್ತು ಪರಿಶುದ್ಧತೆಗಾಗಿ ಆತನ ಉತ್ಕಟ ಅಭಿಲಾಷೆಯ ಸತ್ಯತೆಯನ್ನು ಯಾರು ಪ್ರಶ್ನಿಸಬಲ್ಲರು? ಸಿಂಹದಂತೆ ಧೈರ್ಯಶಾಲಿ ಮತ್ತು ನಂಬಿಕೆಯಲ್ಲಿ ಎಂದಿಗೂ ಚಂಚಲನಾಗದೆ, ಆತನು ದೇವರಿಗೋಸ್ಕರ ಯುದ್ಧ ಮಾಡಿದನು. ಆತನ ಪಾಪದ - ಅನೇಕ ಸಾರಿ ಭಯಂಕರ ಪಾಪ - ನಿಮಿತ್ತವಾಗಿ ಖಂಡಿಸಲ್ಪಟ್ಟಾಗ ಆತನು ಪಾಪದ ಅರಿಕೆ ಮತ್ತು ಪಶ್ಚಾತ್ತಾಪ ಪಡುವವನಾಗಿ ಸಂತೈಸಲಾಗದಷ್ಟು ಗೋಳಾಡಿ ಅಳುತ್ತಿದ್ದನು. ದಾವೀದನು ತನ್ನ ಕೀರ್ತನೆಗಳಲ್ಲಿ ದೇವರನ್ನು ಸ್ತುತಿಸುವದರಲ್ಲಿ ಪರಲೋಕದಷ್ಟು ಎತ್ತರಕ್ಕೆ ಹಾರಾಡಿರುವವರು ಅಥವಾ ತನ್ನ ಪಾಪಕ್ಕಾಗಿ ದುಃಖದಿಂದ ಪಶ್ಚಾತ್ತಾಪ ಪಡುವದರಲ್ಲಿ ಪಾತಾಳದ ಆಳಗಳಿಗೆ ಜಿಗಿದವರು ಶಾಸ್ತ್ರಗಳಲ್ಲಿ ಬೇರೆ ಯಾರಿದ್ದಾರೆ? ದಾವೀದನು ಒಬ್ಬ ಪ್ರವಾದಿಯಾಗಿದ್ದನು ಮತ್ತು ಆತನ ಕೀರ್ತನೆಗಳು ಪ್ರೇರಿತ ಶಾಸ್ತ್ರಗಳು ಎಂಬುದನ್ನು ನಾವು ಮರೆಯಕೂಡದು (ಲೂಕ 24:44, 45; ಅಪೊಸ್ತಲರ ಕೃತ್ಯಗಳು 2:25-36).

ಅನಂತರದ ಯೆಹೂದ್ಯರು ಈ ಸೌಮ್ಯತೆಯ ಗುಣವನ್ನು ಬಹಳ ಗಾಢವಾಗಿ ಶ್ಲಾಘಿಸುವವರಾಗಿದ್ದರೆಂಬುದಕ್ಕೆ ಕೀರ್ತನೆ 132 ಸ್ಪರ್ಶಗ್ರಾಹ್ಯ ಪುರಾವೆಯನ್ನು ಒದಗಿಸುತ್ತದೆ. ಇದು ದಾವೀದನಲ್ಲಿ ಅವರು ಪ್ರಶಂಸಿಸಿದ ಅತ್ಯಂಥ ಶ್ರೇಷ್ಠ ಗುಣಸ್ವಭಾವಗಳಲ್ಲಿ ಒಂದಾಗಿತ್ತು. ಆತನ ಸಾಧುತ್ವವು ಬಲಹೀನತೆ ಆಗಿರಲಿಲ್ಲ, ಆದರೆ ದೊಡ್ಡ ವಿರೋಧದ ನಡುವೆ ಸೌಮ್ಯತೆಯಾಗಿತ್ತು. ಈ *prautēs*, "ಸೌಮ್ಯತೆ" ಅಥವಾ "ಸಾಧುತ್ವ" ಎಂಬುದು ಪವಿತ್ರಾತ್ಮನನ್ನು ಅನುಸರಿಸಿ ನಡೆಯುವವರ ಜೀವಿತಗಳಲ್ಲಿ ಉಂಟಾಗುವ ಒಂದು ಫಲವಾಗಿದೆ.

## ದಾವೀದನ ಸಾಧುತ್ವ, ಭಾಗ 2 (5:23)

ಸೌಮ್ಯತೆ ಅಥವಾ ಸಾಧುತ್ವದ ಗುಣವು ದಾವೀದನು ಬೇರೆಯವರೊಂದಿಗಿನ

ಪರಸ್ಪರಕಾರ್ಯದ ವೇಳೆ ಆತನ ಜೀವಿತದಲ್ಲಿ ದೃಷ್ಟಾಂತ ಸಹ ಪಡಿಸಲ್ಪಟ್ಟಿತ್ತು. ಕೆಲವು ಉದಾಹರಣೆಗಳು ಈ ರೀತಿಯಾಗಿರುತ್ತವೆ.

*ಆತನ ಸಹೋದರರು.* ದಾವೀದನು ಅನೇಕ ವೇದನೆಗಳನ್ನು, ತನ್ನ ಸ್ವಂತ ಕುಟುಂಬದವರಿಂದ ಸಹ ಅನುಭವಿಸಿದನು. ಆತನ ಅಣ್ಣಂದಿರು ಸೌಲನ ಸೈನ್ಯದಲ್ಲಿ "ಗಣ್ಯವಾಗಿ" ಸೇವೆ ಸಲ್ಲಿಸುತ್ತಿದ್ದ ವೇಳೆ, ಇಷಯನ ಕಿರಿಯ ಮಗನಾಗಿ ದಾವೀದನು ತನ್ನ ತಂದೆಯ ಕುರಿಗಳನ್ನು ಕಾಯಬೇಕಾಗಿತ್ತು. ಇಷಯನು ದಾವೀದನನ್ನು ಆತನ ಅಣ್ಣಂದಿರಿಗೆ ಬೇಕಾಗುವ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವಂತೆ ಕಳುಹಿಸಿದನು, ಆದರೆ ಆತನು ಅನ್ಯಾಯವಾಗಿ ಹೊರಗೆ ಹೋಗಿ ಯುದ್ಧದ ರೋಮಾಂಚತೆಯನ್ನು ವಿಕ್ಷಿಸುವದಕ್ಕೆ ಬಂದಿರುತ್ತಾನೆಂಬ ಆರೋಪವನ್ನು ಅವರು ಆತನ ಮೇಲೆ ಹಾಕಿದರು (1 ಸಮುವೇ 17:28-30). ಅವರ ಕಠೋರವಾದ ಟೀಕೆಗಳಿಗೆ ಆತನು ಅತಿಯಾದ ಪ್ರತಿಕ್ರಿಯೆಯನ್ನು ತೋರಲಿಲ್ಲ ಅಥವಾ ತಾನು ನಂಬಿಗಸ್ತನಾಗಿ ದೇವರಿಗೆ ಸೇವೆ ಮಾಡುವದರಿಂದ ಹಿಂದೆ ಸರಿಯುವಂತೆ ಮಾಡುವದಕ್ಕೆ ಅವುಗಳಿಗೆ ಅವಕಾಶ ನೀಡಲಿಲ್ಲ.

*ಅರಸನಾದ ಸೌಲ.* ತರುವಾಯ, ದಾವೀದನು ಅರಸನಿಗೆ ಸಂಗೀತಗಾರನಾಗಿ ಸೇವೆ ಸಲ್ಲಿಸುತ್ತಿದ್ದ ವೇಳೆ, ಸೌಲನು ಆತನನ್ನು ತನ್ನ ಈಟಿಯಿಂದ ದಾವೀದನನ್ನು ಗೋಡೆಗೆ ಹತ್ತಿಕೊಳ್ಳುವಂತೆ ತಿವಿಯಬೇಕೆಂದು ಎರಡು ಸಾರಿ ಪ್ರಯತ್ನಿಸಿದ್ದನು (1 ಸಮುವೇಲ 18:10, 11; 19:9, 10). ಇನ್ನೂ ಸ್ವಲ್ಪ ಕಾಲದ ಬಳಿಕ, ಸೌಲನು ದಾವೀದನನ್ನು ಹಿಡಿಯಬೇಕೆಂದು ತನ್ನ ಸೈನ್ಯದೊಂದಿಗೆ ಏಂಗೆದಿಯ ಅರಣ್ಯದಲ್ಲಿ ಶೋಧ ಕಾರ್ಯ ನಡಿಸಿದ್ದನು. ಸೌಲನು ಆಕಸ್ಮಿಕವಾಗಿ ದಾವೀದ ಹಾಗೂ ಆತನ ಜನರು ಅಡಗಿಕೊಂಡಿದ್ದ ಅದೇ ಗವಿಯೊಳಗೆ ಪ್ರವೇಶಿಸಿದ್ದನು. ಈ ಸದವಕಾಶವನ್ನು ಬಳಸಿಕೊಂಡು ತನ್ನ ಹಿಂಸಕನನ್ನು ಕೊಲ್ಲುವಂತೆ ದಾವೀದನ ಮನುಷ್ಯರು ಆತನನ್ನು ಬೇಡಿಕೊಂಡರು (1 ಸಮುವೇಲ 24:1-7).

ದಾವೀದನು ತನ್ನ ಸಹಪಾಠಿಗಳು ಸೌಲನನ್ನು ಕೊಲ್ಲಬೇಕೆಂದು ನ್ಯಾಯಯುತವಾಗಿ ಕಾಣಿಸುವಂತಹ ಸಲಹೆಯನ್ನು ಕೊಟ್ಟ ವೇಳೆ ಅದನ್ನು ನಿರಾಕರಿಸಿದ್ದರಲ್ಲಿ ಆತನ ಸಾಧುತ್ವದ ಸುಂದರವಾದ ಮನೋಭಾವವನ್ನು ಕಾಣುವಷ್ಟು ಬಹುಶಃ ಬೇರೆ ಎಲ್ಲಿಯೂ ನಾವು ಕಾಣಲಾರೆವು. ಅಂತೂ, ಸೌಲನು ಈಗಾಗಲೇ ದೇವರಿಂದ ತಿರಸ್ಕರಿಸಲ್ಪಟ್ಟಿದ್ದನು, ಮತ್ತು ಈಗ ದಾವೀದನು ದೇವರ ಅಭಿಷಿಕ್ತನಾಗಿದ್ದನು. ದಾವೀದನಿಗೆ ಇದು ಗೊತ್ತಿತ್ತು, ಆದರೆ ತನ್ನ ರಾಜನ ಅಧಿಕಾರವನ್ನು ವಹಿಸಿಕೊಳ್ಳುವದಕ್ಕಾಗಿ ಆತನು ಸರಿಯಾದ ಸಮಯ ಮತ್ತು ರೀತಿಗಾಗಿ ಕಾಯುವದಕ್ಕೆ ಸಿದ್ಧನಿದ್ದನು, ದೇವರ ಚಿತ್ತವನ್ನಷ್ಟೇ ಮಾಡಬೇಕೆಂದು ಬಯಸುವವನಾಗಿದ್ದನು: "ಅವನು ಯೆಹೋವನಿಂದ ಅಭಿಷೇಕಿಸಲ್ಪಟ್ಟವನೂ ನನ್ನ ಒಡೆಯನೂ ಆಗಿದ್ದಾನೆ; ನಾನು ನಿಮ್ಮ ಮಾತು ಕೇಳಿ ಯೆಹೋವನ ಅಭಿಷಿಕ್ತನಿಗೆ ವಿರೋಧವಾಗಿ ಕೈಯೆತ್ತದಂತೆ ಯೆಹೋವನೇ ನನಗೆ ಅಡ್ಡಿಮಾಡಲಿ" (1 ಸಮುವೇಲ 24:6). ದಾವೀದನ ಮನಸ್ಸಾಕ್ಷಿಯು "ಸೌಲನ ನಿಲುವಂಗಿಯ ಮೂಲೆಯನ್ನು ಕತ್ತರಿಸಿದ್ದಕ್ಕಾಗಿ" ಆತನನ್ನು ಹಂಗಿಸತೊಡಗಿತ್ತು (1 ಸಮುವೇಲ 24:5). ನಿಜವಾಗಿಯೂ ಸಾಧುವಾಗಿರುವ ವ್ಯಕ್ತಿಯ ಇನ್ನೊಂದು ಗುಣಸ್ವಭಾವವೆಂದರೆ ನಮ್ರತೆಯೇ.

*ಅಬ್ಷಾಲೋಮ.* ತನಗೆ ಪ್ರಿಯನಾಗಿದ್ದ ಮಗನಾದ ಅಬ್ಷಾಲೋಮನು ಆತನಿಂದ ಸಿಂಹಾಸನವನ್ನು ಕಸಿದುಕೊಳ್ಳಲು ಆತನ ವಿರುದ್ಧವಾಗಿ ಒಳಸಂಚು ಮಾಡಿದ ವೇಳೆ ದಾವೀದನು ಸಾಧುತ್ವವು ಬಹಳ ಸುಸ್ಪಷ್ಟವಾಗಿ ತೋರ್ಪಟ್ಟಿರುತ್ತದೆ (2 ಸಮುವೇಲ 15:10-12). ದಾವೀದನು ತನ್ನ ಹಾಗೂ ತನ್ನ ಕುಟುಂಬ ಸದಸ್ಯರ ಪ್ರಾಣಗಳನ್ನು ಉಳಿಸಿಕೊಳ್ಳುವದಕ್ಕೆ ಬೇರೆ ದಾರಿಯಿಲ್ಲದೆ ಅಲ್ಲಿಂದ ಪಲಾಯನ ಮಾಡಬೇಕಾಗಿತ್ತು (2 ಸಮುವೇಲ 15:13-18). ಆತನು

ಇದನ್ನು ದೀನತೆಯೊಂದಿಗೆ ಮಾಡಿದನು, ತನ್ನ ಭವಿಷ್ಯವನ್ನು ಕರ್ತನ ಕೈಗಳಲ್ಲಿ ಒಪ್ಪಿಸಿ ಕೊಟ್ಟನು (2 ಸಮುವೇಲ 15:25, 26). ಆತನು ಪಲಾಯನ ಮಾಡುತ್ತಿರುವ ವೇಳೆ, ಸೌಲನ ಮನೆತನಕ್ಕೆ ಸೇರಿದ್ದ ಶಿಮ್ಮೀ ಎಂಬವನು ಹೊರಗೆ ಬಂದು ಆತನನ್ನು ಶಪಿಸಿದನು; ಆದಾಗ್ಯೂ ಅರಸನು ಅದಕ್ಕೆ ಪ್ರತಿದಾಳಿ ನಡಿಸಲಿಲ್ಲ (2 ಸಮುವೇಲ 16:5-14). ಯೆರೂಸಲೇಮನ್ನು ಪ್ರವೇಶಿಸಿದ ಬಳಿಕ ಮತ್ತು ಸಿಂಹಾಸನವನ್ನು ವಹಿಸಿಕೊಂಡ ಮೇಲೆ, ಅಬ್ಷಾಲೋಮನು ಅರಮನೆಯನ್ನು ನೋಡಿಕೊಳ್ಳುವಂತೆ ಬಿಟ್ಟು ಹೋಗಿದ್ದ ದಾವೀದನ ಉಪಪತ್ನಿಯರ ಸಂಗಡ ಮಲಗುವ ಮೂಲಕ ತನ್ನ ತಂದೆಯಾದ ದಾವೀದನನ್ನು ಮತ್ತಷ್ಟು ಅವಮಾನಕ್ಕೀಡು ಮಾಡಿದ್ದನು (2 ಸಮುವೇಲ 16:20-23). ಅಬ್ಷಾಲೋಮನು ತನ್ನ ತಂದೆಯನ್ನು ಕೊಲ್ಲಬೇಕೆಂದು ಪ್ರಯತ್ನಿಸುತ್ತಿದ್ದನಾದರೂ (2 ಸಮುವೇಲ 17), ದಾವೀದನು ತನ್ನ ಮಗನ ಪ್ರಾಣವನ್ನು ಉಳಿಸಬೇಕೆಂದು ಬಯಸಿದ್ದನು. ದಾವೀದನು ತನ್ನ ಮೂವರು ಸೇನಾನಾಯಕರಿಗೆ ಹೀಗೆ ಆಜ್ಞಾಪಿಸಿದನು, “ನನಗೋಸ್ಕರವಾಗಿ ಯೌವನಸ್ಥನಾದ ಅಬ್ಷಾಲೋಮನನ್ನು ಕರುಣಿಸಿರಿ” (2 ಸಮುವೇಲ 18:5). ಹಾಗಿದ್ದರೂ, ಇವರಲ್ಲೊಬ್ಬನಾದ ಯೋವಾಬನು ಅಬ್ಷಾಲೋಮನನ್ನು ಕೊಂದು ಹಾಕಿದನು (2 ಸಮುವೇಲ 18:14, 15).

ದೇವರ ಮನುಷ್ಯನಾದ ದಾವೀದನು, ಇಬ್ರಿಯ 11ನೇ ಅಧ್ಯಾಯದಲ್ಲಿ ದಾವೀದನನ್ನು ದೇವರಿಗೆ ವಿಧೇಯನಾಗಿ ಆತನಿಗೆ ನಮ್ರತೆಯಿಂದ ನಡೆದುಕೊಂಡ ನಂಬಿಕೆಯುಳ್ಳ ಮನುಷ್ಯನೆಂದು ಪ್ರಸ್ತಾಪಿಸುತ್ತದೆ. ಆತನು ದೊಡ್ಡ ಸಂಕಷ್ಟದ ನಡುವೆಯೂ ಸೌಮ್ಯತೆಯನ್ನು, ಅಥವಾ ಸಾಧುತ್ವವನ್ನು ತೋರ್ಪಡಿಸಿದನು.

## ಶಮೆದಮೆ (5:23)

“ಶಮೆದಮೆ” ಎಂಬುದಕ್ಕಿರುವ ಗ್ರೀಕ್ ಪದವು ἐγκράτεια (*enkrateia*) ಎಂಬುದು, ಇದು κράτος (*kratos*) ಎಂಬ ಮೂಲರೂಪದಿಂದ ಬರುವದಾಗಿದ್ದು ಅದರ ಅರ್ಥವು “ಬಲ,” “ಶಕ್ತಿ,” “ಒಡೆಯತ್ವ,” ಅಥವಾ “ಹತೋಟಿ” ಎಂದಾಗಿರುತ್ತದೆ. *ಕ್ರಾಟೋಸ* ಎಂಬ ಪದವು ಆಂಗ್ಲದ “ಡೆಮೊಕ್ರಸಿ,” “ಆಟೋಕ್ರಸಿ,” ಮತ್ತು “ಥಿಯೋಕ್ರಸಿ” ಎಂಬ ಪದಗಳ ಅಂತ್ಯದ ಭಾಗದ ಮೇಲೆ ಪ್ರಭಾವ ಬೀರಿರುತ್ತದೆ. ಈ ಪ್ರತಿಯೊಂದು ಪದಗಳ ಮೊದಲ ಭಾಗವು ಸಹ ಗ್ರೀಕ್ ಪದದಿಂದ ಬಂದಿರುತ್ತದೆ: (1) “ಡೆಮೊಕ್ರಸಿ” ಎಂಬುದು “ಪ್ರಜಾಪ್ರಭುತ್ವ”ವನ್ನು ಸೂಚಿಸುತ್ತದೆ ಯಾಕೆಂದರೆ δῆμος (*dēmos*) ಎಂಬುದರ ಅರ್ಥವು “ಜನರು” ಎಂದಾಗಿದೆ. (2) “ಆಟೋಕ್ರಸಿ” ಎಂಬುದು “ಸ್ವಪ್ರಭುತ್ವ”ವನ್ನು ಸೂಚಿಸುತ್ತದೆ ಯಾಕೆಂದರೆ αὐτός (*autos*) ಎಂದರೆ “ಸ್ವ” ಎಂದರ್ಥವಾಗಿದೆ. (3) “ಥಿಯೋಕ್ರಸಿ” ಎಂದರೆ “ದೇವರ ಪ್ರಭುತ್ವ” ಎಂಬರ್ಥ, ಯಾಕೆಂದರೆ “ದೇವರು” ಎಂಬುದಕ್ಕಿರುವ ಪದವು θεός (*theos*). ದೈವಪ್ರಭುತ್ವಕ್ಕೆ ಅತ್ಯಂಥ ಪರಿಚಿತವಾಗಿರುವ ಉದಾಹರಣೆಯೆಂದರೆ ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರ ಮೇಲಿನ ದೇವರ ಪ್ರಭುತ್ವವೇ, ಅಲ್ಲಿ ಎಲ್ಲಾ ಅಧಿಕಾರ - ನ್ಯಾಯಾಂಗ, ಶಾಸಕಾಂಗ, ರಾಜಕೀಯದ, ಸಾಮಾಜಿಕ, ಮತ್ತು ಧಾರ್ಮಿಕ - ಅವರ ದೇವರಾದ ಯೆಹೋವನಿಗೆ ಸೇರಿದ್ದಾಗಿತ್ತು.

ದೇವರ ಆಳ್ವಿಕೆಯಲ್ಲಿ ಆತನಿಗೆ ಸಂಪೂರ್ಣ ಅಧಿಕಾರ ಇತ್ತಾದರೂ, ಆತನು ಯಾವ ವಿಧದಲ್ಲಿಯೂ ನಿರಂಕುಶದವನಾಗಿರಲಿಲ್ಲ, ಆದರೆ ಬದಲಾಗಿ ಆತನು ನೀತಿ, ಒಳ್ಳೇತನ, ಮತ್ತು ಪ್ರೀತಿಯುಳ್ಳ ದಯೆಗಳ ಮೂರ್ತರೂಪವೇ ಆಗಿದ್ದನು. ಈ ರೀತಿಯ ಮಾತೊಂದಿರುತ್ತದೆ, “ಅಧಿಕಾರವು ಭ್ರಷ್ಟಗೊಳಿಸುವ ಪ್ರವೃತ್ತಿ ಹೊಂದಿರುತ್ತದೆ ಮತ್ತು ಸಂಪೂರ್ಣವಾದ ಅಧಿಕಾರವು ಸಂಪೂರ್ಣವಾಗಿ ಭ್ರಷ್ಟಗೊಳಿಸುತ್ತದೆ.”[148] ಇದು ಮರ್ತ್ಯ ಮಾನವರಲ್ಲಿ ಸಂಪೂರ್ಣ ಸತ್ಯವೇ

ಆಗಿರುತ್ತದೆ; ಹೇಗೂ ದೇವರ ವಿಷಯದಲ್ಲಂತೂ ಅದು ಎಂದಿಗೂ ಸತ್ಯವಾಗಿರುವದಿಲ್ಲ. ಆತನು ಬಯಕೆಯು ತನ್ನ ಸ್ವರೂಪದಲ್ಲಿ ತಾನು ಉಂಟು ಮಾಡಿರುವ ಮನುಷ್ಯನನ್ನು ಆಶೀರ್ವದಿಸಬೇಕೆಂಬುದೇ ಆಗಿರುತ್ತದೆ. ಮನುಷ್ಯ ಜನಾಂಗವು, ಭೂಮಿಯಲ್ಲಿ ಮನುಷ್ಯನು ಅಸ್ತಿತ್ವದಲ್ಲಿದ್ದಂಥ ಅತ್ಯಂಥ ಆರಂಭದಲ್ಲಿನ ದುರಂತಕರ ನಾಟಕದಲ್ಲಿ ಪ್ರೀತಿಯುಳ್ಳ ಸಾರ್ವಭೌಮ ದೇವರನ್ನು ತಿರಸ್ಕರಿಸಿತು. ಆತನ ಸ್ವಂತ ಹೃದಯಕ್ಕಾದರೋ, ಆತನು ಆ ಸ್ವರೂಪವನ್ನು ಘೋರವಾದ ರೀತಿಯಲ್ಲಿ ಕೇಡಿಸಿಕೊಂಡನು ಮತ್ತು "ಇಹಲೋಕಾಧಿಪತಿಯ" ನಿರಂಕುಶವಾದ ಆಳ್ವಿಕೆಗೆ ಒಳಪಟ್ಟನು (ಯೋಹಾನ 12:31; NIV), ಈತನು ಒಳ್ಳೇದು ಹಾಗೂ ಪರಿಶುದ್ಧ ಆಗಿರುವ ಎಲ್ಲದರ ವಿರೋಧಿಯಾಗಿರುತ್ತಾನೆ.

ನಮ್ಮ ಆದಿ ಯುಗದ ಹೆತ್ತವರ ಕುರಿತಾದ ಈ ಬಹುಕಾಲದ ಕಥೆಯು ಕೇವಲ ಪ್ರಾಚೀನ ಇತಿಹಾಸ ಮಾತ್ರವೇ ಅಲ್ಲ, ಅಥವಾ ಹೆತ್ತವರಿಗೆ ವಿಧೇಯರಾಗುವದರಿಂದ ಭಯಂಕರ ಪರಿಣಾಮಗಳಾಗುವವೆಂದು ಮಕ್ಕಳಿಗೆ ಮನಗಾಣಿಸುವದಕ್ಕೆ ಬಳಸುವ ಒಂದು ಕಲ್ಪನಾತ್ಮಕವಾದ ಕಥೆಯೂ ಅಲ್ಲ. ಬದಲಾಗಿ, ಇದು ಪ್ರತಿಯೊಬ್ಬ ಮನುಷ್ಯನ ಮುಂದುವರೆದ ಇತಿಹಾಸವಾಗಿರುತ್ತದೆ. ಸರ್ವ ಯುಗಗಳ ಭ್ರಷ್ಟಗೊಂಡ ಮಾನವ ಹೃದಯವು ಕಿರಿಯದ್ದಾಗಿರಲಿ ಅಥವಾ ವಯಸ್ಸಾಗಿರಲಿ, ಅದು ಶೀಘ್ರವಾದರೂ ಅಥವಾ ತಡವಾಗಿಯಾದರೂ ಅದರ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಧೈರ್ಯ ಮಾಡುವ ಮತ್ತು ಅದನ್ನು ಹತೋಟಿ ಸಾಧಿಸಲು ಪ್ರಯತ್ನಿಸುವ ಯಾವದೇ ವ್ಯಕ್ತಿಯ ವಿರುದ್ಧ ಬಂಡಾಯವೇಳುವದು. ದುರಾದೃಷ್ಟಕರವಾಗಿ, ಅದರೊಳಗೆ ನಮ್ಮ ಸದಾ-ಪ್ರೀತಿಸುವ ಸೃಷ್ಟಿಕರ್ತನು ಹಾಗೂ ಪರಲೋಕದ ತಂದೆಯೂ ಸೇರಿರುತ್ತಾನೆ.

ಮನುಷ್ಯನು ತನ್ನ ಸ್ವರೂಪವನ್ನು ತಾನೇ ಕೆತ್ತಿಕೊಳ್ಳಲು ಬಯಸುತ್ತಾನೆ, ಹೀಗೆ ಅದಕ್ಕೆ ಜೀವ ಕೊಟ್ಟವನ ಪಾತ್ರವನ್ನು ಆಕ್ರಮಿಸಿಕೊಳ್ಳುವವನಾಗಿದ್ದಾನೆ! ದೇವರು ಅದನ್ನು ತನ್ನ ಬಾಹುಗಳಲ್ಲಿ ಹಿಡಿದುಕೊಳ್ಳಲು ಮತ್ತು ಅದು ಮೂಲತಃ ಯಾವದಕ್ಕಾಗಿ ಸೃಷ್ಟಿಸಲ್ಪಟ್ಟಿತೋ ಆ ತನ್ನ ದೈವಿಕ ಸ್ವಭಾವದ ಆಪ್ತವಾದ ಅನ್ಯೋನ್ಯತೆಯೊಳಗೆ ಸೆಳೆಯಬೇಕೆಂದು ತೀವ್ರಾಸಕ್ತಿಯಿಂದ ಅಭಿಲಾಷಿಸುತ್ತಾನೆ (2 ಪೇತ್ರ 1:2-4). ಮನುಷ್ಯನು ತನ್ನ ಸ್ವಂತ ದಾರಿಯಲ್ಲಿ ಸಾಗಬೇಕೆಂಬ ಧೈರ್ವಯುಳ್ಳ ದೃಢನಿರ್ಧಾರವು ಕೇವಲ ಆತನನ್ನು ನೋವು, ದುಸ್ಥಿತಿ, ಮತ್ತು ನಾಶನಗಳಿಗೆ ಮಾತ್ರವೇ ನಡಿಸುವದಾಗಿದೆ. ಬಹಳ ಕಾಲದ ಹಿಂದೆ, ಯೆರೆಮೀಯನು ಹೀಗೆ ಬರೆದನು, "ಯೆಹೋವನೇ, ಮಾನವನ ಮಾರ್ಗವು ಅವನ ಸ್ವಾಧೀನದಲ್ಲಿಲ್ಲವೆಂದು ನನಗೆ ಗೊತ್ತು; ಮನುಷ್ಯನು ನಡೆದಾಡುತ್ತಾ ಸರಿಯಾದ ಕಡೆಗೆ ತನ್ನ ಹೆಜ್ಜೆಯನ್ನಿಡಲಾರನು" (ಯೆರೆಮೀಯ 10:23; NKJV). ಅದು ಬಹಳಷ್ಟು ಮಟ್ಟಿಗೆ ಚಿಕ್ಕ ಕೂಸಿನಂತೆ ಆಗಿರುತ್ತದೆ, ಆ ಮಗುವನ್ನು ಹೆತ್ತವರಿ ನಿಯಂತ್ರಿಸದಿದ್ದಲ್ಲಿ, ಆತನು ಕೆಳಗಿರುವ ರಮ್ಯವಾದ ಕಣಿವೆಗಳು ಚೆನ್ನಾಗಿ ಕಾಣಿಸಲಿ ಎಂಬುದಕ್ಕಾಗಿ ಬೆಟ್ಟದ ತುದಿಗಳಿಗೆ ರಭಸವಾಗಿ ನುಗ್ಗುವನು.

ಮೂರ್ಖರ ವಿಷಯದಲ್ಲಿ ಇದು ಬಹಳ ವ್ಯತ್ಯಾಸವಾಗಿರುತ್ತದೆ, ಅವರು ಪ್ರಾಯಸ್ಥರೇ ಆಗಿದ್ದಾರಾದರೂ ದೇವರನ್ನು ಅರಿಯದವರಾಗಿರುತ್ತಾರಷ್ಟೆ. ಆತನಿಗೆ "ಇಚ್ಛಾಶಕ್ತಿ" ಎಂದು ಕರೆಯಲ್ಪಡುವ ಸಂಗತಿಯು, ಅಂದರೆ ಚಿತ್ತವು ಕೊಡಲ್ಪಟ್ಟಿರುತ್ತದೆ. ನಾವು ಹೇಳುವ ಪ್ರಕಾರ, ಆತನು "ಒಬ್ಬ ಸ್ವತಂತ್ರ ನೈತಿಕ ಪ್ರತಿನಿಧಿ" ಆಗಿದ್ದು ಆತನಿಗೆ ತನ್ನ ತಿಳುವಳಿಕೆಯ ಪ್ರಕಾರವಾಗಿ ಒಳ್ಳೆಯದೆಂದು ತೋರುವ ನಿರ್ಧಾರಗಳನ್ನು ಮಾಡಿಕೊಳ್ಳುವದು ಸ್ವಾಭಾವಿಕವಾಗಿರುತ್ತದೆ. ಸೂಕ್ತವಾದ ನಿಯಂತ್ರಣ, ನಿಗ್ರಹ, ಮತ್ತು ದೈವಿಕ ಮಾರ್ಗದರ್ಶನಗಳಿಲ್ಲದೆ, ಏದೆನ್ ಚಿತ್ತದ ದುರಂತವು, "ಸ್ವಾಭಾವಿಕ ಮನುಷ್ಯನ" ನೋವಿನಡೆಗೆ ತನ್ನನ್ನು ಪುನರಾವರ್ತಿಸಿಕೊಳ್ಳುತ್ತಲೇ

ಇರುತ್ತದಷ್ಟೆ. ಪದೇ ಪದೇ, ಮನುಷ್ಯನು ನಿಷೇಧಿಸಲ್ಪಟ್ಟಿರುವ ಹಣ್ಣನ್ನು ಕಿತ್ತುಕೊಳ್ಳಲು ಕೈ ಚಾಚುತ್ತಾನೆ; ಅಂತೂ, ಅದು ಆಕರ್ಷಕ ಮತ್ತು ರುಚಿಕರವಾಗಿದೆಯಲ್ಲವೇ. ಆತನು ಸೈತಾನನ ಸುಳ್ಳನ್ನು ನಂಬುವದಾದರೆ, ಅದು ಆತನನ್ನು ದೇವರಂತೆ ಜ್ಞಾನಿಯನ್ನಾಗಿ ಮಾಡುವದು (ಆದಿಕಾಂಡ 3:5, 6; ನೋಡಿರಿ ಯಾಕೋಬ 1:13-15; 1 ಯೋಹಾನ 2:15-17). ಯೇಸುವು ತನ್ನನ್ನು ವಿರೋಧಿಸುತ್ತಿದ್ದ ಯೆಹೂದ್ಯರಿಗೆ ಹೀಗೆ ಪ್ರತ್ಯುತ್ತರ ಕೊಟ್ಟನು, "ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ; ಅವನಲ್ಲಿ ಸತ್ಯವು ಇಲ್ಲವೇ ಇಲ್ಲ" (ಯೋಹಾನ 8:44).

ಸ್ವಾತಂತ್ರ್ಯವನ್ನು ತಂದು ಕೊಡುವದರ ಬದಲಾಗಿ, ಶಮೆದಮೆ ಇಲ್ಲದಿರುವದು ಪಾಪದ ದಾಸತ್ವಕ್ಕೊಳ ಪಡುವದರಲ್ಲಿ ಫಲಿತಗೊಳ್ಳುವುದು. ಪಶ್ಚಾತ್ತಾಪ ಪಟ್ಟು ವಿಧೇಯತೆಯೊಂದಿಗೆ ಯೇಸು ಕ್ರಿಸ್ತನ ಕಡೆಗೆ ತಿರುಗಿಕೊಳ್ಳದೆ ಇರುವ ಜ್ಞಾನೋದಯವಾಗದವರು, ಮೊಂಡರು, ಮತ್ತು ಗರ್ವಿಷ್ಠರು ಇವರ ಅಂತ್ಯಾವಸ್ಥೆಯು ನಿತ್ಯವಾದ ದಂಡನೆಯೇ ಆಗಿದೆ. ತನ್ನ ದಿನದಲ್ಲಿದ್ದ ಅನೈತಿಕತೆಯ ವಿಷಯದಲ್ಲಿ ಪ್ರತಿಕ್ರಿಯಿಸುತ್ತಾ, ಪೇತ್ರನು ಈ ಮನವರಿಕೆಯುಂಟು ಮಾಡುವ ಮಾತುಗಳನ್ನು ಬರೆದನು:

> . . . ಕರ್ತನು ಭಕ್ತರನ್ನು ಕಷ್ಟಗಳೊಳಗಿಂದ ತಪ್ಪಿಸುವದಕ್ಕೂ ದುರ್ಮಾರ್ಗಿಗಳನ್ನು ನ್ಯಾಯತೀರ್ಪಿನ ದಿನದ ತನಕ ಶಿಕ್ಷಾನುಭವದಲ್ಲಿ ಇಡುವದಕ್ಕೂ ಬಲ್ಲವನಾಗಿದ್ದಾನೆ. ಮುಖ್ಯವಾಗಿ ಬಂಡುತನವನ್ನು ಆಶಿಸಿ ಶರೀರಭಾವಾನುಸಾರ ನಡೆದು ಪ್ರಭುತ್ವ ತಿರಸ್ಕಾರ ಮಾಡುವವರನ್ನು ಹೀಗೆ ಶಿಕ್ಷಿಸುವನು (2 ಪೇತ್ರ 2:9, 10).

ನಮ್ಮ ಸ್ವಂತ ಕಾಲದಲ್ಲಿ ಸುತ್ತಲೆಲ್ಲಾ ಇರುವಂಥ ಅನೈತಿಕತೆ ಮತ್ತು ಭ್ರಷ್ಟತೆಯನ್ನು ಕುರಿತು ಆಲೋಚಿಸೋಣ. ತಮ್ಮ ದಾರಿಬಿಟ್ಟ ಜೀವನಸೈಲಿಗಳನ್ನು ಸಹಿಸಿಕೊಳ್ಳಬೇಕೆಂದು ಬೇಡುವ ಕೆಲವರು ಸದ್ಗುಣವನ್ನು ಸಹಿಸಿಕೊಳ್ಳಲಾಗದ್ದೆಂದು ಘೋಷಿಸುತ್ತಾರೆ. ನಿಜವಾಗಿಯೂ "ಈ ದಿನಗಳು ಕೆಟ್ಟವುಗಳಾಗಿವೆ" (ಎಫೆಸ 5:16).

ಲೋಕದಲ್ಲಿಯೇ "ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" ಎಂಬಂತಹ ಜೀವಿಗಳಾಗಿ (ಅಪೊಸ್ತಲರ ಕೃತ್ಯಗಳು 17:28; NIV), ನಾವು ಲೋಕದ ರೀತಿಯಲ್ಲಿ ಚಿಂತಿಸದೆ ಇರುವದು ಕಷ್ಟಕರವೆಂಬುದುನ್ನು ಪದೇ ಪದೇ ಕಂಡುಕೊಳ್ಳುತ್ತೇವೆ. ಯೇಸುವು ಪ್ರಾರ್ಥನೆ ಮಾಡುತ್ತಿದ್ದ ವೇಳೆ ತನ್ನ ಶಿಷ್ಯರ ಕುರಿತು ಹೀಗೆ ಹೇಳಿದನು, "ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ" (ಯೋಹಾನ 17:16; ನೋಡಿರಿ ಫಿಲಿಪ್ಪಿ 3:20, 21).

ನಾವು ಇತಿಹಾಸವನ್ನೆಲ್ಲಾ ಒಮ್ಮೆ ನೆನಪು ಮಾಡಿಕೊಳ್ಳುವಾಗ, ತಮ್ಮ ಆಯುಧಗಳು ಮತ್ತು ಕೇವಲ ದೃಢಸಂಕಲ್ಪದಿಂದ ಮಾತ್ರವೇ ವಿಶಾಲವಾದ ಸಾಮ್ರಾಜ್ಯಗಳನ್ನು ಗೆದ್ದುಕೊಂಡ ಮತ್ತು ಕೋಟೆಯುಳ್ಳ ಪಟ್ಟಣಗಳನ್ನು ನೆಲಸಮ ಮಾಡಿರುವಂಥ "ಶ್ರೇಷ್ಠ" ಮನುಷ್ಯರು ನಮಗೆ ಸಿಕ್ಕುತ್ತಾರೆ. ನಾವು ಮಹಾ ಅಲೆಗ್ಸಾಂಡರ್ ಕುರಿತು ಯೋಚಿಸುತ್ತೇವೆ, ಆತನು ಭಾರತದ ನದಿಗಳ ತನಕವೂ ತನ್ನ ಸಾರ್ವಭೌಮತೆಯನ್ನು ವಿಸ್ತರಿಸಿದ್ದನು. ಆತನಿಗೆ ಎದುರಾದ ಅತ್ಯಂಥ ದೊಡ್ಡ ಸವಾಲು ಎಂದರೆ, ಬಹುಶಃ ಅದು ತೂರ್ ಪಟ್ಟಣವೇ ಆಗಿತ್ತು, ಇದು ದಡದಾಚೆಯ ದ್ವೀಪದಲ್ಲಿ ಒಂದು ಭಾಗವನ್ನು ಮತ್ತು ಫೊಯಿನಿಕಿಯ ದಡಗಳಲ್ಲಿನ ಒಳನಾಡಿನಲ್ಲಿ ಇನ್ನೊಂದು ಭಾಗವನ್ನೊಳಗೊಂಡಿತ್ತು. ಅಲೆಗ್ಸಾಂಡರನು ಒಳನಾಡಿನಲ್ಲಿದ್ದ ಹಳೇ ಪಟ್ಟಣವನ್ನು ಸುಲಭವಾಗಿ ಸೋಲಿಸಿದ್ದನು. ಹೇಗೂ, ಆ ಸಮಯದಲ್ಲಿ ಯಾವದೇ ಹಡಗು ಸಿಕ್ಕದ ಕಾರಣ, ದ್ವೀಪದಲ್ಲಿದ್ದ

ಪಟ್ಟಣವನ್ನು ಸ್ವಾಧೀನಪಡಿಸಿಕೊಳ್ಳಲು ಆತನು ಬೇರೆ ಯಾವದಾದರೂ ದಾರಿಯನ್ನು ಯೋಚಿಸಬೇಕಾಗಿತ್ತು. ಕೊನೆಗೂ ಆತನು ಒಳನಾಡಿನಿಂದ ದ್ವೀಪದಲ್ಲಿರುವ ಕೋಟೆಯ ತನಕ ಒಂದು ಒಡ್ಡುದಾರಿಯನ್ನು ನಿರ್ಮಿಸುವ ಮೂಲಕ ಸಮಸ್ಯೆಯನ್ನು ಬಗೆಹರಿಸಿದ್ದನು. ಈ ಅಗಾಧ ಕೆಲಸವು ದ್ವೀಪದಲ್ಲಿದ್ದವರಿಂದ ಬಹಳವಾದ ಪ್ರತಿರೋಧವನ್ನು ಎದುರಿಸಿತ್ತು, ಮತ್ತು ಅಲೆಗ್ಸಾಂಡರನು ಹೆಚ್ಚುಕಡಿಮೆ ಈ ಧ್ಯೇಯವನ್ನು ಕೈ ಬಿಡುವದರಲ್ಲಿದ್ದನು. ಕ್ರಮೇಣದಲ್ಲಿ, ಆತನಿಗೆ ಬೆಂಬಲವನ್ನು ಒದಗಿಸುವದಕ್ಕೆ 120 ಹಡಗುಗಳು ಬಂದವು; ಅನಂತರದಲ್ಲಿ ಆತನು ಒಡ್ಡುದಾರಿಯನ್ನು ಪೂರ್ತಿಗೊಳಿಸಿದನು, ಕೋಟೆಯೊಳಗೆ ನುಗ್ಗಿದನು, ಮತ್ತು ಅದರನ್ನು ಧ್ವಂಸಗೊಳಿಸಿದನು. ಈ ಸಾಧನೆಯನ್ನು ಮಾಡುವದಕ್ಕೆ ಆತನಿಗೆ ಏಳು ತಿಂಗಳುಗಳು ಬೇಕಾಗಿದ್ದವು.[149]

ಆತನ ಸೇನೆಗಳು ಈ ಲಜ್ಜಾಸ್ಪದವಾದ ಮತ್ತು ಪ್ರಯಾಸಕರವಾದ ಕೆಲಸವನ್ನು ನಡಿಸುವದಕ್ಕೆ ನರಳಾಡಿರಬಹುದಾಗಿದೆ, ಆದಾಗ್ಯೂ ಅಲೆಗ್ಸಾಂಡರನ ವೀರಕೃತ್ಯಗಳ ಪರಿಚಯವುಳ್ಳವರು ಇದನ್ನು ಆತನ ಅತ್ಯಂಥ ಶ್ರೇಷ್ಠ ಮಿಲಿಟರಿ ಸಾಧನಗಳಲ್ಲೊಂದು ಎಂದು ಹೇಳುವ ಸಾಧ್ಯತೆಯಿರುತ್ತದೆ. ಮಕೆದೋನ್ಯದ ಅಲೆಗ್ಸಾಂಡರನು ಲೋಕವನ್ನು ಕ್ರಿಸ್ತನ ಬರೋಣಕ್ಕಾಗಿ ಸಿದ್ಧಪಡಿಸುವದಕ್ಕಾಗಿ, ವಿಶೇಷವಾಗಿ ಗ್ರೀಕ್ ಭಾಷೆ ಮತ್ತು ಸಂಸ್ಕೃತಿಗಳನ್ನು ಮೆಡಿಟೆರ್ರೇನಿಯನ್ ಪ್ರಾಂತ್ಯದ ಪೂರ್ವ ದಿಕ್ಕಿನ ದೇಶಗಳಲ್ಲೆಲ್ಲಾ ಹಬ್ಬಿಸುವದಕ್ಕಾಗಿ ದೇವರ ಬಳಸಿಕೊಂಡ ಆಶ್ಚರ್ಯವಾದ ಹಾಗೂ ಬಲವಾದ ಸಾಧನವಾಗಿದ್ದನೆಂಬುದನ್ನು ನಾವು ಸಂಶಯಿಸುವದಿಲ್ಲ. ಇದು ಹಳೆಯ ಒಡಂಬಡಿಕೆಯು ಅನುವಾದಿಸಲ್ಪಡಲಿದ್ದ ಮತ್ತು ಹೊಸ ಒಡಂಬಡಿಕೆಯು (LXX) ಬರೆಯಲ್ಪಡಲಿದ್ದಂಥ ಭಾಷಾ ಮಾಧ್ಯಮಗಳನ್ನು ಉಂಟು ಮಾಡಿತ್ತು. ಹೀಗಿದ್ದರೂ, ಆತನು ಮೆಡಿಟೆರ್ರೇನಿಯನ್ನಿನ ವ್ಯಾಪಾರ ಕೇಂದ್ರವಾಗಿದ್ದ ತೂರ್ ಪಟ್ಟಣವನ್ನು ಸೋಲಿಸಿದ್ದರ ಕುರಿತಾಗಿ ನೋಡುವದಾದರೆ, ಇಲ್ಲಿ ಸೊಲೊಮೋನನ ಮಾತುಗಳು ಸೂಕ್ತವಾಗಿರುತ್ತವೆ: "ದೀರ್ಘಶಾಂತನು ಶೂರನಿಗಿಂತಲೂ ಶ್ರೇಷ್ಠ; ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಠ" (ಜ್ಞಾನೋಕ್ತಿ 16:32).

ವಿಶ್ವದ ಅತಿ ಶ್ರೇಷ್ಠ ಮಿಲಿಟರಿ ನಾಯಕರಲ್ಲೊಬ್ಬನಾಗಿ ಅಲೆಗ್ಸಾಂಡರನು ಮಾಡಿದ ಪ್ರಖ್ಯಾತ ಸಾಧನೆಗಳನ್ನು ನೋಡಿ ನಾವು ಆಶ್ಚರ್ಯಗೊಳ್ಳದೆ ಇರುವದಕ್ಕೆ ಸಾಧ್ಯವಿಲ್ಲ. ಆತನು ಎಂತಹ ಪ್ರೇರಣಾತ್ಮಕವಾದ ನಾಯಕತ್ವ ಗುಣಗಳನ್ನು ತೋರ್ಪಡಿಸಿದನೆಂದರೆ, ಏನೇ ಪ್ರತಿಕೂಲಗಳಿದ್ದರೂ ಸರಿಯೇ, ಸಾವಿರಾರು ಜನರು ಆತನನ್ನು ಹಿಂಬಾಲಿಸುವದಕ್ಕೆ ತಮ್ಮ ಪ್ರಾಣಗಳನ್ನು ಪಣಕ್ಕಿಡುತ್ತಿದ್ದರು. ಹಾಗಿದ್ದರೂ, ಆತನ ಬದುಕಿನ ಉತ್ತುಂಗತೆಯ ಸಂದರ್ಭದಲ್ಲಿರುವ ವೇಳೆ, ಆತನು ಶಮೆದಮೆಯ ಕೊರತೆಯಿಂದಾಗಿ ಅಂತಿಮವಾಗಿ ವಿಫಲನಾಗಿದ್ದನು. ಯುದ್ಧದಲ್ಲಿ ಪ್ರಖ್ಯಾತನಾಗಿದ್ದ ಆತನು, ಸಮಾಧಾನದ ಕಾಲದಲ್ಲಿ ಸಂಪೂರ್ಣ ವಿಫಲಗೊಂಡಿದ್ದನು. ಆತನು ತನ್ನನ್ನು ವಿಪರೀತವಾಗಿ ಅನೈತಿಕತೆಯಲ್ಲಿ, ಕುಡಿಕತನ, ಮತ್ತು ಲಂಗುಲಗಾಮಿಲ್ಲದ ಕೋಪಾವೇಶಗಳಲ್ಲಿ ತೊಡಗಿಸಿಕೊಂಡವನಾಗಿ, ಆತನು ಕೊನೆಯಲ್ಲಿ ತನ್ನ ಅತಿ ಪ್ರಿಯ ಸ್ನೇಹಿತನನ್ನು ಕೊಂದಿದ್ದನು, ತನ್ನ ಆರೋಗ್ಯವನ್ನು ನಾಶಮಾಡಿಕೊಂಡನು, ಮತ್ತು ಸುಮಾರು ಮೂವತ್ತೆರಡು ವಯಸ್ಸಿನಲ್ಲಿ ಒಬ್ಬ ಯೌವನಸ್ಥನಾಗಿರುವಾಗಲೇ ಮರಣ ಹೊಂದಿದ್ದನು. ಆತನು ಒಬ್ಬ "ಮಹಾನ್" ವ್ಯಕ್ತಿಯೆಂದು ಪರಿಗಣಿಸಲ್ಪಟ್ಟಿದ್ದನು ಮತ್ತು ಈಗಲೂ ಪರಿಗಣಿಸಲ್ಪಟ್ಟಿದ್ದಾನೆ. ಯುದ್ಧದಲ್ಲಿ ಆತನು ತೋರಿಸುತ್ತಿದ್ದ ಧೈರ್ಯದಿಂದಾಗಿ, ಆತನು ತನ್ನ ಸೇನೆಗಿಂತಲೂ ಅತ್ಯಂಥ ಬೃಹತ್ ಗಾತ್ರವಾಗಿರುತ್ತಿದ್ದ ಸೈನ್ಯಗಳ ಮೇಲೆ ಜಯ ಸಾಧಿಸುವಂತೆ ತನ್ನ ಸೈನಿಕರನ್ನು ನಡಿಸಿದನು. ಹೇಗೂ, ಸತ್ಯದ ಕ್ಷಣದಲ್ಲಿ, ಅಲೆಗ್ಸಾಂಡರನು ಅತ್ಯಂಥ

ನಿರ್ಣಾಯಕವಾದ ಪರೀಕ್ಷೆಯಲ್ಲಿ ವಿಫಲನಾಗಿದ್ದನು ಮತ್ತು ತನ್ನ ಸ್ವಂತ ಆತ್ಮವನ್ನು ಜಯಿಸಿ ಆಳ್ವಿಕೆ ಮಾಡುವದಕ್ಕೆ ಆತನು ಅಸಮರ್ಥನೆಂಬುದನ್ನು ಬಯಲುಗೊಳಿಸಿಕೊಂಡನು.

**"ಒಬ್ಬರನ್ನೊಬ್ಬರು ಕೆಣಕುವವರು" (5:26)**

ಪೌಲನು ಈ ವಿಭಾಗವನ್ನು ಹೀಗೆ ಹೇಳುವ ಮೂಲಕ ಮುಕ್ತಾಯಗೊಳಿಸಿದನು, "ಅಹಂಕಾರಿಗಳೂ ಒಬ್ಬರನ್ನೊಬ್ಬರು ಕೆಣಕುವವರೂ . . . ಆಗದೆ ಇರೋಣ" (5:26). ಒಬ್ಬ ಕ್ರೈಸ್ತನು ಮತ್ತೊಬ್ಬನನ್ನು ರೊಚ್ಚಿಗೆಬ್ಬಿಸುವದಕ್ಕೆ ಅಥವಾ ಪ್ರಚೋದಿಸುವದಕ್ಕೆ ಪ್ರಯತ್ನಿಸಕೂಡದು. ಹೇಗೂ, ಇದು ಎಲ್ಲಾ ಕಲಹಗಳು ಅಥವಾ ವಿವಾದಗಳು ಸಂಭವಿಸದಂತೆ ಖಾತ್ರಿಪಡಿಸುವದಿಲ್ಲ. ಕೆಲವು ಸಾರಿ ಸತ್ಯದ ನಿಮಿತ್ತವಾಗಿ, ವಾಗ್ವಾದದಲ್ಲಿ ತೊಡಗಿಸಿಕೊಳ್ಳುವದು ಅವಶ್ಯಕವಾಗಿರುತ್ತದೆ. ಉದಾಹರಣೆಗೆ, ಯೂದನು "ದೇವಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ನೀವು ಹೋರಾಡಬೇಕು" ಎಂದು ಹೇಳಿದನು (ಯೂದನು 3). "ಹೋರಾಡಬೇಕೆಂದು" ಎಂಬುದು ἐπαγωνίζομαι (*epagōnizomai*) ಎಂಬುದರಿಂದ ಬರುತ್ತದೆ, ಇದೊಂದು ತೀಕ್ಷ್ಣಗೊಳಿಸುವ ಕ್ರೀಡಾ ಪದವಾಗಿದ್ದು ಅದು ಒಬ್ಬನು ತನ್ನೆಲ್ಲಾ ಶಕ್ತಿಯಿಂದ ಸ್ಪರ್ಧಿಸುವದನ್ನು ಸೂಚಿಸುತ್ತದೆ. ನಮ್ಮ ನಂಬಿಕೆಯ ವಿಚಾರವಾಗಿರುವಾಗ, ಅಥವಾ ಸ್ವತಃ ಸುವಾರ್ತೆಯ ವಿಚಾರವೇ ಆಗಿರುವಾಗ, ನಾವು ಎಂದಿಗೂ ಇದು ಒಬ್ಬ ಕ್ರೈಸ್ತನು ಮಾಡತಕ್ಕ ಸಂಗತಿ ಅಲ್ಲ ಎಂದು ಯೋಚಿಸುವಷ್ಟು "ಸಭ್ಯ"ರಾಗಿರಕೂಡದು.[150]

ನಾವು ಸ್ತೇಫನನು "ಲಿಬೆರ್ತೀನನರೆಂಬವರ ಸಮಾಜದವರಲ್ಲಿ" ಕೆಲವರನ್ನು ಎದುರುಗೊಂಡಾಗ ಅವರೊಂದಿಗೆ ವಾದಿಸಿದ ಉದಾಹರಣೆಯನ್ನು ಸಹ ನಾವು ಆಲೋಚಿಸಬಹುದು. ಆತನ ಸಂದೇಶವನ್ನು ಕೇಳಿಸಿಕೊಂಡಾಗ, ಅವರು "ಎದ್ದು ಸ್ತೇಫನನ ಸಂಗಡ ತರ್ಕಮಾಡುತ್ತಾ" (συζητέω, *suzēteō*) ಇದ್ದರು (ಅಪೊಸ್ತಲರ ಕೃತ್ಯಗಳು 6:9, 10). "ತರ್ಕಮಾಡುತ್ತಾ"[151] ಎಂಬುದನ್ನು ಅನುವಾದಿಸಿರುವ ಸುಝೀಟೆವೋ ಎಂಬ ಕ್ರಿಯಾಪದವು ಸ್ತೇಫನನ ಎದುರಾಳಿಗಳನ್ನು ಸೂಚಿಸಿ ಬಳಸಲಾಗಿದೆ; ಅವರು ಆತನ ಸಂಗಡ ವಾದಿಸುತ್ತಿದ್ದರು. ಅವರ ಮಾತುಗಳಲ್ಲಿ ದ್ವೇಷ ಮತ್ತು ವಂಚನೆ ತುಂಬಿತ್ತೆಂಬುದರಲ್ಲಿ ಸಂದೇಹವೇ ಇರುವದಿಲ್ಲ (ಅಪೊಸ್ತಲರ ಕೃತ್ಯಗಳು 6:11, 12). ಸ್ತೇಫನನು ಅವರ ದಾಳಿಗಳಿಗೆ ದೇವರ ವಾಕ್ಯದ ಸತ್ಯವನ್ನು ಉಪಯೋಗಿಸಿ ಪ್ರತ್ಯುತ್ತರವನ್ನು ನೀಡುವದಕ್ಕೆ ಸಂಕೋಚ ಪಡಲಿಲ್ಲ. ಆತನು ಧೈರ್ಯವಂತನು ಮತ್ತು ಮನವರಿಕೆಗೊಂಡವನಾಗಿದ್ದನು, ಆದಾಗ್ಯೂ ಆತನ ಮಾತುಗಳು ನಾಶನದಲ್ಲಿರುವ ಆತ್ಮಗಳ ಮೇಲಿನ ಪ್ರೀತಿಯಿಂದ ನುಡಿಯಲ್ಪಟ್ಟಿದ್ದವು. ಅವರು ಆತನಿಗೆ ಕಲ್ಲುಗಳನ್ನು ಎಸೆಯುತ್ತಿದ್ದ ವೇಳೆ, ಮೊಟ್ಟಮೊದಲ ರಕ್ತಸಾಕ್ಷಿಯಾದ ಆತನು ಈ ಕರುಣೆಯ ಮಾತುಗಳನ್ನಾಡಿದನು: "ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸಬೇಡ" (ಅಪೊಸ್ತಲರ ಕೃತ್ಯಗಳು 7:60).

ಕರ್ತನ ಹಾಗೂ ಸುವಾರ್ತೆಯ ಸತ್ಯದ ನಿಮಿತ್ತವಾಗಿ ಒಬ್ಬ ಎದುರಾಳಿಯೊಂದಿಗೆ ವಿವಾದದಲ್ಲಿ ತೊಡಗಿಸಿಕೊಳ್ಳಬೇಕಾದ ಪರಿಸ್ಥಿತಿಗೊಳಗಾಗುವ ಒಬ್ಬ ಕ್ರೈಸ್ತನಿಗೆ ಒಂದು ಹೆಚ್ಚು ಪ್ರಾಮುಖ್ಯವಾಗಿರುವ ಪಾಠವನ್ನು ಬಹುಶಃ ಶಾಸ್ತ್ರಗಳಲ್ಲಿ ನಾವು ಬೇರೆ ಎಲ್ಲಿಯೂ ಕಾಣುವದಿಲ್ಲ. ಸುವಾರ್ತೆಯ ಸಂದೇಶದ ಪರವಾಗಿ ಹೋರಾಡುವ ಭಾವಿ ವೀರರು ತಮ್ಮ ವಿರೋಧಿಗಳನ್ನು ಹೀನಾಯವಾಗಿ ಸೋಲಿಸಿರುವ – ಮತ್ತು ಆ ಮೂಲಕ ಕ್ರಿಸ್ತನ ಧ್ಯೇಯಕ್ಕೆ ವೈರಿಗಳಾಗಿದ್ದವರನ್ನು ದೃಢಪಡಿಸಿರುವ – "ವಾಗ್ವಾದಗಳ" ಬಗ್ಗೆ ನಾವೆಲ್ಲರೂ ಬಲ್ಲವರಾಗಿದ್ದೇವೆ. ಅಲ್ಲದೆ ಇಂದು ಸಹ

ಮುದ್ರಣದಲ್ಲಿರುವ, ಅನೇಕ ವಾಗ್ವಾದಗಳು ಬೃಹತ್ ಸಂಖ್ಯೆಯ ಜನರನ್ನು ಕ್ರಿಸ್ತನಂಬಿಕೆಗೆ ಗೆದ್ದಿರುವದನ್ನು ಬಲ್ಲೆವು, ಸಂದೇಶವನ್ನು ಒತ್ತಾಯಪೂರ್ವಕವಾಗಿ ತಿಳಿಯಪಡಿಸುವದ ಮೂಲಕ ಮಾತ್ರವೇ ಅಲ್ಲ ಆದರೆ ತಿಳಿಸಲ್ಪಡುತ್ತಿರುವ ವ್ಯಕ್ತಿಯ ಆತ್ಮಕ್ಕಾಗಿ ನಿಜವಾದ ಕಾಳಜಿ ಮತ್ತು ಪ್ರೀತಿಯನ್ನು ತೋರಿಸುವ ಮೂಲಕವಾಗಿ ಸಹ ಈ ಕಾರ್ಯವು ಮಾಡಲ್ಪಟ್ಟಿರುತ್ತದೆ.

ಒಪ್ಪಿಕೊಳ್ಳುವ ಪ್ರಕಾರ, ಒಬ್ಬ ವ್ಯಕ್ತಿಯು ಸಾಯುವದಕ್ಕೆ ಸಹ ಸಿದ್ಧನಿರುವಷ್ಟು ಬಲವಾಗಿ ನಂಬಿಕೆಯನ್ನು ಹೊಂದಿರುವ ಯಾವದೇ ಕಾರ್ಯದ ಬಗ್ಗೆ ಹುರುಪಿನಿಂದ, ತೀವ್ರಾಸಕ್ತಿಯಿಂದ ಚರ್ಚೆಯನ್ನು ಮಾಡುವದು ಸ್ವತಃ ದೊಡ್ಡ ಶಕ್ತಿಯನ್ನು ಹೊಂದಿರುತ್ತದೆ - ನಾಶಮಾಡುವದಕ್ಕೂ ರಕ್ಷಿಸುವದಕ್ಕೂ ಶಕ್ತಿಯನ್ನು ಹೊಂದಿರುತ್ತದೆ. ಇದು ಭಕ್ತಿಯುಳ್ಳ ಶಿಷ್ಯನು ಎಂದಾದರೂ ವಹಿಸಿಕೊಳ್ಳುವ ಅತ್ಯಂಥ ಕಠಿಣವಾದ ಕೆಲಸಗಳಲ್ಲೊಂದಾಗಿರುವ ಸಾಧ್ಯತೆಯಿದೆ.

ವಿರೋಧವನ್ನು ಎಬ್ಬಿಸದೆಯೇ ಸುವಾರ್ತೆಯನ್ನು ಸಾರುವದಕ್ಕೆ ಸಾಧ್ಯವೇ ಇಲ್ಲ. ಕೆಟ್ಟದ್ದು ನೀತಿಯನ್ನು ದ್ವೇಷಿಸುವದು ಈ ಪ್ರಕರಣದ ಸ್ವಭಾವದಲ್ಲಿಯೇ ಇರುತ್ತದೆ. ಕಾಯಿನನು ಏಕೆ ಹೇಬೆಲನನ್ನು ಕೊಂದನು? ದೇವರು ತನ್ನ ಏಕೈಕ ಕುಮಾರನನ್ನು, ಈ ಭೂಮಿಯ ಮೇಲೆ ಇದುವರೆಗೂ ನಡೆದಾಡಿದ ಅತ್ಯಂಥ ನೀತಿಯುಳ್ಳ ಮತ್ತು ಪ್ರೀತಿಯುಳ್ಳ ಮನುಷ್ಯನನ್ನು, ಆತನ ಸ್ವಂತ ಜನರೇ ಏಕೆ ಕೊಂದರು? ಅವರು ಏಕೆ ಆತನನ್ನು ಭೂಮಿಯಿಂದ ತೆಗೆದು ಹಾಕಿದರು? ಅಪೊಸ್ತಲನಾದ ಯೋಹಾನನು ಅಂಥ ಪ್ರಶ್ನೆಗಳಿಗೆ ಈ ಮಾತುಗಳಿಂದ ಉತ್ತರಿಸಿದನು:

> ಆ ತೀರ್ಪು ಏನಂದರೆ - ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವದಿಲ್ಲ, ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವದಿಲ್ಲ; ಆದರೆ ಸತ್ಯವನ್ನು ಅನುಸರಿಸಿ ನಡೆಯುವವನು ತಾನು ದೇವರಿಂದ ನಡಿಸಿಕೊಂಡು ತನ್ನ ಕೃತ್ಯಗಳನ್ನು ಮಾಡಿದ್ದೇನೆಂದು ತೋರಿಬರುವಂತೆ ಬೆಳಕಿಗೆ ಬರುತ್ತಾನೆ (ಯೋಹಾನ 3:19-21).

---

## ಅಡಿಟಿಪ್ಪಣಿಗಳು

[1]ನೋಡಿರಿ ಮತ್ತಾಯ 5:10-12; ರೋಮಾ 5:3-5; 2 ಕೊರಿಂಥ 1:3-7; ಇಬ್ರಿಯ 10:32-36; 12:1-11; ಯಾಕೋಬ 1:2-4; 5:10, 11. [2]Sirach 51:23-26 (NAB). [3]"ಕರ್ತನು" ಅಥವಾ "ಯಜಮಾನ" ಎಂಬುದಕ್ಕೆ ಇಬ್ರಿಯ ಪದವು רַב (*rab*) ಎಂಬುದು, ಅದೇ ವೇಳೆಯಲ್ಲಿ "ನನ್ನ ಕರ್ತನೇ" ಅಥವಾ "ನನ್ನ "ಒಡೆಯನು" ಎಂಬುದು רַבִּי (*rabbi*). [4]Karl Heinrich Rengstorf, "ζυγός," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 2:900–1. [5]ಈ ಪದದ ಕ್ರಿಯಾಪದ ರೂಪದ ಅಕ್ಷರಶಃ ಅರ್ಥವು "ಸುತ್ತಲು ಕತ್ತರಿಸು" (William D. Mounce, ed., *Mounce's Complete Expository Dictionary of Old & New Testament Words* [Grand Rapids, Mich.: Zondervan, 2006], 111). [6]ನೋಡಿರಿ ಯಾಜಕಕಾಂಡ 12:1-3; ಲೂಕ 1:59; 2:21; ಯೋಹಾನ 7:22, 23; ಫಿಲಿಪ್ಪಿ 3:4, 5. [7]ಯೆಹೂದಿ ಕ್ರೈಸ್ತರು 2:12, ಕೊಲೊಸ್ಸೆ 4:11, ಮತ್ತು ತೀತನಿಗೆ 1:10ರಲ್ಲಿ "ಸುನ್ನತಿಯವರು" ಎಂದು ಹಾಗೂ ಅಪೊಸ್ತಲರ ಕೃತ್ಯಗಳು 10:45ರಲ್ಲಿ "ಸುನ್ನತಿಯಾದವರು" ಎಂದು ಪರಿಚಿತರಾಗಿರುತ್ತಾರೆ. [8]"ಸುನ್ನತಿಯಿಲ್ಲದವರು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ (ἀκροβυστία, *akrobustia*) ಎಂಬುದರ ಅಕ್ಷರಶಃ ಅರ್ಥವು "ಮುಂದೋಗಲು" ಎಂದಾಗಿರುತ್ತದೆ. "ಸುನ್ನತಿ" (περιτομή, *peritomē*) ಎಂಬ ಪದವು ಗ್ರೀಕ್ ಬೈಬಲಿನಲ್ಲಿ ಸತತವಾಗಿ ಕಾಣಿಸಿಕೊಳ್ಳುತ್ತದೆ, ಆದರೆ ಈ ಕ್ರಮವನ್ನು ಪೂರ್ತಿ ಬದಲಾಯಿಸುವದಕ್ಕೆ (ἐπισπάω, *epispaō*, "ಸುನ್ನತಿಯಿಲ್ಲದವನಾಗುವದು") ಇರುವ ತಾಂತ್ರಿಕವಾದ ವೈದ್ಯಕೀಯ ಪದವು ಹೊಸ ಒಡಂಬಡಿಕೆಯೊಳಗೆ 1 ಕೊರಿಂಥ 7:18ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. LXXನಲ್ಲಿ, ಇದು ಈ ಅರ್ಥದೊಂದಿಗೆ ಎಲ್ಲಿಯೂ ಕಾಣಿಸಿಕೊಳ್ಳುವದಿಲ್ಲ. [9]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press,

2000), 525–26. [10]ನೋಡಿರಿ ಅಪೊಸ್ತಲರ ಕೃತ್ಯಗಳು 12:7; 27:32; ಯಾಕೋಬ 1:11; 1 ಪೇತ್ರ 1:24.

[11]Bauer, 308. [12]ನೋಡಿರಿ ಎಫೆಸ 2:8-10; 2 ತಿಮೊಥೆ 1:8, 9; ತೀತನಿಗೆ 3:4-7. [13]ನೋಡಿರಿ ಗಲಾತ್ಯ 3:2, 3, 5, 13, 14; 4:6, 29. [14]R. Alan Cole, *The Epistle of Paul to the Galatians*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1965), 142–43. [15]ಗಲಾತ್ಯ 2:16; 3:2, 3, 5, 10; ನೋಡಿರಿ 4:29. [16]Bauer, 484. [17]ನೋಡಿರಿ ರೋಮಾ 2:28, 29; ಫಿಲಿಪ್ಪಿ 3:2-9; ಕೊಲೊಸ್ಸೆ 2:11, 12. [18]ನೋಡಿರಿ 1 ತಿಮೊಥೆ 3:9; 6:10; 2 ತಿಮೊಥೆ 3:8. [19]CEBಯು ಹೀಗೆ ಹೇಳುತ್ತದೆ "ಅವರೆಲ್ಲಾ ಚರ್ಮದ ಕೆಲಸ ಮಾಡುತ್ತಿದ್ದರು." [20]ಕ್ರೀಡೆಗಳಲ್ಲಿ ವಂಚನೆಯಿಂದ ಆಡುವದು ಘೋರವಾಗಿ ಪ್ರತಿಭಟನೆಗೊಳಗಾಗುತ್ತಿತ್ತು. ವಾಸ್ತವಿಕದಲ್ಲಿ, ವಾಸ್ತವಿಕದಲ್ಲಿ, ಓಲಂಪಿಯಾದಲ್ಲಿನ ಕ್ರೀಡಾಂಗಣದ ಪ್ರವೇಶದ್ವಾರದಲ್ಲಿ ಕಂಬದ ಪೀಠಗಳ ಮೇಲೆ "Zanes"ನ, ಅಂದರೆ ದೌಸ್ಯ ದೇವತೆಯ ತಾಮ್ರದ ಪ್ರತಿಮೆಗಳನ್ನು ನಿಲ್ಲಿಸಲಾಗಿರುತ್ತಿತ್ತು (ಅವುಗಳೊಳಗೆ ಯಾರ ಗೌರವಾರ್ಥವಾಗಿ ಓಟ ಸ್ಪರ್ಧೆಗಳು ನಡೆಯುತ್ತಿದ್ದವೋ "Zanes" ಎಂಬುದು ಬಹುವಚನ ರೂಪವಾಗಿದೆ). ಪ್ರತಿಯೊಂದು ಪ್ರತಿಮೆಯ ಕಂಬದ ಪೀಠದ ಮೇಲೆ ವಂಚನೆಯಿಂದ ಆಟವಾಡಿದ ಸ್ಪರ್ಧಾಳುವಿನ ಹೆಸರು ಕೆತ್ತಲ್ಪಟ್ಟಿರುತ್ತಿತ್ತು - ಅದು ಆತನಿಗೆ ಸದಾಕಾಲ ಅವಮಾನವನ್ನುಂಟು ಮಾಡುವದಾಗಿತ್ತು. ತಾಮ್ರದ Zanes ಬಹಳ ಕಾಲದ ಹಿಂದೆಯೇ ಕಣ್ಮರೆಯಾಗಿ ಹೋಗಿವೆಯಾದರೂ, ಕಂಬದ ಪೀಠಗಳಂತೂ ಈ ದಿನದ ತನಕವೂ ಹಾಗೆಯೇ ಉಳಿದಿರುತ್ತವೆ.

[21]ನೋಡಿರಿ 2:2; 5:7; ರೋಮಾ 9:16; 1 ಕೊರಿಂಥ 9:24, 26; ಫಿಲಿಪ್ಪಿ 2:16. ಅದು ಕಾಣಿಸಿಕೊಳ್ಳುವ ಇನ್ನೊಂದು ಸ್ಥಳವೆಂದರೆ 2 ಥೆಸಲೋನಿಕ 3:1, "ಕರ್ತನ ವಾಕ್ಯವು . . . ಎಲ್ಲೆಲ್ಲಿಯೂ ಬೇಗನೆ ಹಬ್ಬಿ ['ವೇಗವಾಗಿ ಹರಡಿ'; NASB] ಪ್ರಖ್ಯಾತಿ ಹೊಂದುವ ಹಾಗೆಯೂ" (ASV) ಎಂದು ಕ್ಲುಪ್ತವಾಗಿ ಬುದ್ಧಿವಾದ ಹೇಳುವ ವೇಳೆ ಕಾಣಿಸಿಕೊಳ್ಳುತ್ತದೆ. [22]ಗ್ರೀಕ್ ವಾಕ್ಯದಲ್ಲಿ ἐγένετο (*egeneto*) ಎಂದಿರುತ್ತದೆ, ಅದರ ಅಕ್ಷರಶಃ ಅರ್ಥವು "ಆಯಿತು." [23]Joseph Henry Thayer, *A Greek-English Lexicon of the New Testament* (Cincinnati: American Book Co., 1889; reprint, Grand Rapids, Mich.: Zondervan Publishing House, 1962), 660. [24]ನೋಡಿರಿ ಗಲಾತ್ಯ 5:9; ರೋಮಾ 11:16; 1 ಕೊರಿಂಥ 5:6, 7. [25]"ಹುಳಿ" ಎಂಬುದು ಬೈಬಲಿನಲ್ಲಿ ಒಂದು ಸಾರಿ ಸಕಾರಾತ್ಮಕ ಅರ್ಥದೊಂದಿಗೆ ಬಳಸಲ್ಪಟ್ಟಿದೆ. ಯೇಸು ಈ ಸಾಮ್ಯವನ್ನು ತಿಳಿಸಿದನು: "ಪರಲೋಕ ರಾಜ್ಯವು ಹುಳಿಹಿಟ್ಟಿಗೆ ಹೋಲಿಕೆಯಾಗಿದೆ. ಅದನ್ನು ಒಬ್ಬ ಹೆಂಗಸು ತಕ್ಕೊಂಡು ಮೂರು ಸೇರು ಹಿಟ್ಟಿನಲ್ಲಿ ಕಲಸಿಡಲು ಆ ಹಿಟ್ಟೆಲ್ಲಾ ಹುಳಿಯಾಯಿತು" (ಮತ್ತಾಯ 13:33). [26]Kenneth L. Boles, *Galatians & Ephesians*, The College Press NIV Commentary (Joplin, Mo.: College Press Publishing Co., 1993), 131–32. [27]ಪೇತ್ರನು ಕೈಸರೈದಲ್ಲಿ ಅನ್ಯಜನರಿಗೆ ನಂಬಿಕೆಯ ದ್ವಾರವನ್ನು ತೆರೆದು ಕೊಟ್ಟವನಾಗಿ ಯೆರೂಸಲೇಮಿಗೆ ಹಿಂದಿರುಗಿದಾಗ, "ಸುನ್ನತಿ ಯವರು ಅವನ ಕೂಡ ವಿವಾದಿಸುತ್ತಾ-ನೀನು ಸುನ್ನತಿಯಿಲ್ಲದವರ ಬಳಿಗೆ ಹೋಗಿ ಅವರ ಸಂಗಡ ಊಟಮಾಡಿದೆಯಲ್ಲಾ ಎಂದು ಕೇಳಿದರು" (ಅಪೊಸ್ತಲರ ಕೃತ್ಯಗಳು 11:2, 3; NKJV). ಒಂದು ವೇಳೆ ಪೌಲನು ಸುನ್ನತಿಯಾಗಬೇಕೆಂದು ಬೋಧಿಸುತ್ತಿದ್ದರೆ, ಅನ್ಯಜನರನ್ನು ಯೆಹೂದಿ ಮತಾಂತರಿಗಳನ್ನಾಗಿ ಪರಿವರ್ತಿಸುತ್ತಿದ್ದಿದ್ದರೆ, ಯೆಹೂದ್ಯರಿಗೆ ಬೇಸರ ವ್ಯಕ್ತಪಡಿಸುವದಕ್ಕೆ ಯಾವ ಕಾರಣವೂ ಇರುತ್ತಿರಲಿಲ್ಲ. [28]"ಆಕ್ಷೇಪವು ಹೋಯಿತಲ್ಲಾ" ಎಂಬುದು ಗ್ರೀಕ್ ಭಾಷೆಯ *katargeō* ಎಂಬ ಪದದಿಂದ ಬರುತ್ತದೆ (5:4ರಲ್ಲಿರುವ ಪ್ರಕಾರ). [29]ಇದು ಇಬ್ರಿಯ ಭಾಷೆಯ ಇತರ ಪದಗಳನ್ನು ಸಹ ಅನುವಾದಿಸುವದಕ್ಕೆ ಬಳಸಲ್ಪಟ್ಟಿದೆ, ಅವುಗಳಲ್ಲಿ מוֹקֵשׁ (*moqesh*), ಒಂದು "ಬಲೆ" ಎಂಬುದು ಸೇರಿರುತ್ತದೆ. [30]ಪೌಲನು "ಶಿಲುಬೆ" (σταυρός, *stauros*) ಎಂಬುದಕ್ಕೆ ಪರ್ಯಾಯ ಪದವನ್ನು ಬಳಸಿರಬಹುದಿತ್ತಾದರೂ, ಆತನು LXXದಲ್ಲಿನ "ಮರ" ಅಥವಾ "ಕಂಬ" (ξύλον, *xulon*) ಎಂಬುದಕ್ಕಿರುವ ಪದವನ್ನು ಉಳಿಸಿಕೊಂಡನು. ಹಾಗೆ ಮಾಡುವ ಮೂಲಕ, ಆತನು ಯೇಸುವಿನ ಶಿಲುಬೆಗೇರಿಸಲ್ಪಡುವಿಕೆ ಮತ್ತು ಧರ್ಮಶಾಸ್ತ್ರದಲ್ಲಿ ಕಂಡು ಬರುವ ಶಾಪದ ನಡುವೆ ಒಂದು ನಿಕಟ ಸಂಬಂಧವನ್ನು ಕಾಪಾಡಿಕೊಂಡನು. ESV ಮತ್ತು KJV ತರ್ಜುಮೆಗಳಲ್ಲಿ ಅಪೊಸ್ತಲರ ಕೃತ್ಯಗಳು 5:30; 10:39; 13:29; 1 ಪೇತ್ರ 2:24 ವಾಕ್ಯಭಾಗಗಳೊಳಗೆ "ಮರ" ಎಂದು ಬಳಸಿರುತ್ತವೆ. CJBಯು ಈ ಎಲ್ಲಾ ವಚನಗಳೊಳಗೆ "ಕಂಬ" ಎಂದು ಬಳಸುತ್ತದೆ.

[31]ನೋಡಿರಿ KJV; NRSV; GNT; NLT; [ಧರ್ಮೋಪದೇಶಕಾಂಡ 23:2]; NJB; NJPSV. [32]ಈ ಶಬ್ದಾಡಂಬರವು "ಶ್ಲೇಷೆ" ಎಂದು ಕರೆಯಲ್ಪಡುವ ಒಂದು ಪ್ರಾಸದ ರೂಪವಾಗಿದೆ, ಇದನ್ನು "ಒಂದೇ ಪದ ಅಥವಾ ಪದದ ಮೂಲವು ನಿಕಟ ಸಂಬಂಧದೊಂದಿಗೆ ಪುನರಾವರ್ತನೆಗೊಳ್ಳುವದು" ಎಂದು ಬಣ್ಣಿಸಲ್ಪಟ್ಟಿದೆ (F. Blass and A. Debrunner, *A Greek Grammar of the New Testament and Other Early Christian Literature*, trans. and rev. Robert W. Funk [Chicago: University of Chicago Press, 1961], 258 [no. 488.1]). ಪೌಲನ ಬರಹಗಳಲ್ಲಿ ಶಬ್ದಾಡಂಬರು ಸರ್ವಸಾಮಾನ್ಯವಾಗಿರುತ್ತದೆ ಮತ್ತು ಆತನ ಸಂದೇಶಕ್ಕೆ, ವಿಶೇಷವಾಗಿ ವಿರೋಧಾಲಂಕಾರದಲ್ಲಿ ಆತನ ಸಂದೇಶಕ್ಕೆ ಒತ್ತು ಕೊಡುವದಾಗಿದೆ. ಫಿಲಿಪ್ಪಿ 3:2, 3ರಲ್ಲಿ, ಮೂಲ ಪದ τομή (*tomē*)ಎಂದಾಗಿದೆ, ಇದು "ಒಂದು ಕತ್ತರಿಸುವಿಕೆ" ಎಂದು ಸೂಚಿಸುವದಾಗಿದ್ದು, ಬಹಳ ನಿಕಟ ಸಂಬಂಧದಲ್ಲಿ ಎರಡು ಸಾರಿ ಬಳಸಲ್ಪಟ್ಟಿದೆ. ಇದು ಎರಡು ಬೇರೆ ಬೇರೆ ಉಪಸರ್ಗವನ್ನು ಹೊಂದಿರುತ್ತದೆ, κατά (*kata*, "ಕೆಳಗೆ" ಅಥವಾ "ವಿರುದ್ಧ") ಮತ್ತು περί (*ಪೆರಿ*, "ಸುತ್ತಲು"). ಈ ಪದಗಳು ಪುರುಷ ಜನನಾಂಗದ ವಿಷಯದಲ್ಲಿ ಬಳಸಲ್ಪಟ್ಟಿವೆ. [33]"ಮನೆಯಲ್ಲಿ ಹುಟ್ಟಿದ" ಎಂಬುದಕ್ಕೆ ಗ್ರೀಕ್ ಪದವು οἰκογενής (*oikogenēs*). ಈ ವಿಧವಾದ ಗುಲಾಮನು

ಮನೆಯವರೊಳಗಲ್ಲದೆ ಹೊರಗಡೆಯಿಂದ ಖರೀದಿಸುತ್ತಿದ್ದ ಗುಲಾಮರಿಗಿಂತ ಹೆಚ್ಚು ಅಮೂಲ್ಯವೆಂದೆಣಿಸಲ್ಪಡುತ್ತಿದ್ದನು. [34]Thomas Wiedemann, *Greek and Roman Slavery* (Baltimore: John Hopkins University Press, 1981), 6–8. [35]Ibid., 23. [36]Ibid., 50. [37]Ibid., 46–47. [38]ನಿಶ್ಚಯವಾಗಿಯೂ, ಪೌಲನು ಎಲ್ಲಾ ಮನುಷ್ಯರು ಸ್ವತಂತ್ರರಾಗಿರಬೇಕೆಂದು ಇಷ್ಟಪಡುತ್ತಿದ್ದನು; ಆದರೆ ಪಲಾಯನ ಮಾಡಿದ್ದ ಗುಲಾಮನಾದ ಓನೆಸೀಮನ ವಿಷಯದಲ್ಲಿ, ಆತನು ಆ ಕಾಲದಲ್ಲಿದ್ದ ಕಾನೂನುಗಳಿಗೆ ತಕ್ಕಂತೆ ನಡೆದುಕೊಂಡು ತನಗೆ ಪ್ರಿಯನಾಗಿದ್ದ ಶಿಷ್ಯನನ್ನು ಆತನ ಯಜಮಾನನ ಬಳಿಗೆ ಹಿಂದಿರುಗಿ ಕಳುಹಿಸಿ ಕೊಟ್ಟನು (ಫಿಲೆಮೋನ 10-16). ಯೇಸುವು ತನ್ನ ಶಿಷ್ಯರು ಸಮಸ್ಯೆಗಳನ್ನು ಹಿಂಸೆಯ ಮೂಲಕವಾಗಿ ಇತ್ಯರ್ಥಗೊಳಿಸಿಕೊಳ್ಳಬೇಕೆಂದು ಎಂದಿಗೂ ಉದ್ದೇಶಿಸಲಿಲ್ಲ. ಆತನು ಪೇತ್ರನಿಗೆ ಹೀಗೆ ಹೇಳಿದನು, "ನಿನ್ನ ಕತ್ತಿಯನ್ನು ತಿರಿಗಿ ಒರೆಯಲ್ಲಿ ಸೇರಿಸು; ಕತ್ತಿಯನ್ನು ಹಿಡಿದವರೆಲ್ಲರು ಕತ್ತಿಯಿಂದ ಸಾಯುವರು" (ಮತ್ತಾಯ 26:52). [39]ನೋಡಿರಿ ಮತ್ತಾಯ 7:12; 22:36-40; ರೋಮಾ 12:9, 10; ಯಾಕೋಬ 2:8. [40]ನೋಡಿರಿ 5:22; 1 ಕೊರಿಂಥ 12:31-13:13; ಕೊಲೊಸ್ಸೆ 3:12-14.

[41]ಆದಿಕಾಂಡ 49:17; ಅರಣ್ಯಕಾಂಡ 21:6-9; ಧರ್ಮೋಪದೇಶಕಾಂಡ 8:15; ಪ್ರಸಂಗಿ 10:8, 11; ಯೆರೆಮೀಯ 8:17; ಆಮೋಸ 5:19; 9:3. [42]ಯಾಕೋಬ 3:9ರಲ್ಲಿ ಗ್ರೀಕ್ ಕ್ರಿಯಾಪದದ ಸಂಪೂರ್ಣವಾಚಿ ಕಾಲವು ಗತಕಾಲದಲ್ಲಿ ದೇವರ ಸೃಜನಾತ್ಮಕ ಕ್ರಿಯೆಯನ್ನು ಮಾತ್ರವಲದೆ ನಿರಂತರವಾಗಿ ಅಸ್ತಿತ್ವದಲ್ಲಿರುವ ಅದರ ಫಲಿತಗಳನ್ನು ವ್ಯಕ್ತಪಡಿಸುತ್ತದೆ. NASBಯು ಈ ವಿಧವಾಗಿ ಅನುವಾದಿಸುವ ಮೂಲಕ ಆ ಕ್ರಿಯಾಪದದ ಗತಕಾಲದಲ್ಲಿನ ಅಂಶವನ್ನು ಒತ್ತಿ ಹೇಳುತ್ತದೆ, ಏನೆಂದರೆ "ದೇವರ ಹೋಲಿಕೆಗೆ ಸರಿಯಾಗಿ ಉಂಟು *ಮಾಡಲ್ಪಟ್ಟ* ಮನುಷ್ಯರನ್ನು" (ಒತ್ತಿ ಹೇಳಿದ್ದು ನನ್ನದು). ದೇವರ ಸೃಷ್ಟಿಯ ಸದಾಕಾಲ ಉಳಿಯುವ ಫಲಿತಾಂಶಗಳು NRSVಯಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣಿಸಬಹುದಾಗಿದೆ: "ದೇವರ ಸ್ವರೂಪದಲ್ಲಿ ಉಂಟು *ಮಾಡಲ್ಪಟ್ಟವರು*" (ಒತ್ತಿ ಹೇಳಿದ್ದು ನನ್ನದು). [43]Bauer, 803. [44]Ibid., 1047. [45]ಕೆಲವೊಂದು ಆವೃತ್ತಿಗಳಲ್ಲಿರುವ (NIV; NEB; REB) ವಿರಾಮ ಚಿಹ್ನೆಗಳಿಂದಾಗಿ ಈ ವಿಭಾಗಗಳು ಪರೋಕ್ಷವಾಗಿ ಸೂಚಿಸಲ್ಪಟ್ಟಿವೆ. [46]KJVಯು "ವ್ಯಭಿಚಾರ" ಎಂಬುದರಿಂದ ಆರಂಭಗೊಳ್ಳುತ್ತದೆ ಮತ್ತು "ಅಸೂಯೆಗಳು" ಎಂಬುದರ ನಂತರದಲ್ಲಿ "ಕೊಲೆಗಳು" ಎಂದು ಹೊಂದಿರುತ್ತದೆ. ಇವುಗಳು ಕೆಲವು ತಡವಾಗಿ ಬರೆಯಲ್ಪಟ್ಟಿರುವ ಹಸ್ತಪ್ರತಿಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತವಾದ್ದರಿಂದ ಇವುಗಳನ್ನು ಪಟ್ಟಿಯಲ್ಲಿ ಸೇರ್ಪಡೆಗೊಳಿಸಕೂಡದು. (E. H. Perowne, *The Epistle to the Galatians*, The Cambridge Bible for Schools and Colleges [Cambridge: University Press, 1900], 67.) [47]ನೋಡಿರಿ ಆದಿಕಾಂಡ 1:27, 28; 2:18-24; ಮತ್ತಾಯ 19:3-9; ರೋಮಾ 7:2, 3; 1 ಕೊರಿಂಥ 7:1-5; ಇಬ್ರಿಯ 13:4. [48]*ಕೊಯಿಟೇ* ಎಂಬ ಪದವು ತಂತ್ರಿಕವಾಗಿ "ಹಾಸಿಗೆ" ಎಂಬ ಅರ್ಥವನ್ನು ಕೊಡುತ್ತದೆ (ಇಬ್ರಿಯ 13:4), ಆದರೆ ಅದು ಹಾಸಿಗೆಯೊಂದಿಗೆ ಸಂಬಂಧ ಹೊಂದಿರುವ ಲೈಂಗಿಕ ಚಟುವಟಿಕೆ ಎಂಬುದನ್ನು ಸೂಚಿಸಲು ಒಂದು ಸೌಮ್ಯೋಕ್ತಿಯಾಗಿ ಸಹ ಬಳಸಲ್ಪಡುತ್ತದೆ. [49]ನೋಡಿರಿ ಮಾರ್ಕ 7:22; ರೋಮಾ 13:13; 2 ಕೊರಿಂಥ 12:21; ಎಫೆಸ 4:19; 1 ಪೇತ್ರ 4:3; 2 ಪೇತ್ರ 2:7, 18; ಯೂದನು 4. [50]ಅತ್ಯಂಥ ಸಮರ್ಪಣೆಯುಳ್ಳ ನಾಸ್ತಿಕನು ಸಹ, ಆತನು ಪ್ರಾಮಾಣಿಕ ಮತ್ತು ತಿಳುವಳಿಕೆಯುಳ್ಳವನು ಆಗಿದ್ದಲ್ಲಿ, ಈ ಪ್ರತ್ಯಕ್ಷ ವಿಷಯದ ವಸ್ತುನಿಷ್ಠ ಪುರಾವೆಯನ್ನು ನಿರಾಕರಿಸುವದಕ್ಕೆ ಸಾಧ್ಯವೇ ಇಲ್ಲ; ಇದು ವಿಶ್ವದಲ್ಲೆಲ್ಲಾ ಮಾನವ ಇತಿಹಾಸದುದ್ದಕ್ಕೂ ಗಮನಿಸಬಹುದಾದ ಒಂದು ವಾಸ್ತವಾಂಶವಾಗಿರುತ್ತದೆ.

[51]Augustine *Confessions* 1.1. [52]ಇಲ್ಲಿ ಉಲ್ಲೇಖಿಸಲಾಗಿರುವ ಕವಿಗಳು ಯಾರೆಂದರೆ ಕ್ರೇತ್ಯದ Epimenides (c. 600 B.C.), ಆತನ ಕೃತಿ *Cretica*; Aratus of Soli (c. 315–240 B.C.), ಕ್ರೇತ್ಯವು ಪೌಲನ ಸ್ವಸ್ಥಳವಾದ ಕಿಲಿಕ್ಯ ಪ್ರಾಂತ್ಯಕ್ಕೆ ಸೇರಿದ್ದಾಗಿದೆ, ಆತನ ಕೃತಿಯಾದ *Phaenomenaದಲ್ಲಿ*; ಮತ್ತು Cleanthes (331–233 B.C.) ಎಂಬವನು ಆತನ ನೀತಿಬೋಧಕ *Hymn to Zeus*. [53]Lucian *The Dream (or The Cock)* 24. [54]ನೋಡಿರಿ ಧರ್ಮೋಪದೇಶಕಾಂಡ 4:15-19, 23-28; 6:4, 13-15; 7:3-6, 25, 26. [55]ಉದಾಹರಣೆಗೆ, ಫೋಯಿನಿಕಿಯದಲ್ಲಿ, ಭೂಮಿಯ ಫಲವತ್ತತೆಯ ಮೇಲೆ ಬಾಳ್ ಮತ್ತು ಅಷ್ಟೆರೋತ್ ದೇವತೆಗಳಿಗೆ ಶಕ್ತಿಯಿದೆ ಎಂದು ಜನರು ಭಾವಿಸಿಕೊಂಡಿದ್ದರು. ಫ್ರುಗ್ಯದ ತಾಯಿ ದೇವತೆಯಾದ ಸಿಬೆಲೆ ಅಥವಾ ಎಫೆಸ ಅರ್ತೇಮಾ ದೇವತೆಗಳು ಮಕ್ಕಳು ಹುಟ್ಟುವಂತೆ ಫಲವತ್ತತೆಯನ್ನು ಅನುಗ್ರಹಿಸುತ್ತವೆಂದು ನಂಬಲಾಗಿತ್ತು. ಪೊಸೆಡಿಯೊನ್ ದೇವತೆಯನ್ನು ಸಮುದ್ರದ (ಮತ್ತು ಸಮುದ್ರ ಜನರ) ಮತ್ತು ಭೂಕಂಪಗಳ ದೇವರೆಂದು ಪರಿಗಣಿಸಲಾಗಿತ್ತು. ಡಿಯಿನೋಸುಸ ದ್ರಾಕ್ಷಾರಸ ಮತ್ತು ಕಾವ್ಯದ ಪ್ರೇರಣೆಯ ದೇವತೆಯಾಗಿದ್ದಳು. ಎರೆಸನು ಯುದ್ಧದ ದೇವರಾಗಿದ್ದನು. ಅಪೊಲ್ಲೋನು ಗ್ರೀಸನಲ್ಲಿರುವ ಡೆಲ್ಫ ಮತ್ತು ಇತಾಲ್ಯದಲ್ಲಿರುವ ಕುಮಾಯ ದೇವಾಲಯದಲ್ಲಿ ದೈವೋಕ್ತಿಗಳನ್ನು ಕೊಟ್ಟನು. ಅಥೇನಾಳು ಕಲೆಗಳು ಮತ್ತು ಜ್ಞಾನದ ದೇವತೆಯಾಗಿದ್ದಳು ಹಾಗೂ ನಗರದ ರಕ್ಷಕಳಾಗಿದ್ದಳು - ಅಥೇನೆ ನಗರ ಮಾತ್ರವೇ ಆಗಿರಲಿಲ್ಲ, ಆದರೆ ಇನ್ನೂ ಅನೇಕ ನಗರಗಳ ರಕ್ಷಕಳು ಸಹ ಆಗಿದ್ದಳು. ದೆಮೆತರಳು ಧಾನ್ಯದ ದೇವತೆಯಾಗಿದ್ದಳು. ಎಲ್ಲರಿಗಿಂತ ಮೇಲಾಗಿ ದೌಸ್ಯನಿದ್ದನು, ದೇವತೆಗಳ ತಂದೆ ಮತ್ತು ಪರಾಕ್ರಮಿ ಪ್ರಭುವಾಗಿದ್ದನು, ಆಕಾಶದ ಮತ್ತು ಹವಾಮಾನ ದೇವರಾಗಿದ್ದನು. ಅಲ್ಲದೆ ಆತನನ್ನು ಅನಾಥ, ಅಪರಿಚಿತ, ಮತ್ತು ವಿಧವೆಯ ಪ್ರಯೋಜನಾತ್ಮಕ ರಕ್ಷಕನೆಂದು ಪರಿಗಣಿಸಲ್ಪಟ್ಟಿದ್ದನು. ಹೆರ್ಮೆಯನ್ನು ದೌಸ್ಯ ದೇವೆಯ ಸಂದೇಶದ ಹುಡುಗನೆಂದು ಗೌರವಿಸಲಾಗುತ್ತಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 14:12). [56]Henry George Liddell and Robert Scott, *A Greek-English Lexicon*, 9th ed., rev. and aug.

with supplement, rev. Henry Stuart Jones and Roderick McKenzie (Oxford: Clarendon Press, 1968), 1917. [57]Barclay M. Newman, *A Concise Greek-English Dictionary of the New Testament* (London: United Bible Societies, 1971), 192. [58]Leon Morris, *Galatians: Paul's Charter of Christian Freedom* (Downers Grove, Ill.: InterVarsity Press, 1996), 171. [59]"ಹಗೆತನಗಳು" ಎಂಬುದಕ್ಕಿರುವ ಗ್ರೀಕ್ ಪದದ ಜೊತೆಯಲ್ಲಿ, ಪಟ್ಟಿಯಲ್ಲಿರುವ ಈ ಕೆಳಗಿನ ಪದಗಳು ಗ್ರೀಕ್ ವಾಕ್ಯದಲ್ಲಿ ಬಹುವಚನದಲ್ಲಿರುತ್ತವೆ: "ಸಿಟ್ಟು," "ಜಗಳಗಳು," "ಒಳಸಂಚುಗಳು," "ಭಿನ್ನಾಭಿಪ್ರಾಯಗಳು," "ಅಸೂಯೆ," "ಕುಡಿಕತನ," ಮತ್ತು "ದುಂದೌತಣ." [60]J. B. Lightfoot, *The Epistle of St. Paul to the Galatians*, Classic Commentary Library (Grand Rapids, Mich.: Zondervan Publishing House, 1957), 211.

[61]Bruce M. Metzger, *A Textual Commentary on the Greek New Testament*, 2nd ed. (Stuttgart: German Bible Society, 1994), 529. [62]Bauer, 392. [63]F. F. Bruce, *The Epistle to the Galatians*, The New International Greek Testament Commentary (Grand Rapids, Mich.: Wm. B. Eerdmans Publishing Co., 1982), 248. [64]Bauer, 427. [65]ನೋಡಿರಿ ಅಪೊಸ್ತಲರ ಕೃತ್ಯಗಳು 5:17, 18; 13:45; ರೋಮಾ 13:13; 1 ಕೊರಿಂಥ 3:3; 2 ಕೊರಿಂಥ 12:20; ಯಾಕೋಬ 3:14, 16. [66]Richard Chenevix Trench, *Synonyms of the New Testament* (Marshallton, Del.: The National Foundation for Christian Education, n.d.), 123–24. [67]Friedrich Büchsel, "ἐριθεία," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 2:660–61. [68]Bauer, 392; Aristotle *Politics* 5.3. [69]"ತೊಲಗಿಹೋಗಿರಿ" ಎಂಬ ಕ್ರಿಯಾಪದವು ἐκκλίνω (*ekklinō*) ಎಂಬುದರ ವರ್ತಮಾನ ಆಜ್ಞಾರ್ಥಕ ರೂಪವಾಗಿದೆ, ಅದು ನಿರಂತರವಾಗಿರುವ ಅಥವಾ ಪುನರಾವರ್ತಿತ ಕ್ರಿಯೆಯನ್ನು ಸೂಚಿಸುತ್ತದೆ. ಅದರ ಅರ್ಥವು "ಅವರಿಂದ ದೂರವಾಗಿರಿ," "ದೂರವಿಡುತ್ತಲೇ ಇರಿ," ಎಂದಾಗಿರುತ್ತದೆ, ಊಹಿಸಿಕೊಳ್ಳುವ ಪ್ರಕಾರ ಅಪರಾಧಿಗಳು ಅಂಥ ಭಕ್ತಿಹೀನ ನಡವಳಿಕೆಯನ್ನು ಅಂತ್ಯಗೊಳಿಸಿಕೊಳ್ಳುವ ತನಕವೂ ಎಂದಾಗಿರುವದು. [70]ಉದಾಹರಣೆಗೆ, ಲೌಕಿಕ ಗ್ರೀಕ್ ಭಾಷೆಯಲ್ಲಿ *ಹಾಯರೆಸಿಸ್* ಎಂಬುದು ಬೇರೆ ತತ್ವಜ್ಞಾನದ ಶಾಲೆಗಳನ್ನು ಸೂಚಿಸಲು ಬಳಸಲ್ಪಟ್ಟಿರಬಹುದ, ಅವುಗಳಲ್ಲಿ ಒಂದು ಯಾವದೇ ಮಹತ್ವದ ಪ್ರಮಾಣದಲ್ಲಿ ಏಕಾಭಿಪ್ರಾಯವನ್ನು ನಿರೀಕ್ಷಿಸಿದ್ದಿರಬಹುದಾಗಿದೆ. ಇತರ ಸಂಭಾವ್ಯ ಅನುವಾದಗಳಲ್ಲಿ "ತತ್ವ," "ವಿಚಾರಧಾರೆ," ಮತ್ತು "ಒಲವು" ಎಂಬವುಗಳು ಸೇರಿರುತ್ತವೆ (Bauer, 28).

[71]ಪೌಲನು 5:26ರಲ್ಲಿ "ಮತ್ಸರ" ಎಂಬುದನ್ನು φθονέω (*phthoneō*) ಎಂಬ ಕ್ರಿಯಾಪದದಿಂದ ಸಹ ಬಳಸಿದನು. [72]"ಆ ದಿನಗಳಲ್ಲಿ ನೀರನ್ನು ಶುದ್ಧೀಕರಿಸುವದು ಬಹಳ ಮಟ್ಟಿಗೆ ಇಷ್ಟಕ್ಕೆ ಬಿಟ್ಟ ವಿಚಾರವಾಗಿತ್ತು. ಎಫೆಸದಲ್ಲಿದ್ದ ನೀರು ತಿಮೊಥೆಯನಿಗೆ ಅಜೀರ್ಣವನ್ನುಂಟು ಮಾಡಿತ್ತೆಂದು ತೋರುತ್ತದೆ. ಒಂದಿಷ್ಟು ದ್ರಾಕ್ಷಾರಸವು ಹೊಟ್ಟೆಗೆ ಉಪಶಮನ ನೀಡುವದಾಗಿತ್ತು" (James E. Smith, *Exhortation Epistles*, Teacher's Commentary [N.p.: By the author, 2011], 116–17). [73]ನೋಡಿರಿ ಅರಣ್ಯಕಾಂಡ 6:1-4; ನ್ಯಾಯಸ್ಥಾಪಕರು 13:2-5; ಮತ್ತಾಯ 11:18; ಲೂಕ 1:15; 7:33. [74]Bauer, 580. [75]Trench, 212. [76]William M. Ramsay, *A Historical Commentary on St. Paul's Epistle to the Galatians*, Limited Classical Reprint Library (N.p.: G. P. Putnams Sons, 1900; reprint, Minneapolis: Klock & Klock Christian Publishers, 1978), 453. [77]ನೋಡಿರಿ ರೋಮಾ 1:29-31; 13:13; 1 ಕೊರಿಂಥ 5:10, 11; 6:9, 10; 2 ಕೊರಿಂಥ 12:20; ಎಫೆಸ 4:31; 5:3-5; ಕೊಲೊಸ್ಸೆ 3:5-8; 1 ತಿಮೊಥೆ 1:9, 10; 6:4, 5; 2 ತಿಮೊಥೆ 3:2-4; ತೀತನಿಗೆ 1:7; 3:3. [78]ನೋಡಿರಿ ಮತ್ತಾಯ 15:19; ಮಾರ್ಕ 7:21, 22; 1 ಪೇತ್ರ 2:1; 4:3, 15; ಪ್ರಕಟನೆ 9:21; 21:8; 22:15. [79]Cole, 160–61; James D. G. Dunn, *The Theology of Paul the Apostle* (Grand Rapids, Mich.: Wm. B. Eerdmans Publishing Co., 1998), 662–65. [80]ನೋಡಿರಿ ಮತ್ತಾಯ 3:7-10; 7:15-20; ಎಫೆಸ 5:6-12; ಫಿಲಿಪ್ಪಿ 1:9-11; ಇಬ್ರಿಯ 12:11; ಯಾಕೋಬ 3:17, 18.

[81]ನೋಡಿರಿ ಯೋಹಾನ 4:24; ರೋಮಾ 8:20-23; 1 ಕೊರಿಂಥ 15:42-53; 2 ಕೊರಿಂಥ 5:1-5; ಫಿಲಿಪ್ಪಿ 3:20, 21. [82]ನೋಡಿರಿ ಮತ್ತಾಯ 26:28; ಅಪೊಸ್ತಲರ ಕೃತ್ಯಗಳು 8:38, 39; 22:16; ರೋಮಾ 6:4, 5; ಕೊಲೊಸ್ಸೆ 2:12; ಪ್ರಕಟನೆ 1:5. [83]ನೋಡಿರಿ ರೋಮಾ 8:9-11; 1 ಕೊರಿಂಥ 3:16; 6:19; 2 ಕೊರಿಂಥ 6:16, 17; ಎಫೆಸ 2:11-18. [84]ಹೆಚ್ಚಿನ ಮಾಹಿತಿಗಾಗಿ, ನೋಡಿರಿ *ಅನ್ವಯಿಸುವಿಕೆ: ನಾಲ್ಕು ಪ್ರೀತಿಗಳು*, ಪುಟಗಳು 98-101. [85]Bauer, 613. [86]Ibid., 461. [87]Ibid., 612. [88]ನೋಡಿರಿ 2 ಕೊರಿಂಥ 6:6; 2 ತಿಮೊಥೆ 3:10; 4:2; ಇಬ್ರಿಯ 6:12; ಯಾಕೋಬ 5:10. [89]ನೋಡಿರಿ ರೋಮಾ 2:4; 9:22; 1 ತಿಮೊಥೆ 1:16; 1 ಪೇತ್ರ 3:20; 2 ಪೇತ್ರ 3:9, 15. [90]ನೋಡಿರಿ ಮತ್ತಾಯ 17:17; ಮಾರ್ಕ 9:19; ಲೂಕ 9:41; ಅಪೊಸ್ತಲರ ಕೃತ್ಯಗಳು 18:14; 1 ಕೊರಿಂಥ 4:12; 2 ಕೊರಿಂಥ 11:1, 4, 19, 20; ಎಫೆಸ 4:2; ಕೊಲೊಸ್ಸೆ 3:13; 2 ಥೆಸಲೋನಿಕ 1:4; 2 ತಿಮೊಥೆ 4:3; ಇಬ್ರಿಯ 13:22.

[91]Bauer, 1039. [92]Ibid., 1090. [93]ನೋಡಿರಿ ರೋಮಾ 2:4; 11:22; ಎಫೆಸ 2:7; ತೀತನಿಗೆ 3:4. [94]ನೋಡಿರಿ ಗಲಾತ್ಯ 5:22; ರೋಮಾ 3:12; 2 ಕೊರಿಂಥ 6:6; ಕೊಲೊಸ್ಸೆ 3:12. [95]Ceslas Spicq, *Theological Lexicon of*

*the New Testament*, trans. and ed. James D. Ernest (Peabody, Mass.: Hendrickson Publishers, 1994), 3:515. [96]Trench, 217. [97]Ludwig Koehler and Walter Baumgartner, *The Hebrew and Aramaic Lexicon of the Old Testament*, study ed., trans. and ed. M. E. J. Richardson (Boston: Brill, 2001), 1:370. [98]Lightfoot, 213. [99]Trench, 219. [100]Ibid., 220.

[101]ನೋಡಿರಿ ಎಫೆಸ 6:23; 1 ತಿಮೊಥೆ 2:15; 4:12; 6:11; 2 ತಿಮೊಥೆ 2:22; 3:10; ತೀತನಿಗೆ 2:2. [102]Bauer, 820. (ನೋಡಿರಿ 1 ಥೆಸಲೋನಿಕ 3:6; 5:8; 1 ತಿಮೊಥೆ 1:14; 2 ತಿಮೊಥೆ 1:13; ಫಿಲೆಮೋನ 5.) [103]ನೋಡಿರಿ ಮತ್ತಾಯ 10:38; 16:24; ರೋಮಾ 8:12, 13; ಗಲಾತ್ಯ 2:20; 5:24; 6:14. [104]NASBಯ ಅನುವಾದಕರು ಸ್ಪಷ್ಟತೆಯಿರಲಿ ಎಂಬುದಕ್ಕಾಗಿ "ಆಸಕ್ತಿಯಿಂದ" ಎಂದು ಸೇರ್ಪಡೆಗೊಳಿಸಿದ್ದಾರೆ. ಕೆಲವು ಅನುವಾದಕರು "ತಾಪ" ಎಂಬ ಪದವು ನರಕದ ಜ್ವಾಲೆಗಳಲ್ಲಿ ನಿತ್ಯವಾದ ದಂಡನೆ ಅನುಸಭವಿಸುವದನ್ನು ಸೂಚಿಸುತ್ತದೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಹೇಗೂ, ಇಡೀ ಸನ್ನಿವೇಶದಲ್ಲಿರುವ ಕಾಮದ ಸ್ವಭಾವವನ್ನು ನಿರ್ಲಕ್ಷ್ಯಿಸುತ್ತದೆ. ಪೌಲನು ಮದುವೆಯನ್ನು ಖಂಡಿಸಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಸಾಮಾನ್ಯವಾಗಿ ಹೇಳುವದಾದರೆ, ಆತನು ಬಹಳಷ್ಟು ಜನರಿಗೆ ಮದುವೆ ಮಾಡಿಕೊಳ್ಳುವದೇ ಉತ್ತಮ ಎಂಬುದನ್ನು ಆತನು ಸಂಪೂರ್ಣ ಗ್ರಹಿಸಿಕೊಂಡಿದ್ದನು (1 ಕೊರಿಂಥ 7:1, 2). [105]ಹೊಸ ಒಡಂಬಡಿಕೆಯಲ್ಲಿ ಸಂಬಂಧಿತ ನಕಾರಾತ್ಮಕ ಪದಗಳು ಸಹ ಕಾಣಿಸಿಕೊಳ್ಳುತ್ತವೆ, ಅವುಗಳಲ್ಲಿ ಮತ್ತಾಯ 23:25 ಮತ್ತು 1 ಕೊರಿಂಥ 7:5ರಲ್ಲಿರುವ ἀκρασία (*akrasia*), ಮಾತ್ರವಲ್ಲದೆ 2 ತಿಮೊಥೆ 3:3ರಲ್ಲಿರುವ ἀκρατής (*akratēs*) ಎಂಬ ಗುಣವಾಚಕ. ಈ ಪದಗಳು "ಸ್ವೇಚ್ಛಾಭೋಗ," "ಶಿಸ್ತು ಇಲ್ಲದಿರುವಿಕೆ," ಮತ್ತು "ಸ್ವ-ನಿಗ್ರಹವಿಲ್ಲದಿರುವಿಕೆ" ಎಂಬ ಭಾವನೆಗಳನ್ನು ವ್ಯಕ್ತಪಡಿಸುತ್ತದೆ. [106]Bauer, 274. [107]Bruce, 255. [108]S. H. Hooke, *The Siege Perilous* (London: SCM Press, 1956), 264. (ನೋಡಿರಿ ಯೋಹಾನ 15:1-5; 2 ಪೇತ್ರ 1:2-4.) [109]ಆತ್ಮೀಕ ಫಲವು ಒಬ್ಬ ಕ್ರೈಸ್ತನ ಜೀವಿತದಲ್ಲಿ ಪವಿತ್ರಾತ್ಮನು ಮಾಡುವ ಕೆಲಸದ ಫಲಿತವಾಗಿದೆ. ಅದೇ ರೀತಿಯಲ್ಲಿಯೇ, ದೇವರಾತ್ಮನ ಫಲಗಳ ಎಲ್ಲಾ ಗುಣಗಳು ಶಾಸ್ತ್ರಗಳಲ್ಲಿ ಆಜ್ಞಾಪಿಸಲ್ಪಟ್ಟಿವೆ ಎಂಬುದನ್ನು ಗಮನಿಸತಕ್ಕದ್ದು. [110]Cole, 167.

[111]Ibid. [112]ನೋಡಿರಿ ಮತ್ತಾಯ 7:22, 23; 1 ಕೊರಿಂಥ 13:1-3; ಗಲಾತ್ಯ 3:5. [113]ವಿವಿಧ ಸನ್ನಿವೇಶಗಳಲ್ಲಿ, *ಸಾರ್ಕ್ಸ್* ಎಂಬುದು ಒಬ್ಬನ ಶಾರೀರಿಕ ದೇಹವನ್ನು ಅಥವಾ ರೂಪವನ್ನು, ವಂಶಾವಳಿಯ ಅಥವಾ ಜನಾಂಗೀಯ ಹುಟ್ಟು, ಆರೋಗ್ಯದ ಸ್ಥಿತಿ, ಮತ್ತು ಇತ್ಯಾದಿಗಳನ್ನು ಸೂಚಿಸಬಹುದಾಗಿದೆ. ಸಾಮಾನ್ಯವಾಗಿ ಹೇಳುವದಾದರೆ, ಅದು ಹೆಚ್ಚುಕಡಿಮೆ ಮಾನವನ ಭೂಲೋಕ ಜೀವಿತದ ಯಾವದೇ ಅಂಶವನ್ನು ಸಹ ಸೂಚಿಸುತ್ತಿರಬಹುದಾಗಿದೆ. *sarx* ಯಾವಾಗಲೂ ಕೆಟ್ಟದ್ದಲ್ಲ ಎಂಬುದನ್ನು ಒತ್ತಿ ಹೇಳತಕ್ಕದ್ದು. ಯೋಹಾನನು ಬರೆದ ಸುವಾರ್ತೆಯ ಮುನ್ನುಡಿಯು ಹೀಗೆ ಹೇಳುತ್ತದೆ, "ಆ ವಾಕ್ಯವೆಂಬವನು ನರಾವತಾರ [*sarx*] ಎತ್ತಿ ನಮ್ಮ ಮಧ್ಯದಲ್ಲಿ" (ಯೋಹಾನ 1:14). "ಮಾಂಸದಾರಿ" ಎಂಬುದರ ಬದಲಾಗಿ NLTಯಲ್ಲಿ "ಮಾನವ" ಎಂದಿರುತ್ತದೆ. (ನೋಡಿರಿ ಇಬ್ರಿಯ 2:14; 1 ಯೋಹಾನ 4:2, 3.) [114]ಯಾವನಾದರೂ ನಾಶವಾಗಬೇಕೆಂಬುದು ದೇವರ ಚಿತ್ತವಲ್ಲ (1 ತಿಮೊಥೆ 2:4; 2 ಪೇತ್ರ 3:9) ಎಂಬುದನ್ನು ನಾವು ಬಲ್ಲೆವಾದ್ದರಿಂದ, ಸೃಷ್ಟಿಯ ಕಾರ್ಯಗಳಲ್ಲಿ ದೇವರ ಕುರಿತ ಸಾಕ್ಷಿಗಳನ್ನು ಗಮನಿಸುವವರಾಗಿ ಆತನಿಗೋಸ್ಕರ ಹುಡುಕಬೇಕೆಂಬ ಒಂದು ಹುಟ್ಟು ನೈತಿಕ ಜವಾಬ್ದಾರಿಯನ್ನು ಎಲ್ಲಾ ಮನುಷ್ಯರು ಹೊಂದಿರುವರೆಂದು ತೋರುತ್ತದೆ (ನೋಡಿರಿ ರೋಮಾ 1:18-21; 2:14, 15). ದೇವರು ಹಿಂದಿನ ಪೀಳಿಗೆಗಳನ್ನು ಅವರಿಷ್ಟದಂತೆ ನಡೆಯಲು ಅನುಮತಿಸಿದ್ದನೆಂದು ಹೇಳಲ್ಪಟ್ಟಿದೆಯಾದರೂ (ಅಪೊಸ್ತಲರ ಕೃತ್ಯಗಳು 14:16), ಸುವಾರ್ತೆಯ ಬರೋಣದೊಂದಿಗೆ, ಒಂದು ಹೊಸ ದಿನವು ಉದಯವಾಗಿತ್ತು. ಪೌಲನು, ಅಥೇನೆಯ "ಅರಿಯೋಪಾಗದ ಮಧ್ಯದಲ್ಲಿ ನಿಂತುಕೊಂಡು" ಹೀಗೆ ಹೇಳಿದ್ದನು, ". . . ದೈವವು ಮನುಷ್ಯನ ಶಿಲ್ಪವಿದ್ಯೆಯಿಂದಲೂ ಕಲ್ಪನೆಯಿಂದಲೂ ಕೆತ್ತಿರುವ ಚಿನ್ನ ಬೆಳ್ಳಿ ಕಲ್ಲುಗಳಿಗೆ ಸಮಾನವೆಂದು ನಾವು ಭಾವಿಸಬಾರದು. ಆ ಅಜ್ಞಾನಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ. ಯಾಕಂದರೆ ಆತನು ನಿಷ್ಕರ್ಷೆಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ ಅಂದನು" (ಅಪೊಸ್ತಲರ ಕೃತ್ಯಗಳು 17:22, 29-31). [115]ನೋಡಿರಿ ರೋಮಾ 8:12, 13; 12:1, 2; ಗಲಾತ್ಯ 2:20. [116]ಗ್ರೀಕ್ ಭಾಷೆಯು ಸಂಭಾವನಾವಾಚಕ ವಾಕ್ಯಭಾಗದ ನಾಲ್ಕು ವರ್ಗಗಳನ್ನು ಹೊಂದಿದೆ. ಇವುಗಳೊಳಗೆ ಮೊದಲನೆಯದು ಸಾಮಾನ್ಯವಾಗಿ ನಿಶ್ಚಯಾರ್ಥಕ ರೂಪದೊಂದಿಗೆ ಎಯಿ ಎಂಬುದರಿಂದ ವ್ಯಕ್ತಪಡಿಸಲ್ಪಡುತ್ತದೆ, ಹಾಗಿದ್ದ ಪಕ್ಷದಲ್ಲಿ "ಮಾತಾಡುವವನು ಪೀಠಿಕಾ ಉಪವಾಕ್ಯದಲ್ಲಿ (*ಆದರೆ ಎಂಬ ಸಂಭಾವನಾವಾಚಕ ವಾಕ್ಯಭಾಗ*) ಹೇಳಲ್ಪಟ್ಟ ಸ್ಥಿತಿಯನ್ನು ಒಂದು ವಾಸ್ತವಿಕತೆ ಎಂದು ಭಾವಿಸಿಕೊಳ್ಳುವನು" (James A. Brooks and Carlton L. Winbery, *Syntax of New Testament Greek*, typeset ed. [Lanham, Md.: University Press of America, 1988], 182). [117]ನಾವು 5:26ರಲ್ಲಿ ಚರ್ಚಿಸುತ್ತಿರುವ ವಿಷಯವು ಏನೆಂದರೆ ಒಂದು ನಕಾರಾತ್ಮಕ ಆಜ್ಞೆ ಅಥವಾ ನಿಷೇಧ ಆಗಿರುತ್ತದೆ. William Douglas Chamberlainನು ಇದಕ್ಕೆ ಮತ್ತಾಯ 6:19ರಲ್ಲಿ ಉದಾಹರಣೆಯನ್ನು ಕಾಣುತ್ತೇವೆ, ಅಲ್ಲಿ ಯೇಸು ಹೀಗೆ ಹೇಳಿದನು, "ಭೂಲೋಕದಲ್ಲಿ ಗಂಟುಮಾಡಿ ಇಟ್ಟುಕೊಳ್ಳಬೇಡಿರಿ [Μὴ θησαυρίζετε, *Mē thēsaurizete*]." Chamberlainನು ನಿಷೇಧವನ್ನು "ಗಂಟು ಮಾಡಿಟ್ಟುಕೊಳ್ಳುವದನ್ನು ನಿಲ್ಲಿಸಿರಿ" ಎಂದು ಅನುವಾದಿಸಿದನು ಮತ್ತು ಬಳಿಕ

ಹೀಗೆ ಬರೆದನು, "ಯೇಸುವಿನ ಆಜ್ಞೆಯ ಅಂಶವು ಏನೆಂದರೆ ಮನುಷ್ಯರು ಈಗಾಗಲೇ ಪರಲೋಕದಲ್ಲ ಕೂಡಿಸಿಡುವ ಬದಲಾಗಿ ಭೂಲೋಕದಲ್ಲಿ ಗಂಟು ಮಾಡಿಕೊಳ್ಳುತ್ತಿದ್ದರು, ಮತ್ತು ಅವರು ಅದನ್ನು ನಿಲ್ಲಿಸಿ ಬಿಡಬೇಕೆಂಬುದು ಆತನ ಬಯಕೆಯಾಗಿತ್ತು. ಈ ವ್ಯತ್ಯಾಸವು ಆಂಗ್ಲ ಆವೃತ್ತಿಗಳಲ್ಲಿ ಕಾಣೆಯಾಗಿರುತ್ತದೆ" (William Douglas Chamberlain, *An Exegetical Grammar of the Greek New Testament* [Grand Rapids, Mich.: Baker Book House, 1941], 86). [118]Bauer, 871. [119]Robert L. Johnson, *The Letter of Paul to the Galatians*, The Living Word Commentary (Austin, Tex.: R. B. Sweet Co., 1969), 163. [120]Warren W. Wiersbe, *The Bible Exposition Commentary: New Testament*, vol. 1 (Colorado Springs, Colo.: Victor, 2001), 720.

[121]Cole, 170. [122]Bruce, 257. [123]Walter Schmithals, *Paul and the Gnostics*, trans. John E. Steely (Nashville: Abingdon Press, 1972), 49. [124]Bruce, 258. [125]Peter Toon, "Gnosticism," in *The New International Dictionary of the Bible*, pictorial ed., ed. J. D. Douglas and Merrill C. Tenney (Grand Rapids, Mich.: Zondervan Publishing House, 1987), 393. [126]ನೋಡಿರಿ ಯೋಹಾನ 14:15, 21; 15:10; 1 ಯೋಹಾನ 2:3-6; 3:16-24; 5:2, 3; 2 ಯೋಹಾನ 6. [127]Everett Ferguson, *The Church of Christ: A Biblical Ecclesiology for Today* (Grand Rapids, Mich.: Wm. B. Eerdmans Publishing Co., 1996), 390. [128]ನೋಡಿರಿ 4:8-11; ಮಾರ್ಕ 7:18, 19; 2 ಕೊರಿಂಥ 8:7-9; ಕೊಲೊಸ್ಸೆ 2:16, 17; 1 ತಿಮೊಥೆ 4:1-5; ಇಬ್ರಿಯ 9:8-14. [129]ನೋಡಿರಿ ಮತ್ತಾಯ 28:18-20; ಮಾರ್ಕ 16:15, 16; ಲೂಕ 24:45-47; ಕೊಲೊಸ್ಸೆ 1:21-23. [130]ನೋಡಿರಿ ಇಬ್ರಿಯ 10:4-14; 13:20; ಯೂದನು 3; ಪ್ರಕಟನೆ 14:6.

[131]ನೋಡಿರಿ ಯೆಶಾಯ 44:1-3; ಯೆಹೆಜ್ಕೇಲ 39:29; ಯೋವೇಲ 2:28, 29; ಜೆಕರ್ಯ 12:10. [132]ನೋಡಿರಿ ಅಪೊಸ್ತಲರ ಕೃತ್ಯಗಳು 2:16-39; 5:32; 11:15-18; 1 ಕೊರಿಂಥ 3:16; 6:19; ಗಲಾತ್ಯ 3:2, 3; 4:6; ತೀತನಿಗೆ 3:4-7. [133]ಈ ವಾಕ್ಯಭಾಗದ ವಿಷಯದಲ್ಲಿ ಕೆಲವೊಂದು ಪ್ರಾಮುಖ್ಯವಾದ ಸ್ಪಷ್ಟನೆಗಳನ್ನು ನೀಡಬೇಕಾಗಿರುತ್ತದೆ: (1) "ಒಂದರಲ್ಲಿ" ಎಂಬುದು ಮೂಲ ವಾಕ್ಯದ ಅರ್ಥವನ್ನು ನಿಖರವಾಗಿ ವ್ಯಕ್ತಪಡಿಸುತ್ತಿದ್ದು ನ್ಯಾಯಯುತವಾಗಿರುತ್ತದೆ. (2) "ಆಗಿರುತ್ತಾನೆ" ಎಂಬ ಕ್ರಿಯಾಪದವು ನಿರಂತರ ಉಳಿಯುವ ಫಲಿತಗಳು ಎಂಬುದನ್ನು ಸೂಚಿಸುತ್ತದೆ. (3) "ಎಲ್ಲಾ" ಎಂಬುದು ಒಂದೇ ಒಂದು ಉಲ್ಲಂಘನೆಯನ್ನು ಮಾಡಿರುವವನು ಈಗಲೂ ಚರ್ಚೆಯಲ್ಲಿರುವ ಕಟ್ಟಳೆಯನ್ನು ಮೀರಿದ ಅಪರಾಧಿಯಾಗಿರುತ್ತಾನೆ. [134]ಇಬ್ರಿಯ 11ನೇ ಅಧ್ಯಾಯವು ಸ್ಪಷ್ಟಪಡಿಸುವ ಪ್ರಕಾರ, ನಂಬಿಕೆಯು ದೇವರ ಹಳೆಯ ಒಡಂಬಡಿಕೆಯ ಜನರಿಗೆ ಸಹ ನೀತಿವಂತರಾಗುವದಕ್ಕೆ ದಾರಿಯನ್ನು ಅನುಗ್ರಹಿಸುವದಾಗಿತ್ತು (ನೋಡಿರಿ ರೋಮಾ 3:21-26). [135]"ಪೊರ್ನೋಗ್ರಾಫಿ" ಎಂಬ ಪದವು ಗ್ರೀಕ್ ಭಾಷೆಯ ಎರಡು ಪದಗಳಿಂದ ಬರುತ್ತದೆ, ಯಾವವೆಂದರೆ, πόρνη (*pornē*) ಮತ್ತು γραφή (*graphē*). *Pornē* ಎಂಬ ಪದವು ಒಬ್ಬ "ಜಾರಳ"ನ್ನು ಸೂಚಿಸುತ್ತದೆ. *Graphē* ಎಂಬುದು ಬೈಬಲಿನಲ್ಲಿ ಸಾಮಾನ್ಯವಾಗಿ "ಶಾಸ್ತ್ರ" ಅಥವಾ "ಬರೆಯುವಿಕೆ" ಎಂದು ಅರ್ಥವನ್ನು ಹೊಂದಿದೆಯಾದರೂ, ಬೈಬಲಿನ ಹೊರಗಡೆಯ ಗ್ರೀಕ್ ಭಾಷೆಯಲ್ಲಿ ಇದು ಒಂದು "ಕಲಾಚಿತ್ರ" ಅಥವಾ "ಚಿತ್ರಪಟ" ಎಂದು ಸಹ ಅರ್ಥವಾಗಿರುತ್ತದೆ. ಹಾಗಾದರೆ "ಪೋರ್ನೋಗ್ರಾಫಿ" ಎಂದರೆ, ಕಾಮದ ಚಿತ್ರಗಳ ಪ್ರದರ್ಶನವಾಗಿದೆ, ಅದು ಚಿತ್ರಗಳ ರೂಪದಲ್ಲಿ ಇರಬಹುದು ಅಥವಾ ಬರವಣಿಗೆಯ ರೂಪದಲ್ಲಾದರೂ ಆಗಿರಬಹುದು, ಅದು ಹಾದರಕ್ಕೆ ಸಂಬಂಧಿಸಿದ್ದಾಗಿದೆ. [136]1 ತಿಮೊಥೆ 3:1ರಲ್ಲಿ "ಸಭಾಹಿರಿಯ" (ἐπίσκοπος, *episkopos*) ಎಂಬ ಪದವು ಹಿರಿಯರಿಗೆ ಅಧಿಕಾರವು ನಿಜವಾಗಿಯೂ ಇರುತ್ತದೆಂಬುದನ್ನು ಪ್ರತಿಬಿಂಬಿಸುತ್ತದೆ, ಅದೇ ರೀತಿಯಲ್ಲಿ ಇಬ್ರಿಯ 13:17ರಲ್ಲಿರುವ ಆಜ್ಞೆ ಸಹ ಆಗಿರುತ್ತದೆ. ಅಲ್ಲದೆ, "ಅಧಿಕಾರ" (ἐπιταγή, *epitagē*, ಅಕ್ಷರಶಃ "ಆಜ್ಞೆ") ಎಂಬುದಕ್ಕಿರುವ ಗ್ರೀಕ್ ಭಾಷೆಯ ಇನ್ನೊಂದು ಪದವು ತೀತನಿಗೆ 2:15ರಲ್ಲಿ ಒಬ್ಬ ಸುವಾರ್ತಿಕನಿಗೆ ಸಂಬಂಧಿಸಿದಂತೆ ಕಾಣಿಸಿಕೊಳ್ಳುತ್ತದೆ. [137]ನೋಡಿರಿ ಮತ್ತಾಯ 28:18-20; ಯೋಹಾನ 16:12, 13; ಅಪೊಸ್ತಲರ ಕೃತ್ಯಗಳು 1:8; ಇಬ್ರಿಯ 2:3, 4. [138]ಒಂದಿಷ್ಟು ಸಂಖ್ಯೆಯ ವಾಕ್ಯಭಾಗಗಳು ದೇವರು ಲೋಕಕ್ಕೆ ನ್ಯಾಯತೀರಿಸುವದರ ಕುರಿತಾಗಿ ಮಾತಾಡುತ್ತವೆ (ರೋಮಾ 2:2, 5; 3:6; 1 ಕೊರಿಂಥ 5:13; 1 ಪೇತ್ರ 1:17), ಆದರೆ ಇನ್ನು ಕೆಲವೊಂದು ವಾಕ್ಯಭಾಗಗಳಂತೂ ಸ್ಪಷ್ಟವಾಗಿ ಯೇಸುವನ್ನು ಈ ಪಾತ್ರದಲ್ಲಿ ತೋರಿಸುತ್ತವೆ (ಮತ್ತಾಯ 25:31-46; 2 ಕೊರಿಂಥ 5:10; 2 ತಿಮೊಥೆ 4:1). ಕೆಲವರು ಇಲ್ಲಿ ಒಂದು ವಿರುದ್ಧತೆಯನ್ನು ಕಾಣಬಹುದು, ಆದರೆ ಅದಕ್ಕೆ ಪರಿಹಾರವು ರೋಮಾ 2:16ರಂತಹ ವಾಕ್ಯಭಾಗಗಳಲ್ಲಿ ಕಂಡುಕೊಳ್ಳಬಹುದಾಗಿದೆ: "ದೇವರು ಯೇಸು ಕ್ರಿಸ್ತನ ಮೂಲಕವಾಗಿ ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವನು" (ನೋಡಿರಿ ಅಪೊಸ್ತಲರ ಕೃತ್ಯಗಳು 17:31). [139]ಕೀರ್ತನೆ 95ರಲ್ಲಿ, ದೇವರು ದಾವೀದನ ಮೂಲಕವಾಗಿ, ಅಲ್ಲಿ ಮತ್ತೊಂದು ವಿಶ್ರಾಂತಿಯ ಬಗ್ಗೆ ಸೂಚ್ಯಾರ್ಥವಾಗಿ ತಿಳಿಸಿದನು. [140]ಹೇಗೂ, ಹೊಸ ಒಡಂಬಡಿಕೆಯಲ್ಲಿ "ಪ್ರೀತಿ" ಎಂಬುದನ್ನು ಅನುವಾದಿಸಿರುವ ಮೂರು ಮುಖ್ಯ ಪದಗಳು ಮಾತ್ರವೇ ಪ್ರೀತಿಯ ಭಾವನೆಯನ್ನು ವ್ಯಕ್ತಪಡಿಸುವ ಪದಗಳಾಗಿರುವದಿಲ್ಲ. ಉದಾಹರಣೆಗೆ, ἐπιποθέω (*epipotheō*) ಮತ್ತು ಇದರ ಸಜಾತೀಯ ಪದಗಳು ಕೋಮಲತೆ ಮತ್ತು ಆಳವಾದ ಮಮತೆ ಎಂಬುವುಗಳನ್ನು ವ್ಯಕ್ತಪಡಿಸುತ್ತವೆ (ಫಿಲಿಪ್ಪಿ 1:8; 4:1; 2 ತಿಮೊಥೆ 1:4).

[141]ನೋಡಿರಿ ಯೆರೆಮೀಯ 4:30; 22:20, 22; ಪ್ರಲಾಪಗಳು 1:19; ಯೆಹೆಜ್ಕೇಲ 16:33, 36, 37; 23:5, 9, 22; ಹೋಶೇಯ 2:5, 7, 10, 12, 13. [142]G. Abbott-Smith, *A Manual Greek Lexicon of the New Testament*,

3rd ed. (Edinburgh: T. & T. Clark, 1937), 65. [143]ಪ್ರೀತಿಯ ಕುರಿತಾದ ಇನ್ನೊಂದು ಪದವೆಂದರೆ φιλόστοργος (*philostorgos*), ಇದೊಂದು ಸಂಯುಕ್ತ ಪದವಾಗಿದ್ದು *philia* ಮತ್ತು *storgē* ಎಂಬ ಪದಗಳನ್ನು ಒಂದುಗೂಡಿಸುವದಾಗಿದೆ. ಈ ಪದವು ಹೊಸ ಒಡಂಬಡಿಕೆಯಲ್ಲಿ ಒಂದು ಸಾರಿ ರೋಮಾ 12:10ರಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ NKJVಯು ಅದನ್ನು "ದಯೆಯುಳ್ಳ ಮಮತೆ" ಎಂದು ಅನುವಾದಿಸುತ್ತದೆ. LXXನಲ್ಲಿ ಈ ಪದದ ವಿವಿಧ ರೂಪಗಳು ಕಾಣಿಸಿಕೊಳ್ಳುತ್ತವೆ. [144]Nigel Turner, *Christian Words* (Nashville: Thomas Nelson Publishers, 1981), 261. [145]David Stewart, *A Commentary on Philippians* (Searcy, Ark.: Stewart Publications, 2006), 535–36. [146]"ವಿಯಾ ಡೊಲೊರೊಸಾ" ("ದುಃಖಗಳ ಮಾರ್ಗ") ಎಂಬುದರ ನಿಖರವಾದ ದಾರಿಯು ಯಾವದೆಂದು ತಿಳಿದಿರುವದಿಲ್ಲ. ಯಾತ್ರಿಗಳು ಅಂಟೋನಿಯಾ ಕೋಟೆಯಿಂದ ಹೋಲಿ ಸೆಪುಲ್ಚೆರ ಚರ್ಚ್ ವರೆಗೂ ಅನುಸರಿಸಿ ಸಾಗುವ ದಾರಿಯು ಸಂದೇಹಾಸ್ಪದವಾದದ್ದು. ಪಿಲಾತನು ಯೆರೂಸಲೇಮಿಗೆ ಬೇಟಿ ಕೊಟ್ಟ ವೇಳೆ, ಅಂಟೋನಿಯಾ ಕೋಟೆಯ ಬದಲಾಗಿ ಮಹಾ ಹೆರೋದನ ಅರಮನೆಯಲ್ಲಿ ಉಳಿದುಕೊಂಡಿರುವ ಸಾಧ್ಯತೆಯು ಅಧಿಕವಿರುತ್ತದೆ ಮತ್ತು ರೋಮನ್ ಅಧಿಕಾರ ಕೇಂದ್ರ ಕಚೇರಿಯು (ಮತ್ತಾಯ 27:27; ಮಾರ್ಕ 15:16; ಯೋಹಾನ 18:28, 33; 19:9) ಪಟ್ಟಣದ ಪೂರ್ವ ದಿಕ್ಕಿನಲ್ಲಿತ್ತು. [147]ದಾವೀದನ ಉದ್ದೇಶವು ದೇವರಿಂದ ಪ್ರಶಂಸಿಸಲ್ಪಟ್ಟದ್ದು ಮತ್ತು ಮನ್ನಣೆ ಮಾಡಲ್ಪಟ್ಟದ್ದು ಆಗಿತ್ತು. ದೇಶವನ್ನು ಸ್ಥಿರಪಡಿಸುವದಕ್ಕಾಗಿ, ಮೊದಲು ಯೆಹೂದದಲ್ಲಿ ಮತ್ತು ಅನಂತರ ಇಸ್ರಾಯೇಲಿನಲ್ಲಿ ಸ್ಥಿರಪಡಿಸುವದಕ್ಕೆ ಆತನು ನಡಿಸಿದ ಎಲ್ಲಾ ಯುದ್ಧಗಳಲ್ಲಿ ಕರ್ತನು ಆತನೊಂದಿಗಿದ್ದನು. ಹೇಗೂ, ದೇವಾಲಯವು - "ದೇವರ ಆಲಯ" - "ಪ್ರಾರ್ಥನಾಲಯ" ಆಗಿರಬೇಕಾಗಿತ್ತು (ಯೆಶಾಯ 56:7; ಮತ್ತಾಯ 21:13); ಮತ್ತು ಎಲ್ಲಾ ಜನಾಂಗಗಳಿಗೆ ಸಮಾಧಾನವುಂಟು ಮಾಡುವದಕ್ಕಾಗಿ "ಸಮಾಧಾನ ಪ್ರಭು"ವಿನ ಶುಭವಾರ್ತೆಯು ಯೆರೂಸಲೇಮಿನಿಂದ ಹೊರಡಬೇಕೆಂಬುದು ದೈವಿಕವಾಗಿ ನೇಮಿಸಲ್ಪಟ್ಟಿತ್ತು (ಯೆಶಾಯ 2:1-4; ಲೂಕ 24:46, 47; ಅಪೊಸ್ತಲರ ಕೃತ್ಯಗಳು 1:4-8). ದಾವೀದನ ಬರಹಗಳಲ್ಲಿ ಪೂರ್ವಛಾಯೆಗಳನ್ನು ಮತ್ತು ದಾವೀದನ ಕುರಿತಾದ ಹಾಗೂ ಆತನ ಶಾಶ್ವತ ಸಿಂಹಾಸನದ ಕುರಿತಾದ ಪ್ರವಾದನೆಗಳನ್ನು ಯೇಸುವು ಮಾತ್ರವೇ ನೆರವೇರಿಸುವದಕ್ಕೆ ಶಕ್ತನಾಗಿದ್ದನು. (ನೋಡಿರಿ ಯೆಶಾಯ 9:6, 7; ಯೆರೆಮೀಯ 23:5, 6; 30:9; 33:14-16; ಯೆಹೆಜ್ಕೇಲ 34:23, 24; 37:24, 25; ಹೋಶೇಯ 3:5; ಮೀಕ 5:2; ಮತ್ತಾಯ 1:1; 2:1-6; ಲೂಕ 1:30-33; ಅಪೊಸ್ತಲರ ಕೃತ್ಯಗಳು 2:25-36.) [148]John Emerich Edward Dalberg-Acton, John Bartlett, *Familiar Quotations*, 16th ed., ed. Justin Kaplan (Boston: Little, Brown and Co., 1992), 521ರಲ್ಲಿ ಉಲ್ಲೇಖಿಸಲ್ಪಟ್ಟದ್ದು. [149]Quintus Curtius *History of Alexander* 4.2.1—4.4.21; Josephus *Antiquities* 11.8.3–4. [150]ಪೌಲನು 2:1-5ರಲ್ಲಿ ಕೊಟ್ಟಿರುವ ಉದಾಹರಣೆಯು ತೀತನ ಸುನ್ನತಿಗೆ ಸಂಬಂಧಿಸಿದ್ದಾಗಿದೆ. ಗಲಾತ್ಯದವರಲ್ಲಿ "ಸುವಾರ್ತೆಯ ಸತ್ಯಾರ್ಥವು . . . ಸ್ಥಿರವಾಗಿರಬೇಕೆಂದು" ಆತನು ಈ ಅನ್ಯಜನಾಂಗದವನಿಗೆ ಸುನ್ನತಿಯಾಗುವದನ್ನು ಸಂಪೂರ್ಣವಾಗಿ ತಿರಸ್ಕರಿಸಿದನು (2:5).

[151]*ಸುಥೋಟೆವೋ* ಎಂಬುದನ್ನು "ವಾಗ್ವಾದ" ಎಂದು ಸಹ ಅನುವಾದಿಸಬಹುದು. ಸಭ್ಯತೆಯು ಕಡಿಮೆಯಾಗಿರುವ ಸನ್ನಿವೇಶಗಳಲ್ಲಿ ಅನುವಾದಕರು "ವಾಗ್ವಾದ" ಎಂಬುದರ ಬದಲಾಗಿ "ವಾದಿಸು" ಎಂಬುದನ್ನು ಸಾಮಾನ್ಯವಾಗಿ ಆಯ್ಕೆ ಮಾಡಿಕೊಂಡಿರುವಣತೆ ಕಾಣಿಸುತ್ತದೆ.